ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಡಿಸೆಂಬರ್ 25, 2013 ಪುಟ 20 ರೂ. 15/-

ಮಂಡೇಲಾ



ಭಿನ್ನಮುಖಗಳು




ಶ್ರೀಕಂಠದತ್ತ ಒಡೆಯರ್


ಕಪ್ಪು-ಬಿಳುಪು ಚಿತ್ರಗಳು

ನುಡಿಸಿರಿ

ಮೋಹನ್ ಆಳ್ವಾಗೆ ಬಹಿರಂಗ ಪತ್ರ



ಕರವೇ ಮತ್ತು 22 ಮಂದಿ ಕಳ್ಳರು




ರಗಳೆ ರಾಘವನ

ದನ ದಂಧೆ ಕಥಾ


ಒಕ್ಕಲಿಗರ ಸಂಘ ಚುನಾವಣೆ

ಕೆಂಚಪ್ಪಗೌಡನ ಆಸ್ತಿ 500 ಕೋಟಿಯಾ?





ಮೋದಿ ಅಲೆಯೆಂಬ ಭ್ರಮೆ ಮತ್ತು ವಾಸ್ತವ




ಬಿಜೆಪಿ ನಾಯಕರ ಹೇಳಿಕೆಗಳಿಗಿಂತಲೂ ಎರಡು ಹೆಜ್ಜೆ ಮುಂದೆ ಹೋಗಿರುವ ಕಾರ್ಪೊರೇಟ್ ಮಾಧ್ಯಮಗಳು "ಮೋದಿ ಅಲೆ"ಯನ್ನು ಸೃಷ್ಟಿಸಿಬಿಟ್ಟಿವೆ., ತಮ್ಮ ಎಲ್ಲಾ ಕೊರತೆಗಳನ್ನು ಮೋದಿಯ ಅಬ್ಬರದ ಪ್ರಚಾರ ನೀಗಿಸುವುದಿಲ್ಲ ಎಂಬ ಕಟುಸತ್ಯ ಸ್ವತಃ ಬಿಜೆಪಿಗೆ, ಸಂಘ ಪರಿವಾರಕ್ಕೆ ಅರ್ಥವಾಗಿರಬಹುದು. ಆದರೆ ಕಾರ್ಪೊರೇಟ್ ಶಕ್ತಿಗಳ ತುತ್ತೂರಿಯಂತಾಗಿರುವ ಮಾಧ್ಯಮಗಳಿಗೆ ಅರ್ಥ ಮಾಡಿಸುವುದು ಹೇಗೆ ಎಂಬುದೇ ಇಂದಿನ ಅಸಲಿ ಪ್ರಶ್ನೆ.

ಇತ್ತೀಚೆಗೆ ಹೊರಬಿದ್ದ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಪಡೆದುಕೊಂಡಿದೆ. ಅವುಗಳ ಪೈಕಿ ಮಧ್ಯಪ್ರದೇಶ ಮತ್ತು ಛತ್ತೀಸ್‌ಘಡದಲ್ಲಿದ್ದ ಅಧಿಕಾರವನ್ನು ತನ್ನ ಕೈಯಲ್ಲೇ ಉಳಿಸಿಕೊಂಡಿದ್ದರೆ ರಾಜಸ್ಥಾನವನ್ನು ಕಾಂಗ್ರೆಸ್ ಕೈಯಿಂದ ಕಸಿದುಕೊಂಡಿದೆ. ಮಿಜೋರಾಂ ಸ್ಪಷ್ಟವಾಗಿ ಕಾಂಗ್ರೆಸ್ ಪಾಲಾಗಿದ್ದರೆ ದೆಹಲಿಯಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ.

ಬಿಜೆಪಿಗೆ ಅನುಕೂಲಕರ ಫಲಿತಾಂಶ ಹೊರಬೀಳುತ್ತಿದ್ದಂತೆ ಕಾರ್ಪೊರೇಟ್ ಮಾಧ್ಯಮಗಳು "ಮೋದಿ ಅಲೆ" ಜೋರಾಗಿ ಬೀಸಿಬಿಟ್ಟದೆಯೆಂದು ಘಂಟಾಘೋಷವಾಗಿ ಪ್ರಚಾರಮಾಡಿದವು. ಆದರೆ ಬಿಜೆಪಿ ವಕ್ತಾರರಾದ ರವಿಶಂಕರ್ ಪ್ರಸಾದ್, ಪ್ರಕಾಶ್ ಜಾವಡೇಕರ್ ಮುಂತಾದವರು ಈ ಚುನಾವಣಾ ಫಲಿತಾಂಶವನ್ನು ವಿಶ್ಲೇಷಿಸುತ್ತಾ 'ಮೋದಿಯ ಅಂಶವೂ ಕೆಲಸ ಮಾಡಿದೆ' ಎಂಬರ್ಥದಲ್ಲಿ ಮಾತಾಡಿದ್ದಾರೆ. ಹಾಗೆ ನೋಡಿದರೆ ಬಿಜೆಪಿ ನಾಯಕರ ಹೇಳಿಕೆಗಳಿಗಿಂತಲೂ ಎರಡು ಹೆಜ್ಜೆ ಮುಂದೆ ಹೋಗಿರುವ ಕಾರ್ಪೊರೇಟ್ ಮಾಧ್ಯಮಗಳು "ಮೋದಿ ಅಲೆ"ಯನ್ನು ಸೃಷ್ಟಿಸಿಬಿಟ್ಟಿವೆ.

ಮೋದಿ ಅಲೆ ಇತ್ತೇ ಎಂಬುದಕ್ಕೆ ಮಾನದಂಡ ಏನು?

ಮೊದಲನೆಯದು, ಈವರೆಗಿನ ಬಿಜೆಪಿಯ ಸಾಂಪ್ರದಾಯಿಕ ಮತಗಳ ಹೊರತಾಗಿ ಹೊಸಮತಗಳನ್ನು ಸೆಳೆಯಲು ಸಾಧ್ಯವಾಯಿತೆ ಎಂಬುದು. ಎರಡನೆಯದಾಗಿ, ಹೊಸ ಭೌಗೋಳಿಕ ಮತ್ತು ಸಾಮಾಜಿಕ ಕ್ಷೇತ್ರಗಳಿಗೆ ವಿಸ್ತರಿಸಲು ಸಾಧ್ಯವಾಯಿತೆ ಎಂಬುದು.



ಐದು ರಾಜ್ಯಗಳ ಫಲಿತಾಂಶಗಳನ್ನು ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರೆ ಕಾರ್ಪೊರೇಟ್ ಮಾಧ್ಯಮದ ಪ್ರಚಾರಕ್ಕಿಂತಲೂ ವಾಸ್ತವ ಸಂಗತಿಗಳು ಭಿನ್ನವಾಗಿರುವುದು ಸ್ಪಷ್ಟವಾಗುತ್ತದೆ.

ದೆಹಲಿ

ಮೋದಿಯ ಪ್ರಭಾವ ವಿಶೇಷವಾಗಿ ಯುವ ಮತ್ತು ನಗರದ ಮಧ್ಯಮ ವರ್ಗದ ಮೇಲಿರುತ್ತದೆಂದು ಸಾಮಾನ್ಯವಾಗಿ ಎಲ್ಲ ವಿಶ್ಲೇಷಕರ ಊಹೆಯಾಗಿತ್ತು. ಹೀಗಾಗಿ ನಗರದ ಮಧ್ಯಮವರ್ಗವೇ ಪ್ರಧಾನವಾಗಿರುವ ದೆಹಲಿಯಲ್ಲಿ ಬಿಜೆಪಿ ಸಲೀಸಾಗಿ ಅಧಿಕಾರ ಹಿಡಿಯಬಹುದೆಂದು ನಿರೀಕ್ಷಿಸಲಾಗಿತ್ತು. ಕಳೆದ ಚುನಾವಣೆಯಲ್ಲಿ 23 ಸೀಟುಗಳನ್ನು ಪಡೆದಿದ್ದ ಬಿಜೆಪಿ ಈ ಬಾರಿ 8 ಸೀಟುಗಳನ್ನು ಹೆಚ್ಚಿಸಿ ಕೊಂಡು ಒಟ್ಟು 31 ಸೀಟುಗಳನ್ನು ಪಡೆದುಕೊಂಡಿರುವುದು ಮೇಲ್ನೋಟಕ್ಕೆ ಯಶಸ್ಸು ಎನಿಸಿಕೊಂಡುಬಿಡುತ್ತದೆ. ಆದರೆ ಅದೇ ಸಂದರ್ಭದಲ್ಲಿ 2008ರಲ್ಲಿ ಶೇಕಡ 36.6ರಷ್ಟು ಮತಗಳನ್ನು ಪಡೆದಿದ್ದ ಬಿಜೆಪಿ ಈ ಬಾರಿ ಶೇಕಡ 34.37ರಷ್ಟು ಮತಗಳನ್ನು ಮಾತ್ರ ಪಡೆದಿದೆ. ಹೊಸ ಮತಗಳನ್ನು ಪಡೆಯುವ ಮಾತು ಹಾಗಿರಲಿ. ಈ ಹಿಂದೆ ಇದ್ದ ಮತಗಳೂ ಶೇಕಡ 1.08ರಷ್ಟು ಅನ್ಯರ ಪಾಲಾಗಿವೆ.

ಅಷ್ಟು ಮಾತ್ರವಲ್ಲದೆ ಮತ್ತೊಂದು ಕುತೂಹಲಕರ ಅಂಶವೂ ಇದೆ. ಮೋದಿ ಅಬ್ಬರದ ರ್‍ಯಾಲಿ ನಡೆಸಿದ್ದ ದೆಹಲಿಯ ಆರು ಅಸೆಂಬ್ಲಿ ಕ್ಷೇತ್ರಗಳಲ್ಲಿ ನಾಲ್ಕು ಕಡೆ (ಅಂಬೇಡ್ಕರ್ ನಗರ, ಬಲ್ಲಿಮರಾನ್, ಸುಲ್ತಾನ್‌ಪುರ ಮಜ್ರಾ ಮತ್ತು ರೋಹಿಣಿ ಕ್ಷೇತ್ರ) ಬಿಜೆಪಿ ಸೋತಿದೆ. ಅದರಲ್ಲಿ ಎರಡು ಕಡೆ ಎಎಪಿ, ಮತ್ತೆರಡು ಕಡೆ ಕಾಂಗ್ರೆಸ್ ಗೆದ್ದಿದೆ. ಸುಲ್ತಾನ್‌ಪುರ ಕ್ಷೇತ್ರದಲ್ಲಿ ಬಿಜೆಪಿ ನಾಲ್ಕನೇ ಸ್ಥಾನಕ್ಕೆ ಕುಸಿದಿರುವುದು ಗಮನಿಸಬೇಕಾದ ಮತ್ತೊಂದು ಅಂಶ.

ದೆಹಲಿಯ ನಗರವಾಸಿ ಜನತೆ ಕಾಂಗ್ರೆಸ್ಸೇತರ, ಬಿಜೆಪಿಯೇತರ ಆಮ್ ಆದ್ಮಿ ಪಕ್ಷವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇದಕ್ಕೆ ಮತ್ತೊಂದು ಪುರಾವೆಯೆಂದರೆ ಎಎಪಿಗೆ ಶೇಕಡ 29.1ಷ್ಟು ಮತಗಳು ಬಂದಿರುವುದು ಮಾತ್ರವಲ್ಲದೆ ಅದು ಗೆದ್ದಿರುವ 28 ಕ್ಷೇತ್ರಗಳಲ್ಲಿ 22 ಕಡೆ ನೇರಾನೇರ ಪೈಪೋಟಿಯಲ್ಲಿ ಬಿಜೆಪಿಯನ್ನು ಮಣ್ಣುಮುಕ್ಕಿಸಿದೆ. ಆಮ್ ಆದ್ಮಿ ಪಕ್ಷ ಎರಡನೇ ಸ್ಥಾನದಲ್ಲಿರುವ 18 ಕ್ಷೇತ್ರಗಳಲ್ಲಿ 16 ಕಡೆ ಬಿಜೆಪಿಗೆ ಪ್ರಬಲ ಪೈಪೋಟಿ ನೀಡಿದೆ.


ಈ ಅಂಶಗಳು ಏನನ್ನು ಸೂಚಿಸುತ್ತವೆ? ಸಾರಾಂಶದಲ್ಲಿ ದೆಹಲಿಯಲ್ಲಿ ಮೋದಿ ಬಿರುಗಾಳಿಯ ಪ್ರಚಾರ ನಡೆಸಿದರೂ, ಮಾಧ್ಯಮಗಳು ವೈಭವೀಕರಿಸಿದರೂ ಮತದಾರ ಮಾತ್ರ ಮೋದಿಯ ಮೋಡಿಗೆ ಬಲಿಯಾಗಲಿಲ್ಲ. ಹೀಗಾಗಿ ರಾಜಧಾನಿ ದೆಹಲಿಯ ಮಟ್ಟಿಗಂತೂ ಮೋದಿಯ ಅಲೆ ಎಂಬುದೊಂದು ದೊಡ್ಡ ಭ್ರಮೆ.

ಛತ್ತೀಸಘಡ

2008ರ ಚುನಾವಣೆಯಲ್ಲಿ ರಮಣ್‌ಸಿಂಗ್ ನೇತೃತ್ವದ ಬಿಜೆಪಿ 50 ಸೀಟುಗಳಲ್ಲಿ ಗೆಲುವು ಸಾಧಿಸಿತ್ತು. ಈ ಬಾರಿ ಇಲ್ಲಿ ಮೋದಿ ಸಾಕಷ್ಟು ರ್‍ಯಾಲಿಗಳನ್ನು ನಡೆಸಿ ನಾನಾ ಕಸರತ್ತುಗಳನ್ನು ನಡೆಸಿದ್ದರೂ ಕಳೆದ ಚುನಾವಣೆಗಿಂತ ಈ ಬಾರಿ ಶೇಕಡ 1 ರಷ್ಟು ಕಡಿಮೆ ಮತಗಳನ್ನು ಗಳಿಸಿದೆ. ಕಳೆದ ಬಾರಿ ಶೇಕಡ 41.96 ಮತಗಳನ್ನು ಪಡೆದಿದ್ದರೆ ಈ ಬಾರಿ ಶೇಕಡ 41.06ಕ್ಕೆ ಇಳಿದಿದೆ. ಪರಿಣಾಮವಾಗಿ ಬಿಜೆಪಿ ಈ ಬಾರಿ ಒಂದು ಸೀಟನ್ನು ಕಡಿಮೆ ಪಡೆದಿದೆ.

ಇದಕ್ಕೆ ಪ್ರತಿಯಾಗಿ ಕಳೆದಬಾರಿ ಶೇಕಡ 40.16ರಷ್ಟು ಮತಗಳನ್ನು ಪಡೆದಿದ್ದ ಕಾಂಗ್ರೆಸ್ ಈ ಬಾರಿ ಅಲ್ಪಪ್ರಮಾಣದ ಏರಿಕೆಕಂಡು ಶೇಕಡ 40.29 ಮತಗಳನ್ನು ಪಡೆದು ಒಂದು ಸೀಟನ್ನು ಹೆಚ್ಚಿಸಿಕೊಂಡಿದೆ (2008ರಲ್ಲಿ 38, ಈ ಬಾರಿ 39). ಆದಿವಾಸಿ ಪ್ರದೇಶಗಳಲ್ಲೂ ಮೋದಿಯ ಹವಾ ಎದ್ದಿದೆಯೆಂಬ ಅತಿರಂಜಿತ ಪ್ರಚಾರದ ಹೊರತಾಗಿಯೂ ಆದಿವಾಸಿ ಕ್ಷೇತ್ರಗಳಲ್ಲಿ ಶೇಕಡ 90ರಷ್ಟು ಸೀಟುಗಳು ಕಾಂಗ್ರೆಸ್‌ಗೆ ದಕ್ಕಿದೆ. ಹೀಗಾಗಿ ಇಲ್ಲಿಯೂ ಮೋದಿ ಅಲೆಯೆಂದು ಕರೆಯುವುದು ಹೇಗೂ ಸಾಧ್ಯವಿಲ್ಲವಾದರೂ ಮೋದಿ ಪ್ರಭಾವ ಎಂದು ಕರೆಯಲೂ ಕಷ್ಟಪಡಬೇಕಾದ ಸ್ಥಿತಿ ಇರುವುದು ವಾಸ್ತವ.

ಮಧ್ಯಪ್ರದೇಶ



ಮೇಲ್ನೋಟಕ್ಕೆ, ಕಾಣುವಂತೆ ಮಧ್ಯಪ್ರದೇಶದಲ್ಲಿ ಬಿಜೆಪಿ ಶೇಕಡ ಏಳಕ್ಕೂ ಹೆಚ್ಚು ಮತಗಳನ್ನೂ, 15ಕ್ಕೂ ಹೆಚ್ಚು ಸೀಟುಗಳನ್ನು ಪಡೆದುಕೊಂಡಿದೆ. ಕಾಂಗ್ರೆಸ್‌ಗೂ ಕಳೆದ ಬಾರಿಗಿಂತ ಶೇಕಡ 4 ರಷ್ಟು ಹೆಚ್ಚುವರಿ ಮತಗಳು ಬಂದಿವೆ. ಇದು ಮೂಲಭೂತವಾಗಿ ಬಿಎಸ್‌ಪಿ, ಎಸ್‌ಪಿ ಮತ್ತಿತರ ಪಕ್ಷಗಳಿಂದ ಪಡೆದ ಮತಗಳಾಗಿವೆ.

ಕಳೆದ ಬಾರಿ ಬಿಜೆಪಿಯು 37.7ರಷ್ಟು ಮತಗಳನ್ನು ಪಡೆದಿದ್ದರೆ ಈ ಬಾರಿ 44.87ರಷ್ಟು ಮತಗಳನ್ನು ಪಡೆದಿದೆ. ಕಾಂಗ್ರೆಸ್ ಕಳೆದ ಬಾರಿ 32.4ರಷ್ಟು ಮತಗಳನ್ನು ಪಡೆದಿದ್ದು ಈ ಬಾರಿ 36.67ರಷ್ಟು ಮತಗಳನ್ನು ಪಡೆದಿದೆ. ಆದರೆ ಕಳೆದ ಬಾರಿ ಎಸ್‌ಪಿ, ಬಿಎಸ್‌ಪಿ ಹಾಗೂ ಇತರ ಪಕ್ಷಗಳು 29.9ರಷ್ಟು ಮತಗಳನ್ನು ಪಡೆದಿದ್ದರೆ ಈ ಬಾರಿ ಶೇಕಡ 18.76ರಷ್ಟು ಮತಗಳನ್ನು ಮಾತ್ರ ಪಡೆದುಕೊಂಡಿವೆ.

ಹೀಗಾಗಿ ಚುನಾವಣಾ ಫಲಿತಾಂಶವನ್ನು ಕಾಂಗ್ರೆಸ್ ವಿರೋಧಿ ಎಂದು ವಿಶ್ಲೇಷಿಸುವುದು ಕಷ್ಟಸಾಧ್ಯ.

ಹಾಗೆಯೇ ಮಧ್ಯಪ್ರದೇಶದ ರಾಜಕಾರಣದಲ್ಲಿ ನಾವು ಕಡೆಗಣಿಸಲೇಬಾರದಂಥ ಮತ್ತೊಂದು ಮಹತ್ವದ ವಿಷಯವಿದೆ. ಅದು ಉಮಾಭಾರತಿಗೆ ಸಂಬಂಧಿಸಿದ್ದು. 2008ರ ಚುನಾವಣೆಯಲ್ಲಿ ಕರ್ನಾಟಕದ ಯಡಿಯೂರಪ್ಪನಂತೆಯೇ ಉಮಾಭಾರತಿ ಭಾರತೀಯ ಜನಶಕ್ತಿ ಎಂಬ ಪಕ್ಷವೊಂದನ್ನು ಕಟ್ಟಿಕೊಂಡಿದ್ದರು. ಆಗ ಉಮಾಭಾರತಿ ಪಡೆದುಕೊಂಡ ಮತಗಳ ಪ್ರಮಾಣ ಶೇಕಡ 28ರಷ್ಟು!

ಆದರೆ ಈ ಬಾರಿ ಉಮಾಭಾರತಿ ಮರಳಿ ಮಾತೃಪಕ್ಷಕ್ಕೆ ಮರಳಿದ್ದಾರೆ. ಹೀಗಾಗಿ ಉಮಾಭಾರತಿಯ ಓಟು ಮತ್ತು ಬಿಜೆಪಿಯ ಓಟು ಒಟ್ಟಿಗೆ ಸೇರಿದ್ದರೆ ಶೇಕಡ 66ರಷ್ಟಾಗಬೇಕಿತ್ತು, ಅದರ ಜೊತೆಗೆ ಮೋದಿ ಹವಾ ಕೂಡ ಸೇರಿದ್ದರೆ ಮತ್ತಷ್ಟು ಹೆಚ್ಚಬೇಕಿತ್ತಲ್ಲವೆ?

ವಾಸ್ತವದಲ್ಲಿ ಮಧ್ಯಪ್ರದೇಶದ ಚುನಾವಣೆಯ ಗೆಲುವು ಸಾರಾಂಶದಲ್ಲಿ ಜನಪ್ರಿಯ ನಾಯಕ ಶಿವರಾಜ್ ಚೌಹಾಣ್‌ರ ಗೆಲುವು ಎಂಬುದರಲ್ಲಿ ಎರಡು ಮಾತಿಲ್ಲ, ಇಲ್ಲಿ ಮೋದಿಯ ಪ್ರಭಾವವೆಂಬುದು ಹತ್ತರ ಜೊತೆ ಹನ್ನೊಂದು ಎಂಬಂತಿದೆಯೇ ಹೊರತು ಯಾವ ಮಹತ್ವದ ಪಾತ್ರವೂ ಇಲ್ಲವೆಂಬುದು ದೃಢಪಟ್ಟಿದೆ.

ರಾಜಸ್ಥಾನ

ರಾಜಸ್ಥಾನದಲ್ಲಿ ಕಾಂಗ್ರೆಸ್ ಸರ್ಕಾರದ ಭ್ರಷ್ಟಾ[...] ಗುಂಪುಗಾರಿಕೆ ಮೇರೆ ಮೀರಿತ್ತು, ಪ್ರಬಲ ಆಡ[...] ವಿರೋಧಿ ಅಲೆಯಿತ್ತು, ರಾಜಸ್ಥಾನದ ರಾಜಕಾರಣ[...] ನಾವು ಮರೆಯಲೇಬಾರದ ಮಹತ್ವದ ಅಂಶವೆಂದರೆ, [...] 20 ವರ್ಷಗಳಿಂದಲೂ ನಡೆದಿರುವ ಚುನಾವಣೆಗಳಲ್ಲಿ [...] ಮತದಾರರು ಒಮ್ಮೆ ಆಯ್ಕೆ ಮಾಡಿದ ಪಕ್ಷವನ್ನು ಮತ್ತೆ[...] ಆಯ್ಕೆ ಮಾಡಿಲ್ಲ, ತಮಿಳುನಾಡಿನ ರಾಜಕೀಯದಂತೆ ಮ[...] ಧ್ರುವೀಕರಣದ ವಿದ್ಯಮಾನ ರಾಜಸ್ಥಾನದಲ್ಲೂ ಇದೆ. [...] ಬಾರಿಯ ಫಲಿತಾಂಶ ಅದಕ್ಕೆ ಹೊರತಾಗಿಲ್ಲ.

ಈ ಸಾಂಪ್ರದಾಯಿಕ ಅಂ[...] ಜೊತೆಗೊಂದಷ್ಟು ಮೋದಿ ಹವಾ [...] ಕೆಲಸ ಮಾಡಿದಂತೆ ಕಾಣುತ್ತಿದೆ. [...] ಅದು ಮಾಧ್ಯಮಗಳಲ್ಲಿ ವಿಜೃಂಭಿಸುತ್ತಿ[...] ಪ್ರಮಾಣಕ್ಕಂತೂ ಅಲ್ಲವೇ ಅಲ್ಲ. [...] ಬಾರಿ ಬಿಜೆಪಿಗೆ ಶೇಕಡ 34.27[...] ಮತಗಳು ಬಂದಿದ್ದು ಈ ಬಾರಿ ಶೇ[...] 46.03ರಷ್ಟು ಮತಗಳು ಬಂದಿವೆ. ಕಾಂ[...] 2008ರಲ್ಲಿ ಶೇ.36.83ರಷ್ಟು [...] ಪಡೆದಿದ್ದರೆ ಈ ಬಾರಿ ಪಡೆದ ಮತ[...] ಶೇ.33.88ರಷ್ಟು. ಅಂದರೆ ಕಳೆದ ಬಾರಿಗಿಂತ ಕೆ[...] ಶೇ.3 ರಷ್ಟು ಕಡಿಮೆ. ಬಿಜೆಪಿಗೆ ಬಂದಿರುವ ಹೆಚ[...] ಮತಗಳು ಪ್ರಧಾನವಾಗಿ ಇತರ ಪಕ್ಷಗಳಿಂದ ಬಂ[...] ಎಂಬುದು ಅಂಕಿ ಅಂಶಗಳಿಂದ ತಿಳಿದು ಬರುತ್ತ[...]

ಮಿಜೋರಾಂ


ಈಶಾನ್ಯ ಭಾರತದ ಪುಟ್ಟ ರಾಜ್ಯ ಮಿಜೋರಾ[...] ಕಾಂಗ್ರೆಸ್ ಅಧಿಕಾರದ ಗದ್ದುಗೆ ಉಳಿಸಿಕೊಂಡಿದೆ. [...] ಸ್ಥಾನಗಳ ವಿಧಾನಸಭೆಯಲ್ಲಿ ಕಳೆದ ಬಾರಿಗಿಂತ [...] ಸೀಟನ್ನು ಹೆಚ್ಚುವರಿಯಾಗಿ ಪಡೆದು ಸೀಟುಗಳ ಸಂಖ್ಯೆ[...] 33ಕ್ಕೆ ಏರಿಸಿಕೊಂಡಿದೆ.

ಮತ್ತೊಂದು ಕಡೆ ಸ್ಥಳೀಯ ಪಕ್ಷಗಳೊಂದಿಗೆ [...] ಹೊಂದಾಣಿಕೆ ಮಾಡಿಕೊಂಡು ಏನೆಲ್ಲಾ ಕಸರತ್ತು ನ[...] ಬಿಜೆಪಿ ಇಲ್ಲಿ ಈ ಬಾರಿಯೂ ಖಾತೆ ತೆರೆಯಲ[...] ಎಂಬುದನ್ನು ನಾವು ಗಮನಿಸಲೇಬೇಕು.

ಮುಂದಿನ ವಿಧಾನಸಭಾ ಚುನಾವಣೆಗಳು ಮಾತ್ರ[...] ಲೋಕಸಭಾ ಚುನಾವಣೆಗೂ ಮೋದಿಯನ್ನು ಮುಂ[...] ಕೊಂಡು ಮತಗಳಿಸಿಬಿಡಬಹುದೆಂಬ ಬಿಜೆಪಿ ಪ್ರಭ[...] ಭ್ರಮೆ ಒಂದಷ್ಟಾದರೂ ತೊಲಗಿರಬೇಕು. ಆದ್ದರಿಂ[...] ಅವರು ಮೋದಿ "ಅಲೆ" ಎನ್ನುವ ಬದಲಿಗೆ "[...]" ಎಂಬ ಪದ ಪ್ರಯೋಗ ಮಾಡುತ್ತಿದ್ದಾರೆ. ತಮ್ಮ [...] ಕೊರತೆಗಳನ್ನು ಮೋದಿಯ ಅಬ್ಬರದ ಪ್ರಚಾರ ನೀಗಿಸು[...] ಎಂಬ ಕಟುಸತ್ಯ ಸ್ವತಃ ಬಿಜೆಪಿಗೆ, ಸಂಘ ಪರಿ[...] ಅರ್ಥವಾಗಿರಬಹುದು. ಆದರೆ ಕಾರ್ಪೊರೇಟ್ [...] ತುತ್ತೂರಿಯಂತಾಗಿರುವ ಮಾಧ್ಯಮಗಳಿಗೆ [...] ಮಾಡಿಸುವುದು ಹೇಗೆ ಎಂಬುದೇ ಇಂದಿನ ಅಸಲಿ [...]


● ದೊಡ್ಡಿಪಾಳ್ಯ ನರಸಿಂಹಮೂ[...]

ಗೂಢಚರ್ಯೆ ಪ್ರಕರಣ



ಮೋದಿ ಆಪ್ತವಲಯದ ಯುವತಿಯೋರ್ವಳ ಹಿಂದೆ ರಾಜ್ಯದ ಪೊಲೀಸ್ ಅಧಿಕಾರಿಗಳನ್ನು ಛೂಬಿಡಲಾಗಿದ್ದ ವಿಷಯ ಮಾಧ್ಯಮಗಳಲ್ಲಿ ಬಹಿರಂಗವಾಗುತ್ತಿದ್ದಂತೆ ಬಿಜೆಪಿಯಲ್ಲಿ ಭಾರಿ ಆತಂಕ ಸೃಷ್ಟಿಯಾಗಿದೆ. ಬಳಿಕ ಬೀಸೋ ದೊಣ್ಣೆಯಿಂದ ಪಾರಾಗುವುದಕ್ಕೋಸ್ಕರ ಯುವತಿಯ ಅಪ್ಪ ತನ್ನ ಮಗಳಿಗೆ ಭದ್ರತೆ ಕೋರಿ ನರೇಂದ್ರ ಮೋದಿಗೆ ಬರೆದುದೆನ್ನಲಾದ ಪತ್ರವೊಂದನ್ನು ಬಿಜೆಪಿ ಅಧ್ಯಕ್ಷ ರಾಜನಾಥ್ ಸಿಂಗ್ ಅವರು ಮಾಧ್ಯಮಗಳಿಗೆ ಓದಿ ಹೇಳಿದ್ದಾರೆ. ಆದರೂ ಒತ್ತಡ ಹೆಚ್ಚಿದಂತೆ ಪ್ರಕರಣದ ತನಿಖೆಗಾಗಿ ತನಿಖಾ ಆಯೋಗವೊಂದನ್ನು ರಚಿಸಲಾಗಿದೆ. ಇದೊಂದು ದ್ವಿಸದಸ್ಯ ಆಯೋಗ. ಇದರ ಸದಸ್ಯರಾಗಿರುವವರು ನಿವೃತ್ತ ನ್ಯಾ. ಸುಗನ್ಯಾ ಭಟ್ ಮತ್ತು ಮಾಜಿ ಐಎಎಸ್ ಅಧಿಕಾರಿ ಕೆ.ಸಿ.ಕಪೂರ್. ಈ ಆಯೋಗದ ರಚನೆಯ ಹಿಂದೆ ಒಂದೇ ಏಟಿಗೆ ಎರಡು ಹಕ್ಕಿಗಳನ್ನು ಉದುರಿಸುವ ಉದ್ದೇಶ ಇರುವಂತಿದೆ. ಮೊದಲನೆಯದಾಗಿ, ತಾತ್ಕಾಲಿಕವಾಗಿ ಪ್ರಕರಣದ ಪ್ರಚಾರಕ್ಕೆ ತೆರೆ ಎಳೆಯುವುದು. ಎರಡನೆಯದಾಗಿ ಸುಪ್ರೀಂ ಕೋರ್ಟ್‌ನ ಮಧ್ಯಪ್ರವೇಶವನ್ನು ತಡೆಯುವುದು. ಆಯೋಗದ ಕಾರ್ಯವ್ಯಾಪ್ತಿ ಕೂಡ ಅಮಿತ್ ಶಾ ಮತ್ತು 'ಸಾಹೇಬ'ರಿಗೆ ಅನುಕೂಲವಾಗುವ ರೀತಿಯಲ್ಲಿದೆ. ಅದು ಹೇಗೆಂದರೆ ಗೂಢಚರ್ಯೆ ಪ್ರಕರಣವನ್ನು ಬಯಲುಗೊಳಿಸಿದ ಸಮಯದ ಹಿಂದೆ ಷಡ್ಯಂತ್ರ ಏನಾದರೂ ಇದೆಯೇ ಎಂಬುದನ್ನಷ್ಟೆ ತನಿಖೆ ಮಾಡಿದರೆ ಸಾಕೆಂದು ಆಯೋಗಕ್ಕೆ ತಿಳಿಸಲಾಗಿದೆ. ಕರಟಕ, ದಮನಕರು ಗೂಢಚರ್ಯೆ ಯಾಕೆ ನಡೆಸಿದರು ಎಂಬ ಬಹುಮುಖ್ಯವಾದ ಪ್ರಶ್ನೆಯನ್ನು ತನಿಖೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ.

ಆದರೀಗ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಪುರಾವೆಯೊಂದು ಲಭ್ಯವಾಗಿರುವುದರಿಂದ 'ಸಾಹೇಬ' ಮತ್ತು 'ಗುಲಾಮ'ರ ಕಾರಸ್ಥಾನಗಳು ಬಯಲಾಗುವ ಸಾಧ್ಯತೆ ಕಾಣಿಸುತ್ತಿದೆ. ಯುವತಿಯ ಅಪ್ಪ ಬರೆದುದೆನ್ನಲಾದ ಪತ್ರದಲ್ಲಿ ಯುವತಿಯ ಅಮ್ಮ ಅಹಮದಾಬಾದ್‌ನ ಸ್ಟರ್ಲಿಂಗ್ ಆಸ್ಪತ್ರೆಯಲ್ಲಿ ಶಸ್ತ್ರಕ್ರಿಯೆಗೆ ಒಳಗಾಗಲಿರುವುದರಿಂದ ಅಮ್ಮನ ಆರೈಕೆಗಾಗಿ ಅಪರಾತ್ರಿಯ ಸಮಯಗಳಲ್ಲಿ ಆಸ್ಪತ್ರೆಗೆ ಹೋಗಿಬರಬೇಕಾಗಿರುವ ಮಗಳಿಗೆ ಭದ್ರತಾ ವ್ಯವಸ್ಥೆ ಒದಗಿಸಬೇಕೆಂಬ ಕೋರಿಕೆ ಇತ್ತು. ಈಗ ಲಭ್ಯವಾಗಿರುವ



ದಾಖಲೆಗಳ ಪ್ರಕಾರ ಯುವತಿಯ ಅಮ್ಮ ಸ್ಟರ್ಲಿಂಗ್ ಆಸ್ಪತ್ರೆ[...] ಅಡ್ಮಿಟ್ ಆಗಿದ್ದು ಆಗಸ್ಟ್ 11, 2013ರಂದು. [...] ದಿನ ಕಳೆದು ಅಂದರೆ ಆಗಸ್ಟ್ 13, 2013ರಂದ[...] ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಅತ್ತ ಆಗ[...] 2013ಕ್ಕೆ ಆರಂಭವಾದ ಭಯೋತ್ಪಾದನಾ ನಿಗ್ರಹ[...] "ಭದ್ರತೆ" ಸೆಪ್ಟೆಂಬರ್ 6ರ ತನಕ ಅಂದರೆ ಬರೋ[...] 34 ದಿನಗಳ ಕಾಲ ಮುಂದುವರಿದಿದೆ. ಆದು[...] ರಾಜನಾಥ್ ಸಿಂಗ್ ಅವರು ಓದಿ ಹೇಳಿದ್ದ ಪತ್ರದಲ್ಲಿ[...] ಅರೆಸತ್ಯ ಮತ್ತು ಸುಳ್ಳು ಮತ್ತು ಅದನ್ನು ಯು[...] ಅಪ್ಪನ ಕೈಲಿ ನಂತರ ಬರೆಸಲಾಗಿತ್ತು ಎನ್ನುವುದು [...]

ಈಗ ಲಾಯರ್ ಗಿರೀಶ್ ದಾಸ್ ಎಂಬಾತ ಈ [...] ಸಂಬಂಧಪಟ್ಟಂತೆ ರಾಜ್ಯ ಹೈಕೋರ್ಟ್‌ನಲ್ಲಿ ಸಾ[...] ಹಿತಾಸಕ್ತಿ ಅರ್ಜಿಯೊಂದನ್ನು ದಾಖಲಿಸಿದ್ದಾರೆ. ಗಿರೀಶ್ ಅವರು 'ಇ[...] ಖಾಸಗಿ ಗೂಢಚರ್ಯಾ ಕೃತ್ಯ. ಇದರ ತನಿಖೆಗಾಗಿ ತನಿಖಾ ಆ[...] ರಚಿಸುವ ಅಧಿಕಾರ ಸರ್ಕಾರಕ್ಕೆ ಇದೆಯೇ? ಆಯೋಗದ ರಚನೆಯೂ[...] ಆಯೋಗ ಕಾಯ್ದೆಗೆ ಅನುಗುಣವಾಗಿ ಇದೆಯೇ?' ಮುಂತಾದ ಕೆಲವು [...] ಪ್ರಶ್ನೆಗಳನ್ನು ಎತ್ತಿದ್ದಾರೆ.

(http://www.truthofgujarat.com)

ಸರಳ, ಸಜ್ಜನ ಶ್ರೀಕಂಠದತ್ತ ಒಡೆಯರ್

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಕಳೆದ ಮಂಗಳವಾರ ತೀರಿಕೊಂಡ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರನ್ನು ನಮ್ಮ ಹೆಚ್ಚಿನ ಮಾಧ್ಯಮಗಳು 'ಅರಸ', 'ಮಹಾರಾಜ', 'ಒಡೆಯ' ಎಂದೆಲ್ಲ ಬಣ್ಣಿಸಿದವು. ವಾಸ್ತವವಾಗಿ ಒಡೆಯರ್ ಅವರು ಅದ್ಯಾವುದೂ ಆಗಿರಲಿಲ್ಲ. ಅವರು ಈ ಭೂಮಿಯ ಮೇಲೆ ಜನಿಸುವ ಮುನ್ನವೇ ಇಲ್ಲಿ ರಾಜರ ಆಡಳಿತ ಕೊನೆಗೊಂಡು, ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದು ಆರು ವರ್ಷಗಳಾಗಿದ್ದವು. ಅವರ ತಂದೆ ಅದಕ್ಕೂ ಮುನ್ನ ಮಹಾರಾಜರಾಗಿದ್ದರೇ ವಿನಹ ಶ್ರೀಕಂಠದತ್ತ ಎಂದೂ ಈ ರಾಜ್ಯದ ಮಹಾರಾಜನಾಗಲಿ, ಕೊನೆ ಪಕ್ಷ ಮೈಸೂರು ಜಿಲ್ಲೆಯ ರಾಜನೂ ಆಗಿರಲಿಲ್ಲ, ರಾಜಕುಮಾರನೂ ಆಗಿರಲಿಲ್ಲ. ನಮ್ಮ ರಾಜ್ಯದ ಇತಿಹಾಸದ ಬಗ್ಗೆ ನಮ್ಮ ಮಾಧ್ಯಮಗಳಿಗೆ ಇಷ್ಟು ಕನಿಷ್ಠ ಪ್ರಜ್ಞೆಯೂ ಇರದದ್ದು ದುರಂತವೇ ಸರಿ.

ಇನ್ನು ನಮ್ಮ ಪ್ರಗತಿಪರ ಸಿದ್ದರಾಮಯ್ಯನವರ ಸರ್ಕಾರ ಕೂಡ ಇದಕ್ಕಿಂತ ಹೆಚ್ಚಿನ ಪ್ರಜ್ಞಾವಂತಿಕೆಯನ್ನು ಪ್ರದರ್ಶಿಸಲಿಲ್ಲ. ಶ್ರೀಕಂಠದತ್ತರ ಮರಣದ ಸುದ್ದಿ ಕೇಳುತ್ತಿದ್ದಂತೆಯೇ ರಾಜ್ಯಾದ್ಯಂತ ಎರಡು ದಿನಗಳ ಶೋಕಾಚರಣೆಯನ್ನೂ, ಮೈಸೂರು ಜಿಲ್ಲೆಯಲ್ಲಿ ಎರಡು ದಿನಗಳ ರಜೆಯನ್ನೂ ಸರ್ಕಾರ ಘೋಷಿಸಿತು. ಇದಕ್ಕೆ ಕಾರಣ ಏನು ಎಂದು ಯಾರಿಗೂ ಗೊತ್ತಾಗಲಿಲ್ಲ. ಯಾಕೆಂದರೆ ಶ್ರೀಕಂಠದತ್ತರು ಎಂದೂ ಈ ರಾಜ್ಯದ ಮುಖ್ಯಮಂತ್ರಿಯಾಗಿರಲಿಲ್ಲ, ದೇಶದ ಪ್ರಧಾನಿಯೂ ಆಗಿರಲಿಲ್ಲ. ಹೆಚ್ಚೆಂದರೆ ಅವರು ನಾಲ್ಕು ಬಾರಿ ಸಂಸತ್ ಸದಸ್ಯರಾಗಿದ್ದರು. ಅಂದ ಮಾತ್ರಕ್ಕೆ ಎರಡು ದಿನಗಳ ಶೋಕಾಚರಣೆ ಮತ್ತು ರಜೆ ಯಾಕೆ? ಈ ಪ್ರಶ್ನೆಯನ್ನು ದೇಶಭಕ್ತ ಚೆಡ್ಡಿ ವೀರರಾಗಲಿ, ಜಾತ್ಯತೀತ ಕುಮಾರಸ್ವಾಮಿಯವರಾಗಲಿ, ಭ್ರಷ್ಟ ಯಡಿಯೂರಪ್ಪನವರಾಗಲಿ ಸಿದ್ದರಾಮಯ್ಯನವರನ್ನು ಎಂದೂ ಕೇಳುವುದಿಲ್ಲ. ಯಾಕೆಂದರೆ ಅವರು ಹಾಗೊಮ್ಮೆ ಕೇಳಿದರೆ ಮೈಸೂರು ಪ್ರಾಂತ್ಯದ ಜನರ ಮನಸ್ಸಿಗೆ 'ನೋವಾಗಿ' ಮುಂದಿನ ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸುವುದಿಲ್ಲ ಎಂಬ ರಾಜಕೀಯ ಲೆಕ್ಕಾಚಾರ.

ಶ್ರೀಕಂಠದತ್ತ ಅವರ ಮರಣದ ಸುತ್ತ ಇಷ್ಟು ಹೇಳಿದ ನಂತರ ಅವರ ಬಗ್ಗೆ ನನ್ನ ಅರಿವಿಗೆ ಬಂದಷ್ಟನ್ನು ಇಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳುವುದು ಸೂಕ್ತ ಎನಿಸುತ್ತಿದೆ. ನಾನು ಕಂಡಂತೆ ಶ್ರೀಕಂಠದತ್ತರು ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಅಪ್ರಸ್ತುತವಾಗಿರುವ ರಾಜವಂಶವೊಂದರ ಕುಡಿಯಾಗಿದ್ದರೂ ಅವರು ಎಂದೂ ಅದರ ಬಗ್ಗೆ ಹಮ್ಮುಬಿಮ್ಮು ಪ್ರದರ್ಶಿಸಿದವರಲ್ಲ. ಬದಲಾಗಿ ನನ್ನೊಂದಿಗೆ ಸಾಧ್ಯವಾದಷ್ಟು ಸಾಮಾನ್ಯರಂತೆ ವರ್ತಿಸುತ್ತಿದ್ದ ವ್ಯಕ್ತಿಯಾಗಿದ್ದರು.


ಅವರನ್ನು ನಾನು ಮೊದಲ ಬಾರಿಗೆ ಭೇಟಿಯಾಗಿದ್ದು 1991ರ ಲೋಕಸಭಾ ಚುನಾವಣೆಯ ಮುನ್ನ. ಬೆಂಗಳೂರಿನಿಂದ ರಾಷ್ಟ್ರಮಟ್ಟದ ಪತ್ರಿಕೆಗಳ ವರದಿಗಾರರಾಗಿದ್ದ ನಾವು ನಾಲ್ಕೈದು ಜನ ಪತ್ರಕರ್ತರು ಚುನಾವಣೆಯ ವಿಶ್ಲೇಷಣೆಗೆಂದು ರಾಜ್ಯ ಪ್ರವಾಸ ಹೊರಟಿದ್ದೆವು. ಮೈಸೂರಿಗೆ ಹೋದಾಗ ಸಹಜವಾಗಿಯೇ ಆಗ ತಾನೆ ಕಾಂಗ್ರೆಸ್ ತೊರೆದು ಬಿಜೆಪಿಯ ಅಭ್ಯರ್ಥಿಯಾಗಿದ್ದ ಒಡೆಯರ್ ಅವರನ್ನು ಭೇಟಿ ಆಗಲು ಅವರು ವಾಸವಿದ್ದ ಅಂಬಾವಿಲಾಸ ಅರಮನೆಗೆ ಹೋದೆವು.

ಅವರ ಸಹಾಯಕರೊಬ್ಬರು ನಮ್ಮನ್ನೆಲ್ಲ ಶ್ರೀಕಂಠದತ್ತ ಅವರ ಸ್ಟಡಿ ರೂಮಿಗೆ ಕರೆದುಕೊಂಡು ಹೋದರು. ವಿಸ್ತಾರವಾಗಿದ್ದ ಆ ಸ್ಟಡಿ ರೂಮಿನ ಮಧ್ಯೆ ದೊಡ್ಡ ಟೇಬಲ್ ಒಂದಿತ್ತು, ಅದರ ಮೇಲೆ ಒಂದು ಕಂಪ್ಯೂಟರ್ ಮಾನಿಟರ್ ಮಾತ್ರ ಇತ್ತು, ಆ ಟೇಬಲ್ ಹಿಂದಿದ್ದ ಶೆಲ್ಫ್‌ಗಳ ತುಂಬಾ ಪುಸ್ತಕಗಳು. ಟೇಬಲ್ ಎದುರು ನಾಲ್ಕೈದು ಕುರ್ಚಿಗಳು. ಅವುಗಳ ನಡುವೆ ಆನೆಯ ಕಾಲುಗಳನ್ನು ಬಳಸಿ ರೂಪಿಸಿದ್ದ ಸ್ಟೂಲ್‌ಗಳು. ಗೋಡೆಯ ಮೇಲೆ ಮಹಾರಾಜರ ಗುಂಡುಗಳಿಗೆ ಬಲಿಯಾಗಿದ್ದ ಹುಲಿ, ಸಿಂಹ, ಜಿಂಕೆ, ಕಾಡೆಮ್ಮೆಗಳ ತಲೆಗಳು. ಅವುಗಳ ಅಡಿ ಪ್ರಾಚೀನ ಕತ್ತಿ ಬಂದೂಕು, ಭರ್ಜಿ ಇತ್ಯಾದಿಗಳು ನೇತಾಡುತ್ತಿದ್ದವು. ಅವುಗಳನ್ನು ನಾವೆಲ್ಲ ಬೆಕ್ಕಸಬೆರಗಾಗಿ ನೋಡುತ್ತಾ ನಿಂತೆವು.

ಶ್ರೀಕಂಠದತ್ತರಿಗಾಗಿ ಕಾಯುತ್ತಿರುವಾಗ ನಾವು ಅವರನ್ನು ಹೇಗೆ ಸಂಬೋಧಿಸುವುದು ಎಂದು ಚರ್ಚಿಸ ಲಾರಂಭಿಸಿದೆವು. "ನಾವು ಅವರನ್ನು 'Your Highness' ಎಂದು ಕರೆಯಬೇಕೆಂದು ಅವರು ಆಶಿಸಬಹುದೇ?" ಎಂದು ಮಿತ್ರರೊಬ್ಬರು ಪ್ರಶ್ನಿಸಿದರು. ಆಗ ತುಂಟ ಸ್ವಭಾವದ ಮತ್ತೊಬ್ಬ ಮಿತ್ರ "ಇಲ್ಲ, ಅದರ ಬದಲಾಗಿ 'Your Heaviness' ಎಂದೇ ಅನ್ನೋಣ!" ಎಂದು ಗೇಲಿ ಮಾಡಿದ್ದ.

ಮೂರನೆ ಬಾರಿ ಚುನಾವಣಾ ಕಣಕ್ಕೆ ಇಳಿದಿದ್ದ ಶ್ರೀಕಂಠದತ್ತ ಅವರು ಅದಕ್ಕೂ ಮುನ್ನ ಎರಡು ಬಾರಿ ಮೈಸೂರಿನಿಂದ ಕಾಂಗ್ರೆಸ್ ಪಕ್ಷದ ಸಂಸದರಾಗಿದ್ದರೂ ತಮ್ಮ ಕ್ಷೇತ್ರಕ್ಕಾಗಲಿ, ಮತದಾರರಿಗಾಗಲಿ ಏನನ್ನೂ ಮಾಡಿರಲಿಲ್ಲ. ಸಂಸತ್ತಿನಲ್ಲೂ ಅವರು ಮೈಸೂರಿನ ಬಗ್ಗೆಯಾಗಲಿ, ರಾಜ್ಯದ ಬಗ್ಗೆಯಾಗಲಿ ಪ್ರಮುಖವಾದ ವಿಷಯವನ್ನು ಎತ್ತಿಕೊಂಡು ಸೈ ಎನಿಸಿಕೊಂಡಿರಲಿಲ್ಲ. ಇನ್ನು ಸಂಸತ್ತಿನ ಕಾರಿಡಾರ್‌ಗಳಲ್ಲಿ ಅವರ ಬಗ್ಗೆ ಹೆಚ್ಚಾಗಿ ಜೋಕುಗಳೇ ಕೇಳಿಬರುತ್ತಿದ್ದವು. "ಏನ್ರೀ, ನಿಮ್ಮ ರಾಜ್ಯದ ರಾಜವಂಶಸ್ಥರು ಎನ್ನುತ್ತೀರಿ, ಆದರೆ ಆ ಮನುಷ್ಯ ಎಂದೂ ಯಾರಿಗೂ ಒಂದು ಕಪ್ ಕಾಫಿ ಕೊಡಿಸಿದ ಉದಾಹರಣೆ ಇಲ್ಲ. ಬದಲಾಗಿ ಅವರೇ ಬೇರೆಯವರಿಂದ ಸಿಗರೇಟ್ ಪಡೆದು ಸೇದುತ್ತಾರೆ" ಎಂದು ಇತರೆ ರಾಜ್ಯಗಳ ಪತ್ರಕರ್ತರು ಕರ್ನಾಟಕದವರಾದ ನಮ್ಮನ್ನು ಲೇವಡಿ ಮಾಡುತ್ತಿದ್ದರು.

ವಾಸ್ತವವಾಗಿ ಶ್ರೀಕಂಠದತ್ತ ಅವರು ಚುನಾವಣೆಗಳಲ್ಲಿ ಗೆದ್ದ ಮೇಲೆ ತಾನಾಯಿತು, ತನ್ನ ಅರಮನೆಯಾಯಿತು ಎಂಬಂತೆ ಸುಮ್ಮನಿದ್ದರು. ಅದಕ್ಕೆ ಅವರ ಅಂತರ್ಮುಖಿ ಸ್ವಭಾವ ಒಂದು ಕಾರಣವಾಗಿದ್ದರೆ, ರಾಜಕಾರಣಕ್ಕೆ ಬೇಕಿರುವ ಚಾಲಾಕಿತನ ಅವರಲ್ಲಿ ಇಲ್ಲದಿದ್ದದ್ದೂ ಇನ್ನೊಂದು ಕಾರಣವಾಗಿತ್ತು. ಅವೆಲ್ಲಕ್ಕಿಂತ ಅವರ ಸರಳತೆ ಮತ್ತು ಸಜ್ಜನಿಕೆಯೂ ಪ್ರಮುಖ ಕಾರಣವಾಗಿತ್ತು ಎಂದು ನನಗನ್ನಿಸುತ್ತದೆ.



ಚಿತ್ರಕೃಪೆ: ಲೋಕೇಶ್ ಮೊಸಳೆ

ಸಾಮಾನ್ಯವಾಗಿ ರಾಜಕಾರಣಿಗಳ, ಉದ್ಯಮಿಗಳ ಆಫೀಸುಗಳಲ್ಲಿ ಅವರಿಗೆಂದೇ ಒಂದು ಪ್ರತ್ಯೇಕ ಕುರ್ಚಿ ಇದ್ದು ಇತರರಿಗೆಂದು ಮೂರು ಜನ ಕೂರುವ ಒಂದೆರೆಡು ಸೋಫಾಗಳು ಇರುತ್ತವೆ. ಆದರೆ ಅಂತಹ ವ್ಯವಸ್ಥೆ ಶ್ರೀಕಂಠದತ್ತ ಅವರ ಸ್ಟಡಿ ರೂಮಿನಲ್ಲಿ ಇರದಿದ್ದರಿಂದ ಯಾರು ಎಲ್ಲಿ ಕೂರಬೇಕೆಂದು ನಮಗೆ ಒಂದಿಷ್ಟು ಗಲಿಬಿಲಿ ಆಗಿತ್ತು. ಅವತ್ತು ಪೂಜೆ ಮುಗಿಸಿದ ಕೂಡಲೇ ನಮ್ಮನ್ನು ಭೇಟಿಯಾಗಲು ತಮ್ಮ ಸ್ಟಡಿ ರೂಮಿಗೆ ಬಂದ ಶ್ರೀಕಂಠದತ್ತರು ನೇರವಾಗಿ ಖಾಲಿಯಿದ್ದ ಒಂದು ಕುರ್ಚಿಯಲ್ಲಿ ಕೂತರು.

ಶ್ರೀಕಂಠದತ್ತ ಅವರು ಇತರೆ ರಾಜಕೀಯ ನಾಯಕರಷ್ಟು ಬಿಗುಮಾನವನ್ನೂ ತೋರಿಸಲಿಲ್ಲ, ನಾವೆಲ್ಲ ಅವರ ಬಹಳ ವರ್ಷದ ಸ್ನೇಹಿತರೇನೋ ಎಂಬಂತೆ ನಮ್ಮೊಂದಿಗೆ ಮಾತಿಗಿಳಿದರು. ಆ ಕೊಠಡಿಯಲ್ಲಿದ್ದ ಬೇಟೆಯ ಪರಾಕ್ರಮಗಳ ಸಾಕ್ಷಿಗಳಿಗಿಂತ ಅವರಿಗೆ ಅದೇ ಕೊಠಡಿಯಲ್ಲಿದ್ದ ಪುಸ್ತಕಗಳ ಬಗ್ಗೆ ಹೆಚ್ಚು ಆಸಕ್ತಿ ಇತ್ತು. "ಇದು ನನ್ನ ಪೂರ್ವಿಕರಿಂದ ಬಳುವಳಿಯಾಗಿ ಬಂದಿರುವ ಪುಸ್ತಕಗಳು. ಇವುಗಳಲ್ಲಿ ಅದೆಷ್ಟೊ ಪುಸ್ತಕಗಳು ಅಪರೂಪದ್ದು" ಎಂದು ಹೆಮ್ಮೆ ವ್ಯಕ್ತಪಡಿಸಿದ್ದರು.

ರಾಜಕೀಯ ತರ್ಕ, ಮೂರನೆ ಬಾರಿಗೆ ಗೆಲ್ಲುವ ಸಾಧ್ಯತೆಗಳ ಬಗ್ಗೆ ಅವರೊಂದಿಗೆ ಚರ್ಚಿಸುತ್ತಿದ್ದಾಗ ಪ್ರಮೋದಾ ದೇವಿಯವರು ಬಂದು ನಮ್ಮನ್ನೆಲ್ಲ ಪರಿಚಯಿಸಿಕೊಂಡು ಹೋದರು. ಅವರೂ ಸಹ ನಮ್ಮ ಮುಂದೆ ಸರಳವಾಗಿ ನಡೆದುಕೊಂಡಿದ್ದರೂ ಸಹ ಅದು ಶ್ರೀಕಂಠದತ್ತರಷ್ಟು ಸಹಜವಾದುದಲ್ಲ ಎನಿಸಿತ್ತು. ಅಂದಿನ ಭೇಟಿಯಲ್ಲಿ 'ರಾಜಮನೆತನ' ಎಂಬುದು ವ್ಯಕ್ತವಾಗಿದ್ದು ಆ ಕೊಠಡಿಯಲ್ಲಿದ್ದ ವಸ್ತುಗಳ ಮತ್ತು ಸಹಾಯಕರೊಬ್ಬರು ಬೆಳ್ಳಿ ಲೋಟಗಳಲ್ಲಿ ತಂದು ಕೊಟ್ಟ ಕಾಫಿ ಮೂಲಕ ಮಾತ್ರ.

ಅಂದಿನ ಭೇಟಿಯಲ್ಲಿ ಶ್ರೀಕಂಠದತ್ತರು "ನಾನು ಯಾವ ಪಕ್ಷದಿಂದ ಸ್ಪರ್ಧಿಸುತ್ತೇನೆ ಎಂಬುದು ಮತದಾರರಿಗೆ ಮುಖ್ಯವಲ್ಲ, ನನ್ನ ಪಕ್ಷದ ಚಿನ್ಹೆ ಹಸ್ತವಾಗಿದ್ದರೂ, ಕಮಲವಾಗಿದ್ದರೂ ಜನ ಅದಕ್ಕೆ ಪ್ರಾಮುಖ್ಯತೆ ಕೊಡುವುದಿಲ್ಲ, ಬದಲಾಗಿ ನಮ್ಮ ವಂಶದ ಬಗ್ಗೆ ಅವರಿಗಿರುವ ಗೌರವವೇ ನನ್ನನ್ನು ಗೆಲ್ಲಿಸುತ್ತದೆ" ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದರು.

ಇದರ ಬಗ್ಗೆ ಅವರಿಗೆ ಅದೆಷ್ಟು ನಂಬಿಕೆ ಇತ್ತೆಂದರೆ ಅವರು ಚುನಾವಣೆಗೆಂದು ಹೆಚ್ಚು ಹಣವನ್ನು ವೆಚ್ಚ ಮಾಡಲಿಲ್ಲ. ಇದರ ಪರಿಣಾಮ ಅವರಿಗೆ ಗೊತ್ತಾಗಲಿಲ್ಲ. ಯಾಕೆಂದರೆ ಆ ನಂತರ ನಾವು ಬಿಜೆಪಿಯ ಕಾರ್ಯಕರ್ತರನ್ನು ಭೇಟಿ ಆದಾಗ "ಒಡೆಯರ್ ಅವರು ತಮ್ಮ ಜೇಬು ತೆರೆಯದೇ ಗೆಲ್ಲುತ್ತೇನೆ ಎಂದು ಭಾವಿಸಿರುವಂತಿದೆ. ಜನರನ್ನು ಒಂದು ಸಭೆಗೆ ಕರೆತರಲೂ ಎಷ್ಟು ಹಣ ಬೇಕಾಗುತ್ತದೆ ಎಂಬ ಅಂದಾಜೆ ಅವರಿಗಿಲ್ಲ. ನಾವು ನಮ್ಮ ಕೈಯಿಂದ ಹಣ ಹಾಕಬೇಕೆಂದು ಅವರು ನಿರೀಕ್ಷಿಸುತ್ತಿದ್ದಾರೆ" ಎಂದು ಅವರೆಲ್ಲ ಗೊಣಗಾಡಿದ್ದರು.

ಆ ಚುನಾವಣೆಯಲ್ಲಿ ಶ್ರೀಕಂಠದತ್ತ ಅವರು ಪ್ರಥಮ ಬಾರಿಗೆ ಸೋಲುಂಡರು.

ಅದು ಹೇಗೋ ಶ್ರೀಕಂಠದತ್ತ ಅವರಿಗೆ ನನ್ನ ಬಗ್ಗೆ ಒಂದು ರೀತಿಯ ಭರವಸೆ ಮೂಡಿತ್ತು. ಆಗ 'ಲಂಕೇಶ್ ಪತ್ರಿಕೆ'ಯಲ್ಲಿ ಅವರ ವಿರುದ್ಧ ವರದಿಗಳು ಪ್ರಕಟಗೊಳ್ಳುತ್ತಿದ್ದರೂ ಅದರ ಬಗ್ಗೆ ತಲೆ ಕೆಡಿಸಿಕೊಳ್ಳದ ಶ್ರೀಕಂಠದತ್ತ ಅವರು ಆಗೀಗ ನನಗೆ ಫೋನ್ ಮಾಡಿ ವಿವಿಧ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದರು. ಹೀಗೆ ಒಮ್ಮೆ ಅವರು ಫೋನ್ ಮಾಡಿ ನನ್ನ ಮುಂದೆ ಒಂದು ವಿಚಿತ್ರ ಮನವಿಯನ್ನಿಟ್ಟರು. ಅದು ಹೀಗಿತ್ತು: "ಸದ್ಯದಲ್ಲೇ ರಾಜ್ಯಸಭೆಗೆ ರಾಜಸ್ತಾನದಿಂದ ನೇಮಕಾತಿಗಳು ಆಗಲಿವೆ. ನೀವು (ಬಿಜೆಪಿಯ ಹಿರಿಯ ನಾಯಕಿ) ವಿಜಯರಾಜೇ ಸಿಂಧಿಯಾ ಅವರಿಗೆ ಫೋನ್ ಮಾಡಿ ನನ್ನನ್ನು ರಾಜಸ್ತಾನದ ಕೋಟಾದಡಿ ರಾಜ್ಯಸಭೆಗೆ ನೇಮಿಸಬೇಕೆಂದು ಹೇಳುತ್ತೀರಾ?" ಎಂದರು. ಜೊತೆಗೆ 'ರಾಜಮಾತೆ' ಸಿಂಧಿಯಾ ಅವರ ಫೋನ್ ನಂಬರ್ ಅನ್ನೂ ನನಗೆ ಕೊಟ್ಟು "ನಾನೇ ಈ ಮನವಿ ಮಾಡಿದ್ದೇನೆ ಎಂದು ಅವರಿಗೆ ಹೇಳಬೇಡಿ" ಎಂದರು.

ಆಗ ರಾಷ್ಟ್ರಮಟ್ಟದಲ್ಲಿ ಇದ್ದದ್ದು ಮೂರು ಇಂಗ್ಲಿಷ್ ವಾರಪತ್ರಿಕೆಗಳು ಮಾತ್ರ. ಆ ಮೂರರಲ್ಲಿ ನಾನು ಕೆಲಸ ಮಾಡುತ್ತಿದ್ದ 'ಸಂಡೆ' ಒಂದಾಗಿದ್ದು ವಿಜಯರಾಜೇ ಸಿಂಧಿಯಾ ಅವರಿಗೆ ನನ್ನ ಪರಿಚಯ ಇಲ್ಲದಿದ್ದರೂ ನನ್ನ ಹೆಸರು ಅವರಿಗೆ ಗೊತ್ತಿದ್ದ ಸಾಧ್ಯತೆ ಇತ್ತು. ಆ ಧೈರ್ಯದ ಮೇಲೆ ನಾನು ವಿಜಯರಾಜೇ ಸಿಂಧಿಯಾ ಅವರಿಗೆ ಫೋನ್ ಮಾಡಿ "ರಾಜಸ್ತಾನದಿಂದ ನಮ್ಮ ಒಡೆಯರ್ ಅವರನ್ನು ರಾಜ್ಯಸಭೆಗೆ ನೇಮಿಸುವ ಬಗ್ಗೆ ತಾವು ಯಾಕೆ ಯೋಚಿಸಬಾರದು. ಅವರು ಈಗ ನಿಮ್ಮ ಪಕ್ಷದಲ್ಲೇ ಇದ್ದಾರೆ" ಎಂದೆ. ಆದರೆ ಆಕೆ ಚಾಲಾಕಿ ಮಹಿಳೆ. ಕೂಡಲೇ ಇದು ಸ್ವತಃ ಒಡೆಯರ್ ಅವರಿಂದ ಬಂದಿದ್ದ ಮನವಿ ಎಂಬುದನ್ನು ಗ್ರಹಿಸಿದ ಆಕೆ "ಸಾರಿ ಗೌರಿ. ಒಡೆಯರ್ ಅವರಿಗೆ ಹೇಳು, ಆ ಸ್ಥಾನಕ್ಕೆ ರಾಜಸ್ತಾನದಲ್ಲೇ ತುಂಬಾ ಪೈಪೋಟಿ ಇದೆ. ಮುಂದೆ ಸಾಧ್ಯವಾದಾಗ ಅವರಿಗೆ ಸೂಕ್ತ ಸ್ಥಾನ ಕೊಡುತ್ತೇವೆ ಎಂದು ಅವರಿಗೆ ತಿಳಿಸು" ಎಂದಿದ್ದರು. ಒಡೆಯರ್ ಅವರಿಗೆ ಈ ಸಂದೇಶವನ್ನು ರವಾನಿಸಿ ಸುಮ್ಮನಾದೆ.

ಒಮ್ಮೆ ಶ್ರೀಕಂಠದತ್ತ ಅವರು ಬೆಂಗಳೂರಿಗೆ ಬಂದಿದ್ದಾಗ ನನ್ನನ್ನು ರೇಸ್‌ಕ್ಲಬ್‌ನಲ್ಲಿರುವ ಕ್ಯಾಂಟೀನಿಗೆ ಆಹ್ವಾನಿಸಿದರು. ಅವತ್ತು ಅವರೊಂದಿಗೆ ಅದೂ ಇದೂ ಮಾತನಾಡಿದ ನಂತರ "ನಿಮ್ಮ ಉತ್ತರಾಧಿಕಾರಿಯಾಗಿ ಯಾರನ್ನಾದರೂ ನೇಮಿಸುವ ಬಗ್ಗೆ ಯೋಚಿಸುತ್ತಿದ್ದೀರಾ?" ಎಂದು ಕೇಳಿದ್ದೆ. ಅದಕ್ಕೆ ಶ್ರೀಕಂಠದತ್ತ ಅವರು "ಅಲಮೇಲು ಅವರು ಒಡೆಯರ್ ಕುಟುಂಬಕ್ಕೆ ಕೊಟ್ಟಿದ್ದ ಶಾಪ ಶಾಶ್ವತವಾದದ್ದಲ್ಲ, ಅಂತಹ ಶಾಪಗಳು ಆರು ತಲೆಮಾರುಗಳಿಗೆ ಸೀಮಿತವಾಗಿರುತ್ತವೆ. ನಾನು ಏಳನೆ ತಲೆಮಾರಿನವನು" ಎಂದು ಉತ್ತರಿಸಿದ್ದರು. ಅಂದರೆ ಆಗಲೂ ಅವರಿಗೆ ತಂದೆ ಆಗುವ ಬಗ್ಗೆ ಭರವಸೆ ಇತ್ತು. ನಾನು ಸುಮ್ಮನಾಗಿದ್ದೆ.

ಇನ್ನೊಮ್ಮೆ ಅವರು ಬೆಂಗಳೂರಿನಲ್ಲಿರುವ ತಮ್ಮ ಸಹೋದರಿಯೊಬ್ಬರ ಮನೆಗೆ ನನ್ನನ್ನು ಕರೆದಿದ್ದರು. ಶ್ರೀಕಂಠದತ್ತರು ನನ್ನೊಂದಿಗೆ ಸರಳವಾಗಿ, ಸಹಜವಾಗಿ ವರ್ತಿಸುತ್ತಿದ್ದರು. ಆದರೆ ಅವರ ಸಹೋದರಿಯರು ಹೇಗೆ ಎಂದು ನನಗೆ ಗೊತ್ತಿರಲಿಲ್ಲ. ರಾಜಮಹಲ್ ವಿಲಾಸ್ ಏರಿಯಾದಲ್ಲಿರುವ ಅವರ ಸಹೋದರಿಯ ಮನೆಗೆ ಹೋದೆ. ಅವತ್ತು ಒಡೆಯರ್ ಕುಟುಂಬದ ಮಿತ್ರರ ಮದುವೆಯೋ, ಮತ್ತಿನ್ನೇನೋ ಇದ್ದುದ್ದರಿಂದ ಇಡೀ ಒಡೆಯರ್ ಕುಟುಂಬ ಅಲ್ಲಿ ಸೇರಿತ್ತು. ಎಲ್ಲರೂ ಮೇಲುಮಧ್ಯಮ ವರ್ಗದ ಶ್ರೀಮಂತ ಮಹಿಳೆಯರಂತೆ ಕಂಡರೇ ಹೊರತು ಯಾರೂ 'ರಾಜವಂಶಸ್ಥರು' ಎಂಬ ಅಹಂಕಾರ ತೋರಲಿಲ್ಲ.

ಇದಾದ ಕೆಲವು ವರ್ಷಗಳ ನಂತರ ಶ್ರೀಕಂಠದತ್ತರನ್ನು ಮತ್ತೊಮ್ಮೆ ಭೇಟಿ ಆದೆ. ನಾನು ಅವರನ್ನು ಮುಖತಃ

▶|08




ಒಕ್ಕಲಿಗರ ಸಂಘ ಚುನಾವಣೆ

ಒಂದು ಓಟಿಗೆ 15 ಸಾವಿರ!

ನೇಗಿಲ ಕುಲದೊಳಗಡಗಿದೆ ಕರ್ಮ
ನೇಗಿಲ ಮೇಲೆಯೇ ನಿಂತಿದೆ ಧರ್ಮ

ಉಳುವ ಯೋಗಿಯ ಹಿರಿಮೆ ಸಾರುವ ಈ ಕುವೆಂಪು ಕವಿತೆಯ ಉದ್ದೇಶವನ್ನು ಕೇವಲ ರೈತನಿಗಷ್ಟೇ ಅಲ್ಲದೆ ಒಕ್ಕಲಿಗ ಜನಾಂಗಕ್ಕೂ ವಿಸ್ತರಿಸಬಹುದೆ? ಹಳೇ ಮೈಸೂರು ಪ್ರಾಂತ್ಯದ ರೈತಾಪಿಗಳಾದ ಒಕ್ಕಲಿಗರೇ ಕನ್ನಡ ಸಂಸ್ಕೃತಿಯ ಆಧಾರ ಸ್ತಂಭಗಳಲ್ಲೊಬ್ಬರೆ?

ಪ್ರಶ್ನೆಗೆ ಉತ್ತರವೇನೇ ಇರಲಿ ಒಕ್ಕಲು ಸಂಸ್ಕೃತಿ ಉಳಿದರಷ್ಟೇ ಕನ್ನಡ ಬದುಕುತ್ತದೆ ಎಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ, ರಾಜ್ಯದ ಒಕ್ಕಲಿಗರ ಶಕ್ತಿ ಕೇಂದ್ರಗಳ ಪೈಕಿ ಹೇಗೆ ಆದಿಚುಂಚನಗಿರಿ ಮಠಕ್ಕೆ ವಿಶಿಷ್ಟ ಮನ್ನಣೆಯಿದೆಯೋ ಹಾಗೆ ಒಕ್ಕಲಿಗರ ಸಂಘವನ್ನೂ ತಮ್ಮ ಪ್ರಾತಿನಿಧಿಕ ಸಂಸ್ಥೆಯೆಂದೇ ಒಕ್ಕಲು ಕುಲ ನಂಬಿಕೊಂಡಿದೆ. ಪ್ರವೃತ್ತಿಯಲ್ಲಿ ಸಭ್ಯರೂ ಉದಾರಿಗಳೂ ಕೋಮುವಾದಿಗಳಲ್ಲದ ಒಕ್ಕಲಿಗರು ನಾಡಿನ ಮಣ್ಣಿನ ಮಕ್ಕಳೂ ಹೌದು.



ಕೆಂಚಪ್ಪ ಗೌಡ

ಒಕ್ಕಲಿಗರ ದುರಂತವೆನ್ನಿ, ದೌರ್ಭಾಗ್ಯವೆನ್ನಿ ರಾಜ್ಯ ನೇಗಿಲಕುಲದ ಪ್ರಾತಿನಿಧಿಕ ಸಂಸ್ಥೆಯಂತಿರುವ ಒಕ್ಕಲಿಗರ ಸಂಘ ಇವತ್ತು ಎಂಥವರ ಹಿಡಿತಕ್ಕೊಳಪಟ್ಟಿದೆ? ಲಿಕ್ಕರ್ ಸ್ಮಗ್ಲರ್‌ಗಳು, ಕೊಲೆಗಡುಕರು, ಭ್ರಷ್ಟರು, ನೆಲಕಂಟಕರು, ಮೆಡಿಕಲ್ ಸೀಟು ಧಂದೆಕೋರರರೆಲ್ಲ ಒಕ್ಕಲಿಗರ ಸಂಘದ ಚುಕ್ಕಾಣಿ ಹಿಡಿಯುತ್ತಾರೆಂದರೆ ಅಂಥವರನ್ನು ಓಟು ಕೊಟ್ಟು ಗೆಲ್ಲಿಸುವವರು ನಿಜಕ್ಕೂ ಒಕ್ಕಲಿಗರ ಪಾಲಿಗೆ ಹಿತೈಷಿಗಳಾ ಅಥವಾ ಕುಲ ಕಂಟಕರಾ?

ಇದೇ 2014ರ ಜನವರಿ 5ಕ್ಕೆ ನಿಗದಿಗೊಂಡಿರುವ ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಕೆಂಚಪ್ಪಗೌಡ ಹಂಚುತ್ತಿರುವ ಹಣ, ಹೆಂಡದ ಅತಿರೇಕವನ್ನು ಕಂಡ ಯಾರಿಗಾದರೂ ಮೇಲ್ಕಂಡ ಪ್ರಶ್ನೆಗಳು ಕಾಡಲೇಬೇಕು. ಕಳೆದ 10 ವರ್ಷಗಳಿಂದ ಒಕ್ಕಲಿಗರ ಸಂಘದ ಅನಭಿಷಕ್ತ ದೊರೆಯಂತೆ ಮೆರೆದ ಕೆಂಚಪ್ಪಗೌಡ ಇವತ್ತು ಓಟೊಂದಕ್ಕೆ ಹಂಚುತ್ತಿರುವುದು ಬರೋಬ್ಬರಿ 15 ಸಾವಿರ ರೂಪಾಯಿಯಷ್ಟು. ಒಂದು ಮತಕ್ಕೆ ಹದಿನೈದು ಸಾವಿರ ರೂಪಾಯಿ ಲಂಚಕೊಟ್ಟು ಗೆಲ್ಲ ಹೊರಟ ಕೆಂಚಪ್ಪಗೌಡನ ಜೊತೆಗೂಡಿರುವವರಾದರೂ ಎಂಥವರು?

ಕೆಂಚಪ್ಪನ ದುಷ್ಟ ಕೂಟ

ಹೊಸಕೋಟೆಯ ರಕ್ತಪಿಪಾಸು ರಾಜಕಾರಣಿ ಬಚ್ಚೇಗೌಡನ ತಂಗಿಯ ಮಗ ರಾಜಶೇಖರಗೌಡ, ಬೆಂಗಳೂರನ್ನು ಕುಲಗೆಡಿಸಿ ಸಹಸ್ರಾರು ಎಕರೆ ಒಕ್ಕಲಿಗರ ಭೂಮಿಯನ್ನು ದೋಚಿದ ಬಿಜೆಪಿ ನಾಯಕ ಆರ್. ಅಶೋಕ್‌ರ ಖಾಸಾ ತಮ್ಮ ರವಿ, ಹುಟ್ಟಾ ವಂಚಕ ಅಜ್ಜೇಗೌಡ ಶಿವಣ್ಣ, ನೆಲಕಂಟಕ ಹೆಚ್.ಆರ್. ಕೆಂಪೇಗೌಡ, ಹೊಸಕೋಟೆಯ ಪಾತಕಿ ಹುಲ್ಲೂರು ಮಂಜ, ವೈನ್ ಸ್ಟೋರ್ ಕೃಷ್ಣಪ್ಪ; ಹೀಗೆ ಪ್ರಳಯಾಂತಕರೆಲ್ಲ ಸೇರಿಕೊಂಡು ಕೆಂಚಪ್ಪಗೌಡನ ನೇತೃತ್ವದಲ್ಲಿ ಸಿಂಡಿಕೇಟು ಮಾಡಿಕೊಂಡು ಒಕ್ಕಲಿಗರ ಸಂಘಕ್ಕೆ ವಕ್ಕರಿಸಹೊರಟಿರುವುದರ ಅಪಾಯ

ಎತ್ತಿಂದೆತ್ತ ಲೆಕ್ಕಹಿಟ್ಟರೂ 350 ಕೋಟಿ ಮೀರುವುದಿಲ


ಹಗಲು ದರೋಡೆ

ಹಾಗಂಥ ಒಕ್ಕಲಿಗರ ಸಂಘದ ಅಧ್ಯಕ್ಷನಾ ಕೆಂಚಪ್ಪಗೌಡನೇನೂ ಮಾಮೂಲಿಯ ಶ್ರೀಮಂತನಲ್ಲ, ಸದ್ಯ ಆತನ ಒಟ್ಟೂ ಆಸ್ತಿಪಾಸ್ತಿಯನ್ನು ಲೆಕ್ಕ ಹಾಕಿದರೆ ಅದ ಐನೂರು ಕೋಟಿಯನ್ನು ಮೀರುತ್ತದೆ. (ಬಾಕ್ಸ್ ನೋಡಿ ಕೆಂಚಪ್ಪನ ಜೊತೆ ಕೈಜೋಡಿಸಿ ಒಕ್ಕಲಿಗರ ಸಂಘವನ್ ದೋಚಿದ ಗೋಪಾಲಗೌಡ, ಹುಲ್ಲೂರ್ ಮಂಜ, ಕುಕ್ಕೂರ ಶಿವಣ್ಣ ಮುಂತಾದವರೂ ಕಮ್ಮಿಯ ಕುಳಗಳೇನಲ್ ವಿಚಿತ್ರವೆಂದರೆ 107 ವರ್ಷಗಳಷ್ಟು ಹಳೆಯದಾದ ಸಂಘ ಮಾತ್ರ ದಿನೇ ದಿನೇ ಸೊರಗಿ ಸುಣ್ಣವಾಗುತ್ತಿದ್ದರೆ ಅದ ಚುಕ್ಕಾಣಿ ಹಿಡಿದವರೆಲ್ಲ ರಾತ್ರೋರಾತ್ರಿ ಕುಬೇರರಾಗುತ್ತಿರುವುದರ ರಹಸ್ಯವಾದರೂ ಎಂಥಾದ್ದು

ಇವತ್ತು ಮತ್ತೊಮ್ಮೆ ಸಂಘದ ಅಧ್ಯಕ್ಷನಾಗ ಹೊರಟ




ನಾಗರಾಜ್




ಅಪ್ಪಾಜಿಗೌಡ


ಕೆಂಚಪ್ಪಗೌಡನ ಸಿಂಡಿಕೇಟು ಓಟೊಂದಕ್ಕೆ 15 ಸಾವಿ ರೂಪಾಯಿ ಹಂಚುತ್ತಿದೆಯೆಂದರೆ ಅದು ಸಂಘವನ ಲೂಟಿಗೈದ ಪಾಪದ ರೊಕ್ಕವೇ ಹೊರತು ಮತ್ತೇನ 2000 ಕೋಟಿ ರೂಪಾಯಿ ಬೆಲೆ ಬಾಳುವ ಸಂಘ ಸಜ್ಜೆಪಾಳ್ಯದ 96 ಎಕರೆ ಭೂಮಿಯನ್ನು ನೆಲಗಳ್ಳರ ಜೊ ಕೈಜೋಡಿಸಿ ಮಾರಿಕೊಂಡದ್ದು, ಶ್ರೀಗಂಧದ ಕಾವಲಿನಲ್ಲಿ ಸಂಘದ ಇಪ್ಪತ್ತೆಕರೆಯನ್ನು ಬಿಲ್ಡರ್‌ಗಳಿಗೆ ಮಾರಿಕೊಂಡಿದ ರಾಮನಗರದಲ್ಲಿದ್ದ ಸಂಘದ ಸೊತ್ತಿನ ಹೆಸರಲ್ಲಿ ದೋಚಿದ ಕಟ್ಟಡ ನಿರ್ಮಾಣಗಳ ನೆಪದಲ್ಲಿ ಲೂಟಿ, ರಾಜ್ಯದ ಬೇ ಬೇರೆ ಭಾಗಗಳಲ್ಲಿ ಸಂಘದ ಹೆಸರಲ್ಲಿ ಆ ಖರೀದಿಸುತ್ತೇನೆಂದು ಮಾಡಿದ ದರೋಡೆ, ಮೆಡಿಕ




ಆರ್. ಅಶೋಕ್



ಬಚ್ಚೇಗೌಡ



ಮಂಜುನಾಥ್



ಗೋಪಾಲ್ ಗೌಡ



ರಾಜಶೇಖರ್

ಲಿಕ್ಕರ್ ಸ್ಮಗ್ಲರ್ ಕೆಂಚಪ್ಪ ಗೌಡ ಆಗಿದ್ದು ಹೇಗೆ?

ನಾಡಪ್ರಭು ಕೆಂಪೇಗೌಡ, ರಾಷ್ಟ್ರಕವಿ ಕುವೆಂಪು, ಆದಿಚುಂಚನಗಿರಿ ಸ್ವಾಮೀಜಿ, ಪ್ರೊ. ವೆಂಕಟಗಿರಿಗೌಡ, ಮಾಜಿ ಪ್ರಧಾನಿ ದೇವೇಗೌಡ, ಸಾಹಿತಿ ತೇಜಸ್ವಿ; ಹೀಗೆ ಯಾರೆಲ್ಲ ಮಹನೀಯರನ್ನು ಒಕ್ಕಲಿಗರು ತಮ್ಮ ಜನಾಂಗದ ಹೆಮ್ಮೆಯ ಸಂಕೇತಗಳೆಂದು ಪರಿಗಣಿಸುತ್ತಾರೋ ಅಂಥ ಜನಾಂಗದ ಸಂಘದ ಅಧ್ಯಕ್ಷನಾದವನ ಹಿನ್ನೆಲೆ ಇನ್ನೆಂಥದ್ದಿರಬೇಡ?

ನಂಬಿ; ಬಿಡಿ ಕೆಂಚಪ್ಪಗೌಡನ ಹಿನ್ನೆಲೆ, ಜಾತಕವೇನಾದರೂ ಗೊತ್ತಾದರೆ ಕುವೆಂಪು ಆತ್ಮ ಕೂಡ ವಿಲಿವಿಲಿ ಒದ್ದಾಡಲೇಬೇಕು.

ಇಲ್ಲಿಗೆ 20 ವರ್ಷದ ಹಿಂದೆ ಸಜ್ಜನರಾವ್ ಸರ್ಕಲ್ ಪಕ್ಕದ ಎನ್‌ಎಂಹೆಚ್ ಹೋಟೆಲ್ ಪಕ್ಕದಲ್ಲಿದ್ದ ಪಂಚಮುಖಿ ಟ್ರಾವಲ್ಸ್‌ನಲ್ಲಿ ಯಃಕಶ್ಚಿತ್ ಮೆಟಡೋರ್ ಡ್ರೈವರಾಗಿದ್ದವನು ಕೆಂಚಪ್ಪ, ಆ ಕಾಲಕ್ಕೆ ಕೇಂದ್ರಾಡಳಿತದ ಪಾಂಡಿಚೇರಿಯಿಂದ ಅಗ್ಗದ ಬೆಲೆಯ ವಿಸ್ಕಿ, ಬ್ರಾಂಡಿಗಳನ್ನು ಕದ್ದು ತಂದು ಕರ್ನಾಟಕದಲ್ಲಿ ಮಾರುವುದೇ ಲಾಭದಾಯಕ ದಂಧೆಯಾಗಿತ್ತು, ಪ್ರಾರಂಭದಲ್ಲಿ ಯಾರೋ ಲಿಕ್ಕರ್ ಸ್ಮಗ್ಲರ್ ಓರ್ವನ ಡ್ರೈವರಾಗಿ ಸ್ಮಗ್ಲಿಂಗ್ ಮಾಡಿಕೊಂಡಿದ್ದ ಕೆಂಚಪ್ಪ ಕ್ರಮೇಣ ತಾನೇ ಮೆಟಡೋರೊಂದನ್ನು ಖರೀದಿಸಿ ಪಾಂಡಿಚೇರಿಯಿಂದ ಲಿಕ್ಕರ್ ಹೊಡೆಯಲಾರಂಭಿಸಿದನಂತೆ. ಬರುಬರುತ್ತಾ ಪಾಂಡಿಚೇರಿಯಿಂದ ಲಿಕ್ಕರ್ ಸ್ಮಗ್ಲಿಂಗ್ ಮಾಡುವವರದ್ದೇ ದೊಡ್ಡ ಹಾವಳಿಯಾಗಿ ಸರ್ಕಾರ ಬ್ರಾಂದಿ, ವಿಸ್ಕಿಗಳ ಮೇಲೆ 'ಕರ್ನಾಟಕದಲ್ಲಿ ಮಾರಾಟಕ್ಕೆ ಮಾತ್ರ' ಎಂಬ ಲೇಬಲ್ ಮುದ್ರಿಸಿ ಮಾರುವಂತೆ ಆದೇಶಿಸಿತು.

ಆದರೆ ಲಿಕ್ಕರ್ ಸ್ಮಗ್ಲರ್‌ಗಳು ನಕಲಿ ಲೇಬಲ್ಲುಗಳನ್ನು ಮುದ್ರಿಸಿ ಅದಕ್ಕೆ ಪಾಂಡಿಚೇರಿಯ ಅಗ್ಗದ ಲಿಕ್ಕರ್ ತುಂಬಿಸಿ ಮಾರುವಷ್ಟು ಚಾಣಾಕ್ಷರಾದರು. ಇಂಥ ಸ್ಮಗ್ಲಿಂಗ್ ಧಂದೆಯಲ್ಲೇ ಕೆಂಚಪ್ಪ ಶ್ರೀಮಂತನಾದನಂತೆ. ಪ್ರಾರಂಭದಲ್ಲಿ ತ ದೇವನಹಳ್ಳಿಯಿಂದ ಒಕ್ಕಲಿಗರ ಸಂಘಕ್ಕೆ ಗೆದ್ದು ಬರುತ್ತಿದ್ದ ಮುನಿರಾಮಯ್ಯನವರ ಛೇಲಾ ಆಗಿದ್ದ, ತನ್ನ ಲಿಕ್ಕರ್ ಸ್ಮಗ್ಲಿಂಗ್ ಹಿನ್ನೆಲೆಯನ್ನು ಮರೆಮಾಚುವುದಕ್ಕೆ ಒಕ್ಕಲಿಗರ ಸಂಘದ ಡೈರೆಕ್ಟರಾಗುವುದೇ ಲಾಯಕ್ಕೆಂಬ ಹುನ್ನಾರಕ್ಕಿಳಿದವನು ತಾನೇ ಸಂಘದ ಚುನಾವಣೆಗಿಳಿದನಂತೆ. ಆ ಹೊತ್ತಿಗಾಗಲೇ ಹತ್ತಾರು ವೈನ್‌ಸ್ಟೋರು, ಬಾರುಗಳ ಮಾಲೀಕನಾಗಿದ್ದ ಕೆಂಚಪ್ಪ ತನ್ನ ಹೆಸರನ್ನು ಕೆಂಚಪ್ಪಗೌಡ ಎಂದು ಬದಲಿಸಿಕೊಂಡ. ಸಂಘದ ಸದಸ್ಯರನ್ನು ಹಣ, ಹೆಂಡದ ಮೂಲಕವೇ ಖರೀದಿಸಲಾರಂಭಿಸಿದ. ಮೊದಲ ಬಾರಿಗೆ ಗೆದ್ದಾಗ ಈತನ ಹಿನ್ನೆಲೆ ಗೊತ್ತಿದ್ದೂ ಡಾ. ವಿಠ್ಠಲ್ ಈತನನ್ನು ಕಾರ್ಯದರ್ಶಿಯನ್ನಾಗಿ ಮಾಡಿದ್ದರು. ವಿಠ್ಠಲ್ ಮುಂದಿಟ್ಟುಕೊಂಡು ಸಾಕಷ್ಟು ಲೂಟಿ ಮಾಡಿದ ಈತ ಇನ್ನೇನು ಪ್ರೊ. ವೆಂಕಟಗಿರಿಗೌಡರು ಅಧ್ಯಕ್ಷರಾಗುತ್ತಾರೆಂದು ಗೊತ್ತಾಗಿದ್ದೇ ರಾತ್ರೋರಾತ್ರಿ ಅವರಿಗೆ ನಿಷ್ಠೆ ಬದಲಿಸಿದ. ಮುಂದೆ ಗುತ್ತಲಗೌಡ ಅಧ್ಯಕ್ಷರಾದರೆ ಅವರಿಗೂ ಜಿ ಹುಜೂರ್‌ಗಿರಿ ಮಾಡಿ ಮತ್ತಷ್ಟು ಕೊಳ್ಳೆ ಹೊಡೆದ. ಕ್ರಮೇಣ ಸಭ್ಯರು, ಸಜ್ಜನರನ್ನೆಲ್ಲ ಮುಗಿಸಿ ತಾನೇ ಅಧ್ಯಕ್ಷನಾಗಿಬಿಟ್ಟ.

ಮಾತ್ರ ಕಮ್ಮಿಯದೇನಲ್ಲ.

ಹಾಗೆ ನೋಡಿದರೆ ಬೆಂಗಳೂರಿನ ಒಕ್ಕಲಿಗರ ಸಂಘಕ್ಕೆ 107 ವರ್ಷಗಳ ಇತಿಹಾಸವಿದೆ. ಇಲ್ಲಿಗೆ ಕೇವಲ 30 ವರ್ಷಗಳ ಹಿಂದಷ್ಟೇ ಕಣ್ಣು ಬಿಟ್ಟ ಆದಿಚುಂಚನಗಿರಿ ಮಠ ಇವತ್ತಿಗೆ 490 ವಿದ್ಯಾಸಂಸ್ಥೆಗಳನ್ನು ಹುಟ್ಟುಹಾಕಿದೆ. ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಅದರ ಆಶ್ರಯದಲ್ಲಿದ್ದು ಅದರ ನೌಕರರ ಸಂಖ್ಯೆಯೇ 10 ಸಾವಿರವನ್ನು ಮೀರುತ್ತದೆ. ಚುಂಚನಗಿರಿ ಮಠದ ಒಟ್ಟೂ ಆಸ್ತಿಯ ಮೌಲ್ಯವಿಂದು 15 ಸಾವಿರ ಕೋಟಿ ಮೀರಿದೆ. 7 ಸಾವಿರ ವಿದ್ಯಾರ್ಥಿಗಳಿಗೆ ಉಚಿತ ಹಾಸ್ಟೆಲ್ ಸೌಲಭ್ಯ ಕೊಟ್ಟ ಮಠಕ್ಕೆ ಹೋಲಿಸಿದರೆ ಅದರ ಮೂರು ಪಟ್ಟು ಹಳೆಯದಾದ ಒಕ್ಕಲಿಗರ ಸಂಘ ಯಾವ ಮಟ್ಟಕ್ಕೇರಬೇಕಿತ್ತು?

ಆಂಧ್ರದಿಂದ ಬರಿಗೈ ದಾಸನಂತೆ ಗಾರೆ ಕೆಲಸಕ್ಕೆಂದು ಬಂದ ಎಂ.ಆರ್. ದೊರೆಸ್ವಾಮಿಯ ಪಿಇಎಸ್ ಸಾಮ್ರಾಜ್ಯವೇ ಇವತ್ತು 10 ಸಾವಿರ ಕೋಟಿ ಮುಟ್ಟಿದೆ. ಅಂಥ ಉತ್ತರ ಕರ್ನಾಟಕದ ಕೆಎಲ್‌ಇ ಸೊಸೈಟಿಯೇ 570 ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ ಒಂದೂವರೆ ಲಕ್ಷ ವಿದ್ಯಾರ್ಥಿಗಳು, 15 ಸಾವಿರ ನೌಕರರೂ ಸೇರಿದಂತೆ ಅದರ ಒಟ್ಟೂ ಆಸ್ತಿಯ ಮೌಲ್ಯ 20 ಸಾವಿರ ಕೋಟಿ ಮುಟ್ಟಿರುವಾಗ ಒಕ್ಕಲಿಗ ಸಂಘ ಮಾತ್ರ ಇನ್ನೂ ಬೆಂಗಳೂರಿನಿಂದಾಚೆಗೆ ಕಾಲೇ ಇಟ್ಟಿಲ್ಲ. ಕೇವಲ 21 ವಿದ್ಯಾರ್ಥಿ ಸಂಸ್ಥೆಗಳು ಮತ್ತು 2800 ನೌಕರರನ್ನು ಬಿಟ್ಟರೆ 10 ಸಾವಿರದಷ್ಟು ವಿದ್ಯಾರ್ಥಿಗಳಷ್ಟೇ ಸಂಘದ ಅವಶೇಷಗಳಂತಿದ್ದಾರೆ. ಕೇವಲ 400 ಮಂದಿ ವಿದ್ಯಾರ್ಥಿಗಳಿಗಷ್ಟೇ ಹಾಸ್ಟೆಲ್ ಸೌಲಭ್ಯ ಕಲ್ಪಿಸಿದ ಒಕ್ಕಲಿಗರ ಸಂಘದ ಒಟ್ಟೂ ಆಸ್ತಿಯ ಮೊತ್ತ

ಕಾಲೇಜಿನ ಎಂಡಿ ಸೀಟುಗಳನ್ನೂ ಬಿಡದೆ ಮಾರಿಕೊಂ ಹಗಲು ದರೋಡೆಗಳೇ ಇವತ್ತು ಸಂಘವನ್ನು ಅವನತಿ ಅಂಚಿಗೆ ತಂದು ನಿಲ್ಲಿಸಿವೆ. ಸದ್ಯ ಕಾಮಾಕ್ಷಿಪಾಳ್ಯ ಮ ನಾಗರಬಾವಿ ಮಧ್ಯೆ ರಿಂಗ್‌ರಸ್ತೆಗುಂಟ ಖಾಲಿ ಬಿದ್ದ ವಿಶಾ ಭೂಭಾಗವೊಂದು ಅನಾಥವಾಗಿ ಪಾಳುಬಿದ್ದಿದೆ. 96. ಎಕರೆ ವಿಸ್ತಾರವಾದ ಈ ಭೂಮಿಯನ್ನು ಒಕ್ಕಲಿ ಸಂಘಕ್ಕೆಂದು ದಾನವಾಗಿ ಕೊಟ್ಟಿದ್ದು ಕಾಮಾಕ್ಷಿಪಾಳ ರಂಗಮ್ಮ ಎಂಬ ಉದಾತ್ತ ಮಹಿಳೆ. ತನಗೆ ಮಕ್ಕಳಿಲ ಕಾರಣ ಬಡ ಒಕ್ಕಲಿಗರ ಮಕ್ಕಳಾದರೂ ವಿದ್ಯಾಜ ಮಾಡಲೆಂಬ ಕಾಳಜಿಯಿಂದಲೇ ಕೊಟ್ಟ ಈ ಆಸ್ತಿ ಹಾಲಿ ಮಾರುಕಟ್ಟೆ ಮೌಲ್ಯ ಕಮ್ಮಿಯೆಂದರೂ 20 ಕೋಟಿ!

ಇಷ್ಟೊಂದು ಬೃಹತ್ತಾದ, ಬೆಲೆಬಾಳುವ ಭೂಮಿಯ ಅಸಂಖ್ಯಾತ ವಿದ್ಯಾಸಂಸ್ಥೆಗಳು, ಹಾಸ್ಟೆಲ್‌ಗಳು, ಕಾಂಪ್ಲೆ ವಿಶಾಲ ಆಟದ ಮೈದಾನ, ಸಂಶೋಧನಾ ಕೇಂದ್ರ ಎಲ್ಲವ ನಿರ್ಮಿಸಬಹುದಿತ್ತು, ಉಳಿದ ಜಮೀನಿನಲ್ಲಿ ಥಿಯೇಟ ಮಾಲ್, ಕಲ್ಯಾಣ ಮಂಟಪಗಳನ್ನು ಕಟ್ಟಿದ್ದರೂ ತಿಂಗಳೊಂ ಕೋಟಿ ಲೆಕ್ಕದಲ್ಲಿ ಸಂಘಕ್ಕೆ ಬಾಡಿಗೆ ಬರುತ್ತಿತ್ತು. ಆ ಸಂಘದ ಡಕಾಯಿತರಿಗೆ ಲಾಭವಾಗಬೇಕಲ್ಲವೇ?

ಸಜ್ಜೆಪಾಳ್ಯದ ಸೊತ್ತು

ಅದಕ್ಕೆಂದು ಸಂಘದ ಕೆಚ್ಚಲನ್ನೇ ಕುಯ್ದವನು ಆ ಕೆಂಚಪ್ಪ, ದಾನಿ ರಂಗಮ್ಮ ಕೊಟ್ಟಿದ್ದ 96.36 ಎಕರೆಯ 44.36 ಎಕರೆಗೆ ದಿವಂಗತ ರಂಗಮ್ಮನ ದೂ ಸಂಬಂಧಿಯೊಬ್ಬ ನಕಲಿ ದಾಖಲೆ ಸೃಷ್ಟಿಸಿ ಬಿಲ್ಡರ್‌ಗ

500 ಕೋಟಿಯ ಆಸ್ತಿಪಾಸ್ತಿ ಬಂದಿದ್ದು ಎಲ್ಲಿಂದ?

ಒಕ್ಕಲಿಗರ ಸಂಘದ ಸಾವಿರಾರು ಕೋಟಿ ರೂಪಾಯಿಗಳ ಸೊತ್ತನ್ನೇನೋ ಕೆಂಚಪ್ಪಗೌಡನಿಂದ ಉಳಿಸಲಾಗಲಿಲ್ಲ ನಿಜ. ಈತ ಕಾಲಿಟ್ಟ ಗಳಿಗೆಯಿಂದ ಸಂಘ ಕೂಡ ಉದ್ಧಾರವಾಗಲಿಲ್ಲ. ಹಾಗಂಥ ತನ್ನ ಉದ್ಧಾರದ ಬಗ್ಗೆ ಕೆಂಚಪ್ಪಗೌಡ ತಲೆಕೆಡಿಸಿಕೊಂಡಿಲ್ಲ ಎನ್ನುವಂತಿಲ್ಲ. ಈ ವಿಷಯದಲ್ಲಿ ಮಿಕ್ಕೆಲ್ಲರಿಗಿಂತಲೂ ಈತ ಕಿಲಾಡಿಯೆ.

ಜಯನಗರದ ಮಾಧವನ್ ಪಾರ್ಕ್ ಪಕ್ಕದಲ್ಲೇ ಮಿನಿ ಅರಮನೆಯೊಂದು ಕಾಣಿಸುತ್ತದೆ. ಎಂಥವರೂ ದಂಗಾಗುವಂತೆ ಕಣ್ಣು ಕುಕ್ಕುವ ಈ ಬಂಗಲೆಯಲ್ಲಿ ಸ್ವಿಮ್ಮಿಂಗ್ ಪೂಲು, ಲಿಫ್ಟು, ಮಿನಿ ಬಾರು, ಹೋಮ್ ಥಿಯೇಟರ್ ಎಲ್ಲವೂ ಇದೆ. ಸದ್ಯದ ಮಾರುಕಟ್ಟೆ ಪ್ರಕಾರವೇ 20 ಕೋಟಿ ರೂಪಾಯಿ ಬೆಲೆ ಬಾಳುವ ಈ ಬಂಗಲೆಗೆ ಅಧ್ಯಕ್ಷ ಕೆಂಚಪ್ಪಗೌಡನೇ ಧಣಿ. ಈ ಮನೆಯಿಂದ ಐದನೇ ಸೈಟಿಗೆ ಬಂದರೆ ಅದು 40x60 ಸೈಜಿನ ನಿರ್ಮಾಣಾವಸ್ಥೆಯಲ್ಲಿರುವ ಮತ್ತೊಂದು ಬಂಗಲೆ. ಕಮ್ಮಿಯೆಂದರೂ 15 ಕೋಟಿ ರೂಪಾಯಿ ಬೆಲೆಬಾಳುವ ಈ ಬಂಗಲೆ ಕಟ್ಟಿಸುತ್ತಿರುವುದು ಕೂಡ ಕೆಂಚಪ್ಪನೆ.

ಈ ಎರಡು ಮನೆಗಳ ಹಿಂಭಾಗದಲ್ಲೇ ಪ್ರತಿಷ್ಠಿತ ಮಂತ್ರಿಪ್ರೈಡ್ ಅಪಾರ್ಟ್‌ಮೆಂಟ್. ಬಡವರಾಗಲಿ, ಸಾಮಾನ್ಯರಾಗಲಿ ಪ್ರವೇಶಿಸುವುದಿರಲಿ ಹತ್ತಿರಕ್ಕೂ ಸುಳಿಯಲಾಗದ ಈ ಅಪಾರ್ಟ್‌ಮೆಂಟಿನಲ್ಲಿ ತಲಾ ಒಂದೂವರೆ ಕೋಟಿಯ ಎರಡು ಫ್ಲಾಟುಗಳನ್ನು ಇತ್ತೀಚೆಗಷ್ಟೆ ಕೆಂಚಪ್ಪ ಖರೀದಿಸಿದ್ದಾನೆ.

ಇನ್ನು ಕಲಾಸಿಪಾಳ್ಯಕ್ಕೆ ಬಂದರೆ ಮಾರುಕಟ್ಟೆ ಕಡೆಯಿಂದ ಖಾಸಗಿ ಬಸ್‌ಸ್ಟ್ಯಾಂಡಿಗೆ ಹೋಗುವ ಎಡಭಾಗದಲ್ಲಿ ಶಮಂತ್ ಬಾರ್ ಕಾಣಿಸುತ್ತದೆ. ಪಕ್ಕದಲ್ಲೇ ಶರತ್ ಬಾರ್ ಕೂಡ ಇದೆ. ಏನಿದು ಶರತ್ ಬಾರ್, ಶಮಂತ್ ಬಾರ್ ಎಂದು ಅನುಮಾನಿಸುವ ಅಗತ್ಯವೇ ಇಲ್ಲ. ಇವೆರಡೂ ಕೆಂಚಪ್ಪನ ಪುತ್ರರತ್ನರ ಹೆಸರುಗಳು. ಬಾರ್‌ಗಳೆರಡೂ ಕೆಂಚಪ್ಪನ ಸ್ವಂತ ಕಟ್ಟಡಗಳಲ್ಲೇ ನಡೆಯುತ್ತಿವೆ. ಮಕ್ಕಳ ಹೆಸರಲ್ಲಿ ದೇವತಾ ಕಾರ್ಯ, ದಾನಧರ್ಮ ಮಾಡುವವರುಂಟು. ಆದರೆ ಬಾರು ವೈನ್‌ಸ್ಟೋರ್‌ಗಳನ್ನು ತೆರೆದು ಅವುಗಳಿಗೆ ತನ್ನ ಮಕ್ಕಳ ಹೆಸರಿಟ್ಟು ಲಿಕ್ಕರ್ ಧಂದೆ ನಡೆಸುವ ಕೆಂಚಪ್ಪಗೌಡನ ನಾಗರಿಕತೆ ಮತ್ತು ಸಂಸ್ಕೃತಿ ಬಹುಶಃ ಒಕ್ಕಲಿಗರ ಸಂಸ್ಕೃತಿಯಂತೂ ಆಗಿರಲಿಕ್ಕಿಲ್ಲ. ಪುಣ್ಯಕ್ಕೆ ಕುವೆಂಪು, ಕೆಂಪೇಗೌಡರ ಹೆಸರಿಡಲಿಲ್ಲವಲ್ಲ!

ಹಾಗೇ ಶಿವಾಜಿನಗರ ಬಸ್‌ಸ್ಟ್ಯಾಂಡಿಗೆ ಬಂದರೆ ಪಕ್ಕದ ಹರ್ಷಾ ಹೋಟೆಲಿಗೆ ಹೋಗುವ ಮಾರ್ಗದಲ್ಲಿ ಬೃಂದಾವನ ಬಾರ್ ಕಾಣಿಸುತ್ತದೆ. ಇದು ಕೂಡ ಕಟ್ಟಡ ಸಮೇತ ಕೆಂಚಪ್ಪಗೌಡನ ಆಸ್ತಿಯೆ. ಇತ್ತ ಬನಶಂಕರಿ ಏರಿಯಾದ ಹುಣಿಸೆಮರದತ್ತ ಬಂದರೆ ಅಲ್ಲಿ ಶ್ವೇತಾ ಬಾರ್ ಕಿಕ್ಕಿರಿದಿರುತ್ತದೆ. ಶ್ವೇತಾ ಎಂಬುದು ಕೆಂಚಪ್ಪನ ಮಗಳ ಹೆಸರು. ಬಾರು ವೈನ್‌ಸ್ಟೋರುಗಳಿಗೆ ಮಕ್ಕಳ ಹೆಸರಿಡುವವನಿಗೆ ಕುವೆಂಪು, ತೇಜಸ್ವಿ ತಾನೇ ಹೇಗೆ ಅರ್ಥವಾಗಲು ಸಾಧ್ಯ.

ಜೆ.ಪಿ.ನಗರದ ಮಾರೇನಹಳ್ಳಿಯ ಫೇಮಸ್ ಬಾರ್, ಬಿಟಿಎಂ ಎರಡನೇ ಹಂತದಲ್ಲಿ ಜಯದೇವ ಆಸ್ಪತ್ರೆಯ ಎದುರಿಗಿರುವ ಸ್ವರ್ಣಲೇಖ ಬಾರ್‌ಗಳೂ ಕೂಡ ಸ್ವಂತ ಕಟ್ಟಡದಲ್ಲಿ ನಡೆಯುವ ಕೆಂಚಪ್ಪನ ಮಾಲಿಕತ್ವದ ಬಾರುಗಳೆ. ಈ ಐದು ಬಾರುಗಳಷ್ಟೇ ಅಲ್ಲ ಹೊಸಕೋಟೆ, ಕೃಷ್ಣರಾಜಪುರ, ದೇವನಹಳ್ಳಿಗಳಲ್ಲೂ ಕೆಂಚಪ್ಪ ಬಾರು, ವೈನ್‌ಸ್ಟೋರ್‌ಗಳನ್ನು ನಡೆಸುತ್ತಾನಂತೆ.

ಕನಕಪುರ ರಸ್ತೆಯ ಯಲಚೇನಹಳ್ಳಿಯ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕು ಮತ್ತು ಇಲ್ಲಿಂದ ಅರ್ಧ ಮೈಲಿ ದೂರದ ಕನಕಪುರ ರಸ್ತೆಯಲ್ಲಿರುವ ಇನ್ನೊಂದು ಪೆಟ್ರೋಲ್ ಬಂಕುಗಳಿಗೆ ಕೆಂಚಪ್ಪನೇ ಧಣಿ. ಬಸವನಗುಡಿಯ ಸರ್ವಾಯರ್ ಸ್ಟ್ರೀಟ್‌ನಲ್ಲಿ ಮತ್ತೊಂದು ಬಂಗಲೆ, ಕನಕಪುರ ರಸ್ತೆಯ ವಾಜರಹಳ್ಳಿ ಮುಖ್ಯರಸ್ತೆಯಲ್ಲಿ ಸ್ವಿಮ್ಮಿಂಗ್ ಪೂಲ್, ಮಿನಿಬಾರ್ ಮತ್ತು ಐಷಾರಾಮೀ ಶಯ್ಯಾ ಗೃಹವುಳ್ಳ 10 ಎಕರೆಯ ಶರತ್ ಫಾರ್ಮ್, ಅಲ್ಲಿಂದ ಮುಂದೆ ಬಂದು ಕಗ್ಗಲಿಪುರ ದಾಟುತ್ತಿದ್ದಂತೆ ಸಿಗುವ 25 ಎಕರೆಯ ಇನ್ನೊಂದು ಫಾರ್ಮ್‌ಹೌಸ್, ಇದರೊಳಗೆ ತಿಂಗಳಾಂಪ್ರತಿ 6 ಲಕ್ಷ ಬಾಡಿಗೆ ಬರುವ ಕೋಕಾಕೋಲಾ ಕಂಪೆನಿಯ ಗೋಡೌನ್, ಇಲ್ಲಿಂದ ಅನತಿ ದೂರದಲ್ಲಿ ಬಿಎಂ ಕಾವಲು-ಆಗರದ ಸಮೀಪ 35 ಎಕರೆಯ ಕೆಂಚಪ್ಪಗೌಡ ಫಾರ್ಮ್, ದೇವನಹಳ್ಳಿ ತಾಲ್ಲೂಕು ಗಂಗವಾರದಲ್ಲಿರುವ 20 ಎಕರೆಯ ಪಿತ್ರಾರ್ಜಿತ ಭೂಮಿ, ಪೀಣ್ಯದಲ್ಲಿ 3 ಎಕರೆಯ ಕೈಗಾರಿಕಾ ನಿವೇಶನ, ದೇವನಹಳ್ಳಿಯ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ರಸ್ತೆಯಲ್ಲಿ ಮುನೇಗೌಡರಿಂದ ಖರೀದಿಸಿದ 40x60 ಅಳತೆಯ 45 ನಿವೇಶನಗಳು.

ಇವಿಷ್ಟೂ ಕೆಂಚಪ್ಪಗೌಡನ ಎದ್ದು ಕಾಣುವ ಆಸ್ತಿಪಾಸ್ತಿಗಳಾದರೆ ಅಗೋಚರ, ಚರಾಚರ ಸೊತ್ತುಗಳು ಇನ್ನೆಷ್ಟಿವೆಯೊ. ಕೇವಲ 10 ವರ್ಷದ ಅವಧಿಯಲ್ಲಿ 500 ಕೋಟಿಗೂ ಮೀರುವ ಈ ಪಾಟಿ ಆಸ್ತಿಪಾಸ್ತಿ ಕೆಂಚಪ್ಪನಿಗೆ ಬಂದಿದ್ದಾದರೂ ಯಾವ ಮಾಯೆಯಿಂದ.

ಒಕ್ಕಲಿಗರ ಸಂಘ ದಿನೇ ದಿನೇ ಬಡವಾಗುತ್ತಿರುವುದಕ್ಕೂ ಅಧ್ಯಕ್ಷ ಕೆಂಚಪ್ಪಗೌಡ ಮಾತ್ರ ರಾಕೆಟ್ ವೇಗದಲ್ಲಿ ಕುಬೇರನಾಗಿರುವುದಕ್ಕೂ ಎಂಥಾ ವಿಕಟ ವಿಪರ್ಯಾಸವಲ್ಲವೆ?







ಮಾರಿಕೊಂಡ. ಹಾಗೆ ಸಂಘದ ಆಸ್ತಿ ಕಂಡವರ ಪಾಲಾಗುತ್ತಿರುವಾಗ ಅದರ ವಿರುದ್ಧ ಹೋರಾಡಬೇಕಿದ್ದದ್ದು ಅಧ್ಯಕ್ಷ ಕೆಂಚಪ್ಪನ ಆದ್ಯ ಕರ್ತವ್ಯ ತಾನೆ?

ದುರಂತವೆಂದರೆ ನೆಲಗಳ್ಳರು ನುಂಗ ಹೊರಟ ಸಂಘದ ಸಾವಿರ ಕೋಟಿ ರೂಪಾಯಿ ಬೆಲೆಬಾಳುವ ಆಸ್ತಿಗಾಗಿ ಸುಪ್ರೀಂಕೋರ್ಟ್ ತನಕ ಹೋರಾಡಿದ್ದು ಸಂಘದ ಡೈರೆಕ್ಟರ್‌ಗಳಾದ ಅಪ್ಪಾಜಿಗೌಡ ಮತ್ತು ಪ್ರೊ. ನಾಗರಾಜ್ ಮತ್ತವರ ತಂಡ. ಇಲ್ಲಿಗೆ 10 ವರ್ಷದ ಹಿಂದೆಯೇ ಪತ್ರಿಕೆ ಈ ಬಗ್ಗೆ ತನಿಖಾ ವರದಿ ಪ್ರಕಟಿಸಿದ್ದರಿಂದ ಎಚ್ಚೆತ್ತ ಒಕ್ಕಲಿಗ ಮುಖಂಡರು ಹೋರಾಟಕ್ಕಿಳಿದರೆ ಅಧ್ಯಕ್ಷ ಕೆಂಚಪ್ಪಗೌಡ ಮಾತ್ರ ತುಟಿಪಿಟಿಕ್ಕೆನ್ನಲಿಲ್ಲ. ಹೋಗಲಿ, ತಮ್ಮ ಕೈಯಾರೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿಕೊಂಡು ಸಂಘದ ಆಸ್ತಿ ಉಳಿಸಿದ ಅಪ್ಪಾಜಿಗೌಡರಿಗಾದ ಖರ್ಚನ್ನಾದರೂ ಸಂಘದವತಿಯಿಂದ ಪಾವತಿಸಬೇಕಿತ್ತಲ್ಲವೆ?

ಬದಲಿಗೆ ಆಸ್ತಿ ಉಳಿಸಲು ಹೋರಾಡಿದವರಿಗೆ ಕೆಂಚಪ್ಪ ಸಲ್ಲದ ಕಿರುಕುಳ ಕೊಟ್ಟನೇ ಹೊರತು ಆಸ್ತಿ ಉಳಿಸಿದ ಖರ್ಚನ್ನು ಮಾತ್ರ ಪಾವತಿಸಲಿಲ್ಲ. ಇದು ಅಧ್ಯಕ್ಷ ಕೆಂಚಪ್ಪನ ಸಂಘ ನಿಷ್ಠೆಗೊಂದು ಸಣ್ಣ ಸ್ಯಾಂಪಲ್ಲಷ್ಟೆ. 44.36 ಎಕರೆ ಲೂಟಿಯಾದ ಆಸ್ತಿಯಲ್ಲದೆ ಉಳಿದ 52 ಎಕರೆಗೂ ನೆಲಗಳ್ಳರು ಕಣ್ಣಿಟ್ಟರು. ಯಾವುದೋ ಕಾಲಕ್ಕೆ ರಂಗಮ್ಮನ ಜಮೀನಿನಲ್ಲಿ ತಾವು ಗೇಣಿ ಮಾಡುತ್ತಿದ್ದೆವೆಂದು ಮತ್ತೆ ನಕಲಿ ದಾಖಲೆ ಸೃಷ್ಟಿಸಿದ ಬಿಜೆಪಿ ನಾಯಕ ರಾಮಚಂದ್ರೇಗೌಡನ ಸಂಬಂಧಿಗಳ ವಿರುದ್ಧವೂ ಅಧ್ಯಕ್ಷ ಕೆಂಚಪ್ಪ ನಿಷ್ಕ್ರಿಯನಾಗಿ ತೆಪ್ಪಗಿದ್ದ. ಇದರರ್ಥ ಒಂದೆಡೆ 44.36 ಎಕರೆ ಮತ್ತು ಉಳಿಕೆ 52 ಎಕರೆ ಸಜ್ಜೆಪಾಳ್ಯದ ಸಂಘದ ಸೊತ್ತನ್ನು ಅಧ್ಯಕ್ಷ ಕೆಂಚಪ್ಪನೇ ನಿಂತು ನೆಲಗಳ್ಳರ ಬಾಯಿಗೆ ಹಾಕಿದ್ದ!

ಕೆಂಚಪ್ಪನ ಸಂಘ ನಿಷ್ಠೆ ಮಾಗಡಿ ರಸ್ತೆಯಲ್ಲಿದ್ದ ಶ್ರೀಗಂಧದ ಕಾವಲು ಪ್ರದೇಶದ 20 ಎಕರೆಯ ವಿಷಯದಲ್ಲೂ ಹೀಗೆ ಮುಂದುವರಿಯಿತು. ಮೂರು ಕೋಟಿಗೂ ಮೀರಿದ ಶ್ರೀಗಂಧದ ಕಾವಲು ಜಮೀನಿಂದು ಯಾರೋ ಬಿಲ್ಡರ್‌ಗಳ ಪಾಲಾಗಿದೆಯೆಂದರೆ ಅಧ್ಯಕ್ಷ ಕೆಂಚಪ್ಪ ಮತ್ತಾತನ ದುಷ್ಟಕೂಟ ಇದರಲ್ಲೂ ಪಾಲು ಪಡೆದಿದೆ.

ಸಂಘದ ಆಸ್ತಿಯನ್ನೇ ಮಾರಿಕೊಂಡವನಿಗೆ ಇನ್ನು ಸಂಘದ ಅಭಿವೃದ್ಧಿ ಯಾವ ಲೆಕ್ಕ?

ಕಿಮ್ಸ್ 14 ಕೋಟಿ ಲೂಟಿ

ಸದ್ಯ ವಿ.ವಿ. ಪುರಂನಲ್ಲಿರುವ ಒಕ್ಕಲಿಗರ ಸಂಘದ ಕೇಂದ್ರ ಕಚೇರಿಯ ಆವರಣದಲ್ಲೇ ಕಿಮ್ಸ್ ಆಸ್ಪತ್ರೆಯೂ ಇದೆ. ಅದರ ನವೀಕರಣಕ್ಕೆಂದು ಜೊತೆಗೆ ಸಂಘದ ಆಡಳಿತ ಕಚೇರಿಯ ನಿರ್ಮಾಣಕ್ಕೆಂದು 16 ಕೋಟಿ ರೂಪಾಯಿ ಲೂಟಿಯ ಷಡ್ಯಂತ್ರವೊಂದಕ್ಕೆ ಕೆಂಚಪ್ಪ ಕೈಯಿಟ್ಟ. ಕಿಮ್ಸ್ ಆಸ್ಪತ್ರೆಯ ಮುಂಭಾಗಕ್ಕೆ ಗಾಜಿನ ಫಲಕಗಳನ್ನು ಅಳವಡಿಸಲು ಹೆಚ್ಚೆಂದರೆ 50 ಲಕ್ಷ ಸಾಕು. ಪಕ್ಕದಲ್ಲೇ ಸಂಘದ ಆಡಳಿತ ಕಚೇರಿ ನಿರ್ಮಿಸುವುದಕ್ಕೆ ಅಮ್ಮಮ್ಮಾ ಎಂದರೂ 4 ಕೋಟಿ ಸಾಕು. ಪ್ರಾರಂಭದಲ್ಲೇ 4 ಕೋಟಿ ವೆಚ್ಚದಲ್ಲೇ ಇದೆಲ್ಲವನ್ನೂ ನಿರ್ಮಿಸುವ ಎಸ್ಟಿಮೇಟ್ ಕೂಡ ಹಾಕಲಾಗಿತ್ತು.

ಆದರೆ ಇದ್ದಕ್ಕಿದ್ದಂತೆ 4 ಕೋಟಿಯ ಎಸ್ಟಿಮೇಟ್ ಅನ್ನು 8 ಕೋಟಿಗೆ ಏರಿಸಿ ತದನಂತರ ಅದನ್ನು ಮತ್ತೆ 6 ಕೋಟಿಗೆ ಹೆಚ್ಚಿಸಿ ಅಂತಿಮವಾಗಿ 14 ಕೋಟಿ ವೆಚ್ಚವಾದಂತೆ ಕೆಂಚಪ್ಪ ಬಿಲ್ಲು ಹರಿದಿದ್ದ. ಅಂದರೆ ಕೋಟಿ ಮೊತ್ತದ ಕಾಮಗಾರಿಗೆ 14 ಕೋಟಿಯ ಲೆಕ್ಕ.

ಈಗಾಗಲೇ ಹಳೆ ಕಟ್ಟಡದಲ್ಲಿ ತನಗೆ ಐಷಾರಾಮಿ ಛೇಂಬರ್ ಇದ್ದರೂ ಹೊಸ ಕಟ್ಟಡದಲ್ಲೇ ಮತ್ತೆ ಮೂರು ಹೈಟೆಕ್ ಛೇಂಬರ್‌ಗಳನ್ನು ಸಂಘದ ದುಡ್ಡಲ್ಲೇ ವ್ಯರ್ಥ ಕಟ್ಟಿಸಿಕೊಂಡಿದ್ದ ಕೆಂಚಪ್ಪ. ಮೆಟ್ರೋ ಕಾರಣದಿಂದ ಸಂಘದ ಎದುರಿದ್ದ ರಸ್ತೆಯನ್ನು ಇಲ್ಲಿಗೆ ವರ್ಷದ ಹಿಂದೆ ಅಗಲಿಸಲಾಯ್ತು. ಸಹಜವಾಗೇ ಸಂಘದ ಕಾಂಪೌಂಡ್ ಗೋಡೆಯನ್ನು ನೆಲಸಮಗೊಳಿಸಬೇಕಾಯ್ತು. ಹೀಗೆ ಕೆಡವಿದ ಕಾಂಪೌಂಡ್ ಗೋಡೆಯನ್ನು ದೈತ್ಯ ಶಿಲಾ ದಿಂಡುಗಳಿಂದ ನಿರ್ಮಿಸಲಾಗಿತ್ತು. ಇದೇ ದಿಂಡುಗಳಿಂದ ಮತ್ತೆ ಕಾಂಪೌಂಡ್ ನಿರ್ಮಿಸಿದ್ದರೂ ಸಂಘಕ್ಕೆ ಕೋಟಿ ರೂಪಾಯಿಯಷ್ಟು ಲಾಭವಾಗುತ್ತಿತ್ತು.

ಕಲ್ಲನ್ನೂ ಬಿಡಲಿಲ್ಲ

ಕೆಂಚಪ್ಪನ ದುರ್ಬುದ್ಧಿಗೆ ಕಾಂಪೌಂಡ್ ಗೋಡೆಯ ಕಲ್ಲುಗಳ ಹೊರತಾಗಿ 50-60 ಲಕ್ಷ ರೂಪಾಯಿಗಳಷ್ಟು ಬೆಲೆಬಾಳುವ ಸರಿಸುಮಾರು 30 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿದ್ದ ಅಷ್ಟೂ ದಿಂಡುಗಳನ್ನು ನೈಸ್ ರಸ್ತೆ ಪಕ್ಕದ ತನ್ನ ತೋಟಕ್ಕೆ ಸಾಗ ಹಾಕಿದ ಕೆಂಚಪ್ಪ ಮತ್ತೆ 1 ಕೋಟಿ ರೂಪಾಯಿ ಬೆಲೆಬಾಳುವ ಹ್ಯಾಲೋ ಬ್ರಿಕ್ಸ್‌ಗಳನ್ನು ತರಿಸಿ ಅದರಲ್ಲಿ ಕಾಂಪೌಂಡ್ ಗೋಡೆ ಕಟ್ಟಿಸಿಬಿಟ್ಟ. ಅಲ್ಲಿಗೆ ಹ್ಯಾಲೋ ಬ್ರಿಕ್ಸ್‌ಗೆಂದು 1 ಕೋಟಿ ಮತ್ತು 60 ಲಕ್ಷದ ಹಳೇ ದಿಂಡುಗಳು ಸಂಘದ ನಷ್ಟದ ಲೆಕ್ಕಕ್ಕೆ ಜಮೆಯಾಗಿತ್ತು. 45 ಲಕ್ಷ ರೂಪಾಯಿ ಬೆಲೆಬಾಳುವ ಕಬ್ಬಿಣದ ಆ್ಯಂಗಲ್‌ಗಳನ್ನು ಕೆಂಚಪ್ಪನೇ ಮಾರಿಕೊಂಡಿದ್ದ.

ಒಕ್ಕಲಿಗರ ಸಂಘವನ್ನು ಕೆಂಚಪ್ಪ ಯಾವ ಮಟ್ಟಿಗೆ ದೋಚಿದ್ದಾನೆಂಬುದಕ್ಕೆ ಇದಕ್ಕಿಂತ ಉದಾಹರಣೆ ಬೇಕೆ?

ಸಂಘವನ್ನು ರಾಜ್ಯಾದ್ಯಂತ ವಿಸ್ತರಿಸಿದ್ದೇ ತಾನೆಂಬ ಕೆಂಚಪ್ಪನ ಮಾತು ಮೇಲುನೋಟಕ್ಕೆ ನಿಜವೆಂಬಂತೆ ಕಾಣಿಸಬಹುದು. ಬೆಂಗಳೂರಿಗಷ್ಟೇ ಸೀಮಿತವಾಗಿದ್ದ ಒಕ್ಕಲಿಗರ ಸಂಘದ ಕಾರ್ಯಚಟುವಟಿಕೆಗಳು ದೂರದ ಶಿವಮೊಗ್ಗ, ಚಿಕ್ಕಮಗಳೂರು, ಕೋಲಾರ, ಚಿಕ್ಕಬಳ್ಳಾಪುರಗಳಲ್ಲೂ ಶುರು

▶▶| 06

ಬಾಲಗಂ ಸ್ವಾಮಿಯ ಗುರುವಂದನೆಗೆ 5 ಕೋಟಿ!

ಬಿಜೆಪಿ ಆಳ್ವಿಕೆಯಲ್ಲಿ ಸದಾನಂದಗೌಡರು ಮುಖ್ಯಮಂತ್ರಿಯಾಗಿದ್ದೇ ಆದಿಚುಂಚನಗಿರಿ ಬಾಲಗಂಗಾಧರನಾಥ ಸ್ವಾಮಿಗೆ ಸಂಘದವತಿಯಿಂದ ಗುರುವಂದನಾ ಕಾರ್ಯಕ್ರಮ ನಡೆಯಿತಲ್ಲ.

ಅರಮನೆ ಮೈದಾನದಲ್ಲಿ ಲಕ್ಷಗಟ್ಟಲೆ ಒಕ್ಕಲಿಗರು ಸೇರಿ ಮುಖ್ಯಮಂತ್ರಿ ಸದಾನಂದಗೌಡರ ನೇತೃತ್ವದಲ್ಲೇ ಬಾಲಗಂ ಸ್ವಾಮಿಗೆ ಗುರುವಂದನೆ ಸಲ್ಲಿಸಿದ್ದೂ ಆಯಿತಲ್ಲವೆ?



ಇದನ್ನು ಒಕ್ಕಲಿಗರ ಒಗ್ಗಟ್ಟೆಂದೂ ಸಂಘದ ಮೇಲಿನ ನಿಷ್ಠೆ ಮತ್ತು ಬಾಲಗಂಗಾಧರನಾಥರ ಮೇಲಿದ್ದ ಭಕ್ತಿಗೆ ಓಗೊಟ್ಟು ರಾಜ್ಯದ ಬೇರೆಬೇರೆ ಭಾಗಗಳಿಂದ ಲಕ್ಷಗಟ್ಟಲೆ ಒಕ್ಕಲಿಗರು ಬಂದು ಗುರುವಂದನೆ ಸಲ್ಲಿಸಿದರೆಂದು ಯಾರಾದರೂ ಭಾವಿಸಿದ್ದರೆ ಅದು ಅವರ ಮೂರ್ಖತನವಾಗುತ್ತದೆ.

ಏಕೆಂದರೆ ಇಂಥ ಗುರುವಂದನೆಗೆಂದು ಕೆಂಚಪ್ಪಗೌಡ ಸಂಘದ ತಿಜೋರಿಯಿಂದ ಐದು ಕೋಟಿಯಷ್ಟನ್ನು ಜೇಬಿಗಿಳಿಸಿದ್ದಾನೆ. ಆತನ ಪ್ರಕಾರ ಬಾಲಗಂಗಾಧರನಾಥರ ಗುರುವಂದನೆಗೆಂದು ಬಂದವರಾರೂ ತಮ್ಮ ಸ್ವಂತ ಖರ್ಚಿನಿಂದ ಬಂದವರಲ್ಲ. ಲಾರಿ, ಬಸ್ಸುಗಳಿಗಷ್ಟೇ ಅಲ್ಲದೆ ಅವರ ಖರ್ಚಿಗೂ ಸಂಘದ ನಿಧಿಯಿಂದಲೇ ಹಣ ಪಾವತಿಯಾಗಿದೆ. ಈ ರೀತಿ ಬಾಡಿಗೆಗೆ ಜನಗಳನ್ನು ಕರೆಸಿ ನಡೆಸಿದ ಗುರುವಂದನೆಯ ಒಟ್ಟು ಖರ್ಚೇ ಐದು ಕೋಟಿಯಂತೆ!

ಹಿಂದೊಮ್ಮೆ ಚಿನ್ನಪ್ಪರೆಡ್ಡಿ ವರದಿ ಜಾರಿಗೆ ಒತ್ತಾಯಿಸಿ ಸಂಘ ನಡೆಸಿದ ರ್‍ಯಾಲಿಗೆ ಖರ್ಚಾಗಿದ್ದು ಕೇವಲ 30 ಲಕ್ಷ ಮಾತ್ರ. ಈ ಪೈಕಿ ಅರ್ಧದಷ್ಟನ್ನು ಒಕ್ಕಲಿಗ ಜನಾಂಗದ ಮುಖಂಡರೇ ಕೊಟ್ಟದ್ದುಂಟು. ಈಗ ಗುರುವಂದನೆಗೆಂದು ವೇದಿಕೆ, ಜಾಹಿರಾತು, ಕರಪತ್ರ ಇತ್ಯಾದಿಗಳಿಗೆಂದು ಸಂಘ ಖರ್ಚು ಮಾಡುವುದೇನೋ ಸರಿ. ಹೆಚ್ಚೆಂದರೆ ಐವತ್ತು ಲಕ್ಷ ಖರ್ಚಾಗಬಹುದು. ಆದರೆ ಕೆಂಚಪ್ಪಗೌಡ ಇದಕ್ಕೆಂದು ಐದೂವರೆ ಕೋಟಿಯ ಲೆಕ್ಕ ತೋರಿಸುತ್ತಾನೆ. ಉಪಮುಖ್ಯಮಂತ್ರಿಯಾಗಿದ್ದ ಅಶೋಕ್ ತಾನೇ ಹದಿನೇಳೂವರೆ ಲಕ್ಷದ ಜಾಹಿರಾತು ಇತ್ಯಾದಿಗಳ ಬಿಲ್ಲು ಪಾವತಿಸಿದ್ದೇನೆಂದು ಹೇಳುತ್ತಾರೆ. ಹಾಗಾದರೆ ರಾಜ್ಯಾದ್ಯಂತ ಒಕ್ಕಲಿಗರು ಬಂದಿದ್ದೇ ಸುಳ್ಳೆ? ಬಂದವರೆಲ್ಲ ಬಾಡಿಗೆ ಜನಗಳೆ? ಲಾರಿ, ಬಸ್ಸುಗಳ ಬಾಡಿಗೆಯನ್ನೂ ಸಂಘವೇ ಕೊಡುವುದಾದರೆ ಗುರುವಂದನೆಗೆಂದು ಬಂದವರೆಲ್ಲ ಪ್ರಾಮಾಣಿಕ ಭಕ್ತಿಯಿಂದಾಗಲಿ, ಜನಾಂಗದ ಸ್ವಾಭಿಮಾನಕ್ಕಾಗಲಿ ಹೇಗೆ ಸೇರಿದ ಹಾಗಾಯಿತು?

ಕೆಂಚಪ್ಪಗೌಡನಂಥ ಖದೀಮರಿಂದಾಗಿ ಬಾಲಗಂಗಾಧರನಾಥರ ಗುರುವಂದನೆಗೂ ಎಂಥಾ ಕಳಂಕವಲ್ಲವೆ?







ಉತ್ತರಾಧಿಕಾರಿ ಕಾಂತರಾಜ್ ಅರಸ್ ಯಾರು?



ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಮರಣಹೊಂದುತ್ತಿದ್ದಂತೆ ಹೆಚ್ಚಿನವರ ಮನಸ್ಸಿನಲ್ಲಿ ಎದ್ದ ಪ್ರಶ್ನೆ 'ಮೈಸೂರು ಅರಸರ ಮನೆತನಕ್ಕೆ ಇನ್ನು ಮುಂದೆ ಉತ್ತರಾಧಿಕಾರಿ ಯಾರು?' ಎಂಬುದಾಗಿತ್ತು. ಯಾವಾಗ ಶ್ರೀಕಂಠದತ್ತ ಅವರ ಅಂತ್ಯಕ್ರಿಯೆಗಳನ್ನು ಕಾಂತರಾಜ್ ಅರಸ್ ಎಂಬುವವರು ನೆರವೇರಿಸಲಿದ್ದಾರೆ ಎಂಬುದು ಬಹಿರಂಗಗೊಂಡಿತೋ ಆಗ ಅವರೇ ಮುಂದಿನ ಉತ್ತರಾಧಿಕಾರಿ ಎಂಬುದೂ ಹೆಚ್ಚಿನ ಜನರ ಮನಸಿನಲ್ಲಿ ಸ್ಪಷ್ಟವಾಯಿತು.

ಆದರೆ ಯಾರು ಈ ಕಾಂತರಾಜ್ ಅರಸ್?

ಈಗ ಎಲ್ಲರಿಗೂ ಗೊತ್ತಿರುವಂತೆ ಇವರು ಶ್ರೀಕಂಠದತ್ತ ಅವರ ಹಿರಿಯ ಸಹೋದರಿಯೂ, ಜಯಚಾಮರಾಜೇಂದ್ರ ಒಡೆಯರ್ ಅವರ ಹಿರಿಯ ಪುತ್ರಿಯೂ ಆಗಿದ್ದ ಗಾಯತ್ರಿ ದೇವಿಯವರ ಏಕೈಕ ಪುತ್ರ. ಇವರ ತಂದೆಯ ಹೆಸರು ರಾಮಚಂದ್ರರಾಜ್ ಅರಸ್. ಈ ರಾಮಚಂದ್ರರಾಜ್ ಅರಸ್ ಬೇರಾರೂ ಅಲ್ಲ, ಮೈಸೂರು ಆಸ್ಥಾನದಲ್ಲಿ 1918ರಿಂದ 1922ರ ತನಕ ದಿವಾನರಾಗಿದ್ದ ಕಾಂತರಾಜ್ ಅರಸ್ ಅವರ ಮೊಮ್ಮಗ. ಜೊತೆಗೆ ಇವರು ವಾರಿಗೆಯಲ್ಲಿ ಖ್ಯಾತ ಸಾಹಿತಿ ಚದುರಂಗ ಅವರ ಸಹೋದರ.

ರಾಮಚಂದ್ರ ಅರಸ್ ಮತ್ತು ಗಾಯತ್ರಿ ದೇವಿಯವರು ಮದುವೆಯಾಗಿ ತ್ರಿಪುರಸುಂದರ ದೇವಿ, ದೀಪಾಮಾಲಿನಿ ದೇವಿ ಮತ್ತು ಕೀರ್ತಿಮಾಲಿನಿ ದೇವಿ ಎಂಬ ಮೂವರು ಪುತ್ರಿಯರು ಜನಿಸಿದರು. ಕೊನೆಗೆ ಜನಿಸಿದ್ದೇ ಚದುರಂಗ ಕಾಂತರಾಜ್ ಅರಸ್ ಎಂಬ ಪುತ್ರ. ದುರಾದೃಷ್ಟವಶಾತ್ ಮಗ ಜನಿಸಿದ ಕೆಲವೇ ತಿಂಗಳಲ್ಲಿ ತಾಯಿ ಗಾಯತ್ರಿದೇವಿಯವರು ಮರಣಹೊಂದಿದರು.

ಯಶಸ್ವೀ ಉದ್ಯಮಿಯಾಗಿದ್ದ ರಾಮಚಂದ್ರರಾಜ್ ಅರಸ್ ಅವರು ಮೈಸೂರು ಮತ್ತು ಬೆಂಗಳೂರಿನ ಹಲವಾರು ಪ್ರತಿಷ್ಠಿತ ಕ್ಲಬ್‌ಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಒಮ್ಮೆ ಅವರು ಮೈಸೂರು ರೇಸ್ ಕ್ಲಬ್ಬಿನ ಚೇರ್ಮನ್ ಆಗಿಯೂ ಆಯ್ಕೆಯಾಗಿದ್ದರು. ಜೊತೆಗೆ ಕಂಠೀರವ ನರಸಿಂಹರಾಜ ಒಡೆಯರ್ ಸ್ಪೋರ್ಟ್ಸ್ ಕ್ಲಬ್‌ನ ಚೇರ್ಮನ್ ಕೂಡ ಆಗಿದ್ದ ರಾಮಚಂದ್ರರಾಜ್ ಅರಸ್ ಅವರು ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನ ಸಂಸ್ಥಾಪಕರೂ ಆಗಿದ್ದರು. ಅವರು ತಮ್ಮ 75ನೇ ವಯಸ್ಸಿನಲ್ಲಿ



ಬೆಂಗಳೂರಿನಲ್ಲಿ ಕೊನೆಯುಸಿರೆಳೆದರು.

ಅವರ ಏಕೈಕ ಪುತ್ರ ಚದುರಂಗ ಕಾಂತರಾಜ್ ಅರಸ್ ಈಗ ರಾಜ್ಯವೂ ಇಲ್ಲದ, ಅರಸೊತ್ತಿಗೆಯೂ ಇಲ್ಲದ 'ಯದು ವಂಶದ' ಉತ್ತರಾಧಿಕಾರಿಯಾಗಿದ್ದಾರೆ. ಈ ಕಾಂತರಾಜ್ ಅರಸ್ ಅವರು ಎಂತಹ ವ್ಯಕ್ತಿ?


ಅವರನ್ನು ಹತ್ತಿರದಿಂದ ಬಲ್ಲವರ ಪ್ರಕಾರ ಕಾಂತರಾಜ್ ಅರಸ್ ಸಂಭಾವಿತ ಮನುಷ್ಯ. ಬೆಂಗಳೂರಿನ ಅರಮನೆ ಮೈದಾನದ 28 ಎಕರೆ ಭಾಗ ಕಾಂತರಾಜ್ ಅರಸ್ ಅವರಿಗೆ ಸೇರಿದೆ. ಆ ಮೈದಾನದ ಭಾಗವನ್ನು ಎಕ್ಸಿಬಿಷನ್, ಎಂಟರ್‌ಟೈನ್‌ಮೆಂಟ್ ಇತ್ಯಾದಿಗಳಿಗೆ ಬಾಡಿಗೆ ನೀಡುವುದರಿಂದ ಆದಾಯಕ್ಕೆ ಯಾವ ಕೊರತೆಯೂ ಇಲ್ಲ. ಜೊತೆಗೆ ಊಟಿಯಲ್ಲಿರುವ ರಾಜಮನೆತನದ ಆಸ್ತಿಯಾಗಿರುವ ಖ್ಯಾತ ಫರ್ನ್‌ಹಿಲ್ ಹೋಟೆಲ್‌ನಲ್ಲೂ ಇವರ ಪಾಲುದಾರಿಕೆ ಇದೆ.

ಇನ್ನು ಮೈಸೂರು ರಾಜಮನೆತನದವರಿಗೆ ಹತ್ತಿರವಾಗಿರುವ ಕುದುರೆ ರೇಸ್ ಕಾಂತರಾಜ್ ಅವರನ್ನು ಬಿಟ್ಟಿಲ್ಲ. ಅವರು ಹಲವು ರೇಸ್ ಕುದುರೆಗಳ ಮಾಲೀಕರಾಗಿದ್ದು ಅವರ ಒಡೆತನದ ಕೆಲವು ಕುದುರೆಗಳು ಹಲವಾರು ರೇಸ್‌ಗಳಲ್ಲಿ ಗೆದ್ದಿವೆ.

ಇಷ್ಟೇ ಮುಖ್ಯವಾಗಿ ಕಾಂತರಾಜ್ ಅರಸ್ ಅವರಿಗೆ ಬಹಳ ಇಷ್ಟವಾದ ಹವ್ಯಾಸ ವೈಲ್ಡ್‌ಲೈಫ್ ಫೋಟೋಗ್ರಫಿ. ಅವರು ತಮ್ಮ ಕ್ಯಾಮೆರಾದಲ್ಲಿ ವಿವಿಧ ವನ್ಯ ಪ್ರಾಣಿಗಳ ಸುಂದರ ಫೋಟೋಗಳನ್ನು ಸೆರೆಹಿಡಿದಿದ್ದಾರೆ.

ಅವರ ಪತ್ನಿಯ ಹೆಸರು ಪ್ರಿಯಾಂಕಾ ಮತ್ತು ಅವರ ಪುಟ್ಟ ಮಗುವಿನ ಹೆಸರು ದೇವ್ರತ್.

ಸಂಹಿತೆ 377 ಸಮಾನತೆಗೆ ವಿರುದ್ಧವಾದದ್ದು: ಮೀನಾ ಕಂಡಸಾಮಿ, ಕವಿಯತ್ರಿ



ಭಾರತೀಯ ದಂಡ ಸಂಹಿತೆ 377ನೇ ವಿಧಿಯ ಸಂವಿಧಾನಿಕ ಮಾನ್ಯತೆಯನ್ನು ಎತ್ತಿಹಿಡಿಯುವ ಮೂಲಕ ನಮ್ಮ ಸುಪ್ರೀಂಕೋರ್ಟ್ ನಮ್ಮ ಸಮಾಜವನ್ನು ಹಿಂದಕ್ಕೆ ಎಳೆದೊಯ್ದಿದೆಯಲ್ಲದೆ ಅದರ ಜೊತೆಗೆ ಸಾಂಪ್ರದಾಯಿಕ ಮತ್ತು ಪುರುಷಪ್ರಧಾನ ತತ್ವಗಳಿಗೆ ಮಾನ್ಯತೆ ನೀಡಿದೆ. ಅಷ್ಟು ಸಾಲದೆಂಬಂತೆ ನಮ್ಮ ಸಂವಿಧಾನದ ಪ್ರಾಥಮಿಕ ಅರ್ಥಕ್ಕೆ ಅನ್ಯಾಯ ಎಸಗಿದೆ.

ಎಲ್ಲಾ ಪ್ರಜೆಗಳಿಗೆ ಇರುವ ನ್ಯಾಯಬದ್ಧ ಹಕ್ಕುಗಳನ್ನು ಈ ತೀರ್ಪು ಸಲಿಂಗಸಂಗಿಗಳಿಗೆ ನಿರಾಕರಿಸಿದೆ. ಈ ತೀರ್ಪು ಬದಲಾಗುತ್ತಿರುವ ಕಾಲದೊಂದಿಗೆ ನಮ್ಮ ನ್ಯಾಯಾಲಯ ಬದಲಾಗುತ್ತಿಲ್ಲ ಎಂಬುದನ್ನೂ, ತಿರೋಗಾಮಿಯಾದ ನಿಲುವನ್ನು ಪ್ರದರ್ಶಿಸುತ್ತಿದೆ ಎಂಬ ಅಂಶವನ್ನು ಮತ್ತೊಮ್ಮೆ ಸಾಬೀತು ಪಡಿಸಿದೆ.

ಈ ತೀರ್ಪಿನ ಪ್ಯಾರ 52ರಲ್ಲಿ "ಲಿಂಗಪರಿವರ್ತಿತರು, ಉಭಯಲಿಂಗರತಿಯರು (ಎಲ್‌ಜಿಬಿಟಿ) ಎಂದು ಕರೆದುಕೊಳ್ಳುವವರ ಹಕ್ಕುಗಳು" ಎಂಬ ವಾಕ್ಯ ಇದೆ. ಆದ್ದರಿಂದ ಈ ದೇಶದ ಪ್ರಜೆಗಳು ಅವರು ಸಲಿಂಗಸಂಗಿಗಳಾಗಿರದಿದ್ದರೂ - "ಭಾರತೀಯ ಸುಪ್ರೀಂಕೋರ್ಟ್" ಎಂದು ಕರೆದುಕೊಳ್ಳುವ ಈ ಸಂಸ್ಥೆಯ ಅಧಿಕಾರವನ್ನೂ ನಿರಾಕರಿಸಬೇಕಾಗುತ್ತದೆ. ಸಲಿಂಗಸಂಗ ಅಪರಾಧ ಎಂದು ನಿರ್ಧರಿಸಿರುವ ಈ ನ್ಯಾಯಾಲಯವು 13ನೇ ಶತಮಾನದ ಬ್ರಿಟಿಷರ ಕಾಯಿದೆಯನ್ನು ಉಲ್ಲೇಖಿಸುವ ಮೂಲಕ ಸಲಿಂಗಸಂಗಿಗಳನ್ನು ಜೀವಂತ ಸುಡಬೇಕೆಂಬ 'ನೈತಿಕತೆ'ಯನ್ನು ಮೆರೆದಿದೆ.



ಈ ವ್ಯಾಜ್ಯದಲ್ಲಿ ಅರ್ಜಿದಾರರಾಗಿದ್ದ ಮೂಲಭೂತ ಹಿಂದೂ, ಕ್ರಿಶ್ಚಿಯನ್ ಮತ್ತು ಮುಸಲ್ಮಾನರು - ಸಲಿಂಗಸಂಗದಿಂದಾಗಿ ಪುರುಷರು ಷಂಡರಾಗುತ್ತಾರೆಂದೂ, ಅಂತಹ ಪುರುಷರಿಂದ ಸಮಾಜಕ್ಕೆ ಯಾವ ಉಪಯೋಗವೂ ಇಲ್ಲವೆಂದು ವಾದಿಸಿದ್ದರು.

ನಾನು ಒಂದು ಆದರ್ಶಪ್ರಾಯ ಮತ್ತು ಸಮಾನತವಾದಿ ಸಮಾಜದಲ್ಲಿ ಇದ್ದಿದ್ದರೆ ಸುಪ್ರೀಂಕೋರ್ಟ್ ಇಂತಹ ದ್ವೇಷಭರಿತ, ಬುದ್ಧಿಹೀನ ಮತ್ತು ವಿತಂಡವಾದಗಳನ್ನು ಮಂಡಿಸಿದ್ದ ಜನರ ವಾದಗಳನ್ನು ಸುಪ್ರೀಂಕೋರ್ಟ್ ಆಲಿಸುತ್ತಿರಲಿಲ್ಲ ಮಾತ್ರವಲ್ಲ, ಮಾನವ ಕುಲಕ್ಕೆ ಒಳ್ಳೆಯದಾಗಲಿ ಎಂಬ ಆಶೋತ್ತರದೊಂದಿಗೆ ಅಂತಹವರನ್ನು ಮೊದಲು ಹುಚ್ಚಾಸ್ಪತ್ರೆಗೆ ದಾಖಲಿಸುತ್ತಿತ್ತು.

ಹಾಗೆ ಮಾಡುವ ಬದಲಾಗಿ ಸುಪ್ರೀಂಕೋರ್ಟ್ "ಪ್ರಕೃತಿ ನಿಯಮಾನುಸಾರ ಮನುಷ್ಯನ ದೇಹದ ಯಾವ ಅಂಗವನ್ನು ಯಾವ ಕಾರ್ಯಕ್ಕೆ ಮಾತ್ರ ಉಪಯೋಗಿಸತಕ್ಕದ್ದು" ಎಂದು ನಿರ್ಧರಿಸಿದೆ. ವಾಸ್ತವವಾಗಿ ಮಾನವಕುಲ ಪ್ರಕೃತಿ ನಿಯಮಾನುಸಾರ ನಿಷ್ಠುರವಾಗಿ ಬದುಕುತ್ತಿದ್ದರೆ ನಮಗೆ ಆಧುನಿಕ ವೈದ್ಯಕೀಯದ ಸವಲತ್ತುಗಳಾಗಲಿ ಶಿಕ್ಷಣ ವ್ಯವಸ್ಥೆಯಾಗಲಿ, ಅಷ್ಟೇ ಯಾಕೆ ಭಾರತೀಯ ಸುಪ್ರೀಂಕೋರ್ಟಿನ ಅಗತ್ಯತೆಯೇ ಇರುತ್ತಿರಲಿಲ್ಲ. ನಾವು ಇವತ್ತು ಅಂತಹ ಆದರ್ಶಪ್ರಾಯ ಮತ್ತು ಪ್ರಾಕೃತಿಕ ನಿಯಮಾನುಸಾರ ಬದುಕುತ್ತಿದ್ದರೆ ಅಂತಹ ವ್ಯವಸ್ಥೆಯಲ್ಲಿ ಮ್ಯಾಜಿಸ್ಟ್ರೇಟರ ಕೋರ್ಟುಗಳು ಕೂಡ ಅಸ್ತಿತ್ವದಲ್ಲಿ ಇರುತ್ತಿರಲಿಲ್ಲ.

ಸುಪ್ರೀಂಕೋರ್ಟಿನ ವಿಭಾಗೀಯ ಪೀಠವು "ಸಲಿಂಗಸಂಗಿಗಳು ನಮ್ಮ ಜನಸಂಖ್ಯೆಯಲ್ಲಿ ಅಲ್ಪಸಂಖ್ಯಾತರು" ಎಂಬ ಕಾರಣವನ್ನೂ ನೀಡಿದೆ. ಅದರ ಪ್ರಕಾರ ನಾವು ಇನ್ನು ಮುಂದೆ ಬಹುಸಂಖ್ಯಾತರ ಮತ ಜನಪ್ರಿಯತೆಯನ್ನಾಧರಿಸಿ ಕಾನೂನುಗಳನ್ನು ರೂಪಿಸಿ ತೀರ್ಪುಗಳನ್ನು ನೀಡುವುದಾದರೆ ನಮ್ಮ ಸಮಾಜ ಅಪಾಯಕಾರಿ ಆಗುತ್ತದೆಯಲ್ಲದೆ ಇಲ್ಲಿನ ಎಲ್ಲ ತರಹ ಅಲ್ಪಸಂಖ್ಯಾತರಿಗೂ ಅನ್ಯಾಯವಾಗಲಿದೆ. ಅಷ್ಟೇ ಅಲ್ಲ ನಮ್ಮ ಜನ ಸಂಖ್ಯೆಯಲ್ಲಿ ಎಷ್ಟು ಜನ ಸಲಿಂಗಸಂಗಿಗಳು ಎಂಬ ಮಾಹಿತಿ ಯಾರಲ್ಲಿ ಇದೆ? ತಮ್ಮ ಲೈಂಗಿಕ ಇಚ್ಛಾಸಕ್ತಿಯ ಬಗ್ಗೆ ಬಹಿರಂಗವಾಗಿ ಮಾತನಾಡಲು ಜ ಹಿಂಜರಿಯುವಾಗ, ಅವರು ಆಸೆಗಳು ಅಪರಾಧ ಎಂದ ಕಾನೂನು ಹೇಳುವಾಗ, ಅಂತಹವರ ಸಂಖ್ಯೆ ಎಷ್ಟು ಎಂದ ಲೆಕ್ಕ ಹಾಕಿರುವವರು ಯಾರು?

ನಮ್ಮ ಸಂವಿಧಾನದ ಆಶಯಗಳೇ ನಮ್ಮ ದೇಶ ಕಾನೂನುಗಳನ್ನು ರೂಪಿಸುವ ಒರೆಗಲ್ಲು ಆಗಿದ್ದ ವಸಾಹತುಶಾಹಿ ಕಾಲದ 377 ವಿಧಿಯು ಈ ಕೂಡ ಅಪ್ರಸ್ತುತವಾಗಬೇಕು. ಯಾಕೆಂದರೆ ಅದು ನಮ್ಮ ಸಂವಿಧಾ ಎಲ್ಲರಿಗೂ ಕೊಟ್ಟಿರುವ ಸಮಾನತೆಯ ವಿರುದ್ಧವಾಗಿದ

ಕೋಡೂರು ಹೈಸ್ಕೂಲಿನಲ್ಲಿ ಹೆಚ್ ಎಂ ಮಂಜನ ಡಿಕ್ಟೇಟರ್‌ಶಿಪ್!

ಶಿಕ್ಷಕನಾದವನು ಭವಿಷ್ಯದ ಪ್ರಜೆಗಳನ್ನು ರೂಪಿಸಬೇಕು. ಹೀಗೆ ಭವಿಷ್ಯದ ಪ್ರಜೆಗಳನ್ನು ರೂಪಿಸುವಂತಹ ಹೊಣೆ ಹೊತ್ತ ಶಿಕ್ಷಕ ಅದಕ್ಕೂ ಮೊದಲು ತಾನು ಸೇವೆ ಸಲ್ಲಿಸುತ್ತಿರುವ ಶಾಲೆಯಿರುವ ಊರಿನ ಜನರೊಂದಿಗೂ ಉತ್ತಮ ಬಾಂಧವ್ಯವನ್ನು ಹೊಂದಿರಬೇಕು. ಆದರೆ ಅದ್ಯಾವ ಹೊತ್ತಿನಲ್ಲಿ ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಕೋಡೂರು ಸರ್ಕಾರಿ ಪ್ರೌಢಶಾಲೆಗೆ ಎ.ಆರ್.ಮಂಜಪ್ಪ ಎನ್ನುವ ದಾವಣಗೆರೆ ಮೂಲದ ಆಸಾಮಿ ಮುಖ್ಯ ಶಿಕ್ಷಕನಾಗಿ ಬಂದನೋ, ಶಾಲೆಯ ಮಕ್ಕಳ ಭವಿಷ್ಯವನ್ನು ರೂಪಿಸುವುದು ಬದಿಗಿರಲಿ, ಶಾಲೆಯ ಮಕ್ಕಳ ಸಮಸ್ಯೆಯ ಬಗ್ಗೆ ಚರ್ಚಿಸಲು ಬಂದ ಊರಿನ ಕೆಲವರನ್ನೇ 'ಗೂಂಡಾ'ಗಳೆಂದು ಕರೆದು ದಕ್ಕಿಸಿಕೊಂಡಿರುವುದೇ ಅಲ್ಲದೇ, ಗ್ರಾಮ ಪಂಚಾಯಿತಿ ಮಟ್ಟದ ಮುಖಂಡರನ್ನು ಹಿಡಿದುಕೊಂಡು ರಾಜಕೀಯ ಮಾಡುತ್ತಿರುವುದಲ್ಲದೇ ಊರಿನಲ್ಲೇ ಗುಂಪುಗಾರಿಕೆ ಹುಟ್ಟು ಹಾಕಿದ್ದಾನೆ. ಇನ್ನೊಂದು ಕಡೆಯಿಂದ ಬಿಸಿಯೂಟದಲ್ಲಿ ತನ್ನದೇ ಸಿಂಡಿಕೇಟ್ ಮಾಡಿಕೊಂಡು ಮೇಯ್ದಿರುವುದಲ್ಲದೇ, ಎಸ್‌ಡಿಎಂಸಿ ಹಣದಲ್ಲೂ ಏಪರತಪರಾ ಮಾಡಿ ಮೆರೆಯುತ್ತಿದ್ದಾನೆ.



ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಕೋಡೂರಿನ ಸರ್ಕಾರಿ ಪೌಢಶಾಲೆ ಊರಿನಲ್ಲಿ ಹಾದು ಹೋಗಿರುವ ರಾಜ್ಯ ಹೆದ್ದಾರಿ 26 ರ ಪಕ್ಕದಲ್ಲೇ ಇದೆ. ಈ ಶಾಲೆಗೆ ಸುತ್ತಮುತ್ತ ಹಳ್ಳಿಯ ಬಡಮಕ್ಕಳು ಮುನ್ನೂರರ ಹತ್ತಿರ ಸಂಖ್ಯೆಯಲ್ಲಿ ಬರುತ್ತಾರೆ. ಹಳ್ಳಿಯ ಮಕ್ಕಳು ಬೆಳಿಗ್ಗೆ ಎಂಟೂವರೆ ಒಂಭತ್ತು ಗಂಟೆಗೇ ಶಾಲೆಯ ಹತ್ತಿರ ಬಂದು ನಿಲ್ಲುತ್ತಾರೆ. ರಾಜ್ಯ ಹೆದ್ದಾರಿಯಾದ್ದರಿಂದ ವಾಹನಗಳೂ ಓಡಾಡುತ್ತಿರುತ್ತವೆ. ರಸ್ತೆ ಪಕ್ಕದಲ್ಲಿ ಜಮೆಯಾಗುವ ಮಕ್ಕಳು ರಸ್ತೆಯಲ್ಲಿ ಓಡಾಡುವ ವಾಹನದಿಂದ ಅಪಾಯಕ್ಕೆ ಸಿಕ್ಕಬಹುದು ಎಂದುಕೊಂಡ ಇದೇ ಶಾಲೆಯ ಶಾಲಾಭಿವೃದ್ಧಿ ಸಮಿತಿ ಸದಸ್ಯ ಪುರುಷೋತ್ತಮ ಅವರೊಂದಿಗೆ ಕೋಡೂರಿನ ಗ್ರಾಮ ಪಂಚಾಯಿತಿ ಡಿ ದರ್ಜೆ ನೌಕರ ಕೃಷ್ಣಮೂರ್ತಿ, ಗ್ಯಾರೇಜ್ ಗುರು, ವಿಜೇಂದ್ರ, ಸುರೇಶ್, ಬಸವರಾಜ, ದೇವು, ಗೋಪಾಲ ಮಾರ್ಚ್ 19 ನೇ ತಾರೀಖಿನಂದು ಶಾಲೆಗೆ ಹೋಗಿ, ಮುಖ್ಯ ಶಿಕ್ಷಕ ಮಂಜಪ್ಪನ ಹತ್ತಿರ, ಶಾಲೆಯ ಗೇಟಿನ ಬೀಗವನ್ನು ಬೆಳಿಗ್ಗೆ ಒಂಭತ್ತು ಗಂಟೆಗೆ ತೆಗೆಸುವ ವ್ಯವಸ್ಥೆ ಮಾಡಿ ಎಂದು ವಿನಂತಿ ಮಾಡಿದ್ದಾರೆ. ಇದಕ್ಕೂ ಕಾರಣವಿದೆ. ಈ ಮಂಜಪ್ಪ ಕೋಡೂರಿನಿಂದ ಹದಿಮೂರು ಕಿ.ಮೀ ದೂರದಲ್ಲಿರುವ ತಾಲ್ಲೂಕು ಕೇಂದ್ರ ಹೊಸನಗರದಲ್ಲಿದ್ದಾನೆ. ಇನ್ನು ಪ್ಯೂನ್ ಲೇಡಿ ಕೂಡಾ ಕೋಡೂರಿನಲ್ಲಿ ಮನೆ ಮಾಡಿಕೊಂಡಿಲ್ಲ, ಆದ್ದರಿಂದ ಮಂಜಪ್ಪ ಹೊಸನಗರದಿಂದ ಕೋಡೂರಿಗೆ ಶಾಲೆಯ ಗೇಟಿನ ಮತ್ತು ರೂಮುಗಳ ಬೀಗದ ಕೀ ಹಿಡಿದುಕೊಂಡು ಬರುವವರೆಗೆ ಮಕ್ಕಳು ರಸ್ತೆ ಬದಿಯಲ್ಲೇ ನಿಲ್ಲಬೇಕು. ಈ ಸಮಸ್ಯೆ ಬಗ್ಗೆ ಕೇಳಿದರೆ, ಊರವರನ್ನೇ ಈ ಬಗ್ಗೆ ಕೇಳಲು ನೀವ್ಯಾರು, ನಿಮಗೇನು ರೈಟ್ಸಿದೆ ಎಂದೆಲ್ಲ ಎಗರಲಾರಂಭಿಸಿದ್ದಾನೆ. ಹೋದವರು ಸಮಾಧಾನದಿಂದ ಇಲ್ಲೇ ಇರುವ ಶಿಕ್ಷಕರಲ್ಲಿ ಯಾರ ಹತ್ತಿರವಾದರೂ ಕೀ ಕೊಡಿ ಎಂದರೆ, ಕೊಟ್ಟರೆ ಮಕ್ಕಳನ್ನು ಲೈಂಗಿಕವಾಗಿ ಬಳಸಿಕೊಳ್ಳುತ್ತಾರೆ, ಕೊನೆಗೆ ಅದಕ್ಕೂ ನಾನೇ ತಲೆ ಕೊಡಬೇಕಾಗುತ್ತದೆ ಎಂದು ಹೇಳಿದ್ದಾನೆ.

ಇದು ಇಲ್ಲಿಗೇ ಮುಗಿದು ಹೋಗಬೇಕಾದ ಪ್ರಕರಣ. ಆದರೆ ಇದನ್ನು ಇಷ್ಟಕ್ಕೇ ಬಿಟ್ಟರೆ ನನ್ನ ಬೇರೆ ಹುಳುಕುಗಳ ಬಗ್ಗೆಯೂ ಊರವರು ಕೇಳುವಂತಾದರೆ ಕಷ್ಟ ಎಂದುಕೊಂಡ ಮಂಜಪ್ಪನಿಗೆ ತಕ್ಷಣ ನೆನಪಾದವನು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ರಮೇಶ್ ಕುಲಾಲ್. ಇದೇ ಸ್ಕೂಲಿನಲ್ಲಿ ಓದಿರುವ ಈತ ಮೇಸ್ತ್ರಿ ಕೆಲಸ ಮಾಡಿಕೊಂಡಿದ್ದಾನೆ. ಎಸ್‌ಡಿಎಂಸಿ ಅಧ್ಯಕ್ಷನಾದ ಮೇಲೆ ಮಂಜಪ್ಪನಿಗೆ ಆಪ್ತನಾಗಿದ್ದರಿಂದ ಶಾಲೆಯ ಬಿಸಿಯೂಟದ ಅಡಿಗೆ ಮನೆ ನಿರ್ಮಾಣ ಸೇರಿದಂತೆ ಸ್ಕೂಲಿನ ಎಲ್ಲಾ ಗಾರೆ ಕೆಲಸಗಳ ಗುತ್ತಿಗೆಯನ್ನೂ ಇವನೇ ಹಿಡಿಯುತ್ತಾನೆ. ಮತ್ತು ಕಳಪೆ ಕಾಮಗಾರಿ ಮಾಡಿ, ಅದರಲ್ಲಿ ಒಂದು ಪಾಲನ್ನು ಮಂಜಪ್ಪನಿಗೂ ಕೊಡುತ್ತಾನೆ. ಸಾಲದ್ದಕ್ಕೆ ಇದೇ ರಮೇಶ್‌ನ ಹೆಂಡತಿ ಬೇಬಿ, ಬಿಸಿಯೂಟ ಅಡುಗೆಯವಳಾಗಿ ಬಂದು ಇಲ್ಲಿ ಸೇರಿಕೊಂಡಿದ್ದಾಳೆ. ಇದರಿಂದಾಗಿ ಬಿಸಿಯೂಟದ ಅಕ್ಕಿ, ಬೇಳೆ ಕಳ್ಳತನ, ಸ್ಕೂಲು ಮಕ್ಕಳಿಗೆಂದು ಬರುವ ಎಣ್ಣೆಯಲ್ಲಿ ಬೋಂಡಾ ಬೇಯಿಸಿಕೊಂಡು ತಿನ್ನುವಂತಹ ಕಳ್ಳ ಕೆಲಸಗಳೂ ಇಲ್ಲಿ ಸರಾಗವಾಗಿ ನಡೆಯುತ್ತಿವೆ. ಇಂತಹ ರಮೇಶ್ ಕುಲಾಲ್ ಗ್ರಾಮ ಪಂಚಾಯಿತಿಗೆ ಒಂದು ಕಂಪ್ಲೇಂಟು ರೆಡಿ ಮಾಡಿ ಎಂದಿದ್ದಾನೆ. ಹೆಚ್‌ಎಂ ಆಗಿರುವ ಮಂಜಪ್ಪನಿಗೆ ತಲೆಯಲ್ಲಿ ಸಗಣಿಯ ಬದಲು ಬುದ್ಧಿ ಇದ್ದಿದ್ದರೆ ತನ್ನ ಮೇಲಾಧಿಕಾರಿಯಾಗಿರುವ ಬಿಇಓಗೆ ಒಂದು ಕಂಪ್ಲೇಂಟ್ ಕೊಡಬೇಕಿತ್ತು. ಆದರೆ ಊರವರನ್ನೇ ಒಡೆದು ಆಳಿದರೆ ತನ್ನೆಲ್ಲ ಹುಳುಕುಗಳು ಮುಚ್ಚಿಕೊಳ್ಳುತ್ತವೆ ಎಂದವನೇ, ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಶಾಲೆಯ ಸಮಸ್ಯೆಯ ಬಗ್ಗೆ ಕೇಳಲು ಬಂದವರು ಶಾಲೆಯ ಪಾಠಕ್ಕೆ ಅಡ್ಡಿ ಪಡಿಸಿದ್ದಾರೆ, 'ಗೂಂಡಾ'ಗಳಂತೆ ವರ್ತಿಸಿದ್ದಾರೆ, ಇವರಿಂದ ನನಗೆ ಮತ್ತು ನನ್ನ ಶಿಕ್ಷಕರಿಗೆ ರಕ್ಷಣೆ ಕೊಡಿ ಎಂಬರ್ಥ ಬರುವಂತೆ ಕಂಪ್ಲೇಂಟು ಬರೆದು ಕೊಟ್ಟಿದ್ದಾನೆ.


ಇವನು ಕಂಪ್ಲೇಂಟು ಕೊಟ್ಟ ಸುದ್ದಿ ಕೇಳುತ್ತಿದ್ದಂತೆ ಸಮಸ್ಯೆ ಬಗ್ಗೆ ಕೇಳಲು ಹೋದ ಹುಡುಗರಿಗೆ ಮೈಮೇಲೆ ಬಿಸಿನೀರು ಬಿದ್ದಂತಾಗಿದೆ. ಕೋಡೂರು ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರು, ಊರಿನ ಹಿತ ಕಾಯುವವರಾಗಿದ್ದರೆ ಸ್ವಲ್ಪ ಯೋಚಿಸಿ, ಒಂದು ಪಂಚಾಯಿತಿ ಮಾಡಿ ಇದನ್ನು ಇಲ್ಲಿಗೇ ಬಗೆಹರಿಸಬಹುದಿತ್ತು. ಆದರೆ ಹಾಗೆ ಮಾಡದೇ, ಶಾಲೆಯ ಕಾಂಪೌಂಡ್ ಸೇರಿದಂತೆ ಬಾವಿ, ಬೋರವೆಲ್, ವಾರ್ಷಿಕೋತ್ಸವಕ್ಕೆ ವಸೂಲಿಯಾದ ಹತ್ತಿರತ್ತಿರ ಒಂದು ಲಕ್ಷ ರೂಪಾಯಿಯಲ್ಲಿನ ಪಾಲು, ಸಾಲದ್ದಕ್ಕೆ ಶಾಲೆಯ ಆವರಣದಲ್ಲಿರುವ ಬೆಳೆದು ನಿಂತ ಆಕೇಶಿಯಾ ನಾಟಾದ ಮೇಲೆ ಕಣ್ಣು ಹಾಕಿಕೊಂಡು, ಮಂಜಪ್ಪನದ್ದೇ ಸರಿ ಎಂದು ಊರ ಹುಡುಗರನ್ನೇ ಬದಿಗೆ ತಳ್ಳಿದ್ದಾರೆ. ಹೀಗೆ ಮಂಜಪ್ಪನ ಪರ ಕೆಲಸ ಮಾಡಿದವರಲ್ಲಿ ಸದಸ್ಯರಾದ ಚಂದ್ರಮೌಳಿ ಗೌಡ, ಪುಟ್ಟಪ್ಪ ಗುರುಮೂರ್ತಿಯ ಹೆಸರು ದಟ್ಟವಾಗಿ ಕೇಳಿ ಬರುತ್ತಿದೆ. ಇದಕ್ಕಿಂತ ಹೆಚ್ಚಾಗಿ ಮಂಜಪ್ಪನ ಹತ್ತಿರ ಇದನ್ನೆಲ್ಲ ಇಲ್ಲಿಗೇ ಬಿಡುವಂತೆ ಹೇಳಿ ಗ್ರಾ.ಪಂ ಪಿಡಿಓ ಶ್ರೀಧರ್ ಊರವರ ಪರವಾಗಿ ಕ್ಷಮೆ ಕೇಳಿದ್ದಾರೆ. ಇದರಿಂದ ಮಂಜಪ್ಪ ಮತ್ತು ರಮೇಶ್ ಕುಲಾಲ್‌ನಿಗೆ ಅದೆಷ್ಟು ಖುಷಿಯಾಗಿದೆ ಎಂದರೆ ಅವತ್ತೇ ಸಂಜೆ ಹೊಸನಗರದಲ್ಲಿ ಇವರಿಬ್ಬರೂ ಸೇರಿ ಎಣ್ಣೆ ಪಾರ್ಟಿ ಮಾಡಿದ್ದಾರೆ. ಎಣ್ಣೆ ಏಟಿನಿಂದಾಗಿ ಬರುವಾಗ ರಮೇಶ್ ಕುಲಾಲ್ ಬೈಕಿನಿಂದ ಬಿದ್ದು ಕಾಲು ಮುರಿದು ಕೆಲವು ದಿನ ಹಾಸಿಗೆ ಸೇರಿ, ಕಿವಿ ಸೋರಿಸಿಕೊಂಡಿದ್ದು ಸದ್ಯ ಹಳೆಯ ಸುದ್ದಿ.

ಇನ್ನು ಶಾಲಾ ವಾರ್ಷಿಕೋತ್ಸವಕ್ಕೆಂದು ವಸೂಲಾದ ಸುಮಾರು ಎಪ್ಪತ್ತು ಎಂಭತ್ತು ಸಾವಿರ ಹಣದಲ್ಲಿ ಮಂಜಪ್ಪ ಅದ್ಯಾವ ಪರಿ ತಿಂದಿದ್ದಾನೆಂದರೆ, ಕೊನೆಗೆ ಇದೇ ದುಡ್ಡಿನಲ್ಲಿ ಗ್ರಾ.ಪಂ ನ ಅಧ್ಯಕ್ಷರು ಮತ್ತು ಎಲ್ಲಾ ಸದಸ್ಯರಿಗೆ ಹಾರ ತುರಾಯಿ ಹಾಕಿ ಸನ್ಮಾನ ಮಾಡಿದ್ದೇ ಅಲ್ಲದೇ, ಕೊನೆಗೆ ಅವರಿಗೆ ಶಾಲೆಯಲ್ಲಿ ಹೋಳಿಗೆ ಊಟವನ್ನೂ ಹಾಕಿಸಿದ್ದಾನೆ. ಶಾಲಾ ವಾರ್ಷಿಕೋತ್ಸವದ ಹಣದಲ್ಲಿ ಗ್ರಾ.ಪಂ ಸದಸ್ಯ ಪುಟ್ಟಪ್ಪ ದೊಡ್ಡ ಪಾಲನ್ನೇ ಮೇಯ್ದಿದ್ದಾನೆ. ಹತ್ತಾರು ಮುಖ್ಯಶಿಕ್ಷಕರನ್ನು ಕಂಡ ಈ ಸ್ಕೂಲಿಗೆ ಈತ ಬಂದು ಕಿಸಿದಿದ್ದೇನು ಎಂದರೆ ಎಸ್ಸೆಸ್ಸೆಲ್ಸಿ ಫಲಿತಾಂಶವನ್ನು ತಳಕಚ್ಚಿದ್ದು. ಹೌದು, ಈತ ಇಲ್ಲಿಗೆ ಬರುವ ಮೊದಲು ಪ್ರಭಾರಿ ಮುಖ್ಯೋಪಾಧ್ಯಾಯರ ಉಸ್ತುವಾರಿಯಲ್ಲಿದ್ದ ಈ ಸ್ಕೂಲಿನಲ್ಲಿ 60 ರಿಂದ 70 ಪರ್ಸೆಂಟೇಜ್ ರಿಸಲ್ಟ್ ಬರುತ್ತಿತ್ತು, ಆದರೆ ಈತ ಬಂದಿದ್ದೇ ಬಂದಿದ್ದು ಈ ಬಾರಿ ಎಸ್ಸೆಸ್ಸೆಲ್ಸಿಯಲ್ಲಿ ಕೇವಲ ಐವತ್ತು ಪರ್ಸೆಂಟ್ ರಿಸಲ್ಟ್ ಪಡೆದುಕೊಂಡಿದೆ.


ಇಂತಿಪ್ಪ ಮಂಜಪ್ಪ ಹೀಗೆ ಊರಿನಲ್ಲಿ ರಾಜಕೀಯ - ಗುಂಪುಗಾರಿಕೆ ಮಾಡಿಕೊಂಡು ತನ್ನ ಬೇಳೆ ಬೇಯಿಸಿಕೊಳ್ಳುತ್ತಿದ್ದರೆ ಬಿಇಓ ವೀರಭದ್ರಪ್ಪ ಗುಮ್ಮಗೆ ಕುಳಿತಿದ್ದಾರೆ. ಊರಿನ ಹುಡುಗರು ಬಿಇಓಗೆ ಕಂಪ್ಲೇಂಟು ಕೊಟ್ಟರೂ, ಅವರು ಈವರೆಗೆ ಮಂಜಪ್ಪನನ್ನು ಕರೆಸಿ ವಿಚಾರಣೆ ಮಾಡುವ ಕೆಲಸವನ್ನೂ ಕೂಡಾ ಮಾಡಿಲ್ಲ ಎಂದರೆ, ಇಲ್ಲಿನ ಅವ್ಯವಹಾರಗಳಲ್ಲಿ ಇವರಿಗೂ ಪಾಲು ಸಿಗುತ್ತಿರುವುದು ಖಾತ್ರಿಯಾಗುತ್ತದೆ. ಇದರ ನಡುವೆ ತಮ್ಮದೇ ವಿಧಾನಸಭಾ ಕ್ಷೇತ್ರ ಎನ್ನುವುದಕ್ಕಿಂತ ಹೆಚ್ಚಾಗಿ, ಶಿಕ್ಷಣ ಸಚಿವರಾಗಿರುವ ಕಿಮ್ಮನೆ ಈ ಸ್ಕೂಲಿನ ಸಮಸ್ಯೆಯ ಕಡೆಗೆ ಯಾಕೆ ಗಮನ ಹರಿಸುತ್ತಿಲ್ಲ? ಇದು ಮಕ್ಕಳ ಭವಿಷ್ಯದ ದೃಷ್ಟಿಯಿಂದ ಖಂಡಿತಾ ಒಳ್ಳೆಯ ಬೆಳವಣಿಗೆಯಲ್ಲ.




ಮುಖ್ಯ ಶಿಕ್ಷಕ ಎ.ಆರ್.ಮಂಜಪ್ಪ




ಜ್ಯೋತಿ ಚಂದ್ರಮೌಳಿ



ರಮೇಶ್ ಕುಲಾಲ್



ಪುಟ್ಟಪ್ಪ.



ಬಿಇಓ ವೀರಭದ್ರಪ್ಪ

ಒಕ್ಕಲಿಗರ ಸಂಘ ಚುನಾವಣೆ

05 ⏮

ವಾದಂತೆ ಕಾಣಿಸಬಹುದು. ಆದರೆ ಇದೂ ಕೂಡ ಕೆಂಚಪ್ಪ ಗೌಡನ ಸಂಘ ದಕಾಯಿತಿಯೇ ಹೊರತು ಮತ್ತೇನೂ ಆಗಿರಲಿಲ್ಲ.

ರಾಮನಗರ ಜಿಲ್ಲೆಯಾದ ನಂತರ ಸಂಘವನ್ನು ಅಲ್ಲಿಗೂ ವಿಸ್ತರಿಸುತ್ತೇನೆಂದು ರೈಲುಬಿಟ್ಟ ಕೆಂಚಪ್ಪ ಅಲ್ಲಿ ಒಕ್ಕಲಿಗರ ಬಡಮಕ್ಕಳಿಗೆ ಹಾಸ್ಟೆಲ್ ಕಟ್ಟಿಸುತ್ತೇನೆಂದೂ, ಅದಕ್ಕೆಂದು ಒಂದೂ ಮುಕ್ಕಾಲು ಕೋಟಿ ರೂಗಳ ಬೆಲೆ ತೆತ್ತು ಒಂದೂ ಕಾಲು ಎಕರೆ ಭೂಮಿ ಖರೀದಿಸಿದ್ದೇನೆಂದು ಗುದ್ದಲಿ ಪೂಜೆ ಮಾಡಿ ಫೋಟೋ ಕೂಡ ತೆಗೆಸಿಕೊಂಡ. ಹಕೀಕತ್ತೆಂದರೆ ಒಕ್ಕಲಿಗರ ಸಂಘದ ಹೆಸರಲ್ಲಿ ಆ ಪಾಟಿ ದುಡ್ಡು ಕೊಟ್ಟು ಖರೀದಿಸಿದ ಭೂಮಿಯೇ ಸರ್ಕಾರಿ ಭೂಮಿ ಯಾಗಿತ್ತು, ಪಾರ್ಕ್ ನಿರ್ಮಾಣಕ್ಕೆಂದು ರಾಮನಗರ ಅಭಿವೃದ್ಧಿ ಪ್ರಾಧಿಕಾರ ಮೀಸಲಿಟ್ಟ ಜಮೀನಿಗೇ ನಕಲಿ ದಾಖಲೆ ಸೃಷ್ಟಿಸಿದ್ದ ಕೆಂಚಪ್ಪಗೌಡ ಒಂದೂ ಮುಕ್ಕಾಲು ಕೋಟಿ ಲಪಟಾಯಿಸಿದ್ದ!

ಮತ್ತಷ್ಟು ಭೂ ಲೂಟಿ

ಜಮೀನೂ ಇಲ್ಲ, ದುಡ್ಡೂ ಗೋತಾ! ಬಡಮಕ್ಕಳ ಹಾಸ್ಟೆಲ್ ಕನಸಿಗೂ ಬೆಂಕಿಯಿಟ್ಟಿದ್ದ ಕೆಂಚಪ್ಪ, ಚಿಕ್ಕಬಳ್ಳಾಪುರದಲ್ಲೂ ತನ್ನ ಇದೇ ಕೈಚಳಕ ಮೆರೆದಿದ್ದ. ಸಂಘದ ಖಜಾಂಚಿಯಾಗಿದ್ದ ರಮೇಶ್ ಎಂಬಾತ ಸಂಘಕ್ಕೆಂದು ಚಿಕ್ಕಬಳ್ಳಾಪುರದಲ್ಲಿ 1.06 ಎಕರೆ ಭೂಮಿಯನ್ನು ದಾನವಾಗಿ ಕೊಟ್ಟ. ಕೊಟ್ಟ ದಾನಕ್ಕೆ ಪ್ರತಿಯಾಗಿ ಕೆಂಚಪ್ಪನೇ ಚಿಕ್ಕಬಳ್ಳಾಪುರಕ್ಕೆ ಬಂದು ದಾನಿ ರಮೇಶ್‌ಗೆ ಸನ್ಮಾನ ಮಾಡಿದ ಫೋಟೋಗಳೂ ಪತ್ರಿಕೆಯಲ್ಲಿ ಅಚ್ಚಾಯಿತು. ಆದರೆ ಸಂಘದ ಬೊಕ್ಕಸಕ್ಕೆ ಮಾತ್ರ ಒಂದೂವರೆ ಕೋಟಿಯ ಗುನ್ನಾ ಇಟ್ಟಿದ್ದ ಕೆಂಚಪ್ಪ!

ದಾನವಾಗಿ ಕೊಟ್ಟ ಭೂಮಿಯನ್ನೇ ಖರೀದಿಸಿದ್ದೇನೆಂದು ಹೇಳಿ ಒಂದೂವರೆ ಕೋಟಿಯನ್ನು ಕೆಂಚಪ್ಪನ ಗ್ಯಾಂಗ್ ಲಪಟಾಯಿಸಿತ್ತು, ಇದೇ ರೀತಿ ಕೋಲಾರದಲ್ಲಿ ಅರ್ಧ ಎಕರೆ ಖರೀದಿಸಿದ್ದೇನೆಂದು 1.10 ಕೋಟಿ ರೂಪಾಯಿಗಳನ್ನು ಸಂಘದ ತಿಜೋರಿಯಿಂದ ತೆಗೆಯಲಾಯ್ತು, ಆದರೆ ಭೂಮಿ ಕೊಟ್ಟ ರೈತನಿಗೆ ಸಿಕ್ಕಿದ್ದು 32 ಲಕ್ಷ ಮಾತ್ರ. ಉಳಿಕೆ 78 ಲಕ್ಷ ಏನಾಯ್ತು? ಚಿಕ್ಕಮಗಳೂರಿನಲ್ಲಿ ಸಂಘಕ್ಕೆಂದು 80x100 ನಿವೇಶನವೊಂದನ್ನು 1.25 ಕೋಟಿಗೆ ಖರೀದಿಸಲಾಯ್ತು, ಆದರೆ ನಿವೇಶನ ಕೊಟ್ಟವನಿಗೆ ಕೊಟ್ಟಿದ್ದು 60 ಲಕ್ಷ ಮಾತ್ರ. ಶಿವಮೊಗ್ಗದಲ್ಲೂ ಇಂಥದ್ದೇ ಭೂ ಖರೀದಿ ದರೋಡೆಯೇ ನಡೆಯಿತು.

ಪ್ರಶ್ನೆಯೆಂದರೆ ಅಂಥಾ ಧೀಮಂತ ಜನಾಂಗವಾದ ಒಕ್ಕಲಿಗರ ಭವಿಷ್ಯತ್ತಿಗೆಂದು ಕೇವಲ ಅರ್ಧ ಎಕರೆ, ಒಂದೆಕರೆಯಷ್ಟೇ ಸಾಕೆ? ಕ್ರಿಶ್ಚಿಯನ್ ಮಿಷನರಿಗಳೇ ಸಣ್ಣಪುಟ್ಟ ಕಾನ್ವೆಂಟ್ ಕಟ್ಟಿಸುವಾಗ ಮುಂದೆ 100 ವರ್ಷದ ಭವಿಷ್ಯತ್ತಿನ ಲೆಕ್ಕ ಹಾಕಿ ಇಪ್ಪತ್ತೋ ಮೂವತ್ತೋ ಎಕರೆಗಳನ್ನು ಖರೀದಿಸಿಟ್ಟಿರುತ್ತಾರೆ. ಮಾರ್ವಾಡಿಗಳು ಕೂಡ ಆವತ್ತಿಂದಾವತ್ತಿಗೆ ಯೋಚಿಸದೆ ಮುಂದೊಮ್ಮೆ ಏನೆಲ್ಲಾ ನಿರ್ಮಿಸಬಹುದೆಂದು ಲೆಕ್ಕಹಾಕಿ ಬೇಕಾಬಿಟ್ಟಿ ಭೂಮಿ ಖರೀದಿಸಿಟ್ಟಿರುತ್ತಾರೆ. ಆದರೆ ಕೆಂಚಪ್ಪಗೌಡನ ಗ್ಯಾಂಗ್ ಅರದಿ ಮೂರದಿ ಹಣ ಹೂಳುವಂತೆ ಒಂದೆಕರೆ, ಅರ್ಧ ಎಕರೆ ಖರೀದಿಸಿ ಅದಕ್ಕೆಂದು ಕೋಟಿ ಲೆಕ್ಕದ ರೊಕ್ಕ ಸುರಿಯುತ್ತಿದೆ. ಇಲ್ಲಿಗೆ ವರ್ಷದ ಹಿಂದೆ ಯಲಹಂಕ ಶಾಸಕ ವಿಶ್ವನಾಥ್ ತನ್ನ ಕ್ಷೇತ್ರದಲ್ಲಿ ಒಕ್ಕಲಿಗರ ಸಂಘಕ್ಕೆ ಹತ್ತೆಕರೆ ಭೂಮಿಯನ್ನು ಉಚಿತವಾಗಿ ನೀಡುತ್ತೇನೆಂದೂ ಅಲ್ಲಿ ಸಂಘ ವಿದ್ಯಾಸಂಸ್ಥೆಗಳನ್ನು ನಿರ್ಮಿಸಬೇಕೆಂದೂ ಅಧ್ಯಕ್ಷ ಕೆಂಚಪ್ಪಗೌಡನನ್ನು ಕೇಳಿಕೊಂಡರೆ ಆತ ಮಾತ್ರ ಯಲಹಂಕದತ್ತ ತಲೆಹಾಕಲೇ ಇಲ್ಲ. ಇದರರ್ಥ ಸಂಘಕ್ಕೆಂದು ಜನ ದಾನವಾಗಿ ಭೂಮಿ ಕೊಟ್ಟರೂ ಕೆಂಚಪ್ಪನ ದುಷ್ಟ ಕೂಟಕ್ಕದು ಬೇಕಿಲ್ಲ, ಏಕೆಂದರೆ ದಾನ ಕೊಟ್ಟ ಭೂಮಿಯಿಂದ ಸಂಘ ಉದ್ಧಾರವಾಗುತ್ತದೆಯೇ ಹೊರತು ಭೂಮಿ ಖರೀದಿಯ ನೆಪದಲ್ಲಿ ಕೋಟಿ ಕೋಟಿ ಲೂಟಿ ಸಾಧ್ಯವಿಲ್ಲವಲ್ಲ.

ಇದು ಕೆಂಚಪ್ಪ ಮತ್ತಾತನ ಭ್ರಷ್ಟ ತಂಡದ ಸಂಘ ನಿಷ್ಠೆ ಮತ್ತು ಕುಲಗೌರವಕ್ಕೆ ಕೆಲ ಸ್ಯಾಂಪಲ್ಲುಗಳಷ್ಟೆ. ಒಬ್ಬೇ ಒಬ್ಬ ಬಡ ಮಕ್ಕಳಿಗೆ ವಿದ್ಯಾರ್ಥಿಗಿಲ್ಲಿ ಉಚಿತ ಸೀಟು ದೊರಕುವುದಿಲ್ಲ, ಒಕ್ಕಲಿಗರ ಭೂಮಿಯನ್ನು ಕೆಐಎಡಿಬಿ, ಬಿಡಿಎಗಳು ಬೇಕಾಬಿಟ್ಟಿ ಕಿತ್ತುಕೊಂಡು ನೇಗಿಲ ಕುಲವನ್ನೇ ನಿರ್ನಾಮ ಮಾಡಲು ಹೊರಟಿದ್ದರೆ ಅದರ ವಿರುದ್ಧ ಸಂಘ ಕಾಟಾಚಾರಕ್ಕೂ ಸೊಲ್ಲೆತ್ತುವುದಿಲ್ಲ, ಒಕ್ಕಲಿಗರೇ ದಾನವಾಗಿ ಕೊಟ್ಟ ಜಮೀನನ್ನೇ ಬಿಲ್ಡರ್‌ಗಳಿಗೆ ಮಾರಿಕೊಳ್ಳುತ್ತಾರೆಂದರೆ, ಡ್ರಾಪೌಟ್ ಸೀಟು ಧಂದೆಗೆ ನಿಂತು ಸಂಘದ ಅಧ್ಯಕ್ಷನೇ ಯಃಕಃಶ್ಚಿತ್ ಕ್ರಿಮಿನಲ್‌ನಂತೆ ಪೊಲೀಸರಿಂದ ತಲೆಮರೆಸಿಕೊಂಡು ಓಡಾಡುತ್ತಾನೆಂದರೆ, ಇಂಥವನನ್ನೇ ಒಕ್ಕಲಿಗರು ಮತ್ತೆ ಗೆಲ್ಲಿಸಿದರೆಂದರೆ-

ಒಕ್ಕಲಿಗರ ಅವನತಿಗೆ ಯಾರು ತಾನೇ ಮರುಗಲು ಸಾಧ್ಯ?

ಮಂಡ್ಯ: ಇನ್ಶೂರೆನ್ಸ್ ಹಣಕ್ಕಾಗಿ ಮಾವನನ್ನೇ ಕೊಂದ ಕಿರಾತಕ

ಸುಳ್ಳನ್ನು ಬಹಳ ಕಾಲ ಮುಚ್ಚಿಡಲು ಸಾಧ್ಯವಿಲ್ಲ; ಎಂದಾದರೊಂದು ದಿನ ಸತ್ಯ ಹೊರಬರಲೇಬೇಕು ಎನ್ನುವಂತೆ ಪಾಂಡವಪುರ ತಾಲ್ಲೂಕಿನ ದೊಡ್ಡ ಬ್ಯಾಡರಹಳ್ಳಿಯ ನಿಂಗೇಗೌಡನ ಸಾವು ಸಂಭವಿಸಿದ್ದು ಅಪಘಾತದಲ್ಲಲ್ಲ ಬದಲಿಗೆ ಕೊಲೆಯಿಂದಾಗಿ ಎಂದು ಬಯಲಾಗಿದೆ. ಮೂರು ವರ್ಷಗಳ ಹಿಂದೆ ಇನ್ಶೂರೆನ್ಸ್ ಹಣಕ್ಕಾಗಿ ಸ್ವಂತ ಅಕ್ಕನ ಮಗನಿಂದಲೇ ಕೊಲೆಯಾಗಿದ್ದ ನಿಂಗರಾಜು ನಿಗೂಢ ಪ್ರಕರಣಕ್ಕೆ ಅನಾಮಧೇಯ ಪತ್ರವೊಂದು ಹಠಾತ್ ಟ್ವಿಸ್ಟ್ ನೀಡಿದೆ.

ಅನಾಮಧೇಯ ಪತ್ರ

ಈಗ್ಗೆ ಕೆಲ ದಿನಗಳ ಹಿಂದೆ ಮಂಡ್ಯ ಎಸ್ಪಿ ಭೂಷಣ್ ಜಿ. ಬೊರಸೆಯವರಿಗೆ ಅನಾಮಧೇಯ ಪತ್ರವೊಂದು ಬಂದಿತ್ತು. ಅದರಲ್ಲಿ ಮಂಡ್ಯ ತಾಲ್ಲೂಕು ಕೊತ್ತತ್ತಿ ಹೋಬಳಿಯ ನೊದೆಕೊಪ್ಪಲು ಗ್ರಾಮದ ಸಂತೋಷ್ ಕುಮಾರ್ ಎಂಬಾತ ತನ್ನ ಸ್ವಂತ ಸೋದರ ಮಾವನನ್ನೇ ಇನ್ಶೂರೆನ್ಸ್ ಹಣಕ್ಕಾಗಿ ಕೊಲೆ ಮಾಡಿ ಅಪಘಾತ ಎಂದು ಕಥೆ ಕಟ್ಟಿದ್ದಾನೆ ಎಂದು ತಿಳಿಸಲಾಗಿತ್ತು. ಅನಾಮಧೇಯ ಪತ್ರವಾದರೂ ಸತ್ಯದ ಎಳೆ ಇರಬಹುದೆಂದು ಎಸ್ಪಿ ಬೊರಸೆ ಮಂಡ್ಯ ಗ್ರಾಮಾಂತರ ಸಿಪಿಐ ಲೋಕೇಶ್ ಅವರನ್ನು ಕರೆಸಿ ವಿಚಾರಣೆ ನಡೆಸುವಂತೆ ಸೂಚಿಸಿದ್ದರು. ಅದರಂತೆ ನೊದೆಕೊಪ್ಪಲು ಗ್ರಾಮದ ಸಂತೋಷ್‌ನನ್ನು ಕರೆತಂದು ಸಿಪಿಐ ಲೋಕೇಶ್ ವಿಚಾರಣೆ ನಡೆಸಿದ ಸಂದರ್ಭದಲ್ಲಿ ಸಂತೋಷ್ ಅಪಘಾತದಿಂದಲೇ ತನ್ನ ಸೋದರಮಾವ ನಿಂಗರಾಜು ಸಾವನ್ನಪ್ಪಿದ್ದು ಎಂದು ಬೊಗಳುತ್ತಿದ್ದ. ಇವನು ಸುಲಭವಾಗಿ ಬಗ್ಗುವ ಆಸಾಮಿಯಲ್ಲ ಎಂದು ತಿಳಿದ ಲೋಕೇಶ್ ಹಗ್ಗ ಹಾಕುತ್ತಿದ್ದಂತೆಯೇ ನಿಂಗರಾಜು ಅಪಘಾತದಿಂದ ಸತ್ತಿದ್ದಲ್ಲ, ಬದಲಿಗೆ ಕೊಲೆಯಿಂದಾಗಿ ಎಂಬುದು ಬಟಾಬಯಲಾಗಿದೆ.

ಸೋದರ ಮಾವನಿಗೆ ಸ್ಕೆಚ್

ಹಣ ಬರುತ್ತೆ ಅಂದ್ರೆ ಹೆಣನೂ ಬಾಯ್ಬಿಡುತ್ತೆ ಅನ್ನೋ ಗಾದೆ ಮಾತಿದೆ. ಹಣದ ಮುಂದೆ ಅಣ್ಣ, ಅಮ್ಮ, ಅಕ್ಕ, ತಂಗಿ, ಮಾವ ಎನ್ನುವ ಸಂಬಂಧ ಲೆಕ್ಕಕ್ಕೆ ಇಲ್ಲವೆಂಬಂತಹ ನಿಲುವು ಸಂತೋಷ್‌ಕುಮಾರ್‌ನದ್ದು. ತನ್ನ ತಾಯಿಯ ತಮ್ಮ ನಿಂಗರಾಜುಗೆ ಬ್ಲಡ್ ಕ್ಯಾನ್ಸರ್ ಇದೆಯೆಂಬುದು ಗೊತ್ತಾಗಿದ್ದೇ ತಡ ಸಂತೋಷ್ ಮಾವನ ಹೆಸರಿನಲ್ಲಿ ಇನ್ಶೂರೆನ್ಸ್ ಪಾಲಿಸಿ ಮಾಡಿಸಿ ಆನಂತರ ಮಾವನನ್ನೇ ಅಮಾನವೀಯವಾಗಿ ಕೊಲೆ ಮಾಡಿದ್ದ ಕತೆ ಇದು.

ಪಾಂಡವಪುರ ತಾಲ್ಲೂಕಿನ ದೊಡ್ಡ ಬ್ಯಾಡರಹಳ್ಳಿ ಗ್ರಾಮದ ನಿಂಗರಾಜುಗೆ 19 ವರ್ಷಗಳ ಹಿಂದೆ ನಂಜನಗೂಡು ಮೂಲದ ಸರೋಜಮ್ಮನ ಜೊತೆ ವಿವಾಹವಾಗಿತ್ತು. ಎರಡು ಎಕರೆ ಜಮೀನಿದ್ದ ನಿಂಗರಾಜು ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ. ನಿಂಗರಾಜನ ಅಕ್ಕನನ್ನು ಮಂಡ್ಯ ತಾಲ್ಲೂಕು ಕೊತ್ತತ್ತಿ ಹೋಬಳಿಯ ನೊದೆಕೊಪ್ಪಲು ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿತ್ತು. ನಿಂಗರಾಜುವಿಗೆ ಏನಾದರೂ ಹಣಕಾಸಿನ ತೊಂದರೆಯಾದರೆ ಆತನ ಅಕ್ಕ ಹಾಗೂ ಭಾಮೈದ ಸಂತೋಷ್ ನೆರವಿಗೆ ಬರುತ್ತಿದ್ದರು. ಅಕ್ಕನ ಮನೆಯವರಿಗೆ ತೊಂದರೆಯಾದರೆ ತಮ್ಮ ನಿಂಗರಾಜು ಸಹಾಯಕ್ಕೆ ಮುಂದಾಗುತ್ತಿದ್ದ. ಎರಡೂ ಕುಟುಂಬಗಳು ಅನ್ಯೋನ್ಯತೆಯಿಂದ ಜೀವನ ನಡೆಸುತ್ತಿದ್ದವು.

ಬ್ಲಡ್ ಕ್ಯಾನ್ಸರ್

ತುಂಬ ಚೆನ್ನಾಗೇ ಇದ್ದ ನಿಂಗರಾಜುಗೆ ಈಗ್ಗೆರಡು ವರ್ಷಗಳ ಹಿಂದೆ ಬ್ಲಡ್‌ಕ್ಯಾನ್ಸರ್ ಕಾಣಿಸಿಕೊಂಡಿತು. ಇದರಿಂದಾಗಿ ಸುಖವಾಗಿದ್ದ ನಿಂಗರಾಜು ಕುಟುಂಬದಲ್ಲಿ ಆತಂಕದ ಕಾರ್ಮೋಡ ಕವಿಯಿತು. ತನಗೆ ವಾಸಿಯಾಗದ ರೋಗ ಬಂದಿದೆಯೆಂದು ಚಿಂತೆಗೆ ಬಿದ್ದ ನಿಂಗರಾಜು ದಿನೇ ದಿನೇ ಕೃಶವಾಗತೊಡಗಿದ. ಎಷ್ಟೇ ಖರ್ಚು ಮಾಡಿದರೂ ಯಾವುದೇ ಪ್ರಯೋಜನವಾಗಲಿಲ್ಲ. ತಮ್ಮ ನಿಂಗರಾಜರಿಗೆ ಕ್ಯಾನ್ಸರ್ ಬಂದದ್ದರಿಂದ ಚಿಂತೆಗೀಡಾದ ಅಕ್ಕ ಆತನ ಆರೈಕೆಗೆ ನಿಂತಿದ್ದರು. ಸೋದರಮಾವ ನಿಂಗರಾಜನನ್ನು ತೋರಿಸಲು ಭಾಮೈದ ಸಂತೋಷನೇ ಆಗಾಗ್ಗೆ ಮಂಡ್ಯ, ಬೆಂಗಳೂರು ಆಸ್ಪತ್ರೆಗಳಿಗೆ ತೆರಳುತ್ತಿದ್ದ.



ಅವನು ವಿಮಾ ಏಜೆಂಟ್ ಭಕ್ತೇಶ್

ಈ ಮಧ್ಯೆ ಸಂತೋಷನಿಗೆ ರಾಯಶೆಟ್ಟಿಪುರದ ಇನ್ಶೂರೆನ್ಸ್ ಏಜೆಂಟ್ ಭಕ್ತೇಶ್ ಎಂಬಾತ ಪರಿಚಯವಾಗಿದ್ದ. ತನ್ನ ಸೋದರಮಾವನಿಗೆ ಕ್ಯಾನ್ಸರ್ ಇರುವುದನ್ನು ಭಕ್ತೇಶ್ ಬಳಿ ಸಂತೋಷ್ ಹೇಳಿಕೊಂಡಿದ್ದ. ಆಗ ವಿಮಾ ಏಜೆಂಟ್ ಭಕ್ತೇಶನಿಗೆ ಕ್ಯಾನ್ಸರ್‌ನಿಂದ ಶೀಘ್ರ ಸಾವನ್ನಪ್ಪುವ ಸಂತೋಷನ ಮಾವ ನಿಂಗರಾಜು ಹೆಸರಲ್ಲಿ ಇನ್ಶೂರೆನ್ಸ್ ಮಾಡಿಸಿ ಅದನ್ನು ಲಪಟಾಯಿಸುವ ಪ್ಲಾನ್ ಹೊಳೆದಿದೆ. ಕೂಡಲೇ ಸಂತೋಷನಿಗೆ ತನ್ನ ಪ್ಲಾನ್ ಬಗ್ಗೆ ಭಕ್ತೇಶ್ ವಿವರಿಸಿದ್ದಾನೆ. ಅದರಂತೆ ರಿಲಾಯನ್ಸ್‌ನ ಎರಡು ಪಾಲಿಸಿ ಹಾಗೂ ಬಜಾಜ್‌ನಲ್ಲಿ ಒಂದು ಇನ್ಶೂರೆನ್ಸ್ ಪಾಲಿಸಿ ಮಾಡಿಸಲು ಪ್ಲಾನ್ ರೆಡಿಯಾಯಿತು. ಪ್ಲಾನ್ ಪ್ರಕಾರ ಡಿಸೆಂಬರ್ 10, 2009ರಂದು ಮಾವ ನಿಂಗರಾಜರನ್ನು ಕರೆತಂದ ಸಂತೋಷ್ ಮೂರು ಪಾಲಿಸಿಗಳಿಗೆ ತಲಾ 50 ಸಾವಿರದಂತೆ 1.50 ಲಕ್ಷ ಹಣವನ್ನು ತಾನೇ ಪಾವತಿಸಿದ್ದ. ರಿಲಾಯನ್ಸ್‌ನ ಎರಡು ಇನ್ಶೂರೆನ್ಸ್‌ಗಳಿಗೆ ಸಂತೋಷ್ ನಾಮಿನಿಯಾದರೆ, ಬಜಾಜ್ ಇನ್ಶೂರೆನ್ಸ್‌ಗೆ ತನ್ನ ತಮ್ಮನನ್ನು ಸಂತೋಷ್ ನಾಮಿನಿ ಮಾಡಿಸಿದ. ಮೂರು ಪಾಲಿಸಿಗಳಿಗೆ ನಿಂಗರಾಜು ಪತ್ನಿ ಸರೋಜಮ್ಮಳನ್ನು ನಾಮಿನಿ ಮಾಡದ ಸಂತೋಷ್ ಹೀಗೇಕೆ ಮಾಡಿದ ಎಂಬುದು ಆಗ ತಿಳಿಯಲಿಲ್ಲ.

ರೆಡಿಯಾಯ್ತು ಸ್ಕೆಚ್

ಪ್ಲಾನ್ ಪ್ರಕಾರ ಇನ್ಶೂರೆನ್ಸ್ ಪಾಲಿಸಿ ಮಾಡಿಸಿದ್ದಾಯಿತು. ಮಾವ ನಿಂಗರಾಜು ತೀರಿಕೊಂಡ ಕೂಡಲೇ ಬರುವ ಇನ್ಶೂರೆನ್ಸ್ ಹಣವನ್ನು ನೆನೆದು ರೋಮಾಂಚಿತನಾಗುತ್ತಿದ್ದ ಸಂತೋಷ್ ದಿನಗಳನ್ನು ಲೆಕ್ಕಹಾಕುತ್ತಿದ್ದ. ಮಾವ ನಿಂಗರಾಜನನ್ನು ಆಗಾಗ್ಗೆ ಆಸ್ಪತ್ರೆಗೆ ತೋರಿಸಲು ಸಂತೋಷ್‌ನೇ ಕರೆದುಕೊಂಡು ಹೋಗುತ್ತಿದ್ದ. ಈ ಮಧ್ಯೆ ನಿಂಗರಾಜು ಸಾಯುವವರೆಗೆ ಕಾಯದ ಸಂತೋಷ್‌ನಿಗೆ ಬೇಗ ಇನ್ಶೂರೆನ್ಸ್ ಹಣ ನೋಡುವ ದುರಾಸೆ ಹುಟ್ಟಿಕೊಂಡಿತು. ಆದಕ್ಕಾಗಿ ತನ್ನ ಮಾವ ನಿಂಗರಾಜನನ್ನೇ ಮುಗಿಸಿದರೆ ಹೇಗೆ? ಎಂದು ಯೋಚಿಸಿದ ಸಂತೋಷ್ ಸ್ನೇಹಿತರಾದ ಸುಂಡಹಳ್ಳಿಯ ಮಲ್ಲೇಶ್, ನೊದೆಕೊಪ್ಪಲಿನ ಸ್ವಾಮಿ, ಬ್ಯಾಡರಹಳ್ಳಿ ನಾಗಣ್ಣ ಹಾಗೂ ಭಕ್ತೇಶ್‌ಗೆ ಹಣ ನೀಡುವ ಆಸೆ ಹುಟ್ಟಿಸಿ ಸ್ಕೆಚ್ ರೂಪಿಸಿದ. ಅದರಂತೆ ಮಾವ ನಿಂಗರಾಜುನನ್ನು ಅಪಘಾತದಲ್ಲಿ ಸಾಯಿಸಿದರೆ ಯಾರಿಗೂ ಅನುಮಾನ ಬರುವುದಿಲ್ಲವೆಂದು ಐವರು ಸೇರಿ ಸ್ಕೆಚ್ ರೆಡಿ ಮಾಡಿದರು.

ಮಾವ ನಿಂಗರಾಜು ಮುಗಿಸಲು ಸಂತೋಷ್ 2010ರ ಜನವರಿ 31ರಂದು ಮುಹೂರ್ತ ಫಿಕ್ಸ್ ಮಾಡಿದ. ಸ್ಕೆಚ್ ಪ್ರಕಾರ ಅಂದು ಸಂಜೆ ನಿಂಗರಾಜುವನ್ನು ಆಸ್ಪತ್ರೆಗೆ ತೋರಿಸಲು ಸಂತೋಷ್ ತನ್ನ ಸ್ನೇಹಿತ ಮಲ್ಲೇಶನ ಜೊತೆ ಮಂಡ್ಯಕ್ಕೆ ಕರೆದುಕೊಂಡು ಬಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ನಂತರ ರಾತ್ರಿ 11ರ ಸುಮಾರಿಗೆ ದೊಡ್ಡ ಬ್ಯಾಡರಹಳ್ಳಿಗೆ ಕರೆದುಕೊಂಡು ಹೋಗುವುದಿತ್ತು. ಮಾರ್ಗಮಧ್ಯೆ ತೂಬಿನಕೆರೆ ಹೆಲಿಪ್ಯಾಡ್ ಬಳಿ ಸಂತೋಷ್ ಮೂತ್ರ ವಿಸರ್ಜಿಸುವ ಸಲುವಾಗಿ ಬೈಕ್ ನಿಲ್ಲಿಸಿದ. ಏನೂ ಅರಿಯದ ನಿಂಗರಾಜು ಕೂಡ ಬೈಕ್ ಇಳಿದು ರಸ್ತೆ ಪಕ್ಕ ನಿಂತಿದ್ದ. ಕೂಡಲೇ ಮಲ್ಲೇಶ ಆತನನ್ನು ರಸ್ತೆಗೆ ತಳ್ಳಿದ. ಕ್ಯಾನ್ಸರ್‌ನಿಂದ ಕೃಶನಾಗಿದ್ದ ನಿಂಗರಾಜು ರಸ್ತೆಗೆ ಬಿದ್ದ ಕೂಡಲೇ ಸ್ಕೆಚ್‌ನಂತೆ ನೊದೆಕೊಪ್ಪಲಿನ ಸ್ವಾಮಿ ಹಿಂದಿನಿಂದ ವೇಗವಾಗಿ ಗೂಡ್ಸ್ ಆಟೋವನ್ನು ನಿಂಗರಾಜು ಮೈಮೇಲೆ ಹತ್ತಿಸಿದ. ಮೊದಲೇ ಕಾಯಿಲೆಯಿಂದ ಬಳಲುತ್ತಿದ್ದ ನಿಂಗರಾಜು ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಗೋಣುಚೆಲ್ಲಿದ.

ತಕ್ಷಣ ಸಂತೋಷ್ ತನ್ನ ಬೈಕ್‌ನ ಮುಂಬದಿಯನ್ನು ಕಲ್ಲಿನಿಂದ ಜಜ್ಜಿದ್ದಲ್ಲದೆ, ತಾನೇ ಮೈ ಕೈ ತರಚಿಕೊಂಡು ಅಪಘಾತದಿಂದಾದ ಗಾಯವೆಂಬಂತೆ ಬಿಂಬಿಸಿದ. ಪ್ಲಾನ್ ಪ್ರಕಾರ ಬೈಕ್‌ನಲ್ಲಿ ಅಲ್ಲಿಗೆ ಬಂದ ಬ್ಯಾಡರಹಳ್ಳಿ ನಾಗಣ್ಣ ತಕ್ಷಣ ಸಂತೋಷ್‌ನನ್ನು ಆಸ್ಪತ್ರೆಗೆ ಸಾಗಿಸಿ, ನಿಂಗರಾಜು ಅಪಘಾತದಲ್ಲಿ ಸಾವನ್ನಪ್ಪಿದ ಎಂದು ಗ್ರಾಮಕ್ಕೆ ಸುದ್ದಿ ಮುಟ್ಟಿಸಿದ. ಸಂತೋಷ್‌ನ ಪೋಷಕರಿಗೂ ಫೋನ್ ಮಾಡಿ ವಿಷಯ ತಿಳಿಸಿದ ನಾಗಣ್ಣ ಪೊಲೀಸರ ಮುಂದೆಯೂ ದೂರಿನಲ್ಲಿ ಅಪಘಾತವಾಯಿತೆಂದು ತಿಳಿಸಿದ್ದ. ಅಪಘಾತ ಪ್ರಕರಣದ ವಿಚಾರಣೆ ನಡೆದು 2011ರ ಏಪ್ರಿಲ್‌ನಲ್ಲಿ ಕೋರ್ಟಿನಲ್ಲಿ ಕೇಸು ಕೂಡ ಮುಗಿದು ಹೋಗಿತ್ತು.

ಇನ್ಶೂರೆನ್ಸ್ ಹಣ

ಅಪಘಾತದಲ್ಲಿ ಸೋದರ ಮಾವ ನಿಂಗರಾಜುನನ್ನು ಮುಗಿಸಿದ್ದಾಯ್ತು, ಕೋರ್ಟಿನಲ್ಲಿ ಕೇಸು ಕೂಡ ಮುಗಿದಿದ್ದರಿಂದ ಸಂತೋಷ್, ವಿಮಾ ಏಜೆಂಟ್ ಭಕ್ತೇಶ್ ಸೇರಿ ಇನ್ಶೂರೆನ್ಸ್ ಹಣ ಹೊಡೆಯಲು ಸಿದ್ಧರಾದರು. ಭಕ್ತೇಶನೇ ಎಲ್ಲಾ ಪತ್ರಗಳನ್ನು ರೆಡಿಮಾಡಿಸಿದ. ಅದರಂತೆ ರಿಲಾಯನ್ಸ್‌ನ ಎರಡು ಪಾಲಿಸಿಗಳಿಂದ 29,58,800 ರೂ.ಗಳು ಹಾಗೂ ಬಜಾಜ್ ಕಂಪನಿಯ ಒಂದು ಪಾಲಿಸಿಯಿಂದ ಐದು ಲಕ್ಷ... ಒಟ್ಟು 34,85,800 ರೂ.ಗಳ ವಿಮಾ ಹಣವನ್ನು ಪಡೆದರು. ಆ ಹಣದಲ್ಲಿ ಮಾವ ನಿಂಗರಾಜು ಪತ್ನಿ ಸರೋಜಮ್ಮಳಿಗೆ 12.40 ಲಕ್ಷ, ಮಲ್ಲೇಶನಿಗೆ 1.4 ಲಕ್ಷ, ಸ್ವಾಮಿಗೆ 1 ಲಕ್ಷ, ನಾಗಣ್ಣನಿಗೆ 3 ಲಕ್ಷ, ವಿಮಾ ಏಜೆಂಟ್ ಭಕ್ತೇಶನಿಗೆ 5 ಲಕ್ಷ ಕೊಟ್ಟ ಸಂತೋಷ್ ಉಳಿದ 12 ಲಕ್ಷಕ್ಕೂ ಹೆಚ್ಚು ಹಣವನ್ನು ತಾನೇ ಇಟ್ಟುಕೊಂಡಿದ್ದ.

ಸ್ವಿಫ್ಟ್ ಕಾರು ಕೊಂಡ

ಮಾವ ನಿಂಗರಾಜುನನ್ನು ಮುಗಿಸಿದ ನಂತರ ಬಂದ ಇನ್ಶೂರೆನ್ಸ್ ಹಣದಲ್ಲಿ ಸಂತೋಷ್ ದಿಲ್ದಾರ್ ಆಗಿ ಜೀವನ ನಡೆಸಲಾರಂಭಿಸಿದ. ಊರಿನಲ್ಲಿ ಕೋಳಿ ಫಾರಂ ಮಾಡಿದ್ದಲ್ಲದೆ ಓಡಾಡಲು ಮಾರುತಿ ಸ್ವಿಫ್ಟ್ ಕಾರು ತೆಗೆದುಕೊಂಡಿದ್ದ. ಕೈಗೆ ಉಂಗುರಗಳು, ಬ್ರೇಸ್‌ಲೆಟ್, ಕತ್ತಿಗೆ ಚಿನ್ನದ ಚೈನು ಹಾಕಿಕೊಂಡು ಸುತ್ತಲಾರಂಭಿಸಿದ. ಸಂತೋಷನ ಶೋಕಿ ಕಂಡ ಊರ ಜನ ಆತನ ಹಣಕಾಸಿನ ಬಗ್ಗೆ ಅನುಮಾನಗೊಂಡಿದ್ದರು. ಈ ಮಧ್ಯೆ ಮಾಸ್ಟರ್ ಮೈಂಡ್ ಆಗಿದ್ದ ವಿಮಾ ಏಜೆಂಟ್ ಭಕ್ತೇಶ್ ಹಣ ಹಂಚಿಕೊಂಡ ಒಂದೇ ವರ್ಷಕ್ಕೆ ಹೃದಯಾಘಾತವಾಗಿ ಸಾವನ್ನಪ್ಪಿದ. ಭಕ್ತೇಶನಿಗೆ ದೇವರು ಸರಿಯಾದ ಶಿಕ್ಷೆಯನ್ನೇ ಕೊಟ್ಟಿದ್ದ ಎಂದುಕೊಳ್ಳುತ್ತಿರುವಾಗಲೇ ಉಳಿದವರ ಮಧ್ಯೆಯೂ ದ್ವೇಷ ತಂದಿಟ್ಟಿದ್ದ.

ಹಣ ಹಂಚಿಕೆ ಸರಿಯಾಗಿಲ್ಲವೆಂದು ವರಾತ ತೆಗೆದ ಸ್ವಾಮಿ ಮತ್ತು ಮಲ್ಲೇಶ್ ಸಮನಾಗಿ ಹಣ ಹಂಚುವಂತೆ ಸಂತೋಷನಿಗೆ ಅಟಕಾಯಿಸಿಕೊಂಡಿದ್ದರು. ಇದಕ್ಕೆ ಸಂತೋಷ್ ಒಪ್ಪದ್ದರಿಂದ ಇವರ ಮಧ್ಯೆ ಕಿತ್ತಾಟ ಕೂಡ ನಡೆದಿತ್ತು. ಆಗ ಸಂತೋಷನ ಹಣಕಾಸಿನ ಕಿತ್ತಾಟದ ಬಗ್ಗೆ ಗೊತ್ತಿದ್ದ ವ್ಯಕ್ತಿಯೊಬ್ಬ ಮಂಡ್ಯ ಎಸ್ಪಿ ಭೂಷಣ್ ಬೊರಸೆ ಹಾಗೂ ಮಂಡ್ಯ ಗ್ರಾಮಾಂತರ ಠಾಣೆಗೆ ಅನಾಮಧೇಯ ಪತ್ರ ಬರೆದು ದೊಡ್ಡಬ್ಯಾಡರಹಳ್ಳಿಯ ನಿಂಗರಾಜು ಅಪಘಾತದಿಂದ ಸತ್ತಿದ್ದಲ್ಲ, ಬದಲಿಗೆ ಸಂತೋಷ್ ಮತ್ತು ಸ್ನೇಹಿತರು ಮಾಡಿರುವ ಕೊಲೆ ಎಂದು ತಿಳಿಸಿದ್ದ. ಅನಾಮಧೇಯ ಪತ್ರದ ಜಾಡು ಹಿಡಿದ ಮಂಡ್ಯ ಗ್ರಾಮಾಂತರ ಠಾಣೆಯ ಪಿಎಸ್ಐ ಲೋಕೇಶ್ ನೊದೆಕೊಪ್ಪಲು ಗ್ರಾಮದ ಸಂತೋಷ್‌ನನ್ನು ತಂದು ಹಗ್ಗಹಾಕಿ ಸತ್ಯವನ್ನು ಬಾಯಿಬಿಡಿಸಲಾಗಿ ಆತ ಇನ್ಶೂರೆನ್ಸ್ ಹಣಕ್ಕಾಗಿ ಈ ಕೊಲೆ ಮಾಡಿದ್ದು ನಾನೇ ಎಂಬುದಾಗಿ ಒಪ್ಪಿಕೊಂಡಿದ್ದಾನೆ.

ಈಗ ಸಂತೋಷ್, ಸ್ವಾಮಿ, ಮಲ್ಲೇಶ್, ನಾಗಣ್ಣನನ್ನು ಬಂಧಿಸಿರುವ ಸಿಪಿಐ ಲೋಕೇಶ್ ಎಲ್ಲರನ್ನು ಮಂಡ್ಯ ಜೈಲಿಗೆ ಬಿಟ್ಟು ಬಂದಿದ್ದಾರೆ. ಇನ್ಶೂರೆನ್ಸ್ ಹಣಕ್ಕಾಗಿ ಸ್ವಂತ ಸೋದರಮಾವನನ್ನೇ ಕೊಲೆಮಾಡಿದ ಸಂತೋಷನ ಪೈಶಾಚಿಕ ಕೃತ್ಯ ಕಂಡು ನೊದೆಕೊಪ್ಪಲು ಹಾಗೂ ದೊಡ್ಡಬ್ಯಾಡರಹಳ್ಳಿಯ ಜನ ಬೆಚ್ಚಿಬಿದ್ದಿದ್ದಾರೆ. ಸ್ವಂತ ರಕ್ತ ಸಂಬಂಧಿಯೇ ಈ ರೀತಿ ಕೊಲೆ ಮಾಡಿದರೆ ನಂಬೋದು ಯಾರನ್ನು ಎಂದು ಜಿಲ್ಲೆಯ ಜನ ಅಂದುಕೊಳ್ಳುತ್ತಿರುವ ಸಂದರ್ಭದಲ್ಲಿಯೇ ಅನಾಮಧೇಯ ಪತ್ರ ಬರೆದವನ್ಯಾರು ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ.

- ನಾಗೇಶ

ಕಂಡಹಾಗೆ...

03

ಭೇಟಿ ಆಗಿದ್ದು ಅದೇ ಕೊನೆ ಬಾರಿ. ಅಷ್ಟು ಹೊತ್ತಿಗೆ ಅವರ ಆರೋಗ್ಯ ಕೈಕೊಡಲಾರಂಭಿಸಿತ್ತು, ವಯಸ್ಸೂ ಹೆಚ್ಚಾಗಿತ್ತು, ಪರಿಣಾಮವಾಗಿ ತಂದೆ ಆಗುವ ಅವರ ಕನಸು ನಶಿಸಿತ್ತು. "ನನ್ನ ಸಹೋದರಿಯರ ಪುತ್ರನೊಬ್ಬನನ್ನು ನನ್ನ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಬೇಕು. ಆದರೆ ಅವರೆಲ್ಲ ಇನ್ನೂ ಚಿಕ್ಕವರು. ಯಾರೂ ಈ ಸ್ಥಾನಕ್ಕೆ ಬೇಕಾದ ಗಾಂಭೀರ್ಯತೆಯನ್ನು ಇನ್ನೂ ಮೈಗೂಡಿಸಿಕೊಂಡಿಲ್ಲ. ಅದಕ್ಕಿಂತ ಮುಖ್ಯವಾಗಿ ಒಬ್ಬರ ಮಗನನ್ನು ಆಯ್ಕೆ ಮಾಡಿದರೆ ಇತರೆ ಸಹೋದರಿಯರು ಬೇಜಾರು ಮಾಡಿಕೊಳ್ಳುತ್ತಾರೆ. ಅದಕ್ಕೆ ಆ ಉಸಾಬರಿಗೆ ಹೋಗದೆ ಸದ್ಯಕ್ಕೆ ಸುಮ್ಮನಾಗಿದ್ದೇನೆ" ಎಂದಿದ್ದರು ಶ್ರೀಕಂಠದತ್ತ ಅವರು.

ಇವತ್ತು ಮತ್ತೊರ್ವ ಮಾಜಿ 'ರಾಜವಂಶ'ದ ವಸುಂಧರ ರಾಜೆ ಎರಡನೇ ಬಾರಿಗೆ ರಾಜಸ್ಥಾನದ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಲು ಸಜ್ಜಾಗಿದ್ದಾರೆ. ಅದೇ 'ರಾಜಮನೆತನ'ದ ಯುವಕ ಜ್ಯೋತಿರಾದಿತ್ಯ ಸಿಂಧಿಯಾ ಕೇಂದ್ರದಲ್ಲಿ ಸಚಿವನಾಗಿದ್ದಾನೆ. ಇನ್ನೂ ಅದೆಷ್ಟೋ ಮಾಜಿ ರಾಜವಂಶದ ಕುಡಿಗಳು ಅಧಿಕಾರದ ಗದ್ದುಗೆಯಲ್ಲಿದ್ದಾರೆ. ಆದರೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ನಾಲ್ಕು ಬಾರಿ ಸಂಸದರಾದರೇ ಹೊರತು ಅದಕ್ಕಿಂತ ಹೆಚ್ಚಿನದ್ದನ್ನು ಸಾಧಿಸಲು ಅವರಿಂದಾಗಲಿಲ್ಲ. ಅದಕ್ಕೆ ಕಾರಣ ಅವರು ಸರಳತೆಯೋ, ಸೋಂಭೇರಿತನವೋ, ಕುಟಿಲತೆಯ ಅಭಾವವೋ, ಅಥವಾ ಇವೆಲ್ಲವೂ ಆಗಿದ್ದಿರಬಹುದು.

ನನಗನ್ನಿಸುತ್ತೆ, ಅವರು ರಾಜಕೀಯ ಪ್ರವೇಶಿಸಿದ್ದೇ ಆಕಸ್ಮಿಕವಾಗಿ. ಇಂದಿರಾ ಗಾಂಧಿಯ ಹತ್ಯೆಯ ನಂತರ ರಾಜೀವ್ ಗಾಂಧಿ ಹೊಸ ಮುಖಗಳಿಗೆ ತಲಾಶ್ ನಡೆಸುತ್ತಿದ್ದರು. ಆಗ ಮೈಸೂರಿನಿಂದ ಸಂಸದರಾಗಿದ್ದವರು ಎಂ. ರಾಜಶೇಖರ ಮೂರ್ತಿ ಎಂಬ ಹಳೇ ಕಾಂಗ್ರೆಸ್ ಹುಲಿ. ಮೂರ್ತಿಯವರು ರಾಜೀವ್ ಗಾಂಧಿಯ ಮುಂದೆ ಡೊಗ್ಗು ಸಲಾಮು ಹೊಡೆಯುವ ಆಸಾಮಿ ಆಗಿರಲಿಲ್ಲ. ಆಗ ರಾಜೀವ್ ಗಾಂಧಿಯ ಕಣ್ಣಿಗೆ ಬಿದ್ದದ್ದು ಶ್ರೀಕಂಠದತ್ತ ಅವರು. ರಾಜೀವ್ ಗಾಂಧಿಯ ಕೋರಿಕೆ ಮೇರೆಗೆ ಶ್ರೀಕಂಠದತ್ತ ಅವರು ಚುನಾವಣಾ ಕಣವನ್ನು ಪ್ರವೇಶಿಸಿದರು. ರಾಜಮನೆತನದ ಬಗ್ಗೆ ಮೈಸೂರಿಗರಿಗೆ ಇದ್ದ ವಿಶ್ವಾಸದಿಂದಾಗಿ ಜನ ಶ್ರೀಕಂಠದತ್ತ ಅವರನ್ನು ಪ್ರಥಮ ಬಾರಿಗೆ 1984ರಲ್ಲಿ ಗೆಲ್ಲಿಸಿದರು. ಮುಂದಿನ 1989ರ ಚುನಾವಣೆಯಲ್ಲೂ ಶ್ರೀಕಂಠದತ್ತ ಅವರು ಗೆದ್ದರೂ ಕಾಂಗ್ರೆಸ್ ಸೋತು ವಿ.ಪಿ. ಸಿಂಗ್ ಪ್ರಧಾನಿ ಆದರು. ಆದಾದ ಎರಡು ವರ್ಷಗಳಲ್ಲಿ ಮತ್ತೆ ಚುನಾವಣೆಗಳು ಎದುರಾದಾಗ ಶ್ರೀಕಂಠದತ್ತ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದರು. ಆದರೆ ಚುನಾವಣೆ ಹತ್ತಿರವಾಗುತ್ತಿದ್ದಂತೆ ರಾಜೀವ್ ಗಾಂಧಿಯ ಹತ್ಯೆ ನಡೆಯಿತು. ಆಗ ಕಾಂಗ್ರೆಸ್ ಪರವಾಗಿ ಉದ್ಭವಿಸಿದ ಅನುಕಂಪದ ಅಲೆಯಲ್ಲಿ ಶ್ರೀಕಂಠದತ್ತ ಅವರು ಕೊಚ್ಚಿ ಹೋದರು.


1996ರಲ್ಲಿ ಶ್ರೀಕಂಠದತ್ತ ಅವರು ಕಾಂಗ್ರೆಸ್‌ಗೆ ಹಿಂದಿರುಗಿ ಚುನಾವಣೆಯಲ್ಲಿ ಗೆದ್ದರೂ ಕೇಂದ್ರದಲ್ಲಿ ದೇವೇಗೌಡರ ನೇತೃತ್ವದಲ್ಲಿ ತೃತೀಯ ರಂಗ ಅಧಿಕಾರಕ್ಕೆ ಬಂತು. ಅದೇ ಹೊತ್ತಿಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಜನತಾದಳದ ಜೆ.ಎಚ್.ಪಟೇಲ್ ಶ್ರೀಕಂಠದತ್ತ ಅವರ ಕುಟುಂಬಕ್ಕೆ ಸೇರಿದ್ದ ಬೆಂಗಳೂರಿನ ಅರಮನೆಯನ್ನು ರಾಜ್ಯದ ಸ್ವತ್ತಾಗಿ ಪಡೆಯಲು ಮುಂದಾದರು. ಆಗ ಶ್ರೀಕಂಠದತ್ತ ಅವರು ತಮ್ಮ ರಾಜಕೀಯ ಪ್ರಭಾವವನ್ನು ಬೀರಿ ತಮ್ಮ ಆಸ್ತಿಯನ್ನು ಕಾಪಾಡಿಕೊಳ್ಳಲು ಯತ್ನಿಸಿದರಾದರೂ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಆ ವ್ಯಾಜ್ಯ ಇನ್ನೂ ನ್ಯಾಯಾಲಯದ ಮುಂದೆ ಇದೆ. 1998ರ ಚುನಾವಣೆಯಲ್ಲಿ ಬಿಜೆಪಿಯ ವಿಜಯಶಂಕರ್ ಅವರ ಮುಂದೆ ಶ್ರೀಕಂಠದತ್ತ ಅವರು ಸೋತರೂ ಮರು ವರ್ಷ ಗೆದ್ದರು. ಆದರೆ ಅವರ ದುರಾದೃಷ್ಟಕ್ಕೆ ಆಗ ಬಿಜೆಪಿಯ ವಾಜಪೇಯಿ ಪ್ರಧಾನಿ ಆದರು.

ರಾಜಕೀಯದಲ್ಲಿದ್ದರೂ ತನ್ನಿಂದ ಏನೂ ಸಾಧ್ಯವಾಗುತ್ತಿಲ್ಲ ಎಂದು ಅರಿತೋ ಏನೋ ಆದಾದ ನಂತರ ಶ್ರೀಕಂಠದತ್ತ ಅವರು ಚುನಾವಣಾ ರಾಜಕೀಯದಿಂದಲೇ ಹೊರಗುಳಿದರು. ಆ ನಂತರ ರಾಜಕೀಯದ ಬದಲಾಗಿ ರೇಷ್ಮೆ ಸೀರೆ, ಫ್ಯಾಷನ್, ಹೋಟೆಲ್ ಉದ್ಯಮ, ಇತ್ಯಾದಿ ವಲಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆದರೆ ಅದ್ಯಾವುದರಲ್ಲೂ ಅವರು ಹೆಚ್ಚಿನ ಯಶಸ್ಸನ್ನು ಕಾಣಲಿಲ್ಲ. ಇತ್ತೀಚೆಗೆ ಅವರು ಹೆಚ್ಚು ಸುದ್ದಿ ಮಾಡಿದ್ದು ಮೈಸೂರು ಅರಮನೆಯ ಸೌಂಡ್ ಅಂಡ್ ಲೈಟ್ ಶೋ ಕಾರ್ಯಕ್ರಮದಲ್ಲಿ ತಮ್ಮ ಕುಟುಂಬಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿಲ್ಲ ಎಂಬ ಕ್ಷುಲ್ಲಕ ಕಾರಣಕ್ಕೆ.

ವಿವಿಧ ಕಾಲಘಟ್ಟಗಳಲ್ಲಿ ಅಮಾಯಕನಂತೆಯೂ, ಮುಗ್ಧನಂತೆಯೂ, ಹುಂಬನಂತೆಯೂ ವರ್ತಿಸಿದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಓರ್ವ ಸಜ್ಜನ, ಸರಳ ಮನುಷ್ಯ ಎಂದರೆ ಕೆಲವರಿಗೆ ಅಚ್ಚರಿಯಾದರೂ ಅದು ನಾನು ಕಂಡಿದ್ದ ವ್ಯಕ್ತಿತ್ವ.

ಇಂತಹ ಸರಳ, ಸಜ್ಜನನಿಗೆ ವಿದಾಯ...

ಕರವೇ ಮತ್ತು 22 ಮಂದಿ ಕಳ್ಳರು!


ಪೊಲೀಸರ ವಶದಲ್ಲಿರುವ ಕರವೇ ಜಿಲ್ಲಾಧ್ಯಕ್ಷ ಅಂಬರೀಷ

ಅಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರ ...ಯಂತೆಯೇ ದೇವನಹಳ್ಳಿಯಲ್ಲಿ 'ಕರವೇ ಮತ್ತು 22 ...ಂದಿ ಕದೀಮರು' ಎನ್ನುವ ಹೊಸ ಕಥೆ ಹುಟ್ಟಿಕೊಂಡಿದೆ. ...ಡಪರ ಹೋರಾಟ ಮಾಡ್ತೀವಿ ಅಂತ ಹಳದಿ-ಕೆಂಪು ...ಲು ಸುತ್ತಿಕೊಂಡು, ರಸ್ತೆ ದರೋಡೆ ಮಾಡಲು ಹೋಗಿ ...ಮಸ್ಥರಿಂದಲೇ ಗೂಸಾ ತಿಂದು ಕಂಬಿಗಳ ಕೌಂಟು ...ಣುತ್ತಿರುವ ದಗಲ್ಬಾಜಿಗಳ ರಾದ್ಧಾಂತ ಇದು.

ದೇವನಹಳ್ಳಿಯ ತೈಲಗೆರೆ ಬಳಿ ರಾತ್ರಿ ಸುಮಾರು ...ತ್ತು ಗಂಟೆಯ ವೇಳೆ ಹೆದ್ದಾರಿಗೆ ಅಡ್ಡ ನಿಂತ 22 ...ದೀಮರ ತಂಡವೊಂದು ಹೋಗಿ-ಬರುತ್ತಿದ್ದ ಲಾರಿಗಳನ್ನೆಲ್ಲ ...ಡು ಧಮಕಿ ಹಾಕಿ ಹಣ ವಸೂಲಿ ಮಾಡುತ್ತಿತ್ತು. ...ಣ ಕೊಡದ ಲಾರಿ ಡ್ರೈವರ್‌ಗಳನ್ನು ಮುಲಾಜಿಲ್ಲದೆ ...ಗಿಳಿಸಿ ಬಡಿಯುತ್ತಿದ್ದ ಅವರದು ಅಕ್ಷರಶಃ ದರೋಡೆ. ...ಯ ರಸ್ತೆಯಲ್ಲೇ ನಡೆಯುತ್ತಿದ್ದ ಈ ದೌರ್ಜನ್ಯ ಕಂಡು ...ಟ್ಟಿಗೆದ್ದ ಗ್ರಾಮಸ್ಥರು, ಗಟ್ಟಿ ಧೈರ್ಯ ಮಾಡಿ ಅವರನ್ನೆಲ್ಲಾ ...ಗ್ಗಾ-ಮುಗ್ಗಾ ಥಳಿಸಿ ರೂಮೊಂದರಲ್ಲಿ ಕೂಡಿಹಾಕಿ ನಂತರ ...ಲೀಸರಿಗೂ ಒಪ್ಪಿಸಿದ್ದಾರೆ. ಸದ್ಯ ಆ 22 ಮಂದಿಯೂ ...ಪ್ಪನ ಅಗ್ರಹಾರದ ಜೈಲಲ್ಲಿ ಮುದ್ದೆ ಮುರಿಯುತ್ತಿದ್ದಾರೆ. ...ದಹಾಗೆ, ಲಜ್ಜೆಗೆಟ್ಟು ದರೋಡೆಗಿಳಿದ ಅವರೆಲ್ಲಾ ...ರಾಯಣಗೌಡ ಬಣದ ಕರವೇ ಕಾರ್ಯಕರ್ತರು!

ಶಕ್ತಿಶಾಲಿಯಾದದ್ದೆಲ್ಲವೂ ದಬ್ಬಾಳಿಕೆಗೆ ಸೂಕ್ತ ಎಂಬ ... ಓಲ್ಡ್ ಸೂತ್ರಕ್ಕೆ ಜಾಣಗೆರೆಯವರ ಕರವೇ ಬಲಿಯಾಗಿ ...ಷ್ಟಾವ ಕಾಲವೇ ಆಗಿ ಹೋಗಿದೆ. 'ಸಮರಕ್ಕೂ ಸೈ' ...ನ್ನುವ ಹೋರಾಟದ ಕಹಳೆಯನ್ನು ಪುಂಡ 'ಒರಟ'ಗಾರರು ...ಮ್ಮ ದಂಧೆಗಳಿಗೆ ಬೆಂಗಾವಲಾಗಿ ಬಳಸಿಕೊಳ್ಳುತ್ತಿದ್ದಾರೆನ್ನು ...ದಕ್ಕೆ ಈ ಘಟನೆಯೇ ಸಾಕ್ಷಿ. ನಾರಾಯಣಗೌಡ ಬಣದ ...ರ್ನಾಟಕ ರಕ್ಷಣಾ ವೇದಿಕೆಯ ಬೆಂಗಳೂರು ಗ್ರಾಮಾಂತರ ...ಲ್ಲಾ ಘಟಕದ ಅಧ್ಯಕ್ಷ ಅಂಬರೀಷ್‌ನೇ ಈ ಪ್ರಕರಣದಲ್ಲಿ ...ಮುಖ ಆರೋಪಿಯಾಗಿರೋದು ಕನ್ನಡಪರ ಹೋರಾಟ ...ಡಿದಿರುವ ಅಡ್ಡದಾರಿಯನ್ನು ಸೂಚಿಸುತ್ತದೆ. ಹಫ್ತಾ ...ಸೂಲಿ, ಭೂ ಕಬಳಿಕೆ, ಹಗಲು ದರೋಡೆಗಳಂತ ಹೇಯ ...ತ್ಯಗಳಿಗೆ 'ಕನ್ನಡ'ದ ಹೆಸರು ದುರ್ಬಳಕೆಯಾಗುತ್ತಿರೋದು ...ದುರ್ದೈವವೇ ಸರಿ. ಇದಕ್ಕೆಲ್ಲಾ ಯಾರು ಹೊಣೆ...?

ಅವತ್ತು ನಡೆದಿದ್ದೇನು?

ಡಿಸೆಂಬರ್ 10, ಮಂಗಳವಾರ ರಾತ್ರಿ 10 ಗಂಟೆ ...ಮಾರಿಗೆ ಮಾಯಸಂದ್ರ ಬಳಿ ಲೋಕೇಶ್ ಎಂಬಾತ ...ರಿಯಲ್ಲಿ ಕಲ್ಲು ತುಂಬಿಕೊಂಡು ಬರುತ್ತಿದ್ದಾಗ ಕನ್ನಡ ...ಕ್ಷಣಾ ವೇದಿಕೆ ನಾಮಫಲಕ ಹಾಕಿಕೊಂಡಿದ್ದ ಏಳು ...ರುಗಳಲ್ಲಿ ದಾಂಗುಡಿಯಿಟ್ಟ 25 ರಿಂದ 30 ಯುವಕರು ...ರಿಯನ್ನು ಅಡ್ಡಗಟ್ಟಿದ್ದರು. ಲಾರಿ ಡ್ರೈವರ್‌ನನ್ನು ಕೆಳಗಿಳಿದ ...ರು 'ನೀವು ಅಕ್ರಮವಾಗಿ ಕಲ್ಲು ಮತ್ತು ಮರಳನ್ನು ಸಾಗಿಸುತ್ತಿದ್ದೀರಿ. ಇದಕ್ಕೆಲ್ಲಾ ನಿಮಗೆ ಅನುಮತಿ ಕೊಟ್ಟವನ್ಯಾರು? ನಾವು ಕೇಳಿದಷ್ಟು ಹಣ ಕೊಡದೇ ಹೋದರೆ ನಿಮ್ಮನ್ನು ಪೊಲೀಸರಿಗೆ ಹಿಡಿದುಕೊಡ್ತೀವಿ' ಅಂತ ಬಾಯಿಗೆ ಬಂದಂತೆ ಬಯ್ದಾಡಿ ಎಳೆದಾಡಿದ್ದರು. ತಾನು ಲಾರಿ ಮಾಲೀಕನಲ್ಲ ಅಂತ ಆತ ಗೋಳಾಡಿದರೂ ಬಿಡದೆ 'ಈಗಿಂದೀಗಲೇ ಮಾಲೀಕನನ್ನು ಕರೆಸು ಇಲ್ಲವಾದರೆ ನಿನ್ನ ಪ್ರಾಣಕ್ಕೇ ಆಪತ್ತು' ಎನ್ನುವ ಧಮಕಿಯನ್ನೂ ಎಸೆದಿದ್ದರು.

ಬೆದರಿದ ಚಾಲಕ ತಕ್ಷಣವೇ ಮಾಲೀಕನನ್ನು ಕರೆಸಿದ. ಮಾಲೀಕ ಅಲ್ಲಿಗೆ ಬಂದಾದ ಮೇಲೂ ಕರವೇ ಕದೀಮರ ಪುಂಡಾಟಿಕೆ ಮುಂದುವರೆದೇ ಇತ್ತು. ಹಣ ನೀಡದಿದ್ದಲ್ಲಿ ಪೊಲೀಸರಿಗೆ ಹಿಡಿದು ಕೊಡ್ತೀವಿ ಅನ್ನೋದೆ ಅವರ ಏಕಮಾತ್ರ ಅಜೆಂಡಾ. ಅಸಲಿಗೆ ಕರವೇ ಮಂದಿ ಆರೋಪಿಸುತ್ತಿದ್ದಂತೆ ಲಾರಿ ಅಕ್ರಮವಾಗೇನೂ ಕಲ್ಲು ಸಾಗಣೆ ಮಾಡುತ್ತಿರಲಿಲ್ಲ. ಹಾಗಾಗಿ ಲಾರಿ ಮಾಲೀಕ ಹಣ ನೀಡಲು ಒಪ್ಪದೆ ಪ್ರತಿರೋಧ ಒಡ್ಡಿದ್ದ. ಮೊದಲೇ ಮದೋನ್ಮತ್ತರಾಗಿ ಬಂದಿದ್ದ ಕಾರ್ಯಕರ್ತರಿಗೆ ಇದು ರುಚಿಸಲಿಲ್ಲ. ಮಾಲೀಕನ ಮೇಲೆ ಹಲ್ಲೆ ಮಾಡುವ ಹಂತಕ್ಕೂ ಹೋಯಿತು. ಗಲಾಟೆ ಜೋರಾಗುತ್ತಿದ್ದಂತೆಯೇ ಗ್ರಾಮದ ಸುಮಾರು 400 ಜನರು ಸ್ಥಳಕ್ಕೆ ಬಂದು ಜಮಾಯಿಸಿದ್ದರು. ಗ್ರಾಮಸ್ಥರ ಮುಂದೆಯೂ ಕರವೇ ಕಾರ್ಯಕರ್ತರು ಪೌರುಷ ತೋರಿಸಿ ಏಕವಚನದಲ್ಲಿ ಬಾಯಿಗೆ ಬಂದಂತೆ ನಿಂದಿಸಿದ್ದಲ್ಲದೆ 'ನಾವು ಅಧಿಕಾರಿಗಳು, ಪೊಲೀಸರು. ನೀವೆಲ್ಲಾ ಇಲ್ಲಿಂದ ಜಾಗ ಖಾಲಿ ಮಾಡಿ' ಎಂದು ಸ್ಥಳೀಯರ ಮೇಲೆಯೇ ಹಲ್ಲೆಗೆ ಯತ್ನಿಸಿದ್ದರು. ಕರವೇ ಖದೀಮರ ನಸೀಬು ಕೆಟ್ಟಿದ್ದೇ ಆಗ. ಅವರ ಅಸಲಿಯತ್ತು ತಿಳಿಯುತ್ತಿದ್ದಂತೆಯೇ ಮದ್ದಾನೆಗಳಂತೆ ಪುಂಡಾಟಿಕೆ ಮಾಡುತ್ತಿದ್ದ ಗುಂಪಿನ ಲೀಡರ್ ಕಮ್ ಕರವೇ ಬೆಂ.ಗ್ರಾ. ಅಧ್ಯಕ್ಷ ಅಂಬರೀಷನಿಗೂ ಸೇರಿ ಪುಢಾರಿಗಳಿಗೆಲ್ಲ ಗೂಸಾ ಕೊಟ್ಟು ಪಕ್ಕದಲ್ಲಿದ್ದ ಮನೆಯೊಂದರಲ್ಲಿ ಕೂಡಿ ಹಾಕಿದ್ದರು. ಅಷ್ಟೊತ್ತಿಗಾಗಲೇ ಗ್ರಾಮಸ್ಥರೇ ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದರಿಂದ ದೊಡ್ಡಬಳ್ಳಾಪುರ, ವಿಶ್ವನಾಥಪುರ, ವಿಜಯಪುರ, ಚನ್ನರಾಯಪಟ್ಟಣ ಠಾಣೆಗಳ 50ಕ್ಕೂ ಹೆಚ್ಚು ಪೊಲೀಸರು ಓಡಿಬಂದಿದ್ದರು.

ಕಾರಲ್ಲಿತ್ತು ಮತ್ತಷ್ಟು ಅಕ್ರಮ

ಗ್ರಾಮಸ್ಥರು ನೀಡಿದ ದೂರಿನ ಆಧಾರದಲ್ಲಿ ಬೆಂಗಳೂರು ನಗರ ಕರವೇ (ನಾರಾಯಣಗೌಡ ಬಣ) ಜಿಲ್ಲಾಧ್ಯಕ್ಷ ಅಂಬರೀಷ, ಹರೀಶ, ಭುವನೇಶ್ವರ್ ಕುಮಾರ್, ನಿರೂಪ್‌ಗೌಡ, ಸುಧೀರ್, ಸೀತಾರಾಮ, ಶಿವಕುಮಾರ್, ಪವನ್ ಕುಮಾರ್, ನವೀನ್ ಕುಮಾರ್, ನಾಗೇಂದ್ರ, ಚಂದ್ರಶೇಖರ್, ಸೂರ್ಯ, ಶ್ರೀಧರಮೂರ್ತಿ, ಸುಮನ್, ಸತೀಶ್, ಕಿಷನ್, ಮಧು, ರಾಜು, ಶ್ರೀಧರ್, ಅಶ್ವಿನ್, ಕಿರಣ್, ಸಂಜಯ್ ಮೊದಲಾದವರನ್ನು ಬಂಧಿಸಿದ ಪೊಲೀಸರು ಅವರು ತಂದಿದ್ದ ಕಾರುಗಳ ತಲಾಷ್ ಮಾಡಿದಾಗ ಮತ್ತಷ್ಟು ಅನುಮಾನಾಸ್ಪದ ಸಾಕ್ಷ್ಯಗಳು ಸಿಕ್ಕಿದ್ದವು.

ವಿವಿಧ ಸ್ಥಳಗಳಲ್ಲಿ ನೋಂದಣಿಯಾದ ವಾಹನಗಳ ನಕಲಿ ನಂಬರ್ ಪ್ಲೇಟ್‌ಗಳು ದಂಡಿಯಾಗಿ ದೊರಕಿದ್ದವು. ಅವುಗಳಲ್ಲಿ ಕೆಲವೊಂದು ಹೊರರಾಜ್ಯಗಳಿಗೆ ಸೇರಿದವೂ ಇದ್ದವು. ಒಬ್ಬೊಬ್ಬ ಕಾರ್ಯಕರ್ತನ ಬಳಿಯೂ ಎಂಟರಿಂದ ಹತ್ತು ಎಟಿಎಂ ಕಾರ್ಡ್‌ಗಳು ಪತ್ತೆಯಾಗಿದ್ದವು. ಅಲ್ಲದೆ ಅಂಬರೀಷ್ ಕಾರಿನಲ್ಲಿ ನೂರಾರು ಭೂ ದಾಖಲೆಗಳೂ ಲಭ್ಯವಾಗಿದ್ದವು. ಅವೆಲ್ಲಾ ಕೋರ್ಟಿನಲ್ಲಿ ವ್ಯಾಜ್ಯದಲ್ಲಿರುವ ಇಲ್ಲವೆ ಒತ್ತುವರಿಯಾದ ಜಾಗದ ದಾಖಲೆಗಳು. ಇವೆಲ್ಲವೂ ಅವರು ಮಾಡುತ್ತಿದ್ದ ಹಗಲು ದರೋಡೆಯನ್ನು ಸಾಬೀತುಪಡಿಸುತ್ತವೆ. ವಿವಾದಿತ ವಿಷಯಗಳನ್ನು ಹುಡುಕಿ ಸಂಧಾನದ ನೆಪದಲ್ಲಿ ಅಥವಾ ಬೆದರಿಕೆಯೊಡ್ಡಿ ಹಣ ವಸೂಲಿ ಮಾಡುವುದೇ ಅವರ ಕಸುಬು. ಅವತ್ತು ರಸ್ತೆ ಮೇಲೆ ಲಾರಿ ತಡೆದು ಮಾಡಲು ಹೊರಟಿದ್ದೂ ಇದನ್ನೆ.

ಕನ್ನಡಪರ ಹೋರಾಟದ ಸೋಗಿನಲ್ಲಿ ಕರವೇ ಕಾರ್ಯಕರ್ತರೆಂಬ ಸೊಕ್ಕಿನಲ್ಲಿ ಮಾಡಬಾರದ ಕೆಲಸಕ್ಕೆ ಕೈಹಾಕಿದ ಖದೀಮರಿಂದಾಗಿ ಇಡೀ ಕನ್ನಡಿಗರೇ ತಲೆ ತಗ್ಗಿಸುವಂತಾಗಿರುವುದು ಸುಳ್ಳಲ್ಲ. ಈಗಾಗಲೇ ಬೀದಿಗೊಂದು ಕನ್ನಡ ಸಂಘಟನೆಗಳು ತಲೆ ಎತ್ತಿ ಕನ್ನಡಕ್ಕೆ ಕೈ ಎತ್ತುವ ಕೆಲಸವೊಂದನ್ನು ಬಿಟ್ಟು ಬೇರೆಲ್ಲಾ ದುಡಿಮೆಗಳಲ್ಲಿ ತೊಡಗಿಸಿಕೊಂಡು ಕನ್ನಡಿಗರಿಗೇ ಮುಜುಗರ ಉಂಟುಮಾಡುತ್ತಿವೆ. ಅಂತವರಿಗೆ ಸಿದ್ಧಾಂತ, ತತ್ವ ಯಾವುವೂ ಬೇಕಿಲ್ಲ, ಬೇಕಾಗಿರೋದು ಹಳದಿ-ಕೆಂಪು ಬಣ್ಣದ ಟ್ರೇಡ್ ಮಾರ್ಕ್ ಮಾತ್ರ (ಕನ್ನಡದ ಬಾವುಟಕ್ಕೆ ಈ ದುಸ್ಥಿತಿ ತಂದವರೂ ಅಂತವರೆ). ದೊಡ್ಡ ದೊಡ್ಡ ಐಟಿ ಕಂಪನಿಗಳಿಂದ, ಗಣಿ ಮಾಫಿಯಾದಿಂದ, ಎಂ.ಎನ್.ಸಿ ಯವರಿಂದ ಹಫ್ತಾ ವಸೂಲಿ ಮಾಡುತ್ತಿರುವುದು ರಹಸ್ಯವೇನೂ ಅಲ್ಲ, ಇದು ಹೀಗೇ ಮುಂದುವರೆದರೆ ಜನರೇ ಇಂತವರ ವಿರುದ್ಧ ತಿರುಗಿ ಬೀಳುತ್ತಾರೆಂಬುದಕ್ಕೆ ಈ ಘಟನೆಯೇ ಮುನ್ನುಡಿ. ಯಾಕೆಂದರೆ ಅವತ್ತು ಪೊಲೀಸರ ಕೈಗೊಪ್ಪಿಸುವಷ್ಟಕ್ಕೆ ಮಾತ್ರವೇ ಜನರ ಆಕ್ರೋಷ ತಣ್ಣಗಾಗಿರಲಿಲ್ಲ, ಮಧ್ಯರಾತ್ರಿಯೇ ಪೊಲೀಸರು ಕರವೇ ಕಾರ್ಯಕರ್ತರನ್ನು ವಶಕ್ಕೆ ಪಡೆದಿದ್ದರೂ ಬೆಳ್ಳಂಬೆಳಗ್ಗೆ ವಿಶ್ವನಾಥಪುರ ಠಾಣೆಯ ಮುಂದೆ ಜಮಾಯಿಸಿದ್ದ ತೈಲಗೆರೆ ಗ್ರಾಮಸ್ಥರು ಖದೀಮರೆನ್ನೆಲ್ಲ ಜೈಲಿಗಟ್ಟುವಂತೆ ಕೆಲಕಾಲ ಪ್ರತಿಭಟನೆಯನ್ನೂ ನಡೆಸಿದ್ದರು. ಅಷ್ಟರ ಮಟ್ಟಿಗೆ ಜನ ಅವರ ದಬ್ಬಾಳಿಕೆಯಿಂದ ರೋಸಿ ಹೋಗಿದ್ದರು.

● ವರದಿಗಾರ

ಪುಸ್ತಕದ ದೇಣಿಗೆ ಬೇಕಿತ್ತಂತೆ

ಗ್ರಾಮಸ್ಥರ ಕೈಗೆ ರೆಡ್‌ಹ್ಯಾಂಡಾಗಿ ತಗುಲಿಕೊಂಡು ಮೈಮೇಲೆ ಐಪಿಸಿ ಕಲಂ 143, 341, 384, 504, 506, ಆರ್/ಡಬ್ಲ್ಯೂ 149 ರ ಅಡಿಯಲ್ಲಿ ಸಾಲುಸಾಲು ಪ್ರಕರಣಗಳನ್ನು ಹೇರಿಸಿಕೊಂಡಿದ್ದರೂ ಜಿಲ್ಲಾಧ್ಯಕ್ಷ ಅಂಬರೀಷ ಬಿದ್ದರೂ ಮೀಸೆ ಮಣ್ಣಾಗದವನಂತೆ ಮಾತಾಡುತ್ತಿದ್ದಾನೆ. 'ನಾವು ಸುಮಾರು 450 ಶಾಲೆಗಳಿಗೆ ಪಠ್ಯಪುಸ್ತಕ ವಿತರಿಸುತ್ತಿದ್ದೇವೆ. ನೀವು ಎಷ್ಟು ಶಾಲೆಗೆ ಪುಸ್ತಕ ನೀಡುತ್ತೀರಿ ಅಂತ ಕೇಳಿದವೆ ಹೊರತು ಹಣ ನೀಡುವಂತೆ ಕೇಳಿಲ್ಲ' ಎನ್ನುವ ಕತೆಯನ್ನು ಪೊಲೀಸರ ಮುಂದೆ ಕಟ್ಟಿದ್ದಾನೆ. ಯಾರಾದರು ನಂಬಲಾದೀತೆ ಇದನ್ನ, ನ್ಯಾಯಬದ್ಧ ದೇಣಿಗೆ ಕೇಳುವವರು ಸರಿರಾತ್ರಿಯ ಹೊತ್ತು ಅರ್ಧ ರಸ್ತೆಯಲ್ಲಿ ಲಾರಿ ತಡೆದು ಮಾಲೀಕನ ಬದಲು ಡ್ರೈವರ್‌ನ ಬಳಿ ಮನವಿ ಸಲ್ಲಿಸುತ್ತಾರಾ? ಅಲ್ಲದೆ ಕಾರೊಳಗಿದ್ದ ನಕಲಿ ನಂಬರ್ ಪ್ಲೇಟು, ಭೂ ದಾಖಲೆ, ಬೇಕಾಬಿಟ್ಟಿ ಎಟಿಎಂ ಕಾರ್ಡ್‌ಗಳು ಅದ್ಯಾವ ದೇಣಿಗೆಯಾಗಿ ಸಂಗ್ರಹಿಸಿದ್ದು? ಬಂಧಿತರಾದವರಲ್ಲಿ ಬಹುತೇಕರು ನಾರಾಯಣಗೌಡನ ಹಿಂಬಾಲಕರು.

ರಾಜ ಹೋದರೂ ಪುರೋಹಿತರು ಚಿರಾಯುಗಳಂತಲ್ಲಾ!

ಥೂತ್ತೇರಿ

● ಯಾಹು

ಇತ್ತೀಚೆಗೆ ನಾಲ್ಕು ರಾಜ್ಯಗಳಲ್ಲಿ ನಡೆದ ...ಚುನಾವಣೆಯಲ್ಲಿ ಬಿಜೆಪಿ ಗೆದ್ದ ಕೂಡಲೇ ದೇಶದ ಚೆಡ್ಡಿಗಳು ...ಮೋದಿ ಪ್ರಧಾನಿಯಾದಂತೆ ಕೂಗಾಡುತ್ತ ಚೆಡ್ಡಿ ...ಹಿಡಿದುಕೊಂಡು ಕುಣಿಯುತ್ತಿವೆಯಂತಲ್ಲಾ. "ಕಾಂಗ್ರೆಸ್ ...ಅವಧಿಯಲ್ಲಿ ಇಂತಹ ಪ್ರಯೋಗಗಳು ಹಿಂದಿನಿಂದಲೂ ...ನಡೆಯುತ್ತಲೇ ಬಂದಿವೆ, ಮುಂದೂ ನಡೆಯುತ್ತವೆ" ಎಂದು ...ಕಾಂಗ್ರೆಸ್‌ಗಳು ಹಾಸಿಗೆ ಕೊಡವುತ್ತಿವೆಯಂತಲ್ಲಾ. ಈ ಮಧ್ಯೆ ...ಪಕ್ಷದ ಪಿಂಡಗಳು ಮೋದಿ ಪ್ರಧಾನಿಯಾದ ಕೂಡಲೇ ...ಏನು ಮಾಡಬೇಕೆಂದು ಸೀಲಿ ನಕ್ಷೆಗೆ ತೊಡಗಿವೆಯಂತಲ್ಲಾ. ... ನಡುವೆ "ಆಮ್ ಆದ್ಮಿಯ ಕಸಪೊರಕೆ ಹುಡುಗರಿಗೆ ...ಕಸ ಗುಡಿಸುವುದು ಗೊತ್ತೇ ಹೊರತು, ಆಡಳಿತದ ...ಅನುಭವವಿಲ್ಲ, ಅದಕ್ಕಿಂತಲೂ ದೆಹಲಿಯನ್ನು ಆಳೀಆಳಿ ...ಸಾಕಾದ ಅಜ್ಜಿಯ ಎದುರು ಗೆಲ್ಲುವುದು ಅಂತಹ ದೊಡ್ಡ ...ವಿಷಯವಲ್ಲ, ಅದನ್ನೇ ದೇಶಕ್ಕೂ ಅನ್ವಯಿಸಿ ಹೇಳುವುದಾದರೆ, ...ಆಡಳಿತಕಾರಣಿಯೇ ಅಲ್ಲದ ವಯೋವೃದ್ಧ ಮನಮೋಹನ್ ...ಸಿಂಗ್ ಎದುರು ಯಾರು ಗೆದ್ದರೂ ಅದೂ ಕೂಡ ಅಂತಹ ...ವಿಷಯವಲ್ಲ, ಏಕೆಂದರೆ, ಹತ್ತು ವರ್ಷ ಕಾಲ ದೇಶವನ್ನ ...ಆಳಿಯಲ್ಲಿಟ್ಟು, ಈಗ ರೆಸ್ಟು ಬಯಸಿರುವ ಮನಮೋಹನ್ ...ಸಿಂಗ್, ಲಾಲ್‌ಬಹದ್ದೂರ್ ಶಾಸ್ತ್ರಿಯ ನಂತರ ದೇಶ ...ಕಂಡ ಅಪರೂಪದ ರಾಜಕಾರಣಿ. ಅದೇ ನಿಮ್ಮ ವಾಜಪೇಯಿ ...ಐದು ವರ್ಷಕ್ಕೆ ಸುಸ್ತಾಗಿ ಮಲಗಿದವರು ಇನ್ನೂ ಎದ್ದಿಲ್ಲ, ...ಆದ್ದರಿಂದ ಮೋದಿಯ ಚೆಡ್ಡಿಗಳು ದೇಶದಾದ್ಯಂತ ಹುಟ್ಟಿರುವ ...ವರೆಲ್ಲ ವಾಜಪೇಯಿ ಚಿತ್ತಾಲಿದ್ದಂತೆ ನೋಡಿಕೊಂಡಿದ್ದೀರಿ" ...ಎಂದು ಕಾಂಗ್ರೆಸ್‌ಗಳು ಕುಹಕವಾಡುತ್ತಿವೆಯಂತಲ್ಲಾ, ಥೂತ್ತೇರಿ.


* * *

...ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅಕಾಲಿಕ ಮರಣಕ್ಕೆ ತುತ್ತಾಗಿ ಹೋದ ಸುದ್ದಿಯಿಂದ ಇಡೀ ಕನ್ನಡನಾಡು ಮಮ್ಮಲ ಮರುಗಿ ಹೋಯ್ತಲ್ಲಾ, ರಾಜ್ಯ ಕಳೆದುಕೊಂಡ ರಾಜನ ಮಗನಾಗಿ, ಎಲ್ಲೆಂದರಲ್ಲಿ ಕಾಣಿಸಿಕೊಳ್ಳಲಾಗದೆ, ಅರಮನೆಯಲ್ಲಿ ಇರಲಾಗದೆ, ಅಗಾಧ ಆಸ್ತಿಯನ್ನ ಉಳಿಸಿಕೊಳ್ಳಲಾಗದೆ ಒದ್ದಾಡುತ್ತ ಬದುಕಿದ್ದ ಒಡೆಯರ್‌ರವರಿಗೆ ರಾಜ್ಯಾಡಳಿತವಿಲ್ಲದಿದ್ದರೇನು, ಅರಮನೆ ದಿನಚರಿ ಎಂದಿನಂತೆ ಮುಂದುವರಿಯುವಂತೆ ಪುರೋಹಿತಶಾಹಿಗಳು ನೋಡಿಕೊಂಡರಂತಲ್ಲಾ. ಶ್ರೀಕಂಠದತ್ತರ ಪಾರ್ಥಿವ ಶರೀರವನ್ನ ಇಟ್ಟುಕೊಂಡು ಗುಜ್ಜಾನೆ ಮರಿಗಳಂತೆ ಓಡಾಡುತ್ತಿದ್ದ ಪುರೋಹಿತರ ಹಿಂಡನ್ನು ನೋಡಿದ ಅಶೋಕಪುರಂನ ಹೈದರು "ಅಲ್ರೀ, ಜಯಚಾಮರಾಜೇಂದ್ರ ಒಡೆಯರ್ ಕಾಲಕ್ಕೆ ಮೈಸೂರು ರಾಜರ ಆಳ್ವಿಕೆ ಕೊನೆಗೊಂಡರೂ ಕೂಡ, ಈ ಪುರೋಹಿತರ ಆಡಳಿತ ಅರಮನೆಯೊಳಗಡೆ ಯಥಾಸ್ಥಿತಿಯಲ್ಲಿ ಮುಂದುವರಿದ ಬಗ್ಗೆ ಇದಕ್ಕಿಂತ ದಾಖಲೆ ಬೇಕೆ?" ಎಂದರಂತಲ್ಲಾ.

ರಾಜರುಗಳನ್ನ ಆಶ್ರಯಿಸಿ, ಯಜ್ಞ ಯಾಗಗಳನ್ನು ಮಾಡಿಸುತ್ತ ಕಲ್ಪಿತ ಪುರಾಣವನ್ನ ಬೋಧಿಸುತ್ತ ಶ್ರಮ ವಿರೋಧಿ, ಜೀವ ವಿರೋಧಿಯಾಗಿ ಬದುಕುತ್ತಿರುವ ಪುರೋಹಿತರ ಸಂತತಿ ಒಡೆಯರ್‌ರವರ ಪಾರ್ಥಿವ ಶರೀರದ ಸುತ್ತಲೂ ಮುತ್ತಿಕೊಂಡು, ಅನರ್ಥಕಾರಿ ಶಾಸ್ತ್ರಗಳನ್ನು ಮಾಡುತ್ತ ಇಡೀ ಸರಕಾರವನ್ನು ಗಂಟೆಗಟ್ಟಲೆ ಎಡೆಮುರಿಕಟ್ಟಿ ಕೂರಿಸಿದ್ದನ್ನು ಕಂಡ ನಾಡಿನ ಪ್ರಜ್ಞಾವಂತರು ದಂಗು ಬಡಿದುಹೋದರಂತಲ್ಲಾ, ಥೂತ್ತೇರಿ!

* * *

ಶಾಮಾನ್ಯರ ಸಂಸ್ಕಾರವೇ ಬೇರೆ, ಯತಿಗಳ ಸಂಸ್ಕಾರವೇ ಬೇರೆ, ರಾಜರ ಸಂಸ್ಕಾರವೇ ಬೇರೆ ಎಂದು ಸಂಸ್ಕಾರದ ನೆಪದಲ್ಲಿ ಗೋದಾನವನ್ನೂ ಸೇರಿಸಿಕೊಂಡಿರುವ ಗೋಭಕ್ಷಕ ಪುರೋಹಿತರು ಶವವಿನ ಹುಟ್ಟನ್ನೇ ದಾನ ಪಡೆಯುವುದು ಅಚ್ಚರಿಯಲ್ಲವೆ. ಅದೇನಾದರಾಗಲಿ, ಕೋಟೆಯನ್ನಾಗಲಿ, ಅರಮನೆಯನ್ನಾಗಲಿ, ಸೈನಿಕರು ಮುತ್ತಲಿ, ಹಾಳುಗೆಡವಲಿ, ಆದರೆ ತಮ್ಮ ಎಡೆಯನ್ನ ಕಾಪಾಡಿಕೊಂಡು ಬಂದಿರುವ ಪುರೋಹಿತರು, ಶ್ರೀಕಂಠದತ್ತರನ್ನ ಇಡೀ ದಿನ ಕೂರಿಸಿಕೊಂಡು ಮಾಡಿರುವ ಯಜ್ಞ ಯಾಗ ವ್ರತಗಳ



ಪರಿಣಾಮದಿಂದ, ಯುವರಾಜ ಕುರ್ಚಿಯಲ್ಲಿ ಕೂರುವುದನ್ನು ಮರೆತು ನೆಲದ ಮೇಲೆ ಕುಳಿತು ಕಾಲ ಹಾಕುತ್ತಿದ್ದರಂತಲ್ಲಾ. ಈ ಪುರೋಹಿತ ಪಿಂಡಗಳು ಇಷ್ಟೆಲ್ಲಾ ಮಾಡಿದರೂ ನಮ್ಮ ಯುವರಾಜ ಬದುಕಿದ್ದು ಕೇವಲ ಅರವತ್ತು ವರ್ಷ. ಆದರೆ ಪುರೋಹಿತರು ಇನ್ನೂ ಗಟ್ಟಿಮುಟ್ಟಾಗಿದ್ದಾರಂತಲ್ಲಾ. ಥೂತ್ತೇರಿ!

* * *

ಸಲಿಂಗರತಿಯನ್ನು ಸುಪ್ರೀಂಕೋರ್ಟು ಅಪರಾಧವೆಂದು ಪರಿಗಣಿಸಿ ತೀರ್ಪು ನೀಡಿರುವ ಈ ಸಂದರ್ಭದಲ್ಲಿ ಯಾರನ್ನ ಮಾತನಾಡಿಸಬೇಕೆಂದು ಯೋಚಿಸುತ್ತಿರುವಾಗ ಇತ್ತೀಚೆಗೆ ಸ್ವಾಮಿಗಳಾದ ಸುರಸುಂದರಾನಂದ ಸ್ವಾಮಿಗಳಿಗೆ ಫೋನ್ ಮಾಡಿದರೆ ಹೇಗೆ ಅನ್ನಿಸಿ, ಆ ಕೂಡಲೇ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: 'ಆಸೆ, ಹೇಳುವಾಸೆ, ಹೇಳಲಾರೆ, ನಾನು ತಾಳಲಾರೆ...'

"ಹಲೋ ಯಾರು?"

"ನಾನು ಸ್ವಾಮೀಜಿ, ನಿಮ್ಮ ಹಳೆ ಫ್ರೆಂಡ್ ಯಾಹು."

"ಏನಪ್ಪ ಯಾಹೂ ಚೆನ್ನಾಗಿದ್ದೀಯಾ?"

"ನನ್ನ ಕತೆ ಇರ್ಲಿ. ನಿಮ್ಮ ಕತೆ ಹೇಳಿ ಸ್ವಾಮೀ."

"ನನಗೇನಾಗಿದೆ?"

"ಸಲಿಂಗರತಿ ಅಪರಾಧ, ಅದನ್ನ ಮಾಡಿದ್ರೆ ಶಿಕ್ಷೆ ಅಂತ ಸುಪ್ರೀಂಕೋರ್ಟು ತೀರ್ಪಿತ್ತಿದೆ."

"ಕೋರ್ಟು ಅಂದ ಮೇಲೆ ತೀರ್ಪು ಕೊಡೋದಕ್ಕೆ ಇರೋದು."

"ತೀರ್ಪು ಕಾನೂನಾಗಿ ಜಾರಿಯಾದ್ರೆ?"

"ಆಗ್ಲಿ ಬಿಡಿ. ದೇಶದಲ್ಲಿ ಎಷ್ಟು ಕಾನೂನುಗಳಿಲ್ಲ. ಅದೂ ಅಪರಾಧ ನಿಂತಿವೆಯೇ? ನಡೀತಾನೇ ಇರುತ್ತೆ."

"ಅಂಗೆ ಸಲಿಂಗ ಸಂಗನೂ ನಡೀತನೇ ಇರುತ್ತೆ ಅಂತೀರಾ?"

"ಅಲ್ರೀ, ಸೃಷ್ಟಿಕ್ರಿಯೆಲ್ಲೇ ದೋಷ ಇದೆ. ತಾರತಮ್ಯ ಇದೆ. ಇದನ್ನ ಕೋರ್ಟು ಅಧ್ಯಯನ ಮಾಡಬೇಕಾಗಿತ್ತು. ಯಾಕೆ ಒಬ್ಬಳು ಲೆಸ್ಬಿಯನ್ ಆಗ್ತಳೆ. ಯಾಕೆ ಒಬ್ಬ ಸಲಿಂಗಿ ಆಗ್ತನೆ. ಇದರಲ್ಲಿ ಅವರ ತಪ್ಪೆಷ್ಟು, ನಿಸರ್ಗದ ತಪ್ಪೆಷ್ಟು ಅನ್ನದನ್ನ ಅಧ್ಯಯನ ಮಾಡಬೇಕು ಗೊತ್ತಾ."


"ಅಂತೂ ಈ ಕಾನೂನಿಂದ ತಾವೇನೂ ಹೆದರಿಲ್ಲ ಅನ್ನಿ."

"ನೋಡಿ, ವಾತ್ಸಾಯನ ಓದಿದ್ದೀರ? ಅವನೇ ಶಾಪ ಲೈಂಗಿಕ ಅಲ್ಪಸಂಖ್ಯಾತರ ಬಗ್ಗೆ ಸಹಾನುಭೂತಿಯಿಂದ ಬರದಿದಾನೆ. ಅದನ್ನ ನಮ್ಮ ಕೋರ್ಟುಗಳು ಓದೋದು ಒಳ್ಳೆದು."

"ತಾವು ಯಾವ್ಯಾವುದಕ್ಕೊ ಔಷಧಿ ಕೊಡ್ತಿರಿ. ಈ ಸಲಿಂಗ ದೃಷ್ಟಿ ದೋಷಕ್ಕೆ ಮದ್ದಿಲ್ಲವೆ ಸ್ವಾಮಿ?"

"ಅದಿದ್ದೆ, ನಾನೇ ತಗೋಳ್ತಿದ್ದೆ!"

"ಥೂತ್ತೇರಿ!!!"



ಶ್ರೀಕಂಠದತ್ತ ಒಡೆಯರ್
ಕಪ್ಪು-ಬಿಳುಪು ಚಿತ್ರಗಳು



ಇಂಡಿಯಾ ದೇಶದ ಉದ್ದಗಲಕೂ ಈಗಲೂ ಕಲ್ಪಿತ ರಾಜ್ಯಭಾರ ನಡೆಸುತ್ತಿರುವ ಭಪ್ಪನ್ನೈವತ್ತಾರು ರಾಜವಂಶಗಳಿರಬಹುದು.

ಮೈಸೂರು ಸೀಮೆಯ ಒಡೆಯರ್ ಕುಟುಂಬ ನಿಸ್ಸಂತಯವಾಗಿ ಅಂತವರಲ್ಲಿ ಒಂದಾಗಿತ್ತು. ಇದೀಗ ಆ ರಾಜವಂಶದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಸತ್ತಿದ್ದಾರೆ. ಅರವತ್ತರ ವಯಸ್ಸು ಸಾಯುವ ವಯಸ್ಸಲ್ಲ. ಅವರಪ್ಪ ಜಯ ಚಾಮರಾಜೇಂದ್ರ ಒಡೆಯರ್ ಕೂಡ ತಮ್ಮ ಐವತ್ತೈದನ್ನೇ ವಯಸ್ಸಿನಲ್ಲೇ ತೀರಿಕೊಂಡಿದ್ದರು. ಅದಕ್ಕೆ ಅಲಮೇಲಮ್ಮನ ಶಾಪವೇನೂ ಕಾರಣವಾಗಿರಲಿಲ್ಲ. ಬದಲಾಗಿ ಆಗಿನ ಮೈಸೂರು ಸಂಸ್ಥಾನದ ವಾರಾಂಗನೆಯರು ರಾಜನ ಆರೋಗ್ಯ, ಖಜಾನೆಯೆಲ್ಲವನ್ನೂ ನಿಖಾಲಿ ಮಾಡಿಸಲು ಸಾಕಷ್ಟು ಕೊಡುಗೆ ನೀಡಿದ್ದರು.

1974 ರಲ್ಲಿ ಜೆ.ಸಿ. ಒಡೆಯರ್ ತೀರಿಕೊಳ್ಳುವಷ್ಟರಲ್ಲಿ ರಾಜತ್ವ ಇರಲಿಲ್ಲ, ದೊಡ್ಡ ಮಟ್ಟದ ಆಸ್ತಿ, ಹಣವೂ ಇರಲಿಲ್ಲ, ಸಾಕಿಕೊಂಡಿದ್ದ ಒಂದಷ್ಟು ಹೊಗಳು ಭಟರು ಹಾಗೂ ಮೈಸೂರಿನ ಜನಸಾಮಾನ್ಯರಲ್ಲಿದ್ದ ಗೌರವದ ಭಾವನೆಗಳಷ್ಟೇ ರಾಜಕುಟುಂಬಕ್ಕಿದ್ದ ಚರಾಸ್ತಿ. ಆಗ ಹೊಸ ರಾಜನಾಗಿ ಶ್ರೀಕಂಠದತ್ತ ಒಡೆಯರ್‌ರನ್ನು ಸಹಜವಾಗಿಯೇ ರಾಜ ಕುಟುಂಬ ಸ್ಥಾಪಿಸಿತು. ತಮಾಷೆ ಏನೆಂದರೆ ರಾಜಪ್ರಭುತ್ವಗಳು ಅಳಿಸಿ ಹೋಗಿ, ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬಂದು, ಆಧುನಿಕ ಸ್ವರೂಪದ ಸರ್ಕಾರಗಳಿದ್ದಾಗಲೂ ಇಂತಹ ರಾಜರ ಆಸ್ಥಾನಗಳಲ್ಲಿ 'ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ' ಎಂದು ಹೊಗಳುವುದೂ, ಅಂತಹ ಮಾತನ್ನು ಈ ರಾಜಕುಡಿಗಳು ಆನಂದಿಸುವುದೂ ಇದ್ದೇ ಇತ್ತು, ಈಗಲೂ ಇದೆ. ಹೀಗಿದ್ದಾಗಲೂ ಶ್ರೀಕಂಠದತ್ತ ಸ್ವಲ್ಪ ಪ್ರಾಕ್ಟಿಕಲ್ಲಾಗಿದ್ದ ಮನುಷ್ಯನಂತೆ ಕಾಣುತ್ತಿದ್ದರು. ಆಸ್ತಿಗಾಗಿ ಅಪ್ಪನ ವಿರುದ್ಧವೇ ಕೋರ್ಟ್‌ಗೆ ಹೋದರು. ರಿಯಲ್ ಎಸ್ಟೇಟ್ ವ್ಯಾಪಾರ ನಡೆಸುತ್ತಿದ್ದರು. ಕ್ರಿಕೆಟ್ ಆಡಳಿತ ಮಂಡಳಿ ಕಿತಾಪತಿಗಳಲ್ಲಿ ಭಾಗಿಯಾಗುತ್ತಿದ್ದರು. ಚುನಾವಣಾ ರಾಜಕೀಯಕ್ಕಿಳಿದು ಗೆಲುವು-ಸೋಲು ಎರಡೂ ಕಂಡರು. ವೈಯಾರಿ ಹೆಂಗಸರನ್ನು ಗುಡ್ಡೆ ಹಾಕಿಕೊಂಡು ಫ್ಯಾಶನ್ ಶೋ ನಡೆಸುತ್ತಿದ್ದರು. ಪ್ಯಾಕೇಜಿಂಗ್ ಇಂಡಸ್ಟ್ರಿ ನಡೆಸಿದರು. ಅನೇಕ ಮೂರ್ಖರಂತೆ ಜ್ಯೋತಿಷ್ಯ, ಹಸ್ತರೇಖೆ ನಂಬುತ್ತಿದ್ದುದಲ್ಲದೆ ತಾನೇ ತನಗಿಂತಾ ದಡ್ಡರಿಗೆ ಜ್ಯೋತಿಷ್ಯ ಹೇಳುತ್ತಿದ್ದರು. ದುಬಾರಿ ಕಾರುಗಳು, ಕೋಟಿಗಟ್ಟಲೆ ರೂಪಾಯಿ ಬೆಲೆಯ ವಾಚುಗಳನ್ನು ಧರಿಸಿ ಜೊತೆಗಾರರನ್ನು ಇಂಪ್ರೆಸ್ ಮಾಡಲು ಪ್ರಯತ್ನಿಸುತ್ತಿದ್ದರು. ತಮ್ಮ ಶೋಕಿಯ ಜೀವನ ನಡೆಸಲು ಜೇಬಲ್ಲಿ ಕಾಸಿರದಿದ್ದಾಗ ಮೈಸೂರಿನ ದೊಡ್ಡ ಹೆಂಡದ ವ್ಯಾಪಾರಿಗಳ ಹತ್ತಿರ ಕೋಟ್ಯಾಂತರ ರೂಪಾಯಿ ಸಾಲ ಮಾಡುತ್ತಾ ಕೊನೆಗೆ ಸಾಲ ತೀರಿಸಲಾಗದೆ ಹೋದಾಗ ಆಸ್ತಿ ಮಾರಿ ಪುನಃ ಹೊಸ ಸಾಲ ಮಾಡುತ್ತಿದ್ದರು.

ಒಟ್ಟಿನಲ್ಲಿ ರಾಜವಂಶದ ಒಂದು ಕುಡಿ ತನ್ನ ಸ್ಥಾನ, ಅಂತಸ್ತು, ಆಸ್ಥಾನ ಹಿಂಬಾಲಕರನ್ನು ಮೇಂಟೈನ್ ಮಾಡಲು ಏನೇನು ಮಾಡಬೇಕೊ ಅದೆಲ್ಲಾ ಸರ್ಕಸ್‌ಗಳನ್ನೂ ಶ್ರೀಕಂಠದತ್ತ ಒಡೆಯರ್ ಕೂಡಾ ಮಾಡಿ ಈಗ ನಿರ್ಗಮಿಸಿದ್ದಾರೆ.

ಬ್ರಿಟಿಷ್ ಆಡಳಿತದ ಫಜೀತಿಗಳು

ಈ ರಾಜರೆನಿಸಿಕೊಂಡವರು ರಾಜರಂತೆಯೇ ಇರಬಯಸುವವರ ಕಷ್ಟ ಕೋಟಲೆಗಳು ಜನಸಾಮಾನ್ಯರಿಗೆ ನೇರವಾಗಿ ಗೊತ್ತಾಗುವುದಿಲ್ಲ. ರಾಜಪ್ರಭುತ್ವ ಎಂಬುದು ಕರಗಿ ಹೋದ ಮೇಲೂ ಅವರ ಅಂತಸ್ತು, ಜೀವನ ಶೈಲಿ, ಖರ್ಚುಗಳು, ಆದಾಯದ ಮೂಲಗಳು, ವೈವಾಹಿಕ ಸಂಬಂಧಗಳು, ಸಾರ್ವಜನಿಕ ಜೀವನದ ಗೋಜಲುಗಳು ಸವಾಲಾಗಿ ಬಂದು ನಿಲ್ಲುತ್ತವೆ.

ಒಡೆಯರ್ ರಾಜಕುಟುಂಬವೂ ಇದಕ್ಕೆ ಹೊರತಾಗಿರಲಿಲ್ಲ. ಇಂಡಿಯಾಗೆ ಸ್ವಾತಂತ್ರ ಬರುವ ಮೊದಲೇ, ಬ್ರಿಟಿಷರ ಕಾಲದಲ್ಲೇ ಇವರ ಸ್ಥಾನಮಾನಗಳಲ್ಲಿ ಅನೇಕ ಏರುಪೇರುಗಳಾಗಿ ಇಂಡಿಯಾದ ರಾಜವಂಶಗಳ ನೆಮ್ಮದಿಗೆ ಭಂಗ ತಂದಿದ್ದವು.

ಉದಾಹರಣೆಗೆ ಶ್ರೀಕಂಠದತ್ತ ಒಡೆಯರ್ ತಂದೆ ಜಯಚಾಮರಾಜೇಂದ್ರ ಒಡೆಯರ್‌ರ ಮದುವೆ ಪ್ರಸಂಗವನ್ನೇ ನೋಡಬಹುದು. ಅವರಿಗೆ ರಾಜವಂಶದ ಕನ್ಯೆಯೇ ಬೇಕಿತ್ತು. ಆದರೆ, ಹಾಗೆಂದು ಚೋಟಾ ಮೋಟಾ ರಾಜಕುಟುಂಬವಾದರೆ ಒಪ್ಪಲಾಗುತ್ತಿರಲಿಲ್ಲ. ಬ್ರಿಟಿಷರ ಆಡಳಿತದಲ್ಲಿ ಇದ್ದ ಐನೂರು ಚಿಲ್ಲರೆ ರಾಜಸಂಸ್ಥಾನಗಳಲ್ಲಿ ಅವುಗಳ ವಿಸ್ತೀರ್ಣ, ರಾಜ್ಯಾದಾಯ ಹಾಗೂ ಬ್ರಿಟಿಷರಿಗೆ ನೀಡುತ್ತಿದ್ದ ಕಪ್ಪ ಕಾಣಿಕೆಗಳ ಮಾನದಂಡ ಆಧರಿಸಿ ಫಸ್ಟ್‌ಗ್ರೇಡ್, ಸೆಕೆಂಡ್ ಗ್ರೇಡ್, ಥರ್ಡ್ ಗ್ರೇಡ್ ಎಂದು ಆರೆಂಟು ತರದ ಗ್ರೇಡುಗಳಾಗಿ ವಿಭಜಿಸಲಾಗಿತ್ತು. ಮೈಸೂರಿನ ಒಡೆಯರ್, ಹೈದರಾಬಾದಿನ ನಿಜಾಮ, ಉಲ್ ಮೂಲ್, ಬರೋಡಾ ರಾಜ, ಗ್ವಾಲಿಯರ್ ರಾಜ ಸಂಸ್ಥಾನಕ್ಕೆ ಆಗ ಫಸ್ಟ್ ಗ್ರೇಡ್ ಸ್ಥಾನವಿತ್ತು. ಆದರೆ ಮೈಸೂರಿನ ಒಡೆಯರ್ ಕುಟುಂಬ ಜಾತಿ, ಇನ್ನಿತರ ಕಾರಣಕ್ಕಾಗಿ ಈ ಫಸ್ಟ್ ಗ್ರೇಡಿನವರ ಜೊತೆ ವೈವಾಹಿಕ ಸಂಬಂಧ ಬೆಳೆಸುವಂತಿರಲಿಲ್ಲ. ಮೈಸೂರು ಸೇರಿದಂತೆ ಇವರೆಲ್ಲಾ 21 ಗನ್ ಸೆಲ್ಯೂಟ್ ಗೌರವ ಪಡೆಯುವ ಕ್ಯಾಟಗರಿಯವರಾಗಿದ್ದರು. ಹಾಗೆಯೇ ಇನ್ನುಳಿದ



ಒಡೆಯರ್ ವಿರುದ್ಧ ಮೈಸೂರು ಚಲೋ ನಡೆಸಿದ್ದ ಸ್ವಾತಂತ್ರ್ಯ ಹೋರಾಟಗಾರರು

ರಾಜಸಂಸ್ಥಾನಗಳ ಗ್ರೇಡೂ ಮತ್ತು ಗನ್‌ಸೆಲ್ಯೂಟ್ ಸಂಖ್ಯೆ ಕಡಿಮೆಯೇ ಇತ್ತು. ಆದರೂ ಒಡೆಯರ್ ಕುಟುಂಬ ತಮ್ಮ ಘನತೆಗೆ ತಕ್ಕದಲ್ಲವೆನಿಸಿದರೂ ಅನಿವಾರ್ಯವಾಗಿ ಮಧ್ಯಪ್ರದೇಶದ ಬುಂದೇಲ್‌ಖಂಡ ಪ್ರಾಂತ್ಯದ ಪುಟ್ಟ ಚರ್ಕಾನಿ ರಾಜಸಂಸ್ಥಾನದ ಸತ್ಯಪ್ರೇಮ ಕುಮಾರಿಯನ್ನು ಜಯ ಚಾಮರಾಜೇಂದ್ರ ಒಡೆಯರ ಜೊತೆ 1938ರಲ್ಲಿ ಮದುವೆಗೆ ಗೊತ್ತು ಮಾಡಿತು. ಆದರೆ ಆ ಮದುವೆ ಉಳಿಯಲಿಲ್ಲ. ಕೆಲ ಕಾಲ ಮೈಸೂರಿನ ಮಹಾರಾಣಿ ಎನಿಸಿಕೊಂಡಿದ್ದ ಸತ್ಯಪ್ರೇಮ ಕುಮಾರಿಯ ರಾಜಕುಟುಂಬದ ಕತೆಯೂ ಘೋರ ಹಾಗೂ ಕರುಣಾಜನಕವಾಗಿತ್ತು. ಈಕೆಯ ಹಿರೀಕ ರಾಜಾ ಜೈಸಿಂಗ್ ಮೋಜು ಮಜಾ ದುರಾಡಳಿತದಿಂದ ಅಧಿಕಾರ ಕಳೆದುಕೊಂಡಿದ್ದ. ಕಳೆದುಕೊಂಡಿದ್ದ ರಾಜತ್ವ, ಖಾಲಿ ಜೇಬುಗಳು, ಜನಸಾಮಾನ್ಯನಂತೆ ಬದುಕಲಾಗದ ಬಿಕ್ಕಟ್ಟಿಗೆ ಬಿದ್ದು ಆತ ಕೊನೆಗೊಂದು ದಿನ ಆತ್ಮಹತ್ಯೆ ಮಾಡಿಕೊಂಡ. ವರ್ಷಕ್ಕೆ ಕೇವಲ 6 ಲಕ್ಷ ರೂಪಾಯಿ ಆದಾಯವಿದ್ದ, 11 ಗನ್ ಸೆಲ್ಯೂಟ್‌ಗಳ ಲೋಗ್ರೇಡ್ ಸ್ಥಾನಮಾನವಿದ್ದ ರಾಜಕುಟುಂಬದ ಸತ್ಯಪ್ರೇಮ ಕುಮಾರಿಯನ್ನು ಮೈಸೂರಿನ 21 ಗನ್ ಸೆಲ್ಯೂಟ್‌ಗಳ ಹೈಗ್ರೇಡ್ ರಾಜಮನೆತನ ನೆಮ್ಮದಿಯಾಗಿ ಬಾಳಗೊಡಲಿಲ್ಲ. ಆಕೆ ಅರಮನೆ ಬಿಟ್ಟು ಜೈಪುರಕ್ಕೆ ಹೋಗಿ ಕೊನೆಗೊಮ್ಮೆ ಕ್ಷಯ ರೋಗದಿಂದ ಸತ್ತರು.

ಮೈಸೂರಿನ ಅರಸು ಮನೆತನ, ಜನ ಆಕೆಯನ್ನು ಮರೆತಾಗಿದೆ. ಹಾಗೂ ಮೀಡಿಯಾಗಳಿಗೂ ಆಕೆಯ ಹೆಸರೂ ನೆನಪಿಲ್ಲ. ನಂತರ ಜೆಸಿ ಒಡೆಯರ್ ತಮ್ಮ ಪರಿವಾರಕ್ಕೆ



ಹತ್ತಿರದ ತ್ರಿಪುರ ಸುಂದರಿ ಅಮ್ಮಣ್ಣಿಯನ್ನು ಮದುವೆಯಾದರು. ಈ ದಂಪತಿಗಳ ಐವರು ಮಕ್ಕಳಲ್ಲಿ ನಾಲ್ವರು ಹೆಣ್ಣುಮಕ್ಕಳಾದರೆ ಶ್ರೀಕಂಠದತ್ತ ಒಬ್ಬ ಮಗ. ಬೆಟ್ಟದ ಕೋಟೆ ಕುಟುಂಬದ ಪ್ರಮೋದಾ ದೇವಿಯವರೊಂದಿಗೆ ಶ್ರೀಕಂಠದತ್ತರ ಮದುವೆಯೇನೋ ಆಯಿತು. ಆದರೆ ಒಡೆಯರ್ ಕುಟುಂಬದ ಹೆಣ್ಣು ಮಕ್ಕಳ ಮದುವೆ ಮಾಡುವಾಗ ಮತ್ತದೇ ಸ್ಥಾನಮಾನ, ಯಾವ ರಾಜವಂಶಕ್ಕೆ, ಎಷ್ಟು ಗನ್ ಸೆಲ್ಯೂಟ್, ಗ್ರೇಡ್ ಲೆಕ್ಕಾಚಾರಗಳೆಂಬ ಈಗ ನೋಡಿದರೆ ಕೊಂಚ ತಮಾಷೆ ಎನಿಸಬಹುದಾದ ವಿದ್ಯಮಾನಗಳೆಲ್ಲಾ ಘಟಿಸಿದವು. ಈ ರಾಜವಂಶದ ಇವತ್ತಿನ ಯಾವ ಅಳಿಯಂದಿರ ಮುಖ ಪರಿಚಯವೂ ಕರ್ನಾಟಕದ ಜನರಿಗಿಲ್ಲ. ಇವರೆಲ್ಲಾ ದೂರದ ಗುಜರಾತ್, ರಾಜಾಸ್ತಾನ್, ಉತ್ತರಪ್ರದೇಶದ ನಾನಾ ಗ್ರೇಡುಗಳಿದ್ದ ರಾಜವಂಶದ ಕುಡಿಗಳಾಗಿದ್ದಾರೆ. ಏನೇನೊ ಪರಿಪಾಟಲು ಬೀಳುತ್ತಾ ತಮ್ಮ ಗತಕಾಲದ ಸ್ಟೇಟಸ್‌ನ ಕಲ್ಪಿತ ರಾಜ್ಯದಲ್ಲೇ ಕಾಲಯಾಪನೆ ಮಾಡುತ್ತಿದ್ದಾರೆ. ಮೈಸೂರು ರಾಜಮನೆತನದ ಆಸ್ತಿ ಕಲಹಗಳಲ್ಲೂ ಭಾಗಿಯಾಗಿದ್ದಾರೆ.

ಸ್ವಾತಂತ್ರ ಹೋರಾಟಕ್ಕೆ ವಿರುದ್ಧವಿದ್ದರು

ಭಾರತದ ಸ್ವಾತಂತ್ರ್ಯ ಸಂಗ್ರಾಮದುದ್ದಕ್ಕೂ ಬ್ರಿಟಿಷರ ಪರ ನಿಂತು ಜನರ ಬೇಡಿಕೆಯನ್ನು ದಮನಿಸುತ್ತಿದ್ದ ಒಡೆಯರ್ ಮನೆತನದ ಸ್ವಾರ್ಥವನ್ನು ಈಗ ಮರೆಮಾಚಲಾಗುತ್ತಿದೆ. ಶ್ರೀಕಂಠದತ್ತರ ತಂದೆ ಜಯಚಾಮರಾಜೇಂದ್ರ ಒಡೆಯರ್ ತಮ್ಮ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಪಕ್ಷವನ್ನು ನಿಷೇಧಿಸಿದ್ದರು. ಆಶ್ಚರ್ಯವೆಂದರೆ 1947ರ ಆಗಸ್ಟ್ 15ರಂದು ಭಾರತ ಸ್ವಾತಂತ್ರ ಪಡೆದರೂ ಮೈಸೂರು ಸಂಸ್ಥಾನವು ಭಾರತದೊಂದಿಗೆ ಸೇರಲು ನಿರಾಕರಿಸಿತ್ತು. ಆಗ ಜನತೆ ಪುನಃ 'ಮೈಸೂರು ಚಲೋ' ಆಂದೋಲನ ನಡೆಸಿ ರಾಜಪ್ರಭುತ್ವ ತೊಲಗಿಸಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಹೋರಾಡಿದರು. ಆಗ ಇದೇ ಒಡೆಯರ್ ಕುಟುಂಬ ತಮ್ಮ ರಾಜ್ಯಾಧಿಕಾರ ಉಳಿಸಿಕೊಳ್ಳಲು ನೂರಾರು ಹೋರಾಟಗಾರರನ್ನು ಪೊಲೀಸ್ ಗೋಲಿಬಾರ್‌ನಲ್ಲಿ ಕೊಲ್ಲಿಸಿತ್ತು. ಹಾಗೆ ದಮನ ದೌರ್ಜನ್ಯ ನಡೆಸಿದ ಜಯಚಾಮರಾಜೇಂದ್ರ ಒಡೆಯರನೇ ನಂತರ ಮೈಸೂರು ರಾಜ್ಯದ ಮೊದಲ ರಾಜ್ಯಪಾಲರೂ ಆದರು. ಆದರೆ ಎಮರ್ಜೆನ್ಸಿ ಕಾಲದಲ್ಲಿ ಇಂದಿರಾ ಗಾಂಧಿ ರಾಜಧನ ರದ್ದತಿ ಮಾಡಿದಾಗ ನೂರಾರು ರಾಜಮನೆತನಗಳ ಬಲ ಉಡುಗಿ ಹೋಯಿತು. ಆಗ ಎಚ್ಚೆತ್ತುಕೊಂಡ ಅವರು ನೇರ ರಾಜಕೀಯ ಪ್ರವೇಶ ಮಾಡಿ ತಮಗಿದ್ದ ಅಧಿಕಾರ, ಸ್ಥಾನಮಾನಗಳನ್ನು ಡೆಮಾಕ್ರಸಿಯ ಚೌಕಟ್ಟಿನೊಳಗೇ ಪುನರ್ ರಚನೆ ಮಾಡಿಕೊಂಡರು. ರಾಜಸ್ತಾನದ ವಸುಂದರ ರಾಜೆ ಕುಟುಂಬ ಮತ್ತಾಕೆಯ ಮಧ್ಯಪ್ರದೇಶದ ಸಿಂಧಿಯಾಗಳು, ರಾಯಚೂರಿನ ವೆಂಕಟೇಶ ನಾಯಕ್ ಕುಟುಂಬ, ಜೈಪುರದ ರಜಪೂತ ರಾಜವಂಶಸ್ಥ ಭವಾನಿ ಸಿಂಗ್, ರಾಣಿ ಗಾಯಿತ್ರಿ ದೇವಿ, ಬಿಕಾನೇರ್ ರಾಜನ ಕುಟುಂಬ... ಹೀಗೆ ಲೆಕ್ಕ ಹಿಡಿದರೆ ಸ್ವತಂತ್ರ ಭಾರತದ ನೂತನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರ ಸ್ಥಾನಕ್ಕೇರಿದವರಲ್ಲಿ ಶ್ರೀಮಂತ ದೊಡ್ಡ ಭೂಮಾಲೀಕರು, ಉದ್ಯಮಿಗಳು ಹಾಗೂ ರಾಜಮನೆಗಳದ್ದೇ ಸಿಂಹಪಾಲು. ಅದೇ ಮೆರವಣಿಗೆಯಲ್ಲಿ ಮೈಸೂರಿನ ಶ್ರೀಕಂಠದತ್ತ ಒಡೆಯರ್ ಕೂಡ ಸಾಗಿದರು. 1984ರಲ್ಲಿ ಮೊದಲ ಬಾರಿಗೆ ಸಂಸತ್‌ಗೆ ಸ್ಪರ್ಧಿಸಿ ನಾಲ್ಕು ಬಾರಿ ಗೆದ್ದು ಎರಡು ಸಾರಿ ಸೋತರು. ಈತ ಎಲೆಕ್ಷನ್ ಗೆದ್ದು ಅಧಿಕಾರ ಪಡೆದಾಗಲೂ ಜನರಿಗಾಗಿ ಏನನ್ನೂ ಮಾಡಲಿಲ್ಲ. ಸೋತಾಗಲೂ ತಲೆಕೆಡಿಸಿಕೊಳ್ಳಲಿಲ್ಲ. ಅವರಿಗೆ ಅಧಿಕಾರ ಬೇಕಾಗಿದ್ದದ್ದು ತಮ್ಮ ಆಸ್ತಿಪಾಸ್ತಿಗಳ ರಕ್ಷಣೆಗಾಗಿ ಮಾತ್ರ. ಅದೇ ರೀತಿ ಶ್ರೀಕಂಠದತ್ತ ಕರ್ನಾಟಕ ಕ್ರಿಕೆಟ್ ಸಂಸ್ಥೆಯ ಎಲೆಕ್ಷನ್‌ಗೆ ನಿಂತಿದ್ದೂ ಕೂಡ ಸಮಾಜದ ಮೇಲ್ತರ ಪ್ರತಿಷ್ಠೆಯ ಸ್ಥಾನಮಾನಗಳಿಗಾಗಿ ಮಾತ್ರ. ಇನ್ನು ಶ್ರೀಕಂಠದತ್ತ ನಡೆಸುತ್ತಿದ್ದ ಫ್ಯಾಷನ್ ಷೋಗಳು ರಾಜ-ಯುವರಾಜರುಗಳ ಹೆಂಗಸರ ಶೋಕಿಯ ಆಧುನಿಕ ರೂಪದಂತಿತ್ತಷ್ಟೆ.

ಆಧುನಿಕ ಕಾಲಘಟ್ಟದ ಈ ನೂರು ವರ್ಷಗಳ ಇತಿಹಾಸ ಕೆದಕಿ ನೋಡಿದರೆ ನಾಲ್ವಡಿ ಕೃಷ್ಣರಾಜ ಒಡೆಯರರನ್ನು ಹೊರತುಪಡಿಸಿ ಉಳಿದ ಒಡೆಯರ್‌ಗಳ ಬದುಕು ಅಷ್ಟೇನೂ ಘನತೆಯಿಂದ ಕೂಡಿರಲಿಲ್ಲ. ಅಂತೆಯೇ ನಂತರದ ಪೀಳಿಗೆಯವರ ಜೀವನ ನೆಮ್ಮದಿಯಾಗಿ ಕಳೆಯುವಂತೆಯೂ ಇರಲಿಲ್ಲ. ಹಳೆಯ ಭ್ರಮೆಗಳು, ಹೊಸ ಕಹಿ ವಾಸ್ತವಗಳ ತಾಕಲಾಟ, ಮೋಜು-ಮಸ್ತಿಗಳ ಚಟ ಸಾಲಗಾರರ ಕಾಟಗಳಲ್ಲೇ ಮೈಸೂರರಸರ ಬದುಕೂ ಸಾಗಿ ಬಂತು.

ಶ್ರೀಕಂಠದತ್ತ ಒಡೆಯರ್ ಅರಮನೆ ಬಿಟ್ಟು ಹೊರಬಂದಿದಿದ್ದರೆ ಜನ ನೆನಪಿಡುವಂತಹ ಕೆಲವು ಕೆಲಸಗಳನ್ನಾದರೂ ಮಾಡಿ ತೋರಿಸಬಹುದಿತ್ತೇನೊ!

ಆದರೆ ರಾಜತ್ವದ ಕಲ್ಪಿತ ಲೋಕದಲ್ಲಿರುವವರಿಗೆ ಜನಸಾಮಾನ್ಯರು ಕಣ್ಣಿಗೆ ಬೀಳುವುದು ಸುಲಭವಲ್ಲ.

● ವರದಿಗಾರ









‘ದುಃಖ, ಶೋಕಗಳಿಗೆ ನಾನೆಂದೂ ವಶವಾಗಲಿಲ್ಲ...’

[illegible]

ಬಾಲ್ಯದಲ್ಲಿ ನಮ್ಮನ್ನು ಮುದ್ದು ಮಾಡಿ ಬೆಳೆಸಲಿಲ್ಲ, ...ಯಾವ ಸಲುಗೆ ತೋರಲಿಲ್ಲ, ನಮ್ಮ ಬೆಳವಣಿಗೆಯಲ್ಲಿ ...ಗಾಂಭೀರ್ಯಕ್ಕೆ ಮೊದಲ ಪ್ರಾಮುಖ್ಯತೆ. ರಾಜಗಾಂಭೀರ್ಯ, ...ಮ್ರತೆ, ಸಾಮಾನ್ಯ ಕಲಿಕೆಯೊಂದಿಗೆ ವಿಶೇಷ ಕಲಿಕೆಗಳಿಗೆ ...ಷ್ಟೆ ಒತ್ತು ನೀಡಲಾಗಿತ್ತು. ನಮ್ಮ ತಂದೆಯವರಿಗೆ ನಾವು ...ವರು ಮಕ್ಕಳು- ಗಾಯತ್ರಿದೇವಿ, ಮೀನಾಕ್ಷಿದೇವಿ, ನಾನು, ...ಮಾಕ್ಷಿದೇವಿ, ವಿಶಾಲಾಕ್ಷಿದೇವಿ. ನಾವು ಐವರು ...ರಮನೆಯ ಆವರಣದಲ್ಲೇ ಇದ್ದ ರಾಯಲ್ ಸ್ಕೂಲಿನಲ್ಲೇ ...ಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಪೂರೈಸಿದೆವು. ...ನಿತ್ಯ ಬೆಳಗ್ಗೆ 5.30 ಗಂಟೆಗೆ ಏಳುತ್ತಿದ್ದೆವು. ನಿತ್ಯಕರ್ಮ, ...ವ್ಯಾಯಾಮ, ಸ್ನಾನ ನಂತರ ಪೂಜೆ. ಆನಂತರ ಪುರೋಹಿತರು ...ಮ್ಮ ಪೂಜೆಗೆ ಸಂಬಂಧಿಸಿದ ಶ್ಲೋಕಗಳನ್ನು ಕಲಿಸುತ್ತಿದ್ದರು. ...ಸಂಗೀತ ಪಾಠದ ನಂತರ ಉಪಾಹಾರ ಸ್ವೀಕರಿಸಿ ಹತ್ತು ...ಗಂಟೆಗೆ ಶಾಲೆಗೆ ಹೊರಡುತ್ತಿದ್ದೆವು. ನಮ್ಮ ಸಂಬಂಧಿಕರ ...ಮಕ್ಕಳು ಹಾಗೂ ನಮ್ಮ ತಂದೆಗೆ ತೀರಾ ...ಪರಿಚಯವಿರುವವರ ಮಕ್ಕಳು ನಮ್ಮೊಂದಿಗೆ ಕಲಿಯಲು ...ಬರುತ್ತಿದ್ದರು. ನಾವೆಲ್ಲ ಶಿಕ್ಷಕರನ್ನು ಅತ್ಯಂತ ಗೌರವದಿಂದ ...ಕಾಣುತ್ತಿದ್ದೆವು.

ಮಧ್ಯಾಹ್ನ 1 ರಿಂದ 3.30 ಗಂಟೆವರೆಗೆ ಊಟ ಮತ್ತು ವಿಶ್ರಾಂತಿಗಾಗಿ ಬಿಡುವು. ನಮ್ಮ ಸಂಬಂಧಿಕರ ಮಕ್ಕಳಿಗೂ ನಮ್ಮೊಂದಿಗೆಯೇ ಊಟವಾಗುತ್ತಿತ್ತು. ಮತ್ತೆ ಸಂಜೆ 4 ರಿಂದ 5.30 ರವರೆಗೆ ಶಾಲೆ-ಆಟೋಟ ಇತ್ಯಾದಿ. ಸಂಜೆ 6 ರಿಂದ 7 ರವರೆಗೆ ಅಜ್ಜಿ (ತಂದೆಯ ತಾಯಿ)ಯವರೊಂದಿಗಿರಲು ಚಾಮುಂಡಿ ವಿಹಾರ್ ಅರಮನೆಗೆ ಹೋಗುತ್ತಿದ್ದೆವು. ಅಲ್ಲಿಂದ ರಾತ್ರಿ 8 ರವರೆಗೆ ಮತ್ತೊಬ್ಬ ಅಜ್ಜಿ (ತಾಯಿಯ ತಾಯಿ)ಯವರೊಂದಿಗಿದ್ದು ಅರಮನೆಗೆ ಹಿಂತಿರುಗುತ್ತಿದ್ದೆವು. ರಾತ್ರಿ ಊಟದ ನಂತರ ನಮ್ಮನ್ನು ನೋಡಿಕೊಳ್ಳುತ್ತಿದ್ದ ಆಂಗ್ಲೊ ಇಂಡಿಯನ್ ಟೀಚರ್ ಕತೆಗಳನ್ನು ಹೇಳುತ್ತಿದ್ದರು. ಆ ಕತೆಗಳೆಲ್ಲ ಪುರಾಣ, ಪರಂಪರೆ, ಇತಿಹಾಸಗಳಿಗೆ ಸಂಬಂಧಿಸಿದವಾಗಿದ್ದವು.

ನಮ್ಮ ತಂದೆಯವರ ಇಲ್ಲೇ ಇದ್ದ ದಿನ, ಅವರೊಂದಿಗೆ ನಮ್ಮ ಉಪಾಹಾರವಾಗುತ್ತಿತ್ತು. ನಮ್ಮ ಕೊಠಡಿಗಳು ಮೇಲ್ಗಡೆ ಇದ್ದವು. ಉಪಾಹಾರದ ವೇಳೆ ಅವರೇ ಫೋನ್ ಮಾಡಿ ಕರೆಸಿಕೊಳ್ಳುತ್ತಿದ್ದರು. ಒಮ್ಮೊಮ್ಮೆ ನಮ್ಮೆಲ್ಲರನ್ನೂ ತಮ್ಮ ಬೆನ್ನ ಮೇಲೆ ಕೂರಿಸಿಕೊಂಡು ಸವಾರಿ ಆಟ ಆಡಿಸುತ್ತಿದ್ದರು.

ಡ್ರೈವರ್ ಕರೀಂಖಾನ್. ನಾನಾಗ ಅವನನ್ನು ಸುಮ್ಮನಿರಿಸಿ ಕಾರ್ ತಗೊಂಡು ವೇಗವಾಗಿ ಓಡಾಡಿಸ್ತಿದ್ದೆ. ನಮ್ಮ ತಾಯಿ ತುಂಬಾ ಮಡಿವಂತರು. ತೀರಾ ಸಂಪ್ರದಾಯಸ್ಥರು. ತಂದೆಯವರು ಬೇಟೆಗೆ ಹೋದಾಗ ನಾನೂ ಹೋಗುತ್ತಿದ್ದೆ. ಆಗ ಫ್ಲೂ ಅಥವಾ ಬೇರೆ ರೀತಿಯಲ್ಲಿ ಹುಷಾರು ತಪ್ಪಿ ಮಲಗಿದರೆ ತಂದೆಯವರು ವೈದ್ಯರನ್ನು ಕರೆಸಿ ಟ್ರೀಟ್ ಮಾಡಿಸ್ತಿದ್ರು. ಅದೇ ಕಾಲಕ್ಕೆ ತಾಯಿಯವರು ಕೂಡ ಇನ್ನೊಂದು ಬಗೆಯಲ್ಲಿ ಟ್ರೀಟ್ ಮಾಡಿಸ್ತಿದ್ರು. ತಾಯಿಯವರ ಮನಸ್ಸಿನಲ್ಲಿ ಗಾಳಿ, ಗ್ರಹಚಾರ, ಸೋಂಕು ತಗುಲಿರಬಹುದೆಂಬ ಸಂದೇಹಗಳಿರ್ತಿದ್ವು. ಅದಕ್ಕಾಗಿ ಯಂತ್ರ, ಮಂತ್ರಗಳ ಮೂಲಕ ಉಪಶಮನ ಮಾಡಲೆತ್ನಿಸುತ್ತಿದ್ದರು.



ಪಾಶ್ಚಾತ್ಯ ರೀತಿಯ ಚಿಕಿತ್ಸೆ ಮತ್ತು ಸ್ಥಳೀಯ ನಂಬಿಕೆ ಈ ಎರಡೂ ಬಗೆಯ ಉಪಚಾರಗಳಿಂದ ನಾನು ಬೇಗ ಗುಣಮುಖನಾಗಿರುತ್ತಿದ್ದೆ.

ತಂದೆಯವರಲ್ಲಿ ಅರಿವಿತ್ತು. ನಾವು ಅರಸು ಜನಾಂಗದವರು- ನಮ್ಮ ಸಂಖ್ಯೆ ಇವತ್ತು ಕರ್ನಾಟಕದಲ್ಲಿ ಕೇವಲ 60 ಸಾವಿರದಿಂದ 70 ಸಾವಿರ ಮಾತ್ರ. ಮೈಸೂರು ಅರಸರಾದವರಲ್ಲಿ ಜಾತಿಭಾವನೆ ಇರಲಿಲ್ಲ. ರಾಜರಾಜದವರು ಸಮಾಜದಲ್ಲಿರುವ ಎಲ್ಲ ಜಾತಿಯವರನ್ನು ಸಮಾನವಾಗಿ ಕಾಣಬೇಕಾಗಿತ್ತು. ಸ್ವಾತಂತ್ರ್ಯಕ್ಕೂ ಮುನ್ನವೇ ಮೈಸೂರು ರಾಜ್ಯದಲ್ಲಿ ಹರಿಜನರಿಗೆ, ಕೆಳವರ್ಗದ ಜನರಿಗೆ ಮೀಸಲಾತಿ ಸೌಲಭ್ಯ ನೀಡಲಾಗಿತ್ತು. ಹೀಗಾಗಿ ನಾವು ರಾಜಮನೆತನದವರು ರಾಜಕೀಯದ ವಿಷಯವೇ ಬರಲಿ, ಬೇರಾವುದೇ ವಿಷಯವೇ ಆಗಿರಲಿ ಜಾತಿ ಐಡೆಂಟಿಟಿ ಮೂಲಕ ಸಮಾಜದಲ್ಲಿ ಗುರುತಿಸಿಕೊಳ್ಳಬೇಕಾಗಿರಲಿಲ್ಲ.

ಈ ಕಾರಣಕ್ಕಾಗಿಯೇ ತಂದೆಯವರು ನನ್ನನ್ನು ಮುಖ್ಯವಾಹಿನಿಯ ರಾಜಕಾರಣದಲ್ಲಿ ಬೆರೆಸಬೇಕೆಂದು ತೀರ್ಮಾನಿಸಿದ್ದರು. ಈ ಹಿನ್ನೆಲೆಯಲ್ಲೇ ನನ್ನ ಎಂಬಿಬಿಎಸ್

ಅವಮಾನವೆನಿಸಲ್ಪಟ್ಟ ಘಟನೆಗಳು, ಅಸಹಾಯಕ ಭಾವನೆ ಮೂಡಿಸಿದ ಸಂದರ್ಭಗಳಾಗಲಿ ನನ್ನ ... ಬಾಳಿನಲ್ಲಿ ಎಂದೂ ಎದುರಾಗಲಿಲ್ಲ. ... ನನ್ನ ಬಳಿ ಜಾಗವಿಲ್ಲ, ನನ್ನ ಬಲಹಸ್ತದ ರೇಖೆಗಳನ್ನು ಗಮನಿಸಿ. ಅಲ್ಲಿ heart line ಇಲ್ಲ, Head line ಮಾತ್ರ ಇದೆ. ಹೀಗಾಗಿ ನನ್ನ ಬಾಳಿನಲ್ಲಿ head line ದ ಪ್ರಧಾನ ಪಾತ್ರ. ಅದು ಹಾರ್ಟ್ ಅನ್ನು ರೂಲ್ ಮಾಡುತ್ತೆ.


ನಮ್ಮ ತಂದೆಯವರ ತಾಯಿ- ಅಂದ್ರೆ ಅಜ್ಜಿ- ಅವರು ತೀರಿಕೊಂಡಾಗ ಸ್ವಲ್ಪ ನೋವಾಯಿತು ಸಹಜವಾಗಿ. ಅವರು ನಮ್ಮನ್ನು ತುಂಬಾ ಪ್ರೀತಿಸ್ತಿದ್ರು. ಯಾವತ್ತು ಅವರು ಈಡಿಯಟ್, ಕತ್ತೆ ಮುಠ್ಠಾಳ ಅಂತೆಲ್ಲ ಬಯ್ದವರಲ್ಲ. ಹಾಗೆ ನಾವು ಸಾಕಿದ ನಾಯಿಗಳು, ಇತರ ಪ್ರಾಣಿಗಳು ಹೋದಾಗ ಮನಸ್ಸಿಗೆ ಕೊಂಚ ಕಸಿವಿಸಿಯಾಗಿರಬಹುದು. ಉಳಿದಂತೆ ದುಃಖದ ಸಂಗತಿಯೇ ಆಗಲಿ, ಸಂತೋಷದ ಘಳಿಗೆಯೇ ಆಗಲಿ, ಯಾವತ್ತಿಗೂ ನಾನು ಸಮಚಿತ್ತ.

ಪ್ರೀತಿಯ ಭಾಷೆ

ಬಾಲ್ಯದಲ್ಲಿ ನನ್ನ ಸಹಪಾಠಿಗಳಾಗಿದ್ದವರ ಪೈಕಿ ಆರ್. ವೆಸ್ಲಿ ಅವರು ಇಂದು ಎಸ್‌ಪಿಜಿಗೆ ಡೈರೆಕ್ಟರ್ ಆಗಿದ್ದಾರೆ. ರವಿಕುಮಾರ್ ಜೋಷಿ RAWನಲ್ಲಿದ್ದಾರೆ. ಈಗ ಅವರ ಡ್ಯೂಟಿ ಕೀನ್ಯಾದಲ್ಲಿ. ರವಿಕುಮಾರ್ ಮೆನನ್, ಜೆಫ್ರೀಜ್ ಕೂಡ ವಿದೇಶಗಳಲ್ಲಿದ್ದಾರೆ. ಸಿ.ಕೆ. ರಮೇಶ್ ಬೆಂಗಳೂರಿನಲ್ಲಿ ಕಂಟ್ರಾಕ್ಟರ್. ಅವರಣ್ಣ ಸಿ.ಕೆ. ವೆಂಕಟೇಶ್ ಅಡ್ವೋಕೇಟ್ ಆಗಿದ್ದಾರೆ. ಸದ್ಯಕ್ಕೆ ನಮ್ಮ ಕೇಸ್‌ಗಳನ್ನು ಹ್ಯಾಂಡ್ಲ್ ಮಾಡುತ್ತಿರುವವರು ಅವರೇನೆ. ಮತ್ತೊಬ್ಬ ಅನಂತರಾಜ ಅರಸ್ ಮೈಸೂರಿನ ರೇಸ್‌ಕ್ಲಬ್‌ನಲ್ಲಿದ್ದಾರೆ. ನನ್ನ ಇಷ್ಟದ ಆಟ ಕ್ರಿಕೆಟ್ ಮತ್ತು ಸಾಫ್ಟ್ ಬಾಲ್. ಹಾಕಿಯಲ್ಲೂ ಬಹಳ ಆಸಕ್ತಿ ಇತ್ತು. ಆದರೆ ಆಡುವಾಗ ಎರಡೂ ಮಂಡಿಗೂ ಏಟು ಬಿದ್ದು ಗಾಯವಾಗಿ ಕಡೆಗೆ ನಮ್ಮ ತಾಯಿಯವರು ಮಧ್ಯೆ ಪ್ರವೇಶಿಸಿ ಹಾಕಿಯಿಂದ ದೂರ ಮಾಡಿದರು.

ನನ್ನ ಪ್ರೀತಿಯ ತಿನಿಸು ಬಿಸಿಬೇಳೆ ಬಾತ್, ಹುರುಳಿ ಸಾರು ತುಂಬಾ ಇಷ್ಟ. ನನ್ನ ಪ್ರೀತಿಯ ಭಾಷೆ ಇಂಗ್ಲಿಷ್. ಒಂದು ವರ್ಷ ಜರ್ಮನ್ ಕೂಡ ಕಲಿತೆ. ಕಲಿಕಾ ಮಾಧ್ಯಮವೆಲ್ಲ ಇಂಗ್ಲಿಷ್ ಆದ್ದರಿಂದ ನನ್ನ ವ್ಯವಹಾರಗಳಲ್ಲಿ







...ದೃಢಕಾಯರೂ, ಎತ್ತರದ ನಿಲುವಿನವರೂ ಆದ ಅವರ ಬೆನ್ನಮೇಲೆ ನಮ್ಮ ಐವರಿಗೂ ಸ್ಥಳವಿರುತ್ತಿತ್ತು. ಮಾಮೂಲಿ ...ರಜಾದಿನಗಳಲ್ಲಿ ತಂದೆಯವರೊಂದಿಗೆ ಚಾಮುಂಡಿ ಬೆಟ್ಟ, ನಂಜನಗೂಡಿನವರೆಗೆ ಹೋಗಿಬರುತ್ತಿದ್ದೆವು. ನಮಗಾಗಿ ...ಫಿಸಿಕಲ್ ಟ್ರೈನಿಂಗ್ ಟೀಚರ್ ಇದ್ರು. ತೋಟ್ಟಿಯಲ್ಲಿ ನಾವು ಆಟವಾಡುವಾಗ ತಂದೆಯವರು ತಮ್ಮ ಬಿಡುವಿನ ವೇಳೆಯಲ್ಲಿ ನಿಂತು ನೋಡುತ್ತಿದ್ದರು.

ಪುಡಿಯಾದ ಬಲ್ಬುಗಳು

ಒಮ್ಮೆ ನಾವು ಐವರು ಮಹಡಿಯ ಮೇಲೆ ...ಆಡುತ್ತಿದ್ದೆವು. ನಮ್ಮ ಕಣ್ಣುಗಳಿಗೆ ಬರ್ನ್ ಆದ ಬಲ್ಬುಗಳನ್ನು ತುಂಬಿಟ್ಟ ಚೀಲ ಕಾಣಿಸಿತು. ಆ ಚೀಲದಲ್ಲಿದ್ದ ...ನೂರು ಬಲ್ಬುಗಳನ್ನು ಒಂದೊಂದಾಗಿ ತೆಗೆದು ಕೆಳಕ್ಕೆಸೆದೆವು. ...ಮೇಲೆ ಕೆಳಗಡೆ ಬಂದು ಕ್ರಿಕೆಟ್ ಆಡಲು ಶುರು ಮಾಡಿದೆವು. ಅಪಶ್ರೇಣಾಗಿತ್ತೊ? ಮೂರ್ನಾಲ್ಕು ಕಿಟಕಿ ಗಾಜುಗಳು ಕೂಡ ಒಡೆದವು. ಅರಮನೆಯ ಸೇವಕರು ನಮ್ಮ ಇಂಗ್ಲಿಷ್ ಟೀಚರ್‌ರವರಲ್ಲಿ ದೂರಿತ್ತರು. ಅವರು ನಮ್ಮ ತಾಯಿ-ತ್ರಿಪುರ ಸುಂದರಮ್ಮಣ್ಣಿಯವರಲ್ಲಿ ಕಂಪ್ಲೇಂಟ್ ಮಾಡಿದ್ರು. ನಮ್ಮ ತಾಯಿ ತುಸು ಸಿಟ್ಟು ಮಾಡಿಕೊಂಡು ನಮ್ಮ ತಂದೆಯವರಲ್ಲಿ ಹೇಳಿಕೊಂಡರು. ನಮ್ಮ ತಂದೆ ‘ಆಡಿದಾಗಿದ್ದರೆ, ಕೇವಲ ನೂರು ಬಲ್ಬು ಒಡೆದಿದ್ದಾರೆ. ನಾನಾಗಿದ್ದರೆ ಇನ್ನೂರು ಒಡೆಯುತ್ತಿದ್ದೆ. ಇನ್ನಷ್ಟು ಕಿಟಕಿ ಗಾಜುಗಳು ಪುಡಿಪುಡಿಯಾಗುತ್ತಿದ್ದವು” ಎಂದು ನಕ್ಕು, ನಮ್ಮ ... ಹಗುರವಾಗಿಸಿದರು.

ನಮ್ಮ ತಂದೆ ಎಲ್ಲಾದರೂ ಹೊರಗೆ ಹೋಗಿದ್ದಾಗ ...ಗೆ ಅಂತ ಸೆಕೆಂಡ್ ಕಾರ್ ಇರ್ತಿತ್ತು. ಅದರ

ರಾಜಕೀಯ ಸ್ಥಿತ್ಯಂತರ

ಬಾಲ್ಯದ ನನ್ನ ಬಹುದೊಡ್ಡ ಕನಸು ಡಾಕ್ಟರ್ ಆಗಬೇಕೆಂಬುದು. ಮೆಡಿಕಲ್ ಓದಲೇಬೇಕು ಅಂತ ನಾನು ತೀರ್ಮಾನಿಸಿದ್ದೆ. ತಂದೆಯವರು ನನ್ನ ಆ ಅಭಿಲಾಷೆಯನ್ನು ಬಹುವಾಗಿ ಪ್ರತಿಭಟಿಸಿದರು. ನಾನು ಹುಟ್ಟುವ (ಜನನ 20.2.1953) ಮುನ್ನವೇ ನಮ್ಮ ಅರಸೊತ್ತಿಗೆ ಹೋಗಿತ್ತು. ಕಾಲಗತಿಯ ಪ್ರವಾಹಕ್ಕೆ ತಂದೆ ಬಹುವಾಗಿ ಹೊಂದಿಕೊಂಡಿದ್ದರು. ನಮ್ಮ ನಾಡಿನಲ್ಲಿ, ರಾಷ್ಟ್ರದಲ್ಲಿ ಆದ ರಾಜಕೀಯ ಬದಲಾವಣೆಗಳು; ಭಾಷಾವಾರು ಪ್ರಾಂತ್ಯ ಇತ್ಯಾದಿಗಳನ್ನೆಲ್ಲ ತಂದೆಯವರು ಬಹು ಸೂಕ್ಷ್ಮವಾಗಿ ಗಮನಿಸಿದ್ದರು. ಪಂಡಿತ್ ನೆಹರೂ ಇರುವವರೆಗೆ ರಾಜ ಮನೆತನದವರಿಗೆ ಸಿಗಬೇಕಾದ ಮಾನ್ಯತೆ ಸಿಗುತ್ತೆ; ಆನಂತರ ಕಷ್ಟ ಅಂತ ತಂದೆಯವರು ಆಗಾಗ್ಗೆ ಹೇಳುತ್ತಿದ್ದರು. ಅರಮನೆಯಲ್ಲೇ ಹುಟ್ಟಿ ಅಲ್ಲೇ ಅದೇ ವಾತಾವರಣದಲ್ಲಿ ಬೆಳೆಯುತ್ತಿದ್ದ ನಮಗೂ ಹೊರಗಿನ ವಾತಾವರಣ, ಬದಲಾವಣೆಗಳ ಅರಿವಾಗುತ್ತಿತ್ತು. ತಂದೆಯವರು ಮದ್ರಾಸ್ ಗವರ್ನರ್ ಆಗಿದ್ದಾಗ ಇಂದಿರಾ ಗಾಂಧಿಯವರು ಅವರನ್ನು ರಾಷ್ಟ್ರಪತಿ ಪಟ್ಟಕ್ಕೆ ತರಬೇಕೆಂದು ಬಹುವಾಗಿ ಪ್ರಯತ್ನಿಸಿದ್ದರು. ಕೆಂಗಲ್ ಹನುಮಂತಯ್ಯ ಮತ್ತು ಅನಂತರ ಬಂದ ಮುಖ್ಯಮಂತ್ರಿಗಳು ಒಂದಲ್ಲ ಒಂದು ರೀತಿಯಲ್ಲಿ ಹಲವಾರು ತೊಂದರೆಗಳನ್ನು ಅರಮನೆಗೆ ಕೊಡುತ್ತಾ ಬಂದ್ರು. ನಮ್ಮ ತಂದೆ ಇರೋವರೆಗೂ ಅವರ ಕಿರುಕುಳಗಳ ವಿರುದ್ಧ ಹೋರಾಡಬೇಕಾಯ್ತು.

ಸಮಾಜದಲ್ಲಿದ್ದ ಜಾತಿರಾಜಕೀಯದ ಬಗೆಗೆ

ಕನಸಿಗೆ ತಂದೆಯವರು ಅಡ್ಡಿಯಾದದ್ದು. ಬಾಲ್ಯದಲ್ಲೇ ನನ್ನ ಆ ಹಾದಿ ಬದಲಾಯಿತು. ಕಡೆಗೆ ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದೆ. ಕಾನೂನಿನಲ್ಲಿ ಪದವಿ ಪಡೆದೆ.

ಅರಮನೆಯಿಂದ ಹೊರಗೆ....

ರಾಜ ಮನೆತನದವರು, ಅರಮನೆಯ ಆವರಣದಲ್ಲಿ ಬೆಳೆದವರು ಹೊರಗಿನವರೊಂದಿಗೆ ಹೇಗೆ ಕಲೆಯುತ್ತಾರೆ, ವ್ಯವಹರಿಸುತ್ತಾರೆ ಎಂಬ ಕುತೂಹಲ ಎಲ್ಲರಲ್ಲೂ ಇದ್ದೇ ಇರುತ್ತೆ. ಹೊರಗೂ ನಾನು ಸಹಜವಾಗಿಯೇ ಇರುತ್ತಿದ್ದೆ. ಕೆಲವರು ನಮಗಿದ್ದ ಹಿನ್ನೆಲೆ ಕಾರಣವಾಗಿ ಹೆದರುತ್ತಿದ್ದರು. ಮತ್ತೆ ಕೆಲವರು ಹೆದರುವ ಹಾಗೆ ನಟಿಸುತ್ತಿದ್ದರು. ಬಹಳ ಮಂದಿ ಮನಸ್ಸೀ ಗೌರವಿಸುತ್ತಿದ್ದರು. ವಿಶೇಷವಾಗಿ ಕೆಲವರು ‘ಇವರು ಬುದ್ಧಿಹೀನರು, ಕೋಟೆಯ ನಡುವೆ ಅರಮನೆಯೊಳಗೆ ಬೆಳೆದವರು, ಲೋಕ ತಿಳಿಯದವರು, ವ್ಯವಹಾರ ಅರಿಯದವರು, ಪೆದ್ದರು, ಇವರನ್ನು ಸುಲಭವಾಗಿ ಮೋಸಗೊಳಿಸಬಹುದು’ ಎಂದೆಲ್ಲ ಭಾವಿಸಿದ್ದರು. ನಮ್ಮ ತಂದೆಯವರೊಂದಿಗೆ ವಿಶ್ವಾಸದಿಂದ ನಡೆದುಕೊಳ್ಳುತ್ತಲೇ ಅವರಿಂದ ಆಸ್ತಿಗಳನ್ನು, ವಸ್ತುಗಳನ್ನು ಕಸಿದಂತೆಯೇ ನಮ್ಮಿಂದಲೂ ಕಸಿಯಬಹುದೆಂದು ಅವರೆಲ್ಲಾ ತಿಳಿದಿದ್ದರು. ಆದರೆ ಅಂಥವಕ್ಕೆಲ್ಲ ನಾವು ಅವಕಾಶ ಮಾಡಿಕೊಡಲಿಲ್ಲ.

ಬಾಲ್ಯದಿಂದಲೂ ನಾನು ಸ್ಥಿತಪ್ರಜ್ಞ. ದುಃಖ, ಶೋಕ, ವಿರಹಗಳಿಗೆ ನಾನೆಂದೂ ವಶವಾಗಲಿಲ್ಲ. ಜಯಾಪಜಯಗಳನ್ನು ಸಮಾನವಾಗಿ ಸ್ವೀಕರಿಸುವ ಗುಣ ನನ್ನಲ್ಲಿ ಎಂದಿನಿಂದಲೂ ಇದೆ. ಅಳುಕು, ನಿರುತ್ಸಾಹ ತುಂಬಿದ ಘಳಿಗೆಗಳಾಗಲಿ, ಆತಂಕದ, ತಲ್ಲಣದ ಕ್ಷಣಗಳಾಗಲಿ, ಹಾಗೆಯೇ

ಇಂಗ್ಲಿಷ್ ಹೆಚ್ಚು. ಕನ್ನಡ ನನ್ನ ಆಡು ಭಾಷೆ. ಪ್ರೀತಿಯ ದೇಶ ಇಂಗ್ಲೆಂಡ್, ಸಿಟಿ ಲಂಡನ್. ಕೆನತ್ ಅಂಡರ್‌ಸನ್ ಮತ್ತು ಜಿಮ್ ಕಾರ್ಬೆಟ್‌ರ ಪುಸ್ತಕಗಳು ಇವತ್ತಿಗೂ ನನ್ನಲ್ಲಿ ಕುತೂಹಲ ಕೆರಳಿಸುತ್ತವೆ. ಶಾಲಾದಿನದ ಬೇಸಿಗೆ ಮತ್ತು ಕ್ರಿಸ್ಮಸ್ ರಜಾ ದಿನಗಳಲ್ಲಿ ನಮ್ಮ ತಂದೆಯವರೊಂದಿಗೆ ದೇಶದ ನಾನಾಭಾಗಗಳಿಗೆ ಪ್ರವಾಸ ಕೈಗೊಳ್ಳುತ್ತಿದ್ದೆವು. ಸಾಧಾರಣವಾಗಿ ಕ್ರಿಸ್ಮಸ್ ದಿನಗಳಲ್ಲಿ ಉತ್ತರ ದೇಶಗಳತ್ತ ಯಾತ್ರೆ. ಒಮ್ಮೆ ಕಾಶ್ಮೀರಕ್ಕೂ ಹೋಗಿದ್ದೆವು. ಶ್ರೀನಗರದ ದಾಲ್‌ಲೇಕ್‌ನಲ್ಲಿ ಡಾ. ಕರಣ್‌ಸಿಂಗ್‌ರ ಆತಿಥ್ಯದಲ್ಲಿ ಹದಿನೈದು ದಿವಸ ಕಳೆದದ್ದು ಇಂದಿಗೂ ಅಚ್ಚಳಿಯದ ನೆನಪು.

ದೇಶದ ಹೊರಭಾಗದ ಪ್ರವಾಸಗಳಲ್ಲಿ ನನಗೆ ಇಂದಿಗೂ ಯೂರೋಪ್ ಇಷ್ಟ. ಅಮೆರಿಕಾ ಎಂದಿಗೂ ಒಗ್ಗಲೇ ಇಲ್ಲ. ಯೂರೋಪ್‌ನಲ್ಲಾದರೆ ದೇಶದಿಂದ ದೇಶಕ್ಕೆ ಸುಗಮವಾದ ಸಂಚಾರಿ ವ್ಯವಸ್ಥೆ ಇದೆ. ನಮ್ಮ ಸಂಸ್ಕೃತಿ, ಪರಂಪರೆ, ನಾಗರಿಕತೆಯನ್ನು ನಾವು ಯುರೋಪ್‌ನಲ್ಲಿ ಕಾಣಬಹುದು. ಆದರೆ ಅಮೆರಿಕಾ ಹಾಗಲ್ಲ. ಅದರ ನಾಗರಿಕತೆ ತೀರಾ ಕಿರಿದು. ಅಲ್ಲಿ ಮನುಷ್ಯ ಜೀವಕ್ಕೆ ಬೆಲೆ ಇಲ್ಲ, ಸೆಕ್ಯೂರಿಟಿ ಇಲ್ಲ. ಆ ಕಾರಣಕ್ಕೆ ನನಗೆ ಅಮೆರಿಕಾ ಇಷ್ಟವಾಗದೆ ಇರಬಹುದು.

ಬಾಲ್ಯ ಕಾಲದ ನೆನಪು ಹೇಳಲು ಹೋಗಿ ಅಮೆರಿಕಾದವರೆಗೆ ಬಂದೆ. ಮತ್ತೆ ಬಹುಪಾಲಾಗೊಮ್ಮೆ ಹೇಳುವೆ. ಈಗ ಇಷ್ಟು ಸಾಕು.

ನಿರೂಪಣೆ: ಆರ್. ಸ್ವಾಮಿ ಆನಂದ್

(ಜನವರಿ 3, 2001)

ಲಿಂಗಾಯತರ ಬಟ್ಟೆಗೆಡಿಸುವ ಈ ಗುರುಗಳು ಬೇಕೆ?

ಬಸವಣ್ಣನವರು ಕಟ್ಟಬಯಸಿದ ಸಮಾಜದಲ್ಲಿ ಮಠೀಯ ವ್ಯವಸ್ಥೆ ಇರಲಿಲ್ಲ, ಗುರು-ಜಗದ್ಗುರುಗಳು ಇರಲಿಲ್ಲ. ಆದರೆ ಇದೀಗ ಲಿಂಗಾಯತ ಜನಾಂಗಕ್ಕೆ ನಾವೆಲ್ಲ ಗುರುಗಳು - ಜಗದ್ಗುರುಗಳು ಎಂದು ಬಹಳಷ್ಟು ಜನ ಮುಗಿಬಿದ್ದು ಲಿಂಗಾಯತರ ಬಟ್ಟೆ ಕೆಡಿಸಿಟ್ಟಿದ್ದಾರೆ. 'ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ' ಎಂಬ ಮಾತುಗಳನ್ನು ಹೇಳುತ್ತ ಹೇಳುತ್ತ ಬಹುತೇಕರನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಂಡಿದ್ದಾರೆ. ಅರಿವಿನ ಸಂಸ್ಕೃತಿ ಇರುವ ವಚನ ಪರಂಪರೆಯನ್ನು ಕಿತ್ತೊಗೆದು ಅಲ್ಲಿ ಗುಲಾಮಿ ಸಂಸ್ಕೃತಿಯನ್ನು ತಂದು ಭಕ್ತರನ್ನು ಅಕ್ಷರಶಃ ಗುಲಾಮರನ್ನಾಗಿ ಮಾಡಿದ ಶ್ರೇಯಸ್ಸು 'ಗುರುವರ್ಗ'ದವರಿಗೆ ಸಲ್ಲುತ್ತದೆ.

ಮೂಲತಃ ಲಿಂಗಾಯತ ತತ್ವ ಪರಂಪರೆಯಲ್ಲಿ ಗುರು, ಲಿಂಗ, ಜಂಗಮವೆಂಬುದು ತತ್ವಗಳೆ ಹೊರತು ವ್ಯಕ್ತಿಗಳಲ್ಲ. ಯಾವ ವ್ಯಕ್ತಿಯಾದರೂ ತನ್ನ ನಡವಳಿಕೆಗಳ ಮೂಲಕ ಗುರು ಲಿಂಗ ಜಂಗಮವಾಗಬಹುದು. ಆದರೆ ಇಂದು ಇದಕ್ಕೆ ತೀರಾ ತದ್ವಿರುದ್ಧವಾಗಿ ಗುರುವನ್ನು ಲಿಂಗವನ್ನು ಜಂಗಮವನ್ನು ಪ್ರತ್ಯೇಕಿಸಿ ನೋಡುವ ಹುನ್ನಾರಗಳೆ ಸಿದ್ಧಾಂತಗಳಾಗಿ ಕುಳಿತುಕೊಂಡಿವೆ. ಅರಿವನ್ನು ತಂದು ಕೊಡುವವನು ಆತ ಜಾತಿಯಿಂದ ಯಾರೇ ಆಗಿದ್ದರೂ ಆತ ಗುರುವಾಗಿದ್ದ. ಅರಿತುಕೊಂಡ ವಿಚಾರಗಳನ್ನು ತನ್ನಷ್ಟಕ್ಕೆ ತಾನು ಆಚರಣೆಗೆ ತಂದುದೆ ಆದರೆ ಆ ವ್ಯಕ್ತಿಯೆ ಲಿಂಗ. ಅರಿತು ಆಚರಿಸಿದ ತತ್ವಗಳನ್ನು ಸಮಾಜದ ಜನಗಳಿಗೆ ಅಹೋ ರಾತ್ರಿ ನಿಸ್ವಾರ್ಥದಿಂದ ತಿಳಿಸಿಕೊಡುವವನೆ ಜಂಗಮನಾಗಿದ್ದ.

ಆದರೆ ಇಂದು ನಿಮಗೆ ಹೆಜ್ಜೆಹೆಜ್ಜೆಗೂ ಮಠಗಳು, ಆ ಮಠದಲ್ಲಿ ಗುರುಗಳು. ಆ ಮಠದ ಸ್ವಾಮಿಗೂ ಒಬ್ಬ ಜಗದ್ಗುರು. ಹೀಗೆ ಸರಪಳಿಯಂತೆ ಲಿಂಗಾಯತ ಸಮುದಾಯವನ್ನು ತಮ್ಮ ಆಕ್ಟೋಪಸ್ ಹಿಡಿತದಲ್ಲಿ ಇಟ್ಟುಕೊಂಡು ಅವನ ಬೌದ್ಧಿಕದಾರಿದ್ರ್ಯಕ್ಕೆ ಮಠೀಯ ಪರಂಪರೆ ಅಡ್ಡಗಾಲಾಗಿ ನಿಂತುಬಿಟ್ಟಿದೆ. ಗುಡಿ - ಗುಂಡಾರ ಸಂಸ್ಕೃತಿ ಶೋಷಣೆಯ ಕೇಂದ್ರಗಳು ಎಂಬುದು ಬಸವಣ್ಣನವರಿಗೆ ಮನದಟ್ಟಾಗಿತ್ತು. ಆದ್ದರಿಂದಲೆ ಅವರು ಅವುಗಳ ವಿರುದ್ಧ ಗುಟುರು ಹಾಕಿ ಅದನ್ನು ಕಿತ್ತೊಗೆದರು.

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡಲಿ ಬಡವನಯ್ಯಾ
ಎನ್ನ ಕಾಲೇ ಕಂಬ ದೇಹವೆ ದೇಗುಲ
ಶಿರವೇ ಹೊನ್ನ ಕಲಶವಯ್ಯ
ಕೂಡಲಸಂಗಮದೇವಾ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ


ಆನುದೇವಾ ಹೊರಗಣದವನು ಸಂಬೋಳಿ ಸಂಬೋಳಿ ಎಂದು ಕೂಗುತ್ತಾ ಇಂಬಿನಲ್ಲಿ ಇದ್ದೇನೆ. ನಿಮ್ಮ ನಾಮವಿಡಿದ ಅನಾಮಿಕ ನಾನು ಎಂದು ತನ್ನನ್ನು ಗುಡಿಯ ಹೊರಗಡೆ ಇರುವ ಅನಾಮಿಕರೊಂದಿಗೆ ಬಸವಣ್ಣನವರು ಗುರುತಿಸಿಕೊಂಡರು. ಜಗದಲವಾಗಿರುವ ಚೇತನ ತನ್ನ ಕರಸ್ಥಲಕ್ಕೆ ಬಂದು ಚುಳುಕಾದುದನ್ನು ಹೇಳಿ, ಅರಿವನ್ನು ಅರಿಯಲು ಕುರುಹು ಕೊಟ್ಟರು. ಲಿಂಗಾಂಗ ಸಾಮರಸ್ಯವನ್ನು ಹೇಳಿಕೊಟ್ಟರು.

ಇತಿಹಾಸವನ್ನು ಸರಿಯಾಗಿ ಗ್ರಹಿಸದೆ ಇರುವ ಲಿಂಗಾಯತರು ಮತ್ತೆ ಗುಡಿ ಗುಂಡಾರ ಸಂಸ್ಕೃತಿಗೆ ತಗುಲಿಬಿದ್ದ ಪರಿಣಾಮ ಲಿಂಗವನ್ನು ಕಟ್ಟಿಕೊಂಡೂ ಬೆಟ್ಟದಲಿಂಗಕ್ಕೆ ಹೋಗಿ ಹೊಟ್ಟೆ ಅಡಿಯಾಳಾಗಿ ಬೀಳುವ ಲೊಟ್ಟೆ ಮೂಳರಾಗಿದ್ದಾರೆ. ಕಂತೆ ತೊಟ್ಟವ ಗುರುವಲ್ಲ, ಕಾವಿ ಹೊದ್ದವ ಜಂಗಮನಲ್ಲ, ನೀರು ತೀರ್ಥವಲ್ಲ, ಕೂಳು ಪ್ರಸಾದವಲ್ಲ ಎಂಬ ಮಾತುಗಳನ್ನು ಸರಿಯಾಗಿ ಅರಿಯದೆ ಇರುವುದರಿಂದ ಕಾವಿ ಹೊದ್ದ ವ್ಯಕ್ತಿ ಗುರುವಾಗಿ ಕಂಗೊಳಿಸುತ್ತಿದ್ದಾನೆ. ಅವರನ್ನು ಕಂಡಾಕ್ಷಣವೇ ಡೈ ಹೊಡೆಯುವ ಚಟಕ್ಕೆ ಭಕ್ತರು ಅಂಟಿಕೊಂಡುಬಿಟ್ಟಿದ್ದಾರೆ. ಕಂತೆ ತೊಟ್ಟವನ ಪೂರ್ವಾಪರಗಳನ್ನು ಅರಿಯದೆ ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೂ ಕೂಡಲಸಂಗಮನ ಸಾಕ್ಷಿಯಾಗಿ ಛೀ ಎಂಬುದು ಮರೆತು ಗೌರವಿಸುತ್ತಿದ್ದಾರೆ.

ಜಗದಗಲ ಮುಗಿಲಗಲ, ಪಾತಾಳದಿಂದ ಅತ್ತತ್ತ ಬ್ರಹ್ಮಾಂಡದಿಂದ ಅತ್ತತ್ತ, ಅಗಮ್ಯ ಅಗೋಚರನಾಗಿರುವ ದೇವರನ್ನು ಗುರುವಿನಲ್ಲಿಯೆ ಕಾಣಬೇಕೆಂದು ಹೇಳಿ ತಾವೆ ಸೃಷ್ಟಿಕರ್ತನ ಪ್ರತಿರೂಪವೆಂದು ನಂಬಿಸಿದ್ದಾರೆ. ದೈವಾಂಶಸಂಭೂತರೆಂದು ಹೇಳಿಕೊಂಡು ಮೆರೆಯುತ್ತಿದ್ದಾರೆ. ದೇವರು ನಮ್ಮ ಅಂತರಂಗದ ಶಕ್ತಿ ಎಂಬ ಅರಿವನ್ನು ಕೊಡದೆ ಆ ಜಾಗದಲ್ಲಿ ಭಯವನ್ನು ಇಡುಗಿಸಿದ್ದಾರೆ. ದಯವೇ ಧರ್ಮದ ಮೂಲವಾಗುವ ಬದಲು ಭಯವೇ ಧರ್ಮದ ಮೂಲವೆಂಬುದನ್ನು ಮನದಟ್ಟು ಮಾಡಿಸಿದ್ದಾರೆ.

ಕೇಶ ಕಾಷಾಂಬರವನಿಕ್ಕಿದಡೇನು?
ವಿಭೂತಿ ರುದ್ರಾಕ್ಷಿಯ ಧರಿಸಿದಡೇನು?
ಸಾಕಾರದಲ್ಲಿ ಸನ್ಮತನಲ್ಲ, ನಿರಾಕಾರದಲ್ಲಿ ನಿರತನಲ್ಲ,
ಪಾರಮಾರ್ಥದಲ್ಲಿ ಪರಿಣಾಮಿ ಅಲ್ಲ
ಇದು ಕಾರಣ ಕೂಡಲಚೆನ್ನಸಂಗಮದೇವಾ
ಜಡೆಯಾಗಲಿ ತುರುಬಾಗಲಿ
ಬೋಳಾಗಲಿ ಅರಿವು ಆಚಾರವುಳ್ಳಡೆ ಜಂಗಮ

ಇದನ್ನೆಲ್ಲ ಮರೆತಿರುವ ಇಂದಿನ ಗುರುಗಳು ಸಿಂಹಾಸನದಲ್ಲಿ ಕುಳಿತುಕೊಳ್ಳುವುದು, ಅಡ್ಡಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಿಸಿಕೊಳ್ಳುವುದು. ಸುಗ್ರಾಸ ಭೋಜನ ಸವಿಯುವುದು ತಮಗಾಗಿ ಅಲ್ಲವಂತೆ! ಮಣ ಮಣ ಬಂಗಾರ ಮೈಮೇಲೆ ಹೇರಿಕೊಂಡು ಬಹುಪರಾಕ್ ಹೇಳಿಸಿಕೊಳ್ಳುವುದು ಸ್ವಾರ್ಥಸಾಧನೆಗಾಗಿ ಅಲ್ಲ!! ಅದೆಲ್ಲವೂ ಲಿಂಗವಂತರು ಉದ್ಧಾರಕ್ಕಂತೆ! ಇಂಥವರ ಮಾತು ವೇಷ ಭೂಷಣಗಳಿಗೆ ಮರುಳಾದ ಮಳ್ಳ ಭಕ್ತರು ಕಳ್ಳ ಗುರುವನ್ನು ತನ್ನ ಆರಾಧ್ಯ ದೈವವೆಂದು ತಿಳಿದಿದ್ದಾರೆ. ಗುರು ವೈಭವಕ್ಕೆ ಸಿಕ್ಕಾಗಲೆ ನರಕ ಪ್ರಾಪ್ತಿಯೆಂದು ಶರಣರು ಸ್ಪಷ್ಟವಾಗಿ ಹೇಳಿದ್ದರೂ ಅದನ್ನು ಕಡೆಗಣಿಸಿ ವೈಭವದ ಜೀವನವೆ ಸರ್ವಶ್ರೇಷ್ಠವಾದ ಜೀವನವೆಂದು ಭಾವಿಸಿದ್ದಾರೆ. ವೈಭವವನ್ನೂ ಮಾತ್ರ ಯಥೇಚ್ಛವಾಗಿ ತೋರಿಸಿಕೊಂಡಿರುವ ಈ ಗುರುಗಳು ವೈರಾಗ್ಯವನ್ನು ಎಲ್ಲಿ ತೋರಿಸಿದ್ದಾರೊ? ತಮ್ಮ ಅಡ್ಡಪಲ್ಲಕ್ಕಿಯ ಉತ್ಸವಕ್ಕೆ ಅನುಮತಿ ಕೊಡುತ್ತಾರೊ ಇಲ್ಲವೋ ಎಂಬ ಅನುಮಾನವಾದುದೊಂದೆ ತಡ ಸರಕಾರಕ್ಕೆ ಶಾಪ ಹಾಕಲೂ ಇವರು ಹಿಂದೇಟು ಹಾಕಲಿಲ್ಲ.



ಹೊರಗೆ ವೇಶದ ಸೊಂಪು ಒಳಗೆ ರೋಷದ ಮೊಟ್ಟೆಯಯ್ಯಾ
ಆಶನವನಿಕ್ಕಿ ಹಣವ ಕೊಡದವರ ಕಂಡರೆ
ಶಾಪಿಸಿ ಕೋಪಿಸಿ ಪಾಪಿಗಳೆಂಬಿರಯ್ಯ
ನಿಮ್ಮ ಕಿಚ್ಚಿಗೆ ಶಾಪಿಸಿ ಕೋಪಿಸಿ ಹೊಯಿದು
ಕುತಾಪಿಸುವವರು ನೀವು ಪಾಪಿಗಳಲ್ಲದೆ
ಅವರು ಪಾಪಿಗಳೆ ತಿಳಿದು ನೋಡಿರಯ್ಯಾ
ಜಗದ ಕರ್ತನ ವೇಷವಧರಿಸಿ ಜಗದ ಕರ್ತೃ ನೀವಾದ ಬಳಿಕ
ಮಾನವರು ಕೊಟ್ಟಾರು ಕೊಂಡಾರು ಎಂಬ ಭ್ರಾಂತಿಯೇಕೆ?
ಅರೆಮರುಳುಗಳಿರಾ ಕೊಡುವಾತ ಶಿವನೆಂದರಿಯದ
ಉದರ ಘಾತಕ ಖುಲ್ಲರನೊಲ್ಲ
ಮಹಾಲಿಂಗಗುರು ಶಿವಸಿದ್ದೇಶ್ವರ ಪ್ರಭುವೆ?

ಜನಸಾಮಾನ್ಯರ ನಡುವೆ ಉಳಿದು ಬೆಳೆದು ಅವರ ನೋವು ನಲಿವುಗಳಿಗೆ ಸ್ಪಂದಿಸಿ, ಅವರ ಅಂತಃಕರಣಗಳಿಗೆ ಅಂಟಿಕೊಂಡು ಅವರ ಮನದ ಮೈಲಿಗೆಯನ್ನು ತೊಳೆಯಬಲ್ಲವ ಗುರು. ಭಕ್ತನನ್ನು ಅಜ್ಞಾನದ ತೊಟ್ಟಿಲಿನಿಂದ ತೆಗೆದು ಜ್ಞಾನದ ಕ್ಷಿತಿಜವನ್ನು ತೋರಿಸಿ ಆತನ ಬೆಳವಣಿಗೆಯಲ್ಲಿ ತನ್ನ ಬೆಳವಣಿಗೆಯನ್ನು ಕಾಣಬಲ್ಲವ ಗುರು. ಶಿಷ್ಯನ ಏಳಿಗೆಯಲ್ಲಿಯೇ ಅತನ ಅಭ್ಯುದಯವಿದೆ ಎಂದು ಹರ್ಷ ಪಡುವವನು ಗುರು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲ ಒಂದೆ ಎಂಬೆ. ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರ ನೆಲ್ಲರನೊಂದೆ ಎಂಬೆ. ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳಡೆ ಹಲದೋರೆ ಮೂಗ ಕೊಯಿ ಕೂಡಲಸಂಗಮದೇವಾ ಎಂದು ವಿನೀತನಾಗಿ ಹೇಳುವವ ಗುರು. ಅಡ್ಡ ದೊಡ್ಡ ನಾನಲ್ಲಯ್ಯ. ದೊಡ್ಡ ಬಸಿರು ಎನಗಿಲ್ಲವಯ್ಯ. ಬಾಣಸವ ನಾನು. ಮಯೂರನವ ನಾನು. ಎಮ್ಮ ತಾಯಿ ನಿಂಬೆವ್ವೆ ನೀರನೆರೆದುಂಬಳು. ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು ಎಂದು ತನ್ನನ್ನು ತಳವರ್ಗದ ದುಡಿಯುವ ಜನತೆಯೊಂದಿಗೆ ಸಮೀಕರಿಸಿಕೊಂಡು ಬದುಕುವವ ಗುರು. ಮಾವಿನ ಕಾಯಿಯೊಳಗೊಂದು ಎಕ್ಕೆಯ ಕಾಯಿ ನಾನಯ್ಯ. ಅಡ್ಡ ದೊಡ್ಡವ ನಾನಲ್ಲಯ್ಯ ದೊಡ್ಡ ಬಸಿರು ಎನಗಿಲ್ಲವಯ್ಯ ಎಂದು ವಿನೀತಭಾವದಿಂದ ನಡೆದುಕೊಳ್ಳುವವ ಗುರು.

ಆದರೆ ಇಂದು ಪರಿಸ್ಥಿತಿ ಏನಾಗಿದೆ? ಸಂಕೋಚ ನಾಚಿಕೆ ಭಯಗಳನ್ನು ಮೂಲೆಯಲ್ಲಿ ಕಟ್ಟಿಟ್ಟು ನಾನು ಗುರು-ನೀನು ಶಿಷ್ಯ ಎಂದು ಠೇಂಕರಿಸುವ ಗುರುಗಳು ಹೆಚ್ಚಾಗಿದ್ದಾರೆ. ಗುರುಗಳೆಂದು ಕರೆಯಿಸಿಕೊಳ್ಳುವವರು ಭೋಗ ವಿಲಾಸಗಳಲ್ಲಿ ತಮ್ಮನ್ನು ತಾವು ಮರೆತುಬಿಟ್ಟಿದ್ದಾರೆ. ತಾವು ವಾಸಿಸುವ ಮಠ, ಆ ಮಠಕ್ಕೆ ಉಂಬಳಿಯಾಗಿ ದೊರೆತ ಹೊಲಗದ್ದೆಗಳು ತಮ್ಮವು ಎಂಬ ಅಹಂಕಾರದಿಂದ ವರ್ತಿಸುತ್ತಿದ್ದಾರೆ. ವಿಲಾಸಿಜೀವನಕ್ಕೆ ಜೋತು ಬಿದ್ದ ಮಠಾಧೀಶರಿಗೆ ಸತ್ಯದ ಅರಿವಾಗಲು ಹೇಗೆ ಸಾಧ್ಯ? ಹೀಗಾಗಿ ಅವರುಗಳು ಬಡತನವೆಂಬ ಮಂತ್ರವಾದಿ ಹೊಗಲು ಒಡನೆ ನುಡಿಯುತ್ತಿದ್ದಾರೆ. ಹಾವು ತಿಂದವರನ್ನು ನುಡಿಸಬಹುದು. ಗರ ಹೊಡೆದವರನ್ನು ನುಡಿಸಬಹುದು. ಸಿರಿಗರ ಹೊಡೆಸಿಕೊಂಡಿರುವ ಗುರುಗಳನ್ನು ನುಡಿಸಲು ಯಾರಿಂದಲಾದರೂ ಸಾಧ್ಯವೆ?

ದೇವರು- ಧರ್ಮದ ವಾರಸುದಾರರು ತಾವೆಂದು ಹೇಳಿಕೊಂಡು ತಿರುಗಾಡುವ ಗುರುಗಳು ಆ ದೇವರನ್ನು ಸಂಪ್ರೀತಗೊಳಿಸಲು ಜಾತ್ರೆ, ಕ್ಷೇತ್ರಗಳನ್ನು ಮಾಡಬೇಕೆನ್ನುತ್ತಾರೆ. ತಮ್ಮ ಗುರುಗಳ ಪುಣ್ಯಸ್ಮರಣೆಯನ್ನು ಮಾಡಿ ಪುಣ್ಯ ಕಟ್ಟಿಕೊಳ್ಳಿರೆಂದು ಸುಳ್ಳಿನ ಸೂಡುಕಟ್ಟುತ್ತಾರೆ. ಅರ್ಚನೆ ಪೂಜನೆ ನೇಮವಲ್ಲ, ಧೂಪ ದೀಪಾರತಿ ನೇಮವಲ್ಲ, ಮಂತ್ರತಂತ್ರ ನೇಮವಲ್ಲ ಎಂದು ಗೊತ್ತಿದ್ದರೂ ತಮ್ಮ ಮಠಗಳಲ್ಲಿ ವರ್ಷಕ್ಕೊಂದು ಸಲವಾದರೂ ಲಕ್ಷ ಬಿಲ್ವಾರ್ಚನೆಯ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾರೆ. ಭಕ್ತರ ಮನಸ್ಸಿನ ಕತ್ತಲೆಯನ್ನು ಆರಿಸುವ ಬದಲಾಗಿ ತಮ್ಮ ಮಠದ ಸುತ್ತಲೂ ದೀಪ ಮುಡಿಸುವ ಕಾರ್ಯಕ್ರಮವಿಟ್ಟು ಲಕ್ಷದೀಪೋತ್ಸವ ಎಂಬ ಸಭೆ ಏರ್ಪಡಿಸಿ, ಕೋಟ್ಯಂತರ ಹಣವನ್ನು ಭಕ್ತರಿಂದ ಬಾಚಿಕೊಳ್ಳುತ್ತಾರೆ. ತಮ್ಮ ವೈಭೋಗದ ಪಾದಪೂಜೆಯನ್ನು ಏರ್ಪಡಿಸಿಕೊಂಡು ಭಕ್ತರಿಗೆ ಮಹಾದುಪಕಾರ ಮಾಡಿದಂತೆ ಬೀಗುತ್ತಿರುತ್ತಾರೆ.

ಕಲ್ಲಿಯ ಹಾಕಿ ನೆಲ್ಲವ ತಳೆದು
ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ;
ವಾಗ್ವೈದೆತವಕಲಿತು
ಸಂಸ್ಕೃತ ಮಾತಿನ ಪಸರವ ಮುಂದೆ ಇಕ್ಕಿಕೊಂಡು
ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ
ಆದೇತರ ನುಡಿ, ಮಾತಿನ ಮರೆ
ಆತುರವೈರಿ ಮಾರೇಶ್ವರಾ

ಎಂಬ ನಗೆಮಾರಿತಂದೆಗಳ ವಚನದಂತೆ ಸಂಸ್ಕೃತ ಭಾಷೆಯ ವೇದಗಳನ್ನು-ಶಾಸ್ತ್ರಗಳನ್ನು- ಆಗಮಗಳನ್ನು ಹೇಳಿಕೊಂಡು ಹೊಟ್ಟೆ ಹೊರೆದುಕೊಳ್ಳುತ್ತಿದ್ದಾರೆ. ಗುಬ್ಬಿಯನ್ನು ಹಿಡಿಯುವುದು ಬೇಟೆಗಾರನ ಗುರಿಯಾದಂತೆ ; ಭಕ್ತರನ್ನು ತನ್ನ ಖೆಡ್ಡಾದಲ್ಲಿ ಕೆಡವಿಕೊಳ್ಳುವುದು ಗುರುವಾದವನ ಗುರಿಯಾಗಿದೆ.

ಈಶ ಲಾಂಛನವ ತೊಟ್ಟು
ಮನ್ಮಥ ವೇಷಲಾಂಛನವ ತೊಡಲೆತಕ್ಕೆ?
ಇದು ನಿಮ್ಮ ನಡೆನುಡಿಗೆ ನಾಚಿಕೆಯಲ್ಲವೆ?
ಅಂದಣ,ಛತ್ರಾಭರಣ ಕರಿತುರಂಗಗಳ ಗೊಂದಣವೇತಕ್ಕೆ?
ಅದು ಘನಲಿಂಗದ ಮೆಚ್ಚಲೆಂದ ಅಂಬಿಗರ ಚೌಡಯ್ಯ (ವ.ಸಂ.6/63)

ಎಂಬ ವಚನ ಅರ್ಥವಾಗದಂತೆ ಇರುವ ಇಂದಿನ ಗುರುಗಳು ಮನ್ಮಥ ವೇಷಲಾಂಛನಧಾರಿಯಾಗಿದ್ದಾರೆ. ಸರಳತೆ-ಸಜ್ಜನಿಕೆ ಎಂಬುದು ಗುರುಗಳಲ್ಲಿ ದೀಪ ಹಚ್ಚಿಯೆ ಹುಡುಕಬೇಕಿದೆ. ವೇದಘೋಷಗಳು-ವಾದ್ಯಗಳ ಡಮರುಗಳು-ಛತ್ರಿ ಚಾಮರಗಳು ವಂಧಿಮಾಗದರು ಇವರು ತಮ್ಮ ಸುತ್ತ ಮುತ್ತ ಇಟ್ಟುಕೊಂಡಿರುತ್ತಾರೆ. ಇದೆಲ್ಲವೂ ತಮ್ಮ ಪೀಠ ಪರಂಪರೆಯಲ್ಲಿ ಬಂದುದು ಎಂದು ಹೇಳುತ್ತಾರೆ. ಸನಾತನವಾಗಿರುವ ಪರಂಪರೆಯನ್ನು ಬಿಟ್ಟು ಹೊರಬರದ ಈ ಗುರುಗಳು ಲಿಂಗಾಯತರಿಗೆ ಅವಶ್ಯಕವೆ? ಲಿಂಗವ ಪೂಜಿಸಿ ಫಲವೇನಯ್ಯಾ, ಸಮರತಿ ಸಮಕಳೆ ಸಮ ಸುಖವನರಿಯದನ್ನಕ್ಕ? ಲಿಂಗವ ಪೂಜಿಸಿ ಫಲವೇನಯ್ಯಾ ನದಿಯೊಳಗೆ ನದಿ ಬೆರೆಸಿದಂತಾಗದನ್ನಕ್ಕ ಕೂಡಲಸಂಗಮದೇವಾ ಎಂಬಂತೆ, ತನ್ನ ಭಕ್ತನನ್ನು ತನ್ನ ಎತ್ತರಕ್ಕೆ ಏರಿಸಿಕೊಳ್ಳದ ಖಾಯಂ ಆಗಿ ಆತನನ್ನು ಶಿಷ್ಯನನ್ನಾಗಿಯೆ ಇರಿಸಿಕೊಳ್ಳುವ ಅಯೋಗ್ಯ ಗುರುಗಳು ಲಿಂಗಾಯತ ಧರ್ಮಕ್ಕೆ ಹೇಗೆ ಗುರುಗಳಾಗುತ್ತಾರೆ?

● ವಿಶ್ವಾರಾಧ್ಯ ಸತ್ಯಂಪೇಟೆ


ರಗಳೆ ರಾಘವನ ದನ ದಂಧೆ ಕಥಾ!!

ಸುಪ್ರಸಿದ್ಧ ಕಾವಿ ಕೌಬಾಯ್ ರಾಘವೇಶ್ವರ ಸ್ವಾಮಿಯ ಪುರದ ಹುಚ್ಚು ಹಂಗಾಮಿಗೊಂದರಂತೆ ಬದಲಾಗುತ್ತಿದೆ. ಅಳುವವರ ಆಸ್ಥಾನ ಪುರೋಹಿತನಾಗುವ ಹಠಕ್ಕೆ ಬಿದ್ದಿರುವ ಈ ರಗಳೆ ರಾಘವನ 'ಕಥಾ' ಹಾವಳಿಗಳಂತೂ ಹೇಳತೀರದು. ಹಾಲಿವುಡ್ ಬಿಚ್ಚಮ್ಮ ಮಲ್ಲಿಕಾ ಶರಾವತ್‌ಳ 'ಶುದ್ಧ ಆತ್ಮ'ದ ದಿವ್ಯ ಸಾನಿಧ್ಯದಲ್ಲಿ ಅಖಂಡ ಬ್ರಹ್ಮಚಾರಿ ಆಂಜನೇಯನ ಗುಡಿಗೆ ಶಿಲಾನ್ಯಾಸ ಮಾಡಿಸಿದ ಈ 'ಕ್ರಾಂತಿಕಾರಿ' ಕಾವಿಖಳ ಗೋವಿಗೆ ಗಂಟುಬಿದ್ದು ಗಂಟುಮಾಡುವ ದಂಧೆ ಶುರು ಹಚ್ಚಿಕೊಂಡಿರುವುದು ಅದ್ಯಾವಾಗಲೋ ಜಗಜ್ಜಾಹೀರಾಗಿ ಹೋಗಿದೆ.

ಈ ದನಾಧಾರಿತ ಉದ್ಯಮದ ಮಾರ್ಕೇಟಿಂಗ್‌ಗೆ ರಾಘವ ಈಗ 'ಗೋ ಕಥಾ' ಎಂಬ ವಿನೂತನ ಗಿಮಿಕ್ ಹಮ್ಮಿಕೊಂಡಿದ್ದಾನೆ. ಇಷ್ಟು ದಿನ ಗಾಯಕಿಯೊಬ್ಬಳಿಂದ ಮಧುರವಾಗಿ ರಾಮಗೀತೆ ಹಾಡಿಸಿ ಭಾವುಕ ಭಕ್ತೆಯರ ಕುಣಿಸಿ ಕುಂತಲ್ಲೇ ದಣಿದ ರಾಘವ ಈ ಕಥಾ ಕರಾಮತ್ತಿನಿಂದ ಲಕ್ಷ-ಲಕ್ಷ ಕೂಡಿಸಿದ ಕುತೂಹಲಕರ ಕತೆಗಳೀಗ ಹರಿದಾಡಲಾರಂಭಿಸಿದೆ. ಆದರೆ ರಾಮ ಕಥೆಯಿಂದ ಆತನ ಗವ್ಯ ಉತ್ಪನ್ನಗಳಿಗೇನೂ ಅಂಥ ಮಾರುಕಟ್ಟೆ ಮಹತ್ವ ಪ್ರಾಪ್ತವಾಗಲಿಲ್ಲ. ಹಾಗಾಗಿ ಆತ ಗೋ-ಕೇಂದ್ರಿತ ಬಿಸ್ನೆಸ್‌ಗೆ ಮಾರ್ಕೆಟ್ ದೊಡ್ಡ ಮಟ್ಟದಲ್ಲಿ ಕುದುರಿಸಿಕೊಳ್ಳಲು ಗೋ ಕಥಾ-ಗೋ ತುಲಾಭಾರ-ಗೋ ಗ್ರಾಮ ಉತ್ಸವ-ಗೋ ಪ್ರದರ್ಶನ-ಕಾಮಧೇನು ಮಹಾ ಯಾಗವೇ ಮುಂತಾದ ನವ ವಿಧ ಸ್ಕೆಚ್ ಹಾಕಿಕೊಂಡು ಭರ್ಜರಿ ಜಾತ್ರೆಗೆ ಅಣಿಯಾಗಿದ್ದಾನೆ. ಇದೇ ತಿಂಗಳ 15 ರಿಂದ 19ರ ವರೆಗೆ ಬ್ರಾಹ್ಮಣರ ರಾಮಚಂದ್ರಾಪುರ ಮಠ ಕೃಪಾಪೋಷಿತ ಗೋ ಆಖ್ಯಾನ ಉತ್ತರ ಕನ್ನಡದ ಕುಮಟಾದಲ್ಲಿ ನಡೆಸಲು ರಾಘವ ಬಳಗ ವ್ಯವಸ್ಥಿತ ಕಾರ್ಯಾಚರಣೆ ನಡೆಸುತ್ತಿದೆ.

ಮಧ್ಯಮ ವರ್ಗದ ಹಿಂದೂಗಳ ಗೋವಿನ ಬಗೆಗಿನ ಹುಸಿ ಭಾವುಕತೆಯೇ ರಾಘವನ ಪುರೋಹಿತಶಾಹಿ ಜಾಲಮ್ಮನ ಜಾತ್ರೆಗೆ ಬಂಡವಾಳ! ಎತ್ತಿಂದೆತ್ತ ಲೆಕ್ಕ ಹಾಕಿ ತಾಳೆ ತೆಗೆದರೂ ಇದೊಂದು ಹಲವು ಲಕ್ಷಗಳ ಉತ್ಸವೋನ್ಮಾದ; ಸೂಕ್ಷ್ಮವಾಗಿ ನೋಡಿದರೆ ಪುರೋಹಿತಶಾಹಿ ಬಳ ಉದ್ದೇಶದ, ಶೂದ್ರರ ಸುಲಿವ-ದಾರಿ ತಪ್ಪಿಸುವ ಹಬ್ಬ. ಕುಮಟಾದಿಂದ ಸುಮಾರು 16 ಕಿ.ಮೀ. ದೂರದಲ್ಲಿರುವ ಅರಣ್ಯಾವೃತ 'ಹೊಸಾಡ' ಎಂಬ ಹಳ್ಳಿಯಲ್ಲಿ ಗೋ ಉತ್ಪನ್ನ ಆಧಾರಿತ ಉದ್ಯಮ ಸ್ಥಾಪಿಸುವ ಯೋಜನೆಯನ್ನು ರಾಘವನ ಗ್ಯಾಂಗ್ ಹಾಕಿಕೊಂಡಿದೆ. ಅಲ್ಲೀಗ 150 ರಷ್ಟು ವಿಳೆಂಟು ತಳಿಯ ದನಗಳಿವೆ. ಗೋವಿನ ಸಗಣಿ-ಮೂತ್ರದ ಗೊಬ್ಬರ ತಯಾರಿಕಾ ಘಟಕವಿದೆ. ಜತೆಗೆ ಗವ್ಯೋತ್ಪನ್ನ ಕೇಂದ್ರವೂ ತೆರೆಯಲಾಗಿದೆ. ಆದರೆ ಇದರಿಂದ ರಾಘವನ ದುಡ್ಡು ದೋಚುವ ಕನಸು ಈಡೇರುತ್ತಿಲ್ಲ. ಹಾಗಾಗಿ ಆತ ಸದ್ರಿ ವಾಣಿಜ್ಯೋದ್ಯಮ ಇನ್ನಷ್ಟು ವಿಸ್ತರಿಸಲು ಲೆಕ್ಕಾಚಾರ ಹಾಕಿದ್ದಾನೆ!

ರಾಘವನ ಭವಿಷ್ಯದ ಯೋಜನೆ ಬೊಂಬಾಟಾಗಿದೆ! ಮತ್ತೆ ನಾಲ್ಕು ದನದ ಕೊಟ್ಟಿಗೆ, ಗೋಬರ್ ಗ್ಯಾಸ್ ಪ್ಲಾಂಟ್, ಉದ್ಯಾನವನ, ನಾಲ್ಕು ಹೋಮ್ ಸ್ಟೇ ತರಹದ ಕುಟೀರ, ಪಶು ಆಹಾರ ಗೋದಾಮು, ಸೋಲಾರ್ ದೀಪ, ಧ್ಯಾನ-ಯೋಗ ಮಂದಿರ, ಪ್ರವಾಸಿಗರಿಗೆ ಮೂಲಭೂತ ಸೌಲಭ್ಯ... ಹೀಗೆ ಕೋಟ್ಯಾಂತರ ರೂ.ಗಳ ವಾಣಿಜ್ಯ-ಪ್ರವಾಸ ಉದ್ಯಮ ಆರಂಭಿಸಲು ರಾಘವ ನೀಲನಕ್ಷೆ ಹಾಕಿಕೊಂಡಿದ್ದಾನೆ. ಇದಕ್ಕೆಲ್ಲ ರೊಕ್ಕ ಬೇಕಲ್ಲವಾ? ಜನರ ಮರಳು ಮಾಡಿ ಹಣ ಹೊಂದಿಸುವ ಕುಕಲೆ ಕರಗತ ಮಾಡಿಕೊಂಡಿರುವ ರಾಘವ ಅಂಡ್ ಕಂಪನಿ ಕನಸು ನನಸಾಗಿಸಿಕೊಳ್ಳಲು ಹಮ್ಮಿಕೊಂಡಿರುವುದೇ ಈ ಗೋಕಥಾ ಅಥವಾ ಜನಜನನಿ ಜಾತ್ರೆ! ಅರ್ಥಾತ್ ದನಾಧಾರಿತ ದಗಲುಬಾಜಿ ದಂಧೆ!!



ಅಮಾಯಕ ಜನರನ್ನು ತನ್ನ ಗೋದಂಧೆಗೆ ಪೂರಕವಾಗುವಂತೆ ಬಳಸಿಕೊಳ್ಳಲು ರಾಘವ ಹೆಣೆದಿರುವ 'ಸೆಳೆವ ತಂತ್ರ' ತುಂಬ ನಾಜೂಕಾಗಿದೆ; ಅಷ್ಟೇ ಅಪಾಯಕಾರಿಯೂ ಆಗಿದೆ. ಗೋವಿಗೆ ಸಂಬಂಧಿಸಿದ ಗೀತ-ಪ್ರವಚನ ಹೇಳುತ್ತ ದನದ ಮಹತ್ವ ಭಾವುಕವಾಗಿ ಬಣ್ಣಿಸುವ ಕತೆ-ಕಾವ್ಯದ ರಂಗ ತಾಲೀಮು ರಾಘವ ಮುಗಿಸಿ ವೇಷಕ್ಕೆ ಸಿದ್ಧನಾಗಿದ್ದಾನೆ. ಗೋವು ಪವಿತ್ರ. ಅದರ ಉತ್ಪನ್ನ ಉತ್ಕೃಷ್ಟ-ಸ್ವಾದಿಷ್ಟ-ಚೈತನ್ಯದಾಯಕ. ಪ್ರತಿ ಮನುಷ್ಯನ ಪ್ರತಿ ರಕ್ತ ಕಣದಲ್ಲೂ ಹಾಲು-ಮೊಸರು-ತುಪ್ಪ ಸೇರಿ ಶಕ್ತಿ ನೀಡಿದೆ; ಸಗಣಿ-ಗೋ ಮೂತ್ರವೂ ಅಮೂಲ್ಯ ಇಂಥ ದನದ ಸಂತತಿ ನಶಿಸುತ್ತಿದೆ. ಅದನ್ನು ಸಂರಕ್ಷಿಸಬೇಕಾಗಿದೆ ಎಂಬುದನ್ನು ಧರ್ಮೋನ್ಮಾದದಿಂದ ಪ್ರಚುರಪಡಿಸಿ ಜನರ ಆಕರ್ಷಿಸುವ 'ಆಟ' ರಾಘವನ ಮಠ ಮಾಫಿಯಾ ಮಾಡುತ್ತಿದೆ. ಇದೊಂದು ಶುದ್ಧ ಮೋಸ-ವಂಚನೆಯ ವ್ಯಾಘ್ರ ಕತೆಯೇ ವಿನಃ ಗೋ ಕಥೆಯಲ್ಲ.

ಪುಣ್ಯಕೋಟಿ ಹಸುವಿನ ಮಹತ್ವ, ಅದರ ಉತ್ಪನ್ನಗಳ ಉತ್ಕೃಷ್ಟತೆ ಬಗ್ಗೆ ರಾಘವನ ಅನುಯಾಯಿಗಳಂಥ ಖೂಳ ವ್ಯಾಘ್ರಗಳು ಹೇಳುವ ಅವಶ್ಯಕತೆಯೇ ಇಲ್ಲ. ಹಳ್ಳಿಗಾಡಿನ ಸಂಸ್ಕೃತಿ-ಜನಪದ ಬದುಕು ಹಸುವಿನ ಅಸ್ತಿತ್ವ-ಆಗತ್ಯ ಸಾರಿ-ಸಾರಿ ಹೇಳಿವೆ. ಹಾಗೆಯೇ ಸಾಕಿದವರು ತಮಗೆ ಬೇಡದ ಹಸುಗಳನ್ನು ತಿನ್ನುವವರಿಗೆ ಮಾರುವುದೂ ತಲತಲಾಂತರದಿಂದ ನಡೆದು ಬಂದಿದೆ. ಇದು ಸೃಷ್ಟಿಯ ಸಹಜ ನಿಯಮ. ಇದರಲ್ಲಿಯ ಅರ್ಧ ಸತ್ಯವನ್ನಷ್ಟೇ ಬಳಸಿಕೊಂಡು ರಾಘವನಂತ ಖೋಟಾ ಕಾವಿಗಳು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವುದು ಮುಗ್ಧ ಶೂದ್ರರಿಗಿನ್ನೂ ಅರ್ಥವಾಗದ್ದು ಮಹಾ ದುರಂತವೇ ಸರಿ. ಗೋವಿನ 'ಮಹತ್ವ' ತನ್ನ ದಂಧೆಗೆ ಅನುಕೂಲಕರವಾದ ರೀತಿಯಲ್ಲಿ ರಾಘವ ಹೇಳಲು 'ಸಮ್ಮೇಳನ' ನಡೆಸುತ್ತಿದ್ದಾನೆ ಅಷ್ಟೇ!! ರಾಘವನ ಸಂಗಡಿಗರ ಗೋಕಥಾ ಸಿದ್ಧತೆ-ಸಡಗರ ನೋಡಿದರೆ ಇದು ಗೋರಕ್ಷಣೆಯ ಕಾರ್ಯಕ್ರಮವಲ್ಲ; ರಾಘವನ ಉದ್ಯಮದ ಮಾರ್ಕೆಟಿಂಗ್ ಟೆಕ್ನಿಕ್ ಎಂಬುದು ಎಂಥವರಿಗೂ ಸಲೀಸಾಗಿ ಅರ್ಥವಾಗುತ್ತದೆ.

ಹಿಂದೆ ಆಕಳನ್ನು ಸಾಕುವುದು ಸಾಮಾನ್ಯವಾಗಿತ್ತು. ಕೃಷಿಕರಿಗಂತೂ ಜಾನುವಾರು ಅನಿವಾರ್ಯವಾಗಿತ್ತು. ರಾಘವನಂಥ ನಕಲಿ ಧರ್ಮ ಗುರುಗಳು ಅದೇನೇ ಹೇಳಲಿ; ಅಂದು ಸಾಕುತ್ತಿದ್ದ ಹಸುಗಳು ಅಲ್ಪ ಪ್ರಮಾಣದ ಹಾಲನ್ನು ಸೀಮಿತ ಸಮಯ ಮಾತ್ರ ನೀಡುತ್ತಿದ್ದವು. ಕೆಲವೊಮ್ಮೆ ಅದು ಅದರ ಕರುವಿಗೇ ಸಾಕಾಗುತ್ತಿರಲಿಲ್ಲ. ಆದರೂ ಅದಿಷ್ಟೇ ಹಾಲು ಅಂದಿನ ದಿನಮಾನದ ಕುಟುಂಬ ಬಳಕೆಗೆ ಸಾಕಾಗುವಷ್ಟಿರುತ್ತಿತ್ತು. ಹಿಂದೆಲ್ಲ ಎಮ್ಮೆಗಳೇ ಹಾಲಿನ ಬಹುತೇಕ ಬೇಡಿಕೆ ಪೂರೈಸುತ್ತಿದ್ದವೆಂಬ ಸತ್ಯ ಹೆಡ್ಡ ಸಂತ ರಾಘವನಂತವರಿಗೆ ಗೊತ್ತಿರಲು ಸಾಧ್ಯವಿಲ್ಲ ಬಿಡಿ. ದಿನಗಳೆದಂತೆ ಸಾಮಾಜಿಕವಾಗಿ-ಆರ್ಥಿಕವಾಗಿ ಗೋವುಗಳನ್ನು ಸಾಕುವುದು-ನಿರ್ವಹಿಸುವುದು ಕಷ್ಟವಾಗತೊಡಗಿತು. ಭಾರತಕ್ಕೆ ಬಂದ ವಿದೇಶಿ ಗೋ ತಳಿಗಳು ಹರಿಸುತ್ತಿದ್ದ ಕ್ಷೀರಧಾರೆ ಭಾರತೀಯ ಗೋವುಗಳ ಮಹತ್ವ ಕಡಿಮೆ ಮಾಡಿತು.

ಹೀಗಾಗಿ ದೇಶೀ ದನಗಳನ್ನು ಸಾಕುವುದು ಆರ್ಥಿಕವಾಗಿ ಹಾನಿಕಾರಕ ಎಂಬ ಭಾವನೆ ಬಲವಾಗಿ ಮೂಡಿತು. ಬದಲಾದ ಜೀವನ ಶೈಲಿಯಿಂದ ಕಡ್ಡಾಯವಾಗಿ ಮನೆ-ಮನೆಯಲ್ಲಿರುತ್ತಿದ್ದ ಕೊಟ್ಟಿಗೆಗಳು ಕಣ್ಮರೆಯಾದವು. ದೇಶೀ ದನ ಪಾಲನೆ ಹೊರೆ ಎನಿಸಿತು. ಇದೆಲ್ಲದರಿಂದ ದೇಶೀ ದನಗಳ ಸಂತತಿ ಕ್ರಮೇಣ ಅವಸಾನದ ಅಂಚಿಗೆ ಬಂದು ನಿಂತಿತೇ ಹೊರತು ಚೆಡ್ಡಿಗಳು-ಬ್ರಾಹ್ಮಣಿಕೆ ಮಂದಿ ಹೇಳುವಂತೆ ಸಾಬರು ತಿಂದೇ ಗೋವುಗಳ ಮುಗಿಸಿಲ್ಲ; ಹಿಂದುಗಳಿಗೇ ಅದರಲ್ಲೂ ಬ್ರಾಹ್ಮಣ ಸಮುದಾಯಕ್ಕೆ ದನದ ಬಗ್ಗೆ ಅಸಡ್ಡೆ ಬಂದಿದೆ. ಗೋತಳಿ ರಕ್ಷಣೆ, ಹಸುವಿನ ಪಾವಿತ್ರ್ಯ ಗೋ ಉತ್ಪನ್ನ ಬಳಕೆ, ಗೋಮಾಯ, ಗೋ ಮೂತ್ರ, ಗೋ ಶಾಲೆ ಎಂದು ಬಡಬಡಿಸುತ್ತಿರುವ ಸ್ವಯಂ ಘೋಷಿತ ಗೋರಕ್ಷಕರು ಹಸು ಸಾಕಲು ಮಾತ್ರ ಮನಸ್ಸು ಮಾಡುತ್ತಿಲ್ಲ.

ದನ-ಕರು ಮುಟ್ಟಲಿಕ್ಕೂ ಹೇಸುವ ಈ ಮಂದಿ ಯಾರೋ ಸಗಣಿ-ಮೂತ್ರ ತೆಗೆದು, ಮೈ ತೊಳೆದು ಚಂದ ಮಾಡಿಟ್ಟ ಹಸುವಿಗೆ ಕುಂಕುಮ ಇಟ್ಟು-ಆರತಿ ಬೆಳಗುತ್ತಾರಷ್ಟೇ; ಮಡಿಯುಟ್ಟು ಕೊಂಡು 'ಗೋಮಾತೆ... ಗೋ ಮಾತೆ' ಎಂದು ಬೂಟಾಟಿಕೆ ಭಾಷಣ ಬಿಗಿಯುತ್ತಾರೆ. ಇದು ಬ್ರಾಹ್ಮಣ ಪೀಠಾಧಿಪತಿ ರಾಘವ ಹಾಕಿ ಕೊಟ್ಟಿರುವ ನೂತನ ಗೋರಕ್ಷಣ ಸಂಸ್ಕೃತಿ. ಶೂದ್ರರು ದನ ಸಾಕಬೇಕು; ಈ ವಿಪ್ರರು ಹಾಲು-ಮೊಸರು ಮುಕ್ಕಬೇಕು; ಮಜ್ಜಿಗೆ ತಂಬುಳಿ ಸುರಿಯಬೇಕು. ಇದು ರಾಘವನ 'ರಾಮ ದುಘಾ' ಸ್ಟೈಲು!!

'ಗೋವು ಎಲ್ಲೋ... ಅಲ್ಲಿ ನಾವು...' ಎನ್ನುವ ಗೋ-ಅಭಿಯಾನದ ಮಹಾಮಹಿಮರು 'ನಮ್ಮಲ್ಲಿಯೇ ಗೋವು' ಎಂದು ಅಪ್ಪಿತಪ್ಪಿಯೂ ಹೇಳುತ್ತಿಲ್ಲ. ಗೋವು ತಳಿ ವಿನಾಶದ ಅಂಚಿನಲ್ಲಿದೆ ಅಂತಾರೆಯೇ ಹೊರತು ಅದನ್ನು ಉಳಿಸಿ-ಬೆಳೆಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ರಾಘವ ಅಲ್ಲೊಂದು-ಇಲ್ಲೊಂದು ಗೋಶಾಲೆ ತೆರೆದರೆ ಗೋ ಉದ್ಧಾರ ಆಗುತ್ತದಾ? ಹೊಸ ನಗರದಲ್ಲಿ ಈ ರಾಘವನ ಪರಿವಾರ ಗಟ್ಟಿ-ಮುಟ್ಟಾದ, ಹಾಲು ಕೊಡುವ ಹಸುಗಳನ್ನು ಜೋಪಾನವಾಗಿ ದೊಡ್ಡಿಯಲ್ಲಿ ಕಟ್ಟಿ, ಬಡಕಲು ಹಸುಗಳನ್ನು ಬಿಸಿಲಿಲ್ಲ-ತೋಟದ ಅಂಚಲ್ಲಿ ಅಡಿಕೆ ಮರಕ್ಕೆ ಕಟ್ಟಿ ಹಾಕಿ ಸಾಯಿಸಿದ ಹೇರಳ ಪುರಾಣವೂ ಚಾಲ್ತಿಯಲ್ಲಿದೆ. ಗೋ-ಶಾಲೆ ತೆರೆದರೆ ರಾಘವನ ಬಿಸ್ನೆಸ್ ನಡೆಯಬಹುದೇ ಹೊರತು ಗೋವಿಗೇನೂ ಪ್ರಯೋಜನವಿಲ್ಲ. ಗೋವಿನ ಬಗ್ಗೆ ಕಳಕಳಿ-ಕಾಳಜಿ ತೋರಿಸುತ್ತಿರುವ ರಾಘವನ ಶಿಷ್ಯಸಂಕುಲದಲ್ಲಿ ಎಷ್ಟು ಜನರ ಮನೆಯಲ್ಲಿ ದನ ಸಾಕಲಾಗಿದೆ? ಹಸು ಸಾಕದವರು ಹಸುವಿನ ಪಾವಿತ್ರ್ಯ-ಮಹತ್ವದ ಬಗ್ಗೆ ಭೋಂಗು ಬಿಡುತ್ತಿರುವುದು ಒಂದು ಕ್ರೂರ 'ಜೋಕ್'!!

ಗೋ ಸಮ್ಮೇಳನ-ಗೋ ತುಲಾಭಾರ- ಗೋ ಪ್ರತಿಮೆ ನಿರ್ಮಾಣ-ಕಾಮಧೇನು ಯಾಗದಿಂದ ಗೋಸಂತತಿ ಹೆಚ್ಚಾಗಲು ಸಾಧ್ಯವಾ? ಕನಿಷ್ಠ ರಾಘವನ ಅನುಯಾಯಿಗಳು-ಅದರಲ್ಲೂ ಆತನ ಗೋ ಹಬ್ಬಗಳಲ್ಲಿ ಜರತಾರಿ ಮಡಿ-ಶಾಲು ಹೊದ್ದುಕೊಂಡು ಓಡಾಡುವ ಬೂಟಾಟಿಕೆಯ ಮುಖಂಡರಾದರೂ- ದನ ಸಾಕುವಂತಾದರೆ ಒಂಚೂರು ಗೋ ಸಂತಾನ ಉಳಿಯುತ್ತಿತ್ತೇನೋ?! ಹಾಗೆಯೇ ಇಂದಿನ ಪುರೋಹಿತರು ಗೋದಾನವನ್ನೂ ಪಡೆಯುತ್ತಿಲ್ಲ. ಗೋವು ಬೇಡ ಅದರ ಮೌಲ್ಯ ಕೊಡಿ ಎಂದು ಹೇಳುತ್ತಾರೆ. ಬೆಳ್ಳಿ ಗೋವಿನ ಪ್ರತಿಮೆ ಮೇಲೆ ಹಣ ಇಟ್ಟು ಸ್ವೀಕರಿಸುತ್ತಾರೆ. ಇದರಿಂದ ಗೋ ಸಂತತಿಗೆ ಮಾರಕವಾಗಿಲ್ಲವಾ? ರಾಘವನೇಕೆ ತನ್ನ ಶಿಷ್ಯರಾದ ವೈದಿಕರಿಗೆ ಜೀವಂತ ಗೋ ದಾನವೇ ಪಡೆದು ಸಾಕಲು ಪ್ರೇರಿಪಿಸಬಾರದು? ಆ ನೈತಿಕ ಪ್ರಜ್ಞೆ ರಾಘವನ ಬಳಗಕ್ಕೇಕಿಲ್ಲ?

ಮತ್ತೊಂದು ಮೋಜಿನ ಸಂಗತಿ ಇಲ್ಲಿದೆ. 'ಜನಜನನಿ' ಗೋಕಥಾ ಪಾರಾಯಣ ಹಮ್ಮಿಕೊಂಡಿರುವ ರಾಘವನ ರಾಮಚಂದ್ರಾಪುರ ಮಠದ ಸುಪರ್ದಿಗೆ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನ ಸೇರಿ ವರ್ಷ ಐದು ಕಳೆದಿದೆ. ವಿಪರ್ಯಾಸವೆಂದರೆ, ಇವತ್ತಿಗೂ ಆತ್ಮಲಿಂಗಕ್ಕೆ ಪಾಶ್ಚರೀಕರಿಸಿದ 'ಮೈಲಿಗೆ'ಯ ಯಾವ್ಯಾವುದೋ ಕಂಪನಿಯ ಪ್ಯಾಕೆಟ್ ಹಾಲನ್ನೇ ಸುರಿದು ಅಭಿಷೇಕ ಮಾಡಲಾಗುತ್ತಿದೆ. ಭಾರತೀಯ ಗೋತಳಿಯ ಹಾಲಿಂದ ಆತ್ಮಲಿಂಗಕ್ಕೆ ಅಭಿಷೇಕ ಮಾಡುವ ಯೋಗ್ಯತೆ ರಾಘವನಿಗೆ ಬರದಿರುವುದು ನಾಚಿಕೆಗೇಡು. ಗೋಕರ್ಣ ದೇವಸ್ಥಾನದಲ್ಲಾದರೂ ಒಂದು ಸೀಮೆ ಹಸು ಕಟ್ಟಲಾಗದ ರಾಘವನ ಪರಿವಾರದ ಗೋರಕ್ಷಣೆ-ಗೋ ಕಳಕಳಿಗೆ ಅರ್ಥವಿದೆಯಾ? ರಾಘವನ ಗೋ ಕಥೆ ಬಿಸ್ನೆಸ್ ಬೂಟಾಟಿಕೆ ಎನ್ನಲು ಇದಕ್ಕಿಂತ ದೊಡ್ಡ ನಿದರ್ಶನ ಬೇರೆ ಬೇಕಾ?! ಮಠದ ಅಮೃತಾನ್ನದ ಅಡುಗೆಯಲ್ಲಿ ಬಳಸುವ ಹಾಲು ಹಳಸಿದ್ದಲ್ಲವಾ?!

ಬ್ರಾಹ್ಮಣಶಾಹಿ ಪೀಠಾಧಿಪತಿ ರಾಘವನ ಕತೆ-ಪ್ರವಚನ-ಗೋರಕ್ಷಣೆ, ಕೊನೆಗೆ ಆತನ ಬಾಡಿಗಾರ್ಡ್‌ತನಕ್ಕೆ ಮಠದ ಕಸ-ಮುಸುರೆಗೆಲ್ಲ ಶೂದ್ರರು ಬೇಕು; ಅವರ ಹಣ-ಶ್ರಮ-ಸಾಹಸ ಬೇಕು. ಹಾಗಂತ ಶೂದ್ರರ ಸಂಸ್ಕೃತಿ-ಆಚರಣೆ-ವ್ಯಕ್ತಿತ್ವಕ್ಕೆ ರಾಘವನ ಪರಿವಾರದಲ್ಲಿ ಮಾನ ಮರ್ಯಾದೆಯೇ ಇಲ್ಲವೆಂಬುದಕ್ಕೆ ಆ ಗ್ಯಾಂಗ್ ಹೊರಡಿಸಿರುವ ಗೋಕಥಾ ಕಾರ್ಯಾಚರಣೆ ಕರಪತ್ರವೇ ಸಾಕ್ಷಿಯಂತಿದೆ. ಎ-ಜೀವಸತ್ವ ಹಾಲು ಬಿಟ್ಟರೆ ಬೇರೆಲ್ಲೂ ಸಿಗದೆಂದು ಕರಪತ್ರದಲ್ಲಿ ಅಚ್ಚಿಸಲಾಗಿದೆ. ಇದು ಹಸಿ-ಹಸಿ ಸುಳ್ಳು. ಅಬ್ರಾಹ್ಮಣರು ತಿನ್ನುವ ಮೀನಿನಲ್ಲಿ ಅಪಾರ ಪ್ರಮಾಣದ ವಿಟಮಿನ್-ಎ ಇದೆ. ಹಸಿರು ತರಕಾರಿ ಕ್ಯಾರೆಟ್‌ನಲ್ಲಿ ಎ-ಅನ್ನಾಂಶವಿದೆ. ಇದೆಲ್ಲ ಬೇಕಂತಲೇ ಮರೆ ಮಾಚಿ, ಬ್ರಾಹ್ಮಣರು ಅವರ ಆಹಾರ-ವಿಹಾರ-ಸಂಸ್ಕೃತ ಮಾತ್ರ ಶ್ರೇಷ್ಠವೆಂದು ಬಿಂಬಿಸುವ ಬೇವರ್ಸಿ ಕಿತಾಪತಿಯಿದು.

ಗೋವಿನ ಬಗ್ಗೆ ಜನಸಾಮಾನ್ಯರಲ್ಲಿ ಇರುವ ಭಾವನಾತ್ಮಕ ನಂಬಿಕೆ ಜತೆ ರಾಘವನ ಗೋಕಥಾ ಗ್ಯಾಂಗ್ ಚೆಲ್ಲಾಟವಾಡುತ್ತ ಹಣ ಮಾಡುವ ಹಿಕಮತ್ತು ನಡೆಸಿರುವುದು ಮಠ ಮಾಫಿಯಾದ ದ್ವಂದ್ವವೇ ಸಾಬೀತು ಪಡಿಸುತ್ತಿದೆ. ಗೋವಿನ ಹೆಸರಲ್ಲಿ ರಾಘವ ಬಳಗ ಈವರೆಗೆ ನಡೆಸಿದ ಕತೆ- ಸಮ್ಮೇಳನ-ಗೋಶಾಲೆ-ಮಜ್ಜಿಗೆ ತಂಬುಳಿ ಮೋಹ ಮತ್ತು ಈಗ ದೊಡ್ಡ ಮಟ್ಟದಲ್ಲಿ ಹಮ್ಮಿಕೊಂಡಿರುವ ಗೋಕಥಾ ಪ್ರಹಸನವೆಲ್ಲ ಈ ಮಠ ಮಾನ್ಯರಿಗೆ ಆಕಳ ಮೇಲೆ ನಿಜವಾದ ಕಳಕಳಿ-ಪ್ರೀತಿಯೇ ಇಲ್ಲ ಎಂಬುದು ಖಾತ್ರಿ ಪಡಿಸುವಂತಿದೆ. ಗೋರಕ್ಷಣೆಯೇ ರಾಘವನ ಮುಖ್ಯ ಉದ್ದೇಶವಾದರೆ ಅದು ಬೂಟಾಟಿಕೆಯ-ಆಡಂಬರದ ಗೋಕಥಾ ಗದ್ದಲದಿಂದ ಸಾಧ್ಯವೇ ಇಲ್ಲ. ಗೋ ಕಥೆಗಿಂತ ದನ ಸಾಕುವ ಪ್ರಾಮಾಣಿಕ ಪ್ರಾಯೋಗಿಕ ಆಚರಣೆ ಮಾತ್ರ ಗೋ ಸಂತತಿ ಸಂರಕ್ಷಿಸ ಬಲ್ಲದು. ಇದು ಶೂದ್ರರಿಗೆ ಅರ್ಥವಾದರಷ್ಟೇ ಢೋಂಗಿ ರಾಘವನ ಬಳಗದ ಭಂಡಾಟಕ್ಕೆ ಕಡಿವಾಣ ಬೀಳಲು ಸಾಧ್ಯ. ಇಲ್ಲದಿದ್ದರೆ ಯಾರದೋ ದುಡ್ಡು ರಾಘವನ ಪರಿವಾರದ ಗೋ ಜಾತ್ರೆ ಆಗುತ್ತದೆ!!


■ ಶುದ್ಧೋಧನ

ದೇಣಿಗೆ ದೋಖಾ!!

ರಾಮಚಂದ್ರಾಪುರ ಮಠಾಧೀಶ ರಾಘವನೀಗ ಉತ್ತರ ಕನ್ನಡವನ್ನು ತನ್ನ 'ಕರ್ಮ'ಭೂಮಿ ಮಾಡಿಕೊಂಡುಬಿಟ್ಟಿದ್ದಾನೆ. ಆತನ ರಾಮಕಥಾ-ಗೋಕಥಾ ಸುಲಿಗೆ, ಸುದ್ದಿ ಶೂರತ್ವಕ್ಕೆಲ್ಲ ಉತ್ತರ ಕನ್ನಡ ಕರಾವಳಿಯೇ ಆಡಂಬೋಲದಂತಾಗಿದೆ. ಶಿರಸಿ ಸೀಮೆಯಲ್ಲಿ ಆತನ ಆಟ ಅಷ್ಟಾಗಿ ನಡೆಯದು. ಆತ ಗೋಕರ್ಣ ದೇವಸ್ಥಾನ ವಶಪಡಿಸಿಕೊಂಡಾಗ ಶಿರಸಿ ಸೀಮೆಯ ಬ್ರಾಹ್ಮಣರ ಮಠಾಧೀಶ ಸ್ವರ್ಣವಲ್ಲಿ ಸ್ವಾಮಿ "ಗೋಕರ್ಣಕ್ಕೆ ಕಲಿ ಪ್ರವೇಶವಾಗಿದೆ..." ಎಂದುಬಿಟ್ಟಿದ್ದ. ಆ ದ್ವೇಷ-ಮೇಲಾಟ ಇಂದಿಗೂ ಇದೆ.

ವಿಷಯ ಅದಲ್ಲ; ಈ ರಾಘವ ಗೋರಕ್ಷಣೆ ಹೆಸರಲ್ಲಿ ಹಣ ಮಾಡಲು ಹವಣಿಸುತ್ತಿದ್ದಾನೆ. ತನ್ನ ಹವ್ಯಕ ಅನುಯಾಯಿಗಳಿಗೆ ದನ ಸಾಕಿ ಗೋ ತಳಿ ರಕ್ಷಿಸಿ ಎಂದು ಹೇಳುವ ಬದಲು ತಾನು ನಡೆಸುತ್ತಿರುವ ಗೋ ಶಾಲೆಗಳಿಗೆ ದೇಣಿಗೆ-ವಂತಿಗೆ ಕೊಡಿ; ಶೂದ್ರರಿಂದ ಗೋವಿನ ಹೆಸರಲ್ಲಿ ಸುಲಿಗೆ ಮಾಡಿ ಎಂದು ಪ್ರಚೋದಿಸುತ್ತಿದ್ದಾನೆ. ಮನೆಯ ಶೋಕೇಸಿನಲ್ಲಿ ಗೋ ಪ್ರತಿಮೆ ಇಟ್ಟು ಶೃಂಗಾರ ಮಾಡೋದು; ಗೋ ಶಾಲೆ-ಗೋ ಸಮ್ಮೇಳನಕ್ಕೆ ದೊಡ್ಡ ದೇಣಿಗೆ ಕೊಟ್ಟು ಸನ್ಯಾಸಿ ಗುರುಗಳ ಕೈಯಿಂದ ಮಾಡಿಸಿಕೊಳ್ಳೋದೇ ಗೋ ಸೇವೆ-ಗೋ ರಕ್ಷಣೆ ಎಂಬ ಹೊಸ ಧಾರ್ಮಿಕ ನೀತಿ ಈ ಬ್ರಾಹ್ಮಣ ಪೀಠಾಧಿಪತಿ ಜಾರಿಗೆ ತಂದಿದ್ದಾನೆ. ಜೀವಂತ ಗೋವಿನ ಹೆಸರಲ್ಲಿ ಕಲ್ಲಿನ ಕಾಮಧೇನು ಸ್ಥಾಪನೆಗೆ ಈ ರಾಘವ ತಯಾರಿ ನಡೆಸುತ್ತಿರುವುದು ವಿಪರ್ಯಾಸ! ಇದವನ ಉದ್ಯಮ ಟ್ರಿಕ್ಕು!

ರಾಘವನ ಹಿಂಬಾಲಕರು ಹೊಸಾಡದ ಗುರುಗಳ ಗೋ ಶಾಲೆ (ಹೊಸಾಡ)ಗೆ ದೇಣಿಗೆ ನೀಡಿ ಎಂದೇಳುತ್ತಾರೆ ಕುಮಟಾದ ಬೀದಿಬೀದಿ ತಿರುಗಿ ನೀಡುತ್ತಿದ್ದಾರೆ 'ಗೋ ರಕ್ಷಕ' ಎಂಬ 50, 100, 500 ರೂ.ಗಳ ಕೂಪನ್ ಹಂಚುತ್ತ ದಾನ ಬೇಡಲಾಗುತ್ತಿದೆ.



ಕರಾವಳಿಯ ಹಳ್ಳಿಹಳ್ಳಿಯ ಎಲ್ಲ ಜಾತಿ-ಧರ್ಮದವರಿಗೂ ಈ ಕೂಪನ್ ಕೊಟ್ಟು ಕಾಸು ಪೀಕಿಸಲಾಗುತ್ತಿದೆ. ಈ ದೇಣಿಗೆಯೇ ಅಸಂಖ್ಯ ಲಕ್ಷವಾಗುವ ಸಾಧ್ಯತೆಯಿದೆ. ಹೀಗೆ ಅಕ್ರಮವಾಗಿ ರಾಘವನಿಗೆ ಸಾರ್ವಜನಿಕರಿಂದ ಹಣ ವಸೂಲಿಗೆ ಅಧಿಕಾರ ಕೊಟ್ಟವರ್‍ಯಾರು? ಸಮಾಜವಾದಿ ಸಿದ್ದು ಸರ್ಕಾರಕ್ಕಿದು ಗೊತ್ತಿಲ್ಲವಾ? ಜಿಲ್ಲಾಡಳಿತ ಏಕೆ ಈ ಪಾತಕ ಕಂಡೂ ಕಾಣದಂತಿದೆ? ರಾಘವನ ಗೋಕಥಾ-ಗೋರಕ್ಷಾ ಜನಜಾಗೃತಿ ಅಭಿಯಾನದ ಮೂಲ ಉದ್ದೇಶವೇ ಬಿಜೆಪಿ ಬೆಳೆಸೋದು ಮತ್ತು ಕಾಸು ಮಾಡೋದು.

ಇಂಥ ಚಡ್ಡಿಗಳ ಧರ್ಮಕಾರಣದಲ್ಲಿ ಕುಮಟಾ ಮಟ್ಟದ ಕಾಂಗ್ರೆಸ್ ಲೀಡರ್ ಡಾ. ಜಿ.ಜಿ. ಹೆಗಡೆ ಮುಂಚೂಣಿಯಲ್ಲಿದ್ದಾರೆ. ನಿಗೂಢ-ದಂಧೆ ಗೂಟದ ಕಾರಿಗೆ ಕಾತರಿಸುತ್ತಿರುವ ಈತನಿಗೆ ರಾಜಕೀಯ ಲಾಭಕ್ಕಷ್ಟೇ ಕಾಂಗ್ರೆಸ್ ಬೇಕು. ಬುದ್ಧಿ ಮಾತ್ರ ಅಪ್ಪಟ ಬನಿಯಾಶಾಹಿ! ಇಂಥ ದಗಲುಬಾಜಿ ಕಾಂಗ್ರೆಸಿಗರೇ ರಗಳೆ ರಾಘವ ಮತ್ತು ಸೋಗಲಾಡಿ ಸ್ವರ್ಣವಲ್ಲಿ ಸ್ವಾಮಿಗಳ ಬೆಳೆಸುತ್ತಿದ್ದಾರೆ.

ಡಾ.ಮೋಹನ ಆಳ್ವ ಅವರಿಗೆ ಬಹಿರಂಗ ಪತ್ರ



ಡಾ. ಮೋಹನ್ ಆಳ್ವ ಅವರಿಗೆ,

ಮೂಡುಬಿದಿರೆಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗದೆ ಹೋಗಿದ್ದಿದ್ದರೆ, ಅದರ ವ್ಯವಸ್ಥೆಯ ಹೊಣೆಗಾರಿಕೆಯನ್ನು ನೀವು ಹೊತ್ತುಕೊಳ್ಳದೆ ಹೋಗಿದ್ದಿದ್ದರೆ, ಅಚ್ಚುಕಟ್ಟು ಪ್ರಿಯರೂ ಸೊಗಸುಗಾರರೂ ಆದ ನಿಮಗೆ ಆ ಸಮ್ಮೇಳನ ಅತೃಪ್ತಿಯನ್ನು ಉಂಟುಮಾಡದೆ ಹೋಗಿದ್ದಿದ್ದರೆ, ಬಹುಶಃ ನುಡಿಸಿರಿ ಹುಟ್ಟುತ್ತಿರಲಿಲ್ಲ. ನುಡಿಸಿರಿ ಸಮ್ಮೇಳನ ಶುರುವಾದಾಗಿನಿಂದ ನಿಮ್ಮ ತಂಡದಲ್ಲಿ ಒಬ್ಬನಾಗಿದ್ದು ನಿಮ್ಮ ಕಾರ್ಯವೈಖರಿ, ವಿನಯ, ಆದರವನ್ನು ಕಂಡವನಾದರೂ ಈಗ ಅದರೊಳಗೆ ಒಬ್ಬನಾಗಲು ಮನಸ್ಸು ಸಂಕೋಚಪಡುವಂಥ, ನಿರಾಕರಿಸುವಂಥ ಸ್ಥಿತಿ ಉಂಟಾಗಿದೆ. ಯಾವ ಕಾರಣಗಳೂ, ಯಾವ ಸಮರ್ಥನೆಗಳೂ ನನ್ನನ್ನು ನಿಮ್ಮ ಜೊತೆ ನಿಲ್ಲುವಂತೆ ಮಾಡದಂಥ ಸ್ಥಿತಿ ಈಗ ನಿರ್ಮಾಣಗೊಂಡಿದೆಯಾದರೂ ನಿಮ್ಮ ಮೇಲಿನ ನನ್ನ ಗೌರವ, ವಿಶ್ವಾಸಗಳೇ ಈ ಪತ್ರದ ಹಿಂದಿನ ಆಶಯವೂ ಆಗಿದೆ.

ಇದು ಏಕಾಏಕಿ ಆದ ಬೆಳವಣಿಗೆ ಅಲ್ಲ. ನುಡಿಸಿರಿ ಸಮ್ಮೇಳನದ ಆರಂಭಿಕ ಸಭೆಗಳಿಂದ ನಿಮ್ಮ ಜೊತೆಗಿದ್ದ ನನಗೆ ಮೊದಲೆರಡು ವರ್ಷಗಳ ಕಾಲ ಸಮ್ಮೇಳನದ ಅಚ್ಚುಕಟ್ಟುತನ, ವೈಭವ, ಆತಿಥ್ಯದ ವೈಖರಿ, ಸನ್ಮಾನಿತರ ಸನ್ಮಾನದ ವೇಳೆ ನೀವು ತೋರುವ ಪ್ರೀತಿ ಮತ್ತು ವಿನಯಗಳ ಕುರಿತು, ಸಂಭ್ರಮ, ಬೆರಗು ಹುಟ್ಟಿತ್ತು. ಸಮ್ಮೇಳನಾಧ್ಯಕ್ಷರನ್ನು ಮತ್ತು ವಿಶೇಷ ಕಲಾವಿದರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮೆರೆಸುವುದರ ಬಗ್ಗೆ ನನಗಾಗ ಪ್ರಶ್ನೆಯೇ ಎದ್ದಿರಲಿಲ್ಲ. ಕೆಲವರು ಪಲ್ಲಕ್ಕಿಯಲ್ಲಿ ಕುಳಿತ ಸಂದರ್ಭದಲ್ಲಿ ಕಣ್ಮುಚ್ಚಿ ಧನ್ಯತೆಯಿಂದ, ವಿನಯದಿಂದ ಸಭೆಗೆ, ಸಭಿಕರಿಗೆ ವಂದಿಸುತ್ತ ಸಾಗಿದಾಗ ಅವರ ಸಾಧನೆಗೆ ಅವರ ಬದುಕಿನಲ್ಲಿ ಈ ಕ್ಷಣ ಅವಿಸ್ಮರಣೀಯವಾಗಿ ಉಳಿಯುತ್ತದೆ ಎಂದು ಮಾತ್ರ ಯೋಚಿಸಿದ್ದೆ. ಕೆಲವರು ಪಲ್ಲಕ್ಕಿಯಲ್ಲಿ ಕುಳಿತು ತನ್ನವರು ಎಲ್ಲಿದ್ದಾರೆ ಎಂದು ಹುಡುಕಿದಾಗ, ಅವರನ್ನು ಕರೆಸಲು ಕರೆ ನೀಡಿದಾಗ, ತನ್ನನ್ನು ಬಿಟ್ಟರೆ ಈ ಜಗದಲ್ಲಿ ಇನ್ನೋರ್ವ ಸಾಧಕರಿಲ್ಲ ಎಂಬಂತೆ ಹಮ್ಮು ತೋರಿ ಬೀಗಿದಾಗ, ಅಂಥವರ ಬಗ್ಗೆ ಹೇವರಿಕೆ ಉಂಟಾಗಿತ್ತು. ಅನಂತರದ ವರ್ಷಗಳಲ್ಲಿ ಪಲ್ಲಕ್ಕಿಯಲ್ಲಿ ಕೂತವರ ಕಡೆಗಿಂತ ಅದನ್ನು ಹೊತ್ತವರ ಕಡೆ ನನ್ನ ದೃಷ್ಟಿ ಹರಿದಾಗ, ಹೊತ್ತವರ ಮೈಮೇಲೆ ಮೂಡಿದ ಮತ್ತು ಹರಿದ ಬೆವರಿನ ಸ್ನಾನವು 'ಪಲ್ಲಕ್ಕಿ ಸಂಸ್ಕೃತಿ'ಯ ಇನ್ನೊಂದು ಮುಖವನ್ನು ಪರಿಚಯಿಸಿತು.

'ನಾಲ್ಕು ಜನರ ಮೇಲೆ ತೂರಿಸಿಕೊಳ್ಳುವ ಸಂದರ್ಭ ಪ್ರತಿಯೊಬ್ಬರಿಗೂ ಒಂದು ದಿನ ಬಂದೇ ಬರುತ್ತದೆ; ಅದು ಅವರ ಕೊನೆಯ ಯಾತ್ರೆ' ಎಂದು ನನ್ನ ಪ್ರೀತಿಯ ಪಂಡಿತಾರಾಧ್ಯ ಮೇಷ್ಟ್ರು ಹೇಳಿದ್ದ ಮಾತು ಆ ಕ್ಷಣದಲ್ಲಿ ಧುತ್ತೆಂದು ನೆನಪಾಗಿ ಇಡೀ 'ಪಲ್ಲಕ್ಕಿ ಸಂಸ್ಕೃತಿ'ಯ ಕುರಿತು ನನ್ನಲ್ಲಿ ವಿಮುಖತೆ ಆರಂಭವಾಯಿತು.

ನಾಡಿನ ಬೇರೆಬೇರೆ ಕಡೆಗಳಿಂದ ಸಾಹಿತಿ-ಕಲಾವಿದರನ್ನು ಕರೆಸಿಕೊಂಡು, ಅವರ ನಿರೀಕ್ಷೆಗೆ ಮೀರಿದ ಉಪಚಾರ, ಉಡುಗೊರೆ ನೀಡಿ, ನಿಮ್ಮ ಔದಾರ್ಯವನ್ನು ಅವರೆಲ್ಲ ಕೊಂಡಾಡುವಂತೆ ಮಾಡಿದಿರಿ. ಆದರಿಂದ ಅವರನ್ನು ನಿಮ್ಮ ಮತ್ತು ನಿಮ್ಮ ಶಿಕ್ಷಣ ಸಂಸ್ಥೆಯ ರಾಯಭಾರಿಗಳನ್ನಾಗಿ ಮಾಡಿದಿರಿ; ಕ್ರಮೇಣ ಹಾಗೆ ಬಂದವರಲ್ಲಿ ಕೆಲವರು ತಮಗೆ ಕೊಟ್ಟದ್ದು ಸಾಕಾಗಲಿಲ್ಲ ಎಂಬ ತಕರಾರು ಎತ್ತಿದ ವಿಚಾರ ನನ್ನ ಕಿವಿಗೆ ಬಿದ್ದಾಗಲೆಲ್ಲ ಅಂಥ ಸಾಹಿತಿಗಳ ಬಗ್ಗೆ ಹೇವರಿಸಿಕೊಂಡೆನೇ ಹೊರತು, ನಿಮ್ಮ ವ್ಯವಸ್ಥೆಯು ಅವರನ್ನು ಭ್ರಷ್ಟಗೊಳಿಸಿದ್ದನ್ನು ಅರಿಯಲಾಗದೆ ಹೋದೆ. ಅಪಸುಡಿ ಬಾರದಂತೆ ನೋಡಿಕೊಳ್ಳುವುದನ್ನೇ ಆದ್ಯತೆಯಾಗಿಸಿದ ನೀವು ಸಾಹಿತಿಗಳ ಇಂಥ ತಕರಾರುಗಳಿಗೆ 'ಕೇಳಿದಷ್ಟು ನೀಡಿ' ಹಿಂದಿನಿಂದ 'ಒಟ್ಟು ಕಲಾವಿದ ಮತ್ತು ಸಾಹಿತಿಗಳೇ ಹೀಗೆ' ಎಂದು ರೇಜಿಗೆಗೊಂಡು ಸಣ್ಣ ಮಾತುಗಳನ್ನಾಡುವ ಸ್ಥಿತಿ ಬಂದಿತು.

ಆದರೆ ಪೂರ್ವಭಾವಿ ಸಭೆಗಳಲ್ಲಿ ಇಂಥ ವಿಚಾರಗಳ ಕುರಿತು ಮುಕ್ತ ಚರ್ಚೆಯನ್ನು ಮಾಡಲು ಸಾಧ್ಯವಾಗದಿರುವುದಕ್ಕೆ ಹಲವು ಕಾರಣಗಳಿವೆ. ಒಂದು, ನಿಮ್ಮ ಆಪ್ತ ಬಳಗದ ಭಟ್ಟಂಗಿಗಳ ಕೋಟೆ ದಾಟಿ ನನ್ನಂಥವರ ಮಾತು ನಿಮ್ಮ ವಲಯವನ್ನು ಪ್ರವೇಶ ಮಾಡುವುದು ಅಸಾಧ್ಯವಾಗಿತ್ತು. ಎರಡು, ಸಾಹಿತ್ಯ ಸಮ್ಮೇಳನದ ಇಡೀ ಖರ್ಚನ್ನು ನೀವೇ ಹಾಕಿಕೊಂಡು ಮಾಡುವಾಗ, ಸಾರ್ವಜನಿಕರ ಹಣದಿಂದ ನಡೆಸುವ ಕಾರ್ಯಕ್ರಮಗಳ ಸಂಘಟನೆಯಲ್ಲಿ ನಡೆಸುವಂಥ ಮುಕ್ತ ಮತ್ತು ನಿಷ್ಠುರ ಚರ್ಚೆ ಅಲ್ಲಿ ಅಸಾಧ್ಯವೆಂಬ ಭಾವ ನನ್ನಂತೆ ಸಭೆಗಳಿಗೆ ಬರುತ್ತಿದ್ದ ಬಹುತೇಕ ಎಲ್ಲರದೂ ಆಗಿರುತ್ತಿತ್ತು. ಹೀಗಾಗಿ ಬಂದವರಲ್ಲಿ ಹಲವರು ನಿಮ್ಮ ಅಂತರಂಗದ ವಲಯದವರ ನಿಲುವುಗಳಿಗೆ ಪೂರಕವಾಗಿ ನಿಂತು, ಇಲ್ಲವೇ ತಮ್ಮ ಭಿನ್ನಮತವನ್ನು ನುಂಗಿಕೊಂಡು, ಗೋಷ್ಠಿಗಳ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಪ್ರಕ್ರಿಯೆಗಳಲ್ಲಿ ಮಾತ್ರ ಭಾಗವಹಿಸುವಂತಾಗಿತ್ತು.




ಅಂಥ ಸಮಾಲೋಚನಾ ಸಭೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕ್ರಮೇಣ ತೀರಾ ಸೊರಗಿದಾಗಲೂ ಅದು ನಿಮಗೆ ಪ್ರಶ್ನೆಯಾಗಿ ಯಾವತ್ತೂ ಕಾಡಿದ್ದಿಲ್ಲ. ನಿಮಗೆ ಅಲಂಕಾರಕ್ಕೆ, ಶೋಭೆಗೆ ಮಹಿಳೆಯರು ಬೇಕಾಗಿತ್ತು ಮತ್ತು ಅವರನ್ನು ಪರಿಧಿಗೆ ಸರಿಸಿಲ್ಲ ಎಂದು ತೋರಿಸಲು ಬೇಕಿತ್ತು. ಕಾವ್ಯ, ಕತೆಗಳನ್ನು ಬಿಟ್ಟು ಚಿಂತನೆಯ ಕ್ಷೇತ್ರ ಅವರದಲ್ಲ ಎಂಬ ನಿಲುವು ಈ ಒಂಬತ್ತು ವರ್ಷಗಳ ನುಡಿಸಿರಿಯ ಉದ್ದಕ್ಕೂ ಗಾಢವಾಗಿಯೇ ಕಂಡಿದೆ.

ಈ ಕರಾವಳಿಯಲ್ಲಿ ಇಲ್ಲಿನ ಜನಜೀವನವು ತಲ್ಲಣಿಸುವಂಥ ಎಷ್ಟು ವಿದ್ಯಮಾನಗಳು ಜರುಗಿಲ್ಲ? ಅದ… ಸಮ್ಮೇಳನ ಅದ್ದೂರಿಯಾಗಿ ಆಗಬೇಕು; ವಿವಾದಾತೀ… ಆಗಿರಬೇಕು ಎಂಬುದೇ ನಿಮ್ಮ ಆದ್ಯತೆ ಆಗಿದ್ದಾಗ, ಈ… ನೆಲದ ಜನಸಾಮಾನ್ಯರ ಬದುಕು, ಚಿಂತನೆ, ಸಂವೇದನೆಗಳ… ಸಹಜವಾಗಿ ಪರಿಧಿಯಾಚೆಗೇ ಉಳಿದುಬಿಟ್ಟಿವೆ. ಒಮ್… ಈವರೆಗೆ 'ಕನ್ನಡ ಮನಸ್ಸು' ಎಂದಿಟ್ಟುಕೊಂಡ… ಆಯೋಜಿಸಿದ ನುಡಿಸಿರಿಗಳನ್ನು ಹಿಂತಿರುಗಿ ನೋಡಿ… ಸಮಕಾಲೀನ ಸಮಸ್ಯೆಗಳು, ಜನಸಾಮಾನ್ಯರ ಬಿಕ್ಕಟ್ಟುಗಳು… ಕರಾವಳಿಯ ಸಾಮಾಜಿಕ, ಸಾಂಸ್ಕೃತಿಕ ವಲಯಗ… ತಲ್ಲಣಗಳು–ಇಂಥ ಯಾವ ವಿಷಯಗಳ ಕುರಿತು ಚರ್ಚೆ… ನುಡಿಸಿರಿಯು ವೇದಿಕೆಯನ್ನು ನೀಡಿದೆ? ಕಳೆದೆರಡ… ವರ್ಷಗಳಿಂದ ಪದೇಪದೇ ಸಮಾಲೋಚನಾ ಸಭೆಗಳ… ಈ ಬಗ್ಗೆ ನಾನು ಮತ್ತು ನನ್ನಂಥ ಕೆಲವರು ಒತ್ತಿ ಹೇಳಲ… ಯತ್ನಿಸಿದರೂ ಅದಕ್ಕೆ ಮಾನ್ಯತೆ ದೊರೆಯದೆ ನಿಮ… ಭಿನ್ನ ದನಿಗಳು 'ಒಡಕು ದನಿ'ಗಳಾಗಿ ಕೇಳಿಸಿದವು.

ಶಿಕ್ಷಣ ಸಂಸ್ಥೆಯ ಒಡೆಯರಾಗಿ, ಬಂಡವಾಳಶಾಹಿಯ… ಪ್ರತಿನಿಧಿಯಾಗಿ, ಊಳಿಗಮಾನ್ಯ ವ್ಯವಸ್ಥೆಯ ಕೊಂಡಿಯಾ… ಇಂಥ ಸಾಮಾಜಿಕ ಸಮಸ್ಯೆಗಳ ಕುರಿತು ಮಾತನಾಡುವುದ… ನಿಮಗೆ ಕಷ್ಟವಾಗುತ್ತದೆ. ಆದರೆ ಕಳೆದ ಕೆಲವು ವರ್ಷಗಳಿಂ… ಕರಾವಳಿಯ ಅವಳಿ ಜಿಲ್ಲೆಗಳು ಕೋಮುವಾದಿಗ… ಅಡುಂಬೊಲವಾದ ಬಗ್ಗೆ ನಿಮಗೆ ಏನೂ ಅನ್ನಿಸುವುದಿಲ್ಲವೇ… ಕರಾವಳಿಯ ಅವಳಿ ಜಿಲ್ಲೆಗಳಲ್ಲಿ ಒಂದು ವರ್ಷ… ಅವಧಿಯಲ್ಲೇ ನಾನೂರಕ್ಕೂ ಹೆಚ್ಚು ಯುವತಿಯರ… ನಾಪತ್ತೆಯಾಗಿರುವ, ಮಾನವ ಕಳ್ಳಸಾಗಣೆಗೆ ತುತ್ತಾಗಿರು… ಅಪಾಯವು ಸಮಕಾಲೀನ ತುರ್ತು, ಬಿಕ್ಕಟ್ಟು ಎಂದ… ನಿಮಗೆ ಇನ್ನೂ ಅನಿಸಿಲ್ಲವೆ? ಮಡೆಮಡೆಸ್ನಾನ… ಪಂಕ್ತಿಭೇದದಂಥ ಆಚರಣೆಗಳು ಜಾರಿಯಲ್ಲಿದ್ದರೂ ಇಂ…

ಮಂಗಳೂರಿನಲ್ಲಿ 'ಜನ-ನುಡಿ' ಕಾರ್ಯಕ್ರಮ



ಕರ್ನಾಟಕದ ಜನಪರ ಕಾಳಜಿಗಳ ಹಾಗೂ ಪ್ರಗತಿಪರ ಸಂಘಟನೆಗಳು ಹಾಗೂ ವ್ಯಕ್ತಿಗಳು ಒಗ್ಗೂಡಿ ಡಿಸೆಂಬರ್ 14-15 ರಂದು ಮಂಗಳೂರಿನಲ್ಲಿ ಆಯೋಜಿಸಿರುವ 'ಜನ-ನುಡಿ' ಕಾರ್ಯಕ್ರಮದ ವಿವರ

ಜನ ನುಡಿ

ಡಿಸೆಂಬರ್ 14 ಮತ್ತು 15, 2013.

ಸ್ಥಳ: ಕಲಾಂಗಣ್, ಶಕ್ತಿನಗರ, ಮಂಗಳೂರು

14-12-2013, ಬೆಳಗ್ಗೆ 10.00 -12.30

ಚಾಲನೆ : ಡಾ. ರಾಜೇಂದ್ರ ಚೆನ್ನಿ
ಅಧ್ಯಕ್ಷತೆ : ಪ್ರೊ. ಎಸ್. ಜಿ. ಸಿದ್ಧರಾಮಯ್ಯ
ಪ್ರಾಸ್ತಾವಿಕ ಮಾತು : ಡಾ. ಎಚ್. ಎಸ್. ಅನುಪಮಾ
ಅತಿಥಿಗಳು : ಸಾರಾ ಅಬೂಬಕರ್, ಲಕ್ಷ್ಮಿನಾರಾಯಣ ನಾಗವಾರ, ಕಡಿದಾಳು ಶಾಮಣ್ಣ

12.30 - 1.00 ಹೋರಾಟದ ಹಾಡುಗಳು

ಮಧ್ಯಾಹ್ನ 2.00 - 4.00

ಮಹಿಳೆ - ವರ್ತಮಾನ ಮತ್ತು ಚಳವಳಿ

ಅಧ್ಯಕ್ಷತೆ : ಡಾ. ಕೆ. ಷರೀಫಾ
ಆಶಯ : ದು. ಸರಸ್ವತಿ
ವಿಷಯ ಮಂಡನೆ : ಡಾ. ಮೀನಾಕ್ಷಿ ಬಾಳಿ, ಡಾ. ವಿನಯಾ ವಕ್ಕುಂದ, ಡಾ. ಎನ್. ಗಾಯತ್ರಿ
ಪ್ರತಿಕ್ರಿಯೆ : ಗುಲಾಬಿ ಬಿಳಿಮಲೆ, ಡಾ. ಅನಸೂಯಾ ಕಾಂಬ್ಳೆ, ಜ್ಯೋತಿ ಚೇಳಾಯರು, ಮಂಜುಳಾ ಮಾಳಗಿ

ಸಂಜೆ 4.00 -6.00

ಸಮಕಾಲೀನ ಸವಾಲುಗಳು - ಸಾಧ್ಯತೆಗಳು

ಅಧ್ಯಕ್ಷತೆ: ಡಾ. ಕಾಳೇಗೌಡ ನಾಗವಾರ
ಆಶಯ: ನಾರಾಯಣ ಗಟ್ಟಿ
ವಿಷಯ ಮಂಡನೆ: ಡಾ. ಎಂ. ಡಿ. ವಕ್ಕುಂದ, ಕೆ. ಎಸ್. ವಿಮಲಾ, ಡಾ. ಪಿ. ಲಕ್ಷ್ಮೀನಾರಾಯಣ
ಪ್ರತಿಕ್ರಿಯೆ: ಡಾ. ರಂಗನಾಥ್ ಕಂಟನಕುಂಟೆ, ಡಾ. ಅರುಣ್ ಜೋಳದ ಕೂಡ್ಲಿಗಿ, ಪಿ. ಭಾರತೀದೇವಿ, ವರುಣ್ ನಾಯ್ಕರ್

ಸಾಂಸ್ಕೃತಿಕ ಕಾರ್ಯಕ್ರಮ

15-12-2013, ಬೆಳಗ್ಗೆ 10.00 -12.00

ಜನ ಸಂಸ್ಕೃತಿ ಮತ್ತು ಮಾರುಕಟ್ಟೆ

ಆಶಯ: ಪ್ರೊ. ರಹಮತ್ ತರೀಕೆರೆ
ಅಧ್ಯಕ್ಷತೆ: ಡಾ. ಆರ್. ಪೂರ್ಣಿಮಾ
ವಿಷಯ ಮಂಡನೆ: ಬಿ. ಶ್ರೀಪಾದ ಭಟ್, ಡಾ. ಬಾಲಗುರುಮೂರ್ತಿ
ಪ್ರತಿಕ್ರಿಯೆ: ಸರ್ಜಾಶಂಕರ ಹರಳಿಮಠ, ರವಿಕೃಷ್ಣಾ ರೆಡ್ಡಿ, ಡಾ. ಎಚ್. ಡಿ. ಪ್ರಶಾಂತ್, ಹರ್ಷಕುಮಾರ್ ಕುಗ್ವೆ

ಮಧ್ಯಾಹ್ನ 12.00- 1.30

ಕವಿ ಗೋಷ್ಠಿ

ಅಧ್ಯಕ್ಷತೆ: ಜಿ. ಪಿ. ಬಸವರಾಜು
ಆಶಯ : ಪಿಚ್ಚಳ್ಳಿ ಶ್ರೀನಿವಾಸ್
ಕವನ ವಾಚನ: ಆರಿಫ್ ರಾಜಾ, ರೇಣುಕಾ ಹೆಳವರ, ಶಶಿಧರ ಹೆಮ್ಮಾಡಿ, ದೀಪಾ ಹಿರೇಗುತ್ತಿ, ಲಕ್ಷ್ಮೀನಾರಾಯಣ ಸ್ವಾಮಿ… ಅಕ್ಷತಾ ಹುಂಚದಕಟ್ಟೆ, ಸಂವರ್ಥ ಸಾಹಿಲ್, ಬಸವರಾ… ಹೂಗಾರ, ಕೆ.ಪಿ.ಮೃತ್ಯುಂಜಯ, ಪ್ರವರ ಕೊಟ್ಟೂರು, … ಶ್ರೀನಿವಾಸ, ನಾಗರಾಜ ಹರಪನಹಳ್ಳಿ

1.30 - 2.00 ಹೋರಾಟದ ಹಾಡು

ಮಧ್ಯಾಹ್ನ 2.30 - 4.30

ಕರಾವಳಿಯ ತಲ್ಲಣಗಳು

ಅಧ್ಯಕ್ಷತೆ: ಡಾ. ಸಬಿಹಾ ಭೂಮಿಗೌಡ
ವಿಷಯ ಮಂಡನೆ: ಡಾ. ಎಚ್. ನಾಗವೇಣಿ, ಅತ್ರಾಡಿ ಅಮೃ… ಶೆಟ್ಟಿ, ಬಿ. ಎಂ. ಬಶೀರ್
ಪ್ರತಿಕ್ರಿಯೆ : ಡಾ. ವಿಠ್ಠಲ ಭಂಡಾರಿ, ವಿದ್ಯಾ ದಿನಕರ್, ಸುಶೀಲ… ನಾಡ, ವಿಠಲ ಮಲೆಕುಡಿಯ, ಜೀವನ್ ರಾಜ್ ಕುತ್ತಾರ್

ಸಮಾರೋಪ: ಸಂಜೆ 4.30 - 6.00

ಅಧ್ಯಕ್ಷತೆ: ಕೆ. ನೀಲಾ
ಸಮಾರೋಪ: ದಿನೇಶ್ ಅಮಿನ್ ಮಟ್ಟು
ಅತಿಥಿಗಳು: ಮಾವಳ್ಳಿ ಶಂಕರ್, ಸನತ್‌ಕುಮಾರ್ ಬೆಳಗಲಿ… ಡಾ. ವಸುಂಧರಾ ಭೂಪತಿ, ಅನಸೂಯಮ್ಮ, ಹರೇಕಳ ಹಾಜ…

ಸಹಯೋಗ: ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟ (ಕರ್ನಾಟಕ-ಕೇರಳ), ಕೊರಗ ಜಾಗೃತಿ ಸಂಘ, ಕರ್ನಾಟಕ ರಾ… ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಭೀಮವಾದ), ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ); ಕರಾವಳಿ ಲೇಖಕಿಯರ ಸಂಘ, ಲಡಾಯಿ ಪ್ರಕಾಶನ (ಗದಗ), ಸಹಮತ (ಕುಂದಾಪುರ), ಜಾತಿ ಮುಕ್ತ ಸಂಬಂಧ ವೇದಿಕೆ, ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ನಾವು ನಮ್ಮಲ್ಲಿ (ಕೊಟ್ಟೂರು), ವರ್ತಮಾನ.ಕಾಂ, ಕರ್ನಾಟಕ ಜನ ಸಾಹಿತ್ಯ ಸಂಘಟನೆ, ಸಮುದಾಯ (ಮಂಗಳೂರು), ಇಪ್ಟಾ, ಪಿಯುಸಿಎಲ್

ಬನ್ನಿ, ಭಾಗವಹಿಸಿ

ಮಾವ ವಿಚಾರಗಳ ಚರ್ಚೆಗೆ ನುಡಿಸಿರಿಯು ವೇದಿಕೆಯನ್ನು ಮಾಡಿವೆ? ಲವ್ ಜಿಹಾದ್ ನೆಪದಲ್ಲಿ ವಿಭಿನ್ನ ಕೋಮಿಗೆ ಸೇರಿದ ಹುಡುಗ-ಹುಡುಗಿಯರು ಜೊತೆಯಾಗಿ ಮಾತನಾಡುವುದು ಕಷ್ಟವಾಗಿರುವುದು; ಹೋಂಸ್ಟೇ ಪ್ರಕರಣ; ಅತ್ಯಾಚಾರ; ಇವೆಲ್ಲ ಸಾಹಿತ್ಯ ಸಮ್ಮೇಳನದಲ್ಲಿ ಚರ್ಚಿಸುವ ಜನ ವಿಷಯ ಆಗಲಾರದೇ? (ಅ)ನೈತಿಕ ಪೊಲೀಸರ ಬಗೆಗೆ ನೀವಾಗಲೀ, ನುಡಿಸಿರಿಯಾಗಲೀ ದನಿ ಎತ್ತಬೇಕಲ್ಲವೇ?

ಜನಸಾಮಾನ್ಯರಲ್ಲಿ ಮೂಢನಂಬಿಕೆಗಳನ್ನು ಬಿತ್ತಿ ಅವರ ಬೆವರಿನ ದುಡಿಮೆಯ ಫಲವಾಗಿ ಬರುವ 'ಕಾಣಿಕೆ'ಗಳಿಂದ ಮುಕುಪ, ನಾಲ್ಕುನೂರಾ ಅರವತ್ತೇಳು ಹೆಣ್ಣುಮಕ್ಕಳ ಅಸಹಜ ಸಾವು ಮತ್ತು ದುರ್ಮರಣಗಳಿಗೆ ಕಾರಣವಾದ, ಅವು ಬಯಲಿಗೆ ಬಾರದಂತೆ ಮಾಡಿದ ಅಧರ್ಮಸ್ಥಳದ 'ಧರ್ಮಾಧಿಕಾರಿ'ಯನ್ನು-ನಿಮ್ಮ ಮಾತಿನಲ್ಲೇ ಹೇಳುವುದಾದರೆ 'ಮಾವಂದರ'ನ್ನು-ನೀವು ಹೆಚ್ಚು ಹೆಚ್ಚು ಅವಲಂಬಿಸುತ್ತಿರುವುದೇ ನೀವು ಯಾರ ಜೊತೆ ನಿಂತಿದ್ದೀರಿ ಎಂಬುದನ್ನು ಸೂಚಿಸುತ್ತದೆ. ಇಡೀ ಬೆಳ್ತಂಗಡಿ ತಾಲೂಕಿನ ಜನತೆ ತಮ್ಮ ಸಹನೆಯ ಕಟ್ಟೆಯೊಡೆದು, ಬೀದಿಗಿಳಿದು ಅಮಾಯಕರಿಗೆ ನ್ಯಾಯ ದೊರಕಿಸಲು ಹೋರಾಟ ನಿರತರಾಗಿದ್ದಾರೆ. ಅಂದು ಪದ್ಮಲತಾ, ಮೊನ್ನೆ ವೇದವಲ್ಲಿ, ನಿನ್ನೆ ಸೌಜನ್ಯ, ನಾಳೆ ಇನ್ನು ಯಾರ ಬಲಿ ಎಂದು ಜನ ಕೇಳುತ್ತಿದ್ದಾರೆ. ಎಲ್ಲ ಸಾಕ್ಷ್ಯಗಳನ್ನೂ ವ್ಯವಸ್ಥಿತವಾಗಿ ನಾಶಮಾಡುತ್ತಿರುವ ದುಷ್ಕರ್ಮಿಗಳ ಕುರಿತು ಚಕಾರ ಎತ್ತದ ವ್ಯಕ್ತಿಯು ಕೈಗಳಿಂದ ಈ ಬಾರಿಯ ವಿಶ್ವ ನುಡಿಸಿರಿಯನ್ನು ಉದ್ಘಾಟಿಸುತ್ತಿದ್ದೀರಿ ಎಂದಾದರೆ ನಿಮ್ಮ ಸಾಮಾಜಿಕ ಕಾಳಜಿ ಯಾವ ಮಟ್ಟದ್ದು ಎಂಬುದನ್ನು ಜನಸಾಮಾನ್ಯರು ಅರ್ಥಮಾಡಿಕೊಳ್ಳಬೇಕಿದೆ.

ನನಗೆ ಪಾಠ ಹೇಳಿದ, ಈ ಕರಾವಳಿ ಜಿಲ್ಲೆಯ ಜನಪಂಥೀಯ ಚಟುವಟಿಕೆಗಳ ಕುರಿತು ನಿರಂತರ ಕಕ್ಕುಲಾತಿಯಿಂದ ಮಾತನಾಡುತ್ತಿದ್ದ, ಜಾತಿಯ ಚೌಕಟ್ಟಿನಲ್ಲಿ ಎಂದೆಂದೂ ಸಿಲುಕಿಯೇ ಇಲ್ಲ ಎಂದು ಅಭಿಮಾನಪಡುತ್ತಿದ್ದ ಆ ಮೂಲಕ ನಮ್ಮೆಲ್ಲರಿಗೆ ಒಂದಿಷ್ಟು ಮಾದರಿ ಎನಿಸಿದ್ದ ಜಾನಪದ ತಜ್ಞ ಪ್ರೊ.ಬಿ.ಎ.ವಿವೇಕ ರೈ ಅವರು ಇಂಥ ಆಳ್ವ ನುಡಿಸಿರಿಯ ಸರ್ವಾಧ್ಯಕ್ಷರು ಎಂಬುದು ನನಗೆ ಆಶ್ಚರ್ಯ ಮತ್ತು ನೋವಿನ ಸಂಗತಿ. ಹೆತ್ತವರೇ ಆಗಲಿ, ಅಧ್ಯಾಪಕರೇ ಆಗಲಿ, ತಪ್ಪೆಸಗಿದಾಗ ಅವರ ತಪ್ಪನ್ನು ಮತ್ತು ಚ್ಯುತಿಯನ್ನು ಹೇಳುವುದು ಮಕ್ಕಳ/ಶಿಷ್ಯರ ಆದ್ಯ ಕರ್ತವ್ಯ ಮತ್ತು ಅದು ಹಿರಿಯರಿಗೆ ಪ್ರೀತಿ ತೋರುವ ಒಂದು ವಿಧಾನ ಎಂಬ ರಾಜಕಾರಣದಲ್ಲಿ ನಂಬಿಕೆ ಇಟ್ಟ ಕಾರಣ ನಾನು ಈ ಮಾತುಗಳನ್ನು ಹೇಳಬೇಕಾಗಿ ಬಂದಿದೆ.

ಇದೆಲ್ಲದರ ಬಗ್ಗೆ ಎಚ್ಚರಿಕೆ ಹೇಳಿದ/ಹೇಳಬೇಕಾದ ದನಿಗಳು ಪೂರ್ವಭಾವಿ ಸಭೆಗಳಲ್ಲಿ ಕ್ಷೀಣವಾಗಿ ಬಿಟ್ಟವು. ಕೊನೆಯ ಪ್ರಯತ್ನವಾಗಿ 'ಸಂಪನ್ಮೂಲ ವ್ಯಕ್ತಿ'ಗಳ ಆಯ್ಕೆಯ ಹಂತದಲ್ಲಿ ಕೆಲವು ಪ್ರಯತ್ನವನ್ನು ನಡೆಸಿದ್ದೆ. ಹೀಗೆ ನಾನು ಸೂಚಿಸಿದ, ನಿಮ್ಮ ಸಭೆಯಲ್ಲಿ ಅಂಗೀಕಾರಗೊಂಡ ಕವಯಿತ್ರಿಯರು ನುಡಿಸಿರಿಗೆ ಬಂದಾಗ ನಡೆದುದಾದರೂ ಏನು? ಓರ್ವ ಗೆಳತಿಯನ್ನು ಕವಿಸಮಯಕ್ಕೆ ಕರೆಸಿ, ಅವಳಲ್ಲಿ ಅಪರಾಧಿ ಪ್ರಜ್ಞೆಯನ್ನು ಹುಟ್ಟುಹಾಕಿದಂತಾಯ್ತು. ಅವಳು ತನ್ನೂರಿಗೆ ಹೋಗಿ ನಿಮ್ಮಿಂದ ಪಡೆದ ಹಣವೆಲ್ಲವನ್ನೂ ಕಾರಣವನ್ನೊಳಗೊಂಡ ಪತ್ರ ಬರೆದು ಹಿಂದಿರುಗಿಸಿದ್ದು ಯಾರ ಗಮನಕ್ಕೂ ಬರಲೇ ಇಲ್ಲ. ಇನ್ನೋರ್ವ ಗೆಳತಿ ಕರಾವಳಿಯ ತಲ್ಲಣಗಳ ಪರವಾಗಿ ನುಡಿಸಿರಿ ವೇದಿಕೆಯಲ್ಲಿ ದನಿಯೆತ್ತಿ ಸದ್ದು ಮಾಡಿದರೂ ಅದು ನಿಮಗೆ 'ಒಡಕುದನಿ'ಯಾಗಿ ಕೇಳಿಸಿತೇ ಹೊರತು ಭಿನ್ನದನಿಗೆ ಬೆಲೆ ನೀಡಬೇಕು ಎಂದು ಅನ್ನಿಸಲೇ ಇಲ್ಲ.


ನಮ್ಮ ಗುರಿಯಷ್ಟೇ ನಾವು ಹೋಗುವ ದಾರಿಯೂ ಮುಖ್ಯ ಎಂಬ ಮಾತು ನಿಮಗೂ ಹೊಸದಿರಲಾರದು. ಕರ್ನಾಟಕದ ಮೂಲೆಮೂಲೆಗಳಲ್ಲಿ ಹಾಗೂ ವಿದೇಶಗಳಲ್ಲಿ ನುಡಿಸಿರಿಯ ಘಟಕಗಳನ್ನು ತೆರೆಯಲು ನೀವು ಲಕ್ಷಾಂತರ ಹಣವನ್ನು ವ್ಯಯಿಸಿದ್ದೀರಿ. ಈಗ ಕೋಟಿಗಳ ಲೆಕ್ಕದಲ್ಲಿ ವಿಶ್ವನುಡಿಸಿರಿಯನ್ನು ಆಯೋಜಿಸುತ್ತಿದ್ದೀರಿ. ಇಲ್ಲಿಯವರೆಗೆ ಸಮ್ಮೇಳನದ ಖರ್ಚನ್ನು ನೀವು ನಿಭಾಯಿಸುತ್ತಿದ್ದ ಕ್ರಮದ ಬಗ್ಗೆ ನನಗೆ ಬೆರಗು ಇತ್ತು, ಈಗ ಹತ್ತಾರು ಪ್ರಶ್ನೆಗಳಿವೆ. ಡಿಸೆಂಬರ್ 14 ಮತ್ತು 15ರಂದು ಮಂಗಳೂರಿನ ನೆಹರೂ ಮೈದಾನದ ಕಲಾಂಗಣದಲ್ಲಿ ಕರ್ನಾಟಕದ ಪ್ರಗತಿಪರ ಸಂಘಟನೆಗಳೆಲ್ಲ ಸೇರಿ ಕೆಲವೇ ಕೆಲವು ಸಾವಿರಗಳಲ್ಲಿ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲು ಸಾಧ್ಯ ಎಂದು ತೋರುತ್ತಿದ್ದಾರೆ; ಆ ಮೂಲಕ ನಿಮಗೊಂದು ಉತ್ತರವನ್ನು ಕೊಡುವುದಕ್ಕೂ ಸಿದ್ಧರಾಗಿದ್ದಾರೆ.

ನಿಮ್ಮ ಸಿರಿವಂತ ಸಾಹಿತ್ಯ ಸಮ್ಮೇಳನಕ್ಕೆ ನಾನು ಮತ್ತು ನನ್ನಂಥ ಸಮಾನ ಮನಸ್ಕ ಜನರು ಬರಲಾರೆವು. ಆದರೆ ಸರಳ, ಜನಪರ, ಜನರ ತಲ್ಲಣಗಳಿಗೆ ದನಿಯಾಗಲು ಹೊರಟಿರುವ ಸಾಹಿತ್ಯ ಸಮ್ಮೇಳನಕ್ಕೆ ನೀವೂ ಬನ್ನಿ ಎಂದು ಪ್ರೀತಿಪೂರ್ವಕವಾಗಿ ಆಹ್ವಾನಿಸುತ್ತಿದ್ದೇನೆ. 'ನಮಗೆ ನುಡಿಯು ನಿರಿಯಲ್ಲ, ಬದುಕು' ಎಂಬುದು ಸಮ್ಮೇಳನದ ಧ್ಯೇಯ ವಾಕ್ಯ. ಇದು ನಮ್ಮ ಪ್ರೀತಿಯ ಕರೆಯೋಲೆ.

■ ಡಾ. ಸಬಿಹಾ ಭೂಮಿಗೌಡ

ನೆಲ್ಸನ್ ಮಂಡೇಲಾ ಕುರಿತು

ಆಫ್ರಿಕಾದ ಹುಮ್ಮಸ್ಸಿನ, ಕುತಂತ್ರವನ್ನೇ ಅರಿಯದ ಮುಗ್ಧ ವೃಕ್ಷದ ಜೀವ ಅರ್ಥಪೂರ್ಣ ಸ್ತರ ಪಡೆದಿತ್ತು. ಹೋರಾಟಕ್ಕಾಗಿ, ನಿಜವಾಗಿಯೂ ಜನರನ್ನು ಒಂದುಗೂಡಿಸಿ ದೇಶವನ್ನು ಕಟ್ಟುವುದಕ್ಕಾಗಿ, ಮಾಜಿ ರಾಜಕುಮಾರನೊಬ್ಬ ಸೆರೆಮನೆಯಲ್ಲಿ ಪರಿವರ್ತಿತನಾಗಿದ್ದ; ಹೊಸ ಹುಟ್ಟು ಪಡೆದಿದ್ದ. ಕೃಷ್ಣ ಹುಟ್ಟಿದ್ದು ಸೆರೆಮನೆಯಲ್ಲಿ; ಗಾಂಧೀಜಿ ಬೆಳೆದದ್ದು ಸೆರೆಮನೆಯಲ್ಲಿ; ಮಂಡೇಲಾ ಜ್ಞಾನೋದಯ ಪಡೆದದ್ದೂ ಅಲ್ಲಿಯೇ.



ಉತ್ಪ್ರೇಕ್ಷೆ ಮತ್ತು ಉದ್ವೇಗದ ಮನಸ್ಸು ವ್ಯಕ್ತಿಚಿತ್ರ ನೀಡುವುದು ಕಷ್ಟ. ಭಾರತೀಯ ಮನಸ್ಸು ಅಂಥದ್ದು; ಆದ್ದರಿಂದ ಇಲ್ಲಿ ಜೀವನಚರಿತ್ರೆ ಮತ್ತು ಆತ್ಮಚರಿತ್ರೆ ಮೂಡುವುದಿಲ್ಲ. ಗಾಂಧೀಜಿ ಬರೆದ ಪುಸ್ತಕಗಳಲ್ಲೆಲ್ಲ ಅವರ ಸತ್ಯಶೋಧನೆ ಎಂಬ ಆತ್ಮಚರಿತ್ರೆ ಅತ್ಯಂತ ದುರ್ಬಲವಾದದ್ದು ಅಂದಮೇಲೆ ಮಿಕ್ಕವರ ಪಾಡೇನು?

ಮಂಡೇಲಾ ಬಗ್ಗೆ ಬರೆಯಲು ಯತ್ನಿಸುತ್ತಿದ್ದೇನೆ. ಕಳೆದ ತಿಂಗಳ ಹನ್ನೊಂದನೆ ತಾರೀಖು ಮಂಡೇಲಾ ಬಿಡುಗಡೆಯಾದಾಗ ಬೇರೆಯವರು ಹೇಳುವುದನ್ನು, ಬರೆಯುವುದನ್ನು ಗಮನಿಸಿದೆ. ಇಂಡಿಯನ್ನರ ಮಾತುಗಳಂತೂ ವರ್ಣರಂಜಿತವಾಗಿದ್ದವು. ಎರಡು ವರ್ಷದ ಹಿಂದೆ ಇಂಥ ಮಾತು ಕೇಳಿ ಜೋರಾಗಿ ನಕ್ಕಿದ್ದೆ. ಅದು ಮಂಡೇಲಾ ಇಪ್ಪತ್ತೈದು ವರ್ಷ ಜೈಲುವಾಸ ಅನುಭವಿಸಿದ್ದರ ಆಚರಣೆಯ ಸಮಾರಂಭ; ಯುವ ಕಾಂಗ್ರೆಸ್‌ನ ನೇತಾರ ಶರ್ಮ ಎಂಬ ವ್ಯಕ್ತಿ (ಈತನೇ ಆನಂದಶರ್ಮನೇ?) ಮರಿಸಿಂಹದಂತೆ ಮಂಡೇಲಾ ಬಿಡುಗಡೆಗಾಗಿ ಗರ್ಜಿಸಿದ. ಮಂಡೇಲಾ ಬಿಡುಗಡೆಯಾದರೆ ಜಗತ್ತಿನ ಕೊನೆಯ ಬಂಧಿಯ ಬಿಡುಗಡೆಯಾದಂತೆ ಎಂಬಂತೆ ಮಾತಾಡಿದ. ಆ ವರ್ಷವೇ ಪುರಿ ಜಗದ್ಗುರು ದಲಿತರನ್ನು ಕುರಿತು ಕುತ್ಸಿತ ಮಾತಾಡಿದ್ದ; ಅವತ್ತು ಕೂಡ ಭಾರತದ ಕೋಟ್ಯಂತರ ಬಡವರು ಅವಮಾನ, ನೋವಿನಿಂದ ಬಳಲಿದ್ದರು. ಕ್ಲೀಷೆಗಳ ರಕ್ಷಣೆಯಲ್ಲಿ ವಾಸ್ತವ ಮುಂದುವರಿದೇ ಇತ್ತು.

ಮಂಡೇಲಾ ಮೇಲೆ ಬಂದ ಪದ್ಯಗಳನ್ನು ನೀವು ನೋಡಿರಬಹುದು. ಮೊನ್ನೆ ಅನುಪಮಾ ನಿರಂಜನ ಅವರು, ಆಮೇಲೆ ವಿಜಯಾದಬ್ಬೆ ಎಂಬುವರು ಮಂಡೇಲಾ ಅವರ ಹೆಂಡತಿಯನ್ನು ಕುರಿತು ಹೇಳಿದ್ದು ಕುತೂಹಲಕರವಾಗಿತ್ತು. ಸೀತೆಯ ಒಬ್ಬಂಟತನ ಮತ್ತು ಚಂಚಲತೆಯನ್ನು ಕುರಿತು ಬರೆವ ಅನುಪಮಾ ಶ್ರೀಮತಿ ವಿನ್ನಿ ಮಂಡೇಲಾ ಅವರ ಪಾವಿತ್ರ್ಯ ಮತ್ತು ನೋವನ್ನು ಕುರಿತು ಬರೆದರು; ವಿಜಯಾದಬ್ಬೆಯವರಂತೂ ವಿನ್ನಿ ಮಂಡೇಲಾರನ್ನು ಅಪರಂಜಿ ಎಂಬಂತೆ ಚಿತ್ರಿಸಿದರು. ಇವರಿಬ್ಬರ ಮಾತಿನಲ್ಲೂ ಸತ್ಯವಿತ್ತು, ಹಾಗೆಯೇ ತಮಗೆ ಇಷ್ಟವಾದದ್ದನ್ನು ಹೇಳುವ ಕಾತರ, ದೊಡ್ಡದು ಮಾಡಿ ಹೇಳುವ ಚಪಲ ಇತ್ತು.

ಹಾಗಾದರೆ ಮಂಡೇಲಾ ಮತ್ತು ವಿನ್ನಿ ಮಂಡೇಲಾ ಮೇಲೆ ಹೇಳುವುದು ಏನು ಉಳಿದಿದೆ? ಕವನ ಬಂದಿವೆ, ಭಾಷಣಗಳಾಗಿವೆ, ರಾಜಕಾರಣಿಗಳು ಮತ್ತು ಮುತ್ಸದ್ದಿಗಳು ಸಾಕಷ್ಟು ಹೇಳಿದ್ದಾರೆ. ಇಷ್ಟೆಲ್ಲದರ ನಡುವೆ ಗದ್ದಲಕ್ಕೆ ಮತ್ತೊಂದು ಧ್ವನಿ ಸೇರಿಸುವುದು ಅಗತ್ಯವಿಲ್ಲವೆನ್ನಿಸಿ ನಾನು ಸುಮ್ಮನಾದೆ. ಆದರೆ ಜನ ಸುಮ್ಮನಿರಲಿಲ್ಲ. ಮೈಸೂರಿನ ನಾಲ್ಕಾರು ಸಂಘಸಂಸ್ಥೆಯ ಗೆಳೆಯರು ಒಂದು ಸಭೆ ಏರ್ಪಡಿಸಿ ಮಾತಾಡಲೇಬೇಕೆಂದು ಕೇಳಿದರು. ಒಂದೆರಡು ಟಿಪ್ಪಣಿ ಮಾಡಿಕೊಂಡು ಹೋದೆ. ಇಲ್ಲಿಯೂ ಆನಂದಶರ್ಮರ ತರಹದ ಗರ್ಜನೆ ಕಂಡುಬಂದರೆ ಕ್ಷಮಿಸಿ.

ಮೊದಲು ಆಫ್ರಿಕಾ ಜನರ ಹುಮ್ಮಸ್ಸು ಮತ್ತು ನೈಸರ್ಗಿಕ ಬದುಕು ನೋಡಿ. ತಿಂದು ಉಂಡು ಹಾಡಿಕೊಂಡು ತಮ್ಮ ಬುಡಕಟ್ಟಿನ ವಿಧಿ ಸಂಸ್ಕಾರಗಳಿಗೆ ಬದ್ಧರಾಗಿದ್ದು ಕಣ್ಣುಮುಚ್ಚುವ ಜನ ಇವರು. ಇಂಥವರ ನಡುವೆ ನುಗ್ಗಿದ ಬಿಳಿಯರು ತಮ್ಮ ಅಂತರಾಷ್ಟ್ರೀಯ ಧರ್ಮ ಮತ್ತು ಸಾಮ್ರಾಜ್ಯಶಾಹಿ ಸುಲಿಗೆಗಾಗಿ ಪುಸ್ತಕ, ಶಸ್ತ್ರ ತಂತ್ರವನ್ನೆಲ್ಲ ತಂದರು; ಮುಗ್ಧ ಆಫ್ರಿಕನ್ನರನ್ನು ಬಗ್ಗುಬಡಿದು ಅವರ ನೆಲದ ಚಿನ್ನ, ವಜ್ರ, ತಾಮ್ರವನ್ನು ಕಿತ್ತುಕೊಂಡರು. ಎಲ್ಲಕ್ಕಿಂತ ಹೆಚ್ಚಾಗಿ ಅವರ ಸ್ವಾಭಿಮಾನಕ್ಕೆ ಸವಾಲೆಸೆದರು. ಗಾಂಧೀಜಿ ಪ್ರತಿಭಟಿಸಿದ್ದು ಆಗಲೇ. ಬ್ರಿಟಿಷರ ಜಾಣತನ ಮತ್ತು ಭಾರತೀಯರ ಸಹನೆಯನ್ನು ಒಂದುಗೂಡಿಸಿಕೊಂಡ ಗಾಂಧೀಜಿ ಅಹಿಂಸೆಯನ್ನು ನೆಚ್ಚಿ ಹೋರಾಡಿದರು. ಒಂದು ಜನಾಂಗಕ್ಕೆ ಹೊಂದುವ ಅಹಿಂಸೆ ಇನ್ನೊಂದು ಜನಾಂಗಕ್ಕೆ ಸರಿಹೊಂದಲಿಕ್ಕಿಲ್ಲ ಎಂಬುದು ಗೊತ್ತಾಯಿತು. ಏಕೆಂದರೆ ಮಂಡೇಲಾ ಕೂಡ ಅಹಿಂಸೆಯಿಂದ ಹೋರಾಡತೊಡಗಿದಾಗ ಬಿಳಿಯರು ಅವನ ಜೊತೆಗಾರರನ್ನು ಕೊಚ್ಚಿ ಹಾಕಿದರು. ಗಾಂಧೀಜಿಯ ಮಾತು ಮಂಡೇಲಾ ಮತ್ತು ಮಿತ್ರರಿಗೆ ಮರಣದಂಡನೆಯಂತೆ ಕಂಡಿತು.

ಇಲ್ಲಿ ಕೆಲವು ವಿಚಿತ್ರಗಳಿವೆ. ಗಾಂಧೀಜಿ ದಿವಾನನ ಮಗನಾಗಿದ್ದರೆ ಮಂಡೇಲಾ ದೊರೆಯ ಮಗ, ರಾಜಕುಮಾರ. ದೊರೆ ಎಂದರೆ ನಮ್ಮ ಜೈಪುರ, ಮೈಸೂರಿನ ದೊರೆಗಳಂತಲ್ಲ, ಆತ ಸಣ್ಣ ಬುಡಕಟ್ಟಿನ ದೊರೆಯ ಮಗ. ದನ ಕಾಯ್ದವನು, ಹಕ್ಕಿಹೊಡೆದವನು, ಮರದಿಂದ ಹಣ್ಣು ಕಿತ್ತು ತಿಂದವನು. ಹಾಗೆಯೇ ಆಫ್ರಿಕಾದ ವರ್ಣೀಯರ ಆಧುನಿಕತೆಯ ಭಾಗವಾಗಿ ವಿಶ್ವವಿದ್ಯಾನಿಲಯದಲ್ಲಿ ಓದಿದವನು. ಅಲ್ಲಿಯೇ ಮಂಡೇಲಾಗೆ ಬಿಳಿಯರ ಒಗಟು ಗೊತ್ತಾದದ್ದು; ಅವರು ಎಸಗಿದ ಅನ್ಯಾಯ ಗೊತ್ತಾದದ್ದು. ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ದೆಸೆಯಿಂದಲೇ ಬಿಳಿಯರ ವಿರುದ್ಧ ಸ್ನೇಹಿತರನ್ನು ಎತ್ತಿಕಟ್ಟಿದ ಮಂಡೇಲಾ ಮದುವೆಯಾದ. ಇವತ್ತಿಗೂ ಈತನ ಮೊದಲ ಹೆಂಡತಿ ನೋವನ್ನನುಭವಿಸುತ್ತ "ನನ್ನ ಕೈಬಿಟ್ಟ ಮಂಡೇಲಾ ದೊಡ್ಡ ಮನುಷ್ಯನಾಗಲು ಹೇಗೆ ಸಾಧ್ಯ?" ಎಂದು ಕೇಳುತ್ತಾಳೆ. ಆದರೆ ಈಕೆಯ ವಾದವನ್ನು ಮೀರಿದ್ದು ಮಂಡೇಲಾ ಸಮಸ್ಯೆ. ವಿನ್ನಿಯನ್ನು ಅತ್ಯಂತ ಎಚ್ಚರದಿಂದ ಪೊರೆದ ಮಂಡೇಲಾ ತನಗೆ ಅಭಿಮಾನಿಗಳು ನೀಡಿದ ಉಡುಗೊರೆಗಳನ್ನೆಲ್ಲಾ (ಜೈಲಿನಿಂದ ಕೂಡ) ವಿನ್ನಿಗೆ ಕಳಿಸಿದ. ಇದರ ಬಗ್ಗೆ ಕೂಡ ಆಕ್ಷೇಪಣೆ ಎತ್ತುವವರಿದ್ದಾರೆ. ಆದರೆ ಇಂಥವರಿಗೆ ಮಂಡೇಲಾನಲ್ಲಿನ ಕುಟುಂಬದ ಬಗೆಗಿನ ಕಾಳಜಿ ಆಫ್ರಿಕನ್ನನ ವಿಶಿಷ್ಟ ಗುಣ ತಿಳಿದಿರಲಿಕ್ಕಿಲ್ಲ.

ಮೂಲ ಕತೆಗೆ ಬರೋಣ. ಮೂವತ್ತು ವರ್ಷದ ಹಿಂದೆ ಅಹಿಂಸೆ ನಡೆಯುವುದಿಲ್ಲ ಎಂದು ಕಂಡುಕೊಂಡ



ಮಂಡೇಲಾ ಕ್ರಾಂತಿಕಾರ ಹೋರಾಟ, ಗೆರಿಲ್ಲಾ ಹೋರಾಟಕ್ಕೆ ಇಳಿದ; ತಲೆಮರೆಸಿಕೊಂಡು ಬಿಳಿಯರ ವ್ಯವಸ್ಥೆಗೆ ಸಿಂಹಸ್ವಪ್ನನಾದ. ಆಗ ಮಂಡೇಲಾ ಎದುರಿಗಿದ್ದವು ಎರಡೇ ಸಾಧ್ಯತೆಗಳು: ಅಹಿಂಸಾತ್ಮಕ ಹೋರಾಟ ಪರಿಣಾಮಕಾರಿಯಲ್ಲ, ಹಿಂಸೆಯ ದಾರಿಯೇ ಸರಿ. ಆಗ 'ದೇಶದ್ರೋಹ'ದ ಚಟುವಟಿಕೆಗಳಿಗಾಗಿ ದಕ್ಷಿಣ ಆಫ್ರಿಕಾದ ಸರ್ಕಾರ ಮಂಡೇಲಾನನ್ನು ದಸ್ತಗಿರಿ ಮಾಡಿ ಜೀವಾವಧಿ ಶಿಕ್ಷೆ ವಿಧಿಸಿತು. ಜೈಲಿನಲ್ಲಿದ್ದ ಮಂಡೇಲಾ ಜೈಲಿನ ಹೊರಗಿನ ಮಂಡೇಲಾಗಿಂತ ಶಕ್ತಿವಂತನಾದ.

ದಕ್ಷಿಣ ಆಫ್ರಿಕಾದ ವರ್ಣೀಯರ ಹೋರಾಟ ಮಂಡೇಲಾ ಎಂಬ ವ್ಯಕ್ತಿಯ ಹೋರಾಟವಲ್ಲ; ಒಂದು ಜನತೆಯ ಹೋರಾಟ. ಇಂಥ ಮಾತು ಕೂಡ ಹೆಚ್ಚೇನನ್ನೂ ಹೇಳುವುದಿಲ್ಲವಾದ್ದರಿಂದ ಜೀವಂತ ರೇಖೆಗಳಿಗಾಗಿ ಹುಡುಕೋಣ. ಬಿಶಪ್ ಟುಟುವಿನ ಧಾರ್ಮಿಕ ಗುಂಪು ಬಲ್ಲಿರಿ; ಕಪ್ಪುಜನ ರೊಚ್ಚಿಗೆದ್ದು ರಕ್ತಪಾತ, ಬಿಕ್ಕಟ್ಟಿಗೆ ಅವಕಾಶ ಮಾಡಿಕೊಡುವ ಅಪಾಯವಿದ್ದಾಗ ಅವರಿಗೆ ಕಡಿವಾಣ ಹಾಕಿದ ವ್ಯಕ್ತಿ ಟುಟು; ಈತನಿಗೆ ನೊಬೆಲ್ ಬಹುಮಾನ ದೊರೆಯಿತು. ಸಿಸಿಲು ಇನ್ನೊಬ್ಬ ಹೋರಾಟಗಾರ. ಜುಲು ಬುಡಕಟ್ಟಿನ ಲಕ್ಷಾಂತರ ಜನರ ನಾಯಕನಾಗಿದ್ದು ತನ್ನದೇ ಹೋರಾಟ ರೂಪಿಸಿದ ವ್ಯಕ್ತಿ ಮಂಗಸೂತು ಬುಥೇಲೇಜಿ. ಇದರೊಂದಿಗೆ ಕಮ್ಯುನಿಸ್ಟ್ ಪಕ್ಷವಿದೆ.

ಜೀವಾವಧಿ ಸೆರೆವಾಸವೆಂದರೆ ಸೆರೆಮನೆಯ ಹೊರಗಿರುವವರಿಗೆ ತಿಳಿಯುವುದಿಲ್ಲ. ವರ್ಣಭೇದದ ನೀತಿ ರೂಪಿಸಿ ಆಫ್ರಿಕಾದ ನಾಯಕರನ್ನು ಹತ್ತಿಕ್ಕಿ ನಿರಂತರವಾಗಿ ಅಧಿಕಾರ ನಡೆಸುವ ಹುನ್ನಾರ ಬಿಳಿಯರದು. ಇದೊಂದು ವಿಚಿತ್ರ ಸ್ಥಿತಿ. ಸೆರೆಯಲ್ಲಿಟ್ಟವನೂ ಸೆರೆಯಲ್ಲಿದ್ದವನೂ ಬಂಧಿಯಾಗಿರುವ ಸ್ಥಿತಿ. ಮಂಡೇಲಾ ಜಾಗದಲ್ಲಿ ನಿಂತು ನೋಡಿದರೆ ಈ ಸ್ಥಿತಿಯ ಜಟಿಲತೆ ಗೊತ್ತಾಗುತ್ತದೆ. ಜೀವನವೆಂದರೆ ನಲವತ್ತೋ ಐವತ್ತೋ ವರ್ಷ ನಿಜಕ್ಕೂ ಜೀವಂತವಾಗಿರುವ, ಕೈಕಾಲು ಗಟ್ಟಿಮುಟ್ಟಾಗಿದ್ದು ತಾಜಾ ಇರುವ ವಿಚಾರ. ಇಪ್ಪತ್ತು ವರ್ಷ ಕಠಿಣ ಸಜಾ: ಕಲ್ಲು ಒಡೆಯುವ, ಹೊರುವ ಕೆಲಸ. ಸ್ವಾಭಿಮಾನಕ್ಕಾಗಿ ನಿಶ್ಚಯ ಕರಗಿಸದೆ, ಉಳಿದಿರುವ ವರ್ಷಗಳಲ್ಲಿ ದೈಹಿಕ ನೆಮ್ಮದಿಗಾಗಿ ಆಶೆಪಡದೆ ಮುಂದುವರಿಯುವ ನಿರ್ಧಾರ; ದೈಹಿಕ ನೆಮ್ಮದಿಯ ಆಶೆ ಆತ್ಮದ ಶ್ರೇಯಸ್ಸನ್ನು ಹಾಳುಮಾಡದಂತೆ ಕಾಪಾಡಿಕೊಳ್ಳುವ ಶ್ರದ್ಧೆ. ಬಿಡುಗಡೆಯ ಸಾಧ್ಯತೆ ಕೂಡ ಇಲ್ಲದೆ, ತನ್ನ ಛಲವೇ ತನ್ನ ಜನರ ಆದರ್ಶವಾಗುವುದೆಂಬ ಆಶೆಯಿಂದ, ತನ್ನೆಲ್ಲ ತ್ಯಾಗವೂ ವ್ಯರ್ಥ ಕೂಡ ಆಗಬಹುದೆಂಬ ಅನುಮಾನ ಹತ್ತಿಕ್ಕಲಾರದೆ, ತಾನೇ ತನ್ನ ಜನರ ತಿರುಳೆಂಬ ಅಹಂಕಾರವನ್ನು ವಿನಯವನ್ನಾಗಿಸಿಕೊಂಡು ಬದುಕಿದ ಮಂಡೇಲಾ.

ಇದರಲ್ಲೆಲ್ಲ ತನ್ನ ದೇಹ, ತನ್ನ ಮನಸ್ಸು, ತನ್ನ ದೇಶ, ತನ್ನ ಜನರು- ಯಾವ ಯಾವ ಸಂಬಂಧ ಮುಂದುವರಿಸಬೇಕು? ಜಾರುತ್ತಿರುವ ವರ್ಷಗಳು ಹೇಗೆ ಎಲ್ಲವನ್ನೂ ಬದಲಾಯಿಸುತ್ತವೆ? ವಿನ್ನಿ ಮಂಡೇಲಾಳದೇ ವಿಶಿಷ್ಟ ಸಮಸ್ಯೆ. ಬದುಕುವ ಆಶೆಯಿಂದ ಒಳ್ಳೆಯವನನ್ನು ಕೈಹಿಡಿದವಳು; ಎಲ್ಲರಂತೆ ಬದುಕಿನಿಂದ ಅಪಾರ ಸುಖ ಬಯಸಿದವಳು. ವರ್ಷ ಮೇಲೆ ವರ್ಷಗಳು ಉರುಳುತ್ತಿದ್ದಂತೆ, ಮಂಡೇಲಾ ಜೈಲಿನಲ್ಲಿ ಕಾಲು ಶತಮಾನ ಕಳೆಯುತ್ತಿದ್ದಂತೆ ವಿನ್ನಿ ಅಪವಾದ ಎದುರಿಸಬೇಕಾಯಿತು. ಫುಟ್‌ಬಾಲ್ ತಂಡದೊಂದಿಗೆ ಸಂಬಂಧ, ಹಣದ ವಸೂಲಿ, ಕೆಟ್ಟ ನಡವಳಿಕೆಯ ಮಾತುಗಳೆಲ್ಲ ಬಂದವು. ಜೈಲಿನಲ್ಲಿದ್ದ ಮಂಡೇಲಾ ಖಿನ್ನನಾದನಲ್ಲದೆ ಸಿಟ್ಟಿಗೇಳಲಿಲ್ಲ. ವಿನ್ನಿಯೊಂದಿಗೆ ಜಗಳವಾಡಲಿಲ್ಲ. ಅದು ಕೂಡ ಆತನ ಬದುಕಿನ ಒಂದು ಭಾಗವಾಗಿತ್ತು.

ಮೇಲಿನದನ್ನೆಲ್ಲ ಯಾಕೆ ಹೇಳಿದೆನೆಂದರೆ ಇಪ್ಪತ್ತೇಳು ವರ್ಷ ಸೆರೆವಾಸ ಅನುಭವಿಸಿ ಮಂಡೇಲಾ ಮೊನ್ನೆ ಸೆರೆಯಿಂದ ಬಂದ. ರಕ್ತಕ್ರಾಂತಿಯ ಮಾತಾಡುತ್ತಿದ್ದ ಮಂಡೇಲಾ ಈಗ ಎಪ್ಪತ್ತೊಂದು ವಯಸ್ಸಿನ ಪರಿಪಕ್ವ ಮನುಷ್ಯನಾಗಿದ್ದ. ಹೋರಾಟದ ಕೆಚ್ಚು ಹಾಗೇ ಇತ್ತು; "ನಮ್ಮ ಹೋರಾಟ ಮುಂದುವರಿಯುತ್ತದೆ" ಅಂದ. ನಿಜವಾದ ರಾಜಕೀಯ ನಾಯಕನಾಗಿದ್ದ: "ನಾವು ಬಿಳಿಯರ ದಬ್ಬಾಳಿಕೆಯನ್ನು ಸಹಿಸುವುದಿಲ್ಲ, ಹಾಗೆಯೇ ಕರಿಯರ ದಬ್ಬಾಳಿಕೆಯೂ ನಮಗೆ ಬೇಕಿಲ್ಲ." ರಾಜಕೀಯ ಮುತ್ಸದ್ದಿತನ ಅರಳಿತ್ತು: "ಮಾತುಕತೆ ನಡೆಯಬೇಕು, ಮಾತುಕತೆ ನಡೆಯುವುದರ ಉದ್ದೇಶವೇ ಸ್ನೇಹದ ಕೊಡುಕೊಳ್ಳುವಿಕೆ." ವಿನಯ ಬತ್ತಿರಲಿಲ್ಲ: "ನಮ್ಮ ಪಕ್ಷವಾದ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್‌ನ ಕಾರ್ಯಕರ್ತ ನಾನು. ನಮ್ಮ ಪಕ್ಷ ಹೇಳಿದ ಕೆಲಸ ಮಾಡುತ್ತೇನೆ." ಹಾಗೆಯೇ ಮಂಡೇಲಾ ನೋವಿನಿಂದ ಚೆಂದು ಪ್ರೀತಿ ಪಡೆದಿದ್ದ: "ನಮ್ಮ ಅಸ್ತ್ರಗಳನ್ನೆಲ್ಲ ಸಮುದ್ರಕ್ಕೆ ಎಸೆಯೋಣ."


ಆಫ್ರಿಕಾದ ಹುಮ್ಮಸ್ಸಿನ, ಕುತಂತ್ರವನ್ನೇ ಅರಿಯದ ಮುಗ್ಧ ವೃಕ್ಷದ ಜೀವ ಅರ್ಥಪೂರ್ಣ ಸ್ತರ ಪಡೆದಿತ್ತು. ಹೋರಾಟಕ್ಕಾಗಿ, ನಿಜವಾಗಿಯೂ ಜನರನ್ನು ಒಂದುಗೂಡಿಸಿ ದೇಶವನ್ನು ಕಟ್ಟುವುದಕ್ಕಾಗಿ, ಮಾಜಿ ರಾಜಕುಮಾರನೊಬ್ಬ ಸೆರೆಮನೆಯಲ್ಲಿ ಪರಿವರ್ತಿತನಾಗಿದ್ದ; ಹೊಸ ಹುಟ್ಟು ಪಡೆದಿದ್ದ. ಕೃಷ್ಣ ಹುಟ್ಟಿದ್ದು ಸೆರೆಮನೆಯಲ್ಲಿ; ಗಾಂಧೀಜಿ ಬೆಳೆದದ್ದು ಸೆರೆಮನೆಯಲ್ಲಿ; ಮಂಡೇಲಾ ಜ್ಞಾನೋದಯ ಪಡೆದದ್ದೂ ಅಲ್ಲಿಯೇ.

ಈ ಸಂದರ್ಭದಲ್ಲಿ ಡಿಕ್ಲರ್ಕ್ ಎಂಬ ದಕ್ಷಿಣ ಆಫ್ರಿಕಾದ ನಾಯಕನನ್ನು ಮರೆಯದಿರೋಣ. ಈತ ಈಗ ಆಫ್ರಿಕಾದ ಎಲ್ಲರ ನೆಚ್ಚಿನ ವ್ಯಕ್ತಿ; ಈತ ಕೂಡ ತನ್ನ ಬಿಳಿ ಸೆರೆಯಲ್ಲಿ, ಮಾನಸಿಕ ಸೆರೆಯಲ್ಲಿ ಬದಲಾದ ವ್ಯಕ್ತಿ. ಡಿಕ್ಲರ್ಕ್ ಕೂಡ ಮಂಡೇಲಾ ಎದುರು ಸ್ವಲ್ಪ ಸಣ್ಣವನಾಗಿ ಕಾಣುತ್ತಿದ್ದಾನೆ. ಆದರೆ ಇದು ನಮ್ಮ ದೃಷ್ಟಿಯಿಂದ ಆಗಿರಬಹುದು. ಏನೇ ಆದರೂ ಮಂಡೇಲಾ ಇವತ್ತು ನಾಯಕ. ಈತನನ್ನು ಕೇವಲ ದಿಟ್ಟ ಅನ್ನಲಾಗುವುದಿಲ್ಲ, ಕೇವಲ ಸಜ್ಜನ ಅನ್ನಲಾಗುವುದಿಲ್ಲ.

ಮೂಲಭೂತವಾಗಿ ಸ್ವಾರ್ಥಿಯಾದ, ನಿತ್ಯದ ಊಟ, ತಿಂಡಿ, ಚಿತ್ರವಿಚಿತ್ರ ಸುಖ, ಅಹಂಕಾರದಲ್ಲಿ ಇಷ್ಟುಬಿಡುವ ಮನುಷ್ಯನಿಗೆ ಮಂಡೇಲಾ ಥರದವರು ಬೇರೊಂದು ಅನುಭವವನ್ನು ನೆನಪಿಸುತ್ತಾರೆ; ನಮ್ಮೆಲ್ಲರ ಸದ್ದದ ನೆಮ್ಮದಿ ಮೀರಿದ ಮೌಲ್ಯ ಇದೆಯೆಂದು ತೋರುತ್ತಾರೆ. ಬಿಶಪ್ ಟುಟು ಅಥವಾ ಕಮ್ಯುನಿಸ್ಟ್ ಧೈರ್ಯಶಾಲಿಕೆಯನ್ನು ಮೀರಿದ ಅನುಭವ ಅದು. ನಮ್ಮ ಲೈಂಗಿಕ ಆತ್ಮಾಭಿಮಾನ, ಮನುಷ್ಯತ್ವಕ್ಕೆ [illegible] ಅನುಭವ [illegible] ರಾಕ್ಷಸರಿಂದ ಬೇರ್ಪಡಿಸುವ ಅನುಭವ. ಅದನ್ನು [illegible]

■ 18 ಮಾರ್ಚ್ 1990

ನೆಲ್ಸನ್ ಮಂಡೇಲಾ, ಅಂಬೇಡ್ಕರ್ ಮತ್ತು ಗಾಂಧಿ



ಮಂಡೇಲಾ ಒಬ್ಬ ಧೀರೋದಾತ್ತ ವಿಮೋಚನಾವಾದಿ ಹೋರಾಟಗಾರನಾಗಿ ತನ್ನ ಆರಂಭಿಕ ವರ್ಷಗಳನ್ನು ಕಳೆದವರು. ನಂತರ, ಅದರ ಪರಿಣಾಮವಾಗಿಯೇ ಎರಡೂ ಮುಕ್ಕಾಲು ದಶಕಗಳ ಜೈಲುವಾಸವನ್ನು ಅನುಭವಿಸಿದರು. ಜೈಲಿನಿಂದ ಹೊರಬರುವ ಮುಂಚೆಯೇ ಮಹಾತ್ಮ ಪಟ್ಟಕ್ಕೆ ತಯಾರಾಗಿದ್ದರು. ಆ ನಂತರದ್ದು ಅತ್ಯಂತ ರಾಜಿಯ ಮತ್ತು ದ್ರೋಹದ ಕಥಾನಕ. ಸಶಸ್ತ್ರ ಸಂಗ್ರಾಮ ನಡೆಸಿದ್ದರಿಂದಾಗಿ ಮಂಡೇಲಾರ ಆರಂಭಿಕ ದಿನಗಳನ್ನು ಸಕಾರಾತ್ಮಕವಾಗಿಯೂ, ಆ ನಂತರ ಹೋರಾಟವನ್ನೇ ಬಿಟ್ಟು ಅಧಿಕಾರವೇರಿದ್ದರಿಂದಾಗಿ ಅದು ನಕಾರಾತ್ಮಕವೆಂದೂ ಪರಿಗಣಿಸುವ ಯಾಂತ್ರಿಕ ಸರಳೀಕರಣ ಇದಲ್ಲ, ಸೈದ್ಧಾಂತಿಕವಾಗಿ, ರಾಜಕೀಯವಾಗಿ, ನೈತಿಕವಾಗಿ ಎಲ್ಲ ರೀತಿಯಲ್ಲಿಯೂ 1987ರಾಚೆಗಿನ ಮಂಡೇಲಾ ಕಪ್ಪು ಜನರ ವಿಮೋಚನೆಯ ಆಶೋತ್ತರಗಳಿಗೆ ವಿರುದ್ಧ ದಿಕ್ಕಿನಲ್ಲಿ ನಡೆದರು. ಅದರ ಪರಿಣಾಮವಾಗಿಯೇ ಬಿಳಿಯರ ಆಡಳಿತದ ಕಾಲದಲ್ಲಿ ಇದ್ದುದಕ್ಕಿಂತ ದಾರುಣ ಪರಿಸ್ಥಿತಿಯಲ್ಲಿ ಇಂದು ದಕ್ಷಿಣ ಆಫ್ರಿಕಾದ ಬಹುಸಂಖ್ಯಾತ ಕಪ್ಪು ಜನರು ಬದುಕುತ್ತಿದ್ದಾರೆ.



ಸಾರ್ವಜನಿಕ ಜೀವನದಲ್ಲಿ ಹಲವು ದಶಕಗಳನ್ನು ಕಳೆದಿರುವ ಯಾವುದೇ ವ್ಯಕ್ತಿಯನ್ನು ಆತನ ಅಥವಾ ಆಕೆಯ ಸಾವಿನ ಸಂದರ್ಭದಲ್ಲಿ ನೆನೆಸಿಕೊಳ್ಳುವಾಗ ನಮಗೆ ಮುಖ್ಯವಾಗಬೇಕಾದ್ದೇನು ಎಂಬ ಪ್ರಶ್ನೆಯು ಅಂತಹ ಸಂದರ್ಭ ಎದುರಾದಾಗಲೆಲ್ಲಾ ಕಾಡುತ್ತದೆ. ಏಕೆಂದರೆ, ಅಷ್ಟು ಸುದೀರ್ಘ ಕಾಲದ ಅವರ ಜೀವನದಲ್ಲಿ ಒಳ್ಳೆಯದು, ಕೆಟ್ಟದ್ದು ಏನೇನೋ ಆಗಿ ಹೋಗಿರುತ್ತದೆ. ಆ ವ್ಯಕ್ತಿ ಹುಟ್ಟಿದಾಗಿನಿಂದ ದಾರ್ಶನಿಕನಾಗಿದ್ದರು, ಬೆಳೆಯುವ ಸಿರಿ ಮೊಳಕೆಯಲ್ಲೇ ತನ್ನ ಗುಣ ತೋರಿತ್ತು ಎಂದು ಹೇಳುವುದು ಅಪ್ರಾಮಾಣಿಕವಾಗಿರುತ್ತದೆ. ಆದರೂ ಆಗಾಗ್ಗೆ ಅಂತಹ ಮಾತುಗಳನ್ನು ಕೇಳುತ್ತಲೇ ಇರುತ್ತೇವೆ. ಹಲವು ಸಾರಿ, ಅವರು ಸಾಯುವ ಮುನ್ನ ಏನಾಗಿದ್ದರು ಎಂಬುದರ ಆಧಾರದ ಮೇಲೆ ವ್ಯಕ್ತಿಗಳ ಕೊಂಡಾಟ ನಡೆಯುತ್ತದೆ. ಇಲ್ಲವೇ ಅವರು ತಮ್ಮ ಜೀವಿತಾವಧಿಯ ಯಾವ ಭಾಗದಲ್ಲಿ ನಮಗೆ ಬೇಕಾದ ಗುಣವನ್ನು ಹೊಂದಿದ್ದರೋ ಆ ಭಾಗವನ್ನು ಮಾತ್ರ ಒಪ್ಪಿ, ಮಿಕ್ಕಿದ್ದನ್ನು ಟೀಕಿಸುವ ಅಥವಾ ಅದು ಅನಗತ್ಯ ಎಂದು ಹೇಳುವುದೂ ಇದೆ. ಈ ರೀತಿ ಬೇಕಾದ ಭಾಗವನ್ನು ಆಯ್ಕೆ ಮಾಡುವಾಗ, ಸಹಜವಾಗಿ ಆಯ್ಕೆ ಮಾಡುವವರ ದೃಷ್ಟಿಕೋನವು ಕೆಲಸ ಮಾಡುತ್ತದೆ.


ಕಳೆದ ವಾರ (ಡಿ. 6) ತೀರಿಕೊಂಡ ಮಂಡೇಲಾರ ಸಾವಿನ ಸಂದರ್ಭದಲ್ಲಿ ಇದು ಮತ್ತಷ್ಟು ಮುಖ್ಯವಾಗಲು ಕಾರಣವಿದೆ. ವಿಮೋಚನಾ ಹೋರಾಟಗಾರನಾಗಿ ಮಂಡೇಲಾರು ಹಲವು ಘಟ್ಟಗಳನ್ನು ಹಾದು ಬಂದಿದ್ದಾರೆ. ಅದೇ ರೀತಿ ಅಂಬೇಡ್ಕರ್ ಮತ್ತು ಗಾಂಧಿಯವರೂ ಸಹಾ ತಮ್ಮ ರಾಜಕೀಯ ಜೀವನದುದ್ದಕ್ಕೂ ಒಂದೇ ರೀತಿ ಇರಲಿಲ್ಲ. ಈ ಮೂರು ವ್ಯಕ್ತಿಗಳನ್ನು ತುಲನೆಗೆ ತೆಗೆದುಕೊಂಡಿರುವುದು ಆಕಸ್ಮಿಕವಲ್ಲ. ಮಂಡೇಲಾರನ್ನು ಗಾಂಧಿಗೆ ಹೋಲಿಸುತ್ತಿರುವುದರ ಬಗ್ಗೆ ಸಾಕ್ಷ್ಯಗಳ ಅಗತ್ಯವಿಲ್ಲ. ಅದು ಸಾರ್ವತ್ರಿಕವಾಗಿತ್ತು. ಮಂಡೇಲಾ ಕಪ್ಪು ವರ್ಣೀಯರಾಗಿದ್ದರಿಂದ ಮತ್ತು ಭಾರತದ ಅಸ್ಪೃಶ್ಯತೆಗೆ ಹೋಲುವಂಥ ಜನಾಂಗೀಯ ಬೇಧದ ವಿರುದ್ಧ ಹೋರಾಟ ನಡೆಸಿದವರಾದ್ದರಿಂದ ಅಂಬೇಡ್ಕರರ ಜೊತೆಗೂ ಸಮೀಕರಿಸಲಾಯಿತು. ದಲಿತ ಸಂಘರ್ಷ ಸಮಿತಿಯ ಕಾರ್ಯಕ್ರಮಗಳಲ್ಲಿ ಮಂಡೇಲಾರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಾಮಾಜಿಕ ಜಾಲತಾಣಗಳಲ್ಲೂ ಈರ್ವರನ್ನು ಪರಸ್ಪರ ಹೋಲಿಸಲಾಗಿತ್ತು. ಡಿಸೆಂಬರ್ 6ರಂದೇ ಇಬ್ಬರೂ ನಿಧನರಾದದ್ದು ಆಕಸ್ಮಿಕವಾಗಿದ್ದರೂ, ಇಬ್ಬರಿಗೂ ಒಮ್ಮೆಗೇ ಭಾರತರತ್ನ ಕೊಟ್ಟಿದ್ದು ಆಕಸ್ಮಿಕವಾಗಿರಲಿಲ್ಲ.


ಭಾರತದ ಸಾಮಾಜಿಕ, ರಾಜಕೀಯ ಮತ್ತು ಚಾರಿತ್ರಿಕ ಸಂದರ್ಭದಲ್ಲಿ ಅಂಬೇಡ್ಕರ್ ಮತ್ತು ಗಾಂಧಿ ಇಬ್ಬರನ್ನು ಬೇರೆ ಬೇರೆಯಾಗಿ ನೋಡಲು ಹಲವು ಕಾರಣಗಳಿವೆ. ಆದರೂ ಮಂಡೇಲಾರನ್ನು ಭಿನ್ನರಾದ ಈ ಇಬ್ಬರಿಗೂ ಹೋಲಿಸಲಾಯಿತು ಎಂಬುದು ವಿಶೇಷ. ಆದರೆ ಅವರವರ ಬದುಕುಗಳ ಒಟ್ಟು ಸಾಧನೆಯನ್ನು ಮತ್ತು ಚಲನೆಯನ್ನು ಗಣನೆಗೆ ತೆಗೆದುಕೊಂಡರೆ, ಮೂವರಲ್ಲೂ ಸಾಮ್ಯಗಳಿಗಿಂತ ಭಿನ್ನತೆಗಳು ಹೆಚ್ಚಾಗಿಯೇ ಇವೆ.

ಚೌದಾರ್ ಕೆರೆ ನೀರನ್ನು ಮುಟ್ಟಲು ಹೋದ ಅಂಬೇಡ್ಕರ್‌ರಿಗೂ, ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ ಅಂಬೇಡ್ಕರರಿಗೂ ವ್ಯತ್ಯಾಸವಿತ್ತು, ಸಂವಿಧಾನ ರಚನಾ ಸಭೆ ಮತ್ತು ಬುದ್ಧ ಧರ್ಮಕ್ಕೆ ಪರಿವರ್ತನೆ ಸಂದರ್ಭದ ಅಂಬೇಡ್ಕರ್ ಇಬ್ಬರೂ ಬೇರೆಯಾಗಿದ್ದರು. ಆದರೆ ಈ ಎಲ್ಲಾ ಸಂದರ್ಭಗಳಲ್ಲಿ ಸಮಾನವಾಗಿದ್ದದ್ದು ಶೋಷಿತ ಸಮುದಾಯಗಳ ಹಿತಾಸಕ್ತಿ ಎಂಬುದರ ಕುರಿತು ಸಂದೇಹವೇ ಇರಲಿಲ್ಲ. ಆದರೆ ಅಂಬೇಡ್ಕರರ ಜೀವಿತದ ನಾಲ್ಕು ಘಟ್ಟಗಳಲ್ಲಿ ತೆಗೆದುಕೊಳ್ಳಬಹುದಾಗಿದ್ದು ಏನು? ಬಿಎಸ್‌ಪಿಯ ಅಂಬೇಡ್ಕರರ ಮೊದಲ ಪರ್ವವನ್ನು ಬಿಟ್ಟುಬಿಟ್ಟರೆ, ಕಾಂಗ್ರೆಸ್ಸಿಗರು ಮೂರನೆ ಪರ್ವವನ್ನು ಮಾತ್ರ ತೆಗೆದುಕೊಳ್ಳಬಯಸುತ್ತಾರೆ. ಪಾರ್ಲಿಮೆಂಟರಿ ಮಾರ್ಕ್ಸಿಸ್ಟರು ಕೊನೆಯ ಭಾಗವನ್ನು ಬಿಡುತ್ತಾರಾದರೆ, ಸಂಸದೀಯ ಪ್ರಜಾತಂತ್ರವನ್ನು ಒಪ್ಪದ ಮಾರ್ಕ್ಸ್‌ವಾದಿಗಳು ಮೊದಲ ಪರ್ವದ ಅಂಬೇಡ್ಕರ್‌ರನ್ನು ಮಾತ್ರ ಸರಿಯೆಂದು ಒಪ್ಪುತ್ತಿದ್ದರು.

ಹಾಗೆಯೇ ಗಾಂಧಿ. ಅವರೂ ನಿರಂತರವಾಗಿ ತನ್ನ ನಿಲುವನ್ನು ಬದಲಿಸಿಕೊಳ್ಳುತ್ತಾ ಹೋದವರು. ಹಿಂದೂ ಸ್ವರಾಜ್ ಬರೆದ ಗಾಂಧಿಗೂ, ಗೋಖಲೆಯವರ ಸಲಹೆಯ ಮೇರೆಗೆ ಇಡೀ ದೇಶವನ್ನು ಸುತ್ತಿದ ನಂತರದ ಗಾಂಧಿಗೂ ವ್ಯತ್ಯಾಸವಿದೆ. 1930ರ ನಂತರದಲ್ಲಿ ಭಗತ್ ಸಿಂಗ್ ಮತ್ತು ಅಂಬೇಡ್ಕರ್ ವಿದ್ಯಮಾನ ಆರಂಭವಾದ ಮೇಲಿನ ಗಾಂಧಿ ಮತ್ತು ಕಾಂಗ್ರೆಸ್ ಎರಡೂ ಬೇರೆ ಬೇರೆ. ಆ ಹೊತ್ತಿಗೆ ಸಂಪೂರ್ಣ ಸ್ವರಾಜ್ಯ ಮತ್ತು ದಮನಿತ ವರ್ಗಗಳಿಗೆ ಹಕ್ಕುಗಳ ಪ್ರಶ್ನೆಯನ್ನು ಕಾಂಗ್ರೆಸ್‌ನ ಅಜೆಂಡಾದೊಳಗೆ ಸೇರಿಸಿಕೊಳ್ಳಬೇಕಾಯ್ತು. ಕಡೆಯದಾಗಿ, 1948ರ ಹೊತ್ತಿಗಿನ ಗಾಂಧಿ ಇನ್ನಷ್ಟು ಬೇರೆಯಾಗಿದ್ದರು. ಅಂತರ್ಜಾತಿಯದ್ದಲ್ಲದ ಮದುವೆಗಳಿಗೆ ತಾನು ಹೋಗುವುದಿಲ್ಲವೆಂದು ಗಾಂಧಿ ಘೋಷಿಸಿದರು. ದೇಶ ವಿಭಜನೆಯ ಸಂದರ್ಭದಲ್ಲಿ ನೌತಾಲಿಯ ದಂಗೆಯನ್ನು ತಣ್ಣಗಾಗಿಸಲು ಹೆಣಗಾಡಿ, ಸುಸ್ತಾಗಿ ದೆಹಲಿಗೆ ಬಂದಿಳಿದ ಗಾಂಧಿಗೆ ಮನುಷ್ಯನ ಆಳದಲ್ಲಿನ ಒಳಿತಿನ ಬಗ್ಗೆ ಇದ್ದ ವಿಶ್ವಾಸ ಕದಡಿ ಹೋಗಿತ್ತು. ಆ ನಂತರ ಅವರು ಹೆಚ್ಚು ಕಾಲ ಉಳಿಯಲಿಲ್ಲ.

ಒಟ್ಟರ್ಥದಲ್ಲಿ ಗಾಂಧಿಯವರನ್ನು ಈ ದೇಶದ ಎಲ್ಲಾ





ದಮನಿತ ಸಮುದಾಯಗಳ ಪ್ರಜಾತಾಂತ್ರಿಕ ಹಕ್ಕುಗಳಿಗಾಗಿ ಹೋರಾಡಿದ ವ್ಯಕ್ತಿ ಎಂದು ಹೇಳಲಾಗದು; ದೇಶದ ನಿಜವಾದ ಸ್ವಾತಂತ್ರ್ಯದ ವಿಚಾರದಲ್ಲೂ ಅವರು ಸಂಪೂರ್ಣ ರಾಜಿರಹಿತ ನಿಲುವನ್ನು ಕೊನೆಗಾದರೂ ಹೊಂದಿದ್ದರು ಎಂದೂ ಹೇಳಲಾಗದು. ಆದರೆ ಅವರ ಚಲನೆ ಒಂದಲ್ಲಾ ಒಂದು ಮಟ್ಟಿಗೆ ಸಕಾರಾತ್ಮಕ ದಿಕ್ಕಿನಲ್ಲಿತ್ತು ಎಂದಂತೂ ಹೇಳಬಹುದು. ಅಷ್ಟಕ್ಕೇ ಅವರನ್ನು ಈ ನೆಲದ ಎಲ್ಲ ಸಮುದಾಯಗಳ ವಿಮೋಚಕನ ಸ್ಥಾನದಲ್ಲಿ ನಿಲ್ಲಿಸಲು ಸಾಧ್ಯವಿಲ್ಲ ಎಂಬುದು ಈ ಅಂಕಣಕಾರನ ಅನಿಸಿಕೆ.

ಮಂಡೇಲಾ ಅವರ ಚಲನೆ? ಅದು ಸ್ಪಷ್ಟವಾಗಿ ನಕಾರಾತ್ಮಕ ದಿಕ್ಕಿನಲ್ಲಿತ್ತು, ಅದರಲ್ಲಿ ಗೊಂದಲವಿಲ್ಲ. ಏಕೆಂದರೆ, ಗಾಂಧಿಯವರ ಕಾಲಕ್ಕಿಂತ ದೊಡ್ಡ ವ್ಯಕ್ತಿಗಳ ಪ್ರತಿ ಚಲನೆಯನ್ನು ದಾಖಲಿಸುವ ಕಾಲಘಟ್ಟದಲ್ಲಿ ನಾವಿದ್ದೇವೆ. ಕಳೆದ 23 ವರ್ಷಗಳಲ್ಲಿ ಮಂಡೇಲಾ ಅವರು ಮಾಡಿದ್ದೇನು ಎಂಬುದು ಅನುಮಾನಕ್ಕೆಡೆಯಿಲ್ಲದಂತೆ ನಮ್ಮ ಮುಂದಿದೆ.

ಮಂಡೇಲಾ ಒಬ್ಬ ಧೀರೋದಾತ್ತ ವಿಮೋಚನಾವಾದಿ ಹೋರಾಟಗಾರನಾಗಿ ತನ್ನ ಆರಂಭಿಕ ವರ್ಷಗಳನ್ನು ಕಳೆದವರು. ನಂತರ, ಅದರ ಪರಿಣಾಮವಾಗಿಯೇ ಎರಡೂ ಮುಕ್ಕಾಲು ದಶಕಗಳ ಜೈಲುವಾಸವನ್ನು ಅನುಭವಿಸಿದರು. ಜೈಲಿನಿಂದ ಹೊರಬರುವ ಮುಂಚೆಯೇ ಮಹಾತ್ಮ ಪಟ್ಟಕ್ಕೆ ತಯಾರಾಗಿದ್ದರು. ಆ ನಂತರದ್ದು ಅತ್ಯಂತ ರಾಜಿಯ ಮತ್ತು ದ್ರೋಹದ ಕಥಾನಕ. ಈ ದೇಶದ ಬಹುಪಾಲು ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳ ರೀತಿಯಲ್ಲಿ, ಸಶಸ್ತ್ರ ಸಂಗ್ರಾಮ ನಡೆಸಿದ್ದರಿಂದಾಗಿ ಮಂಡೇಲಾರ ಆರಂಭಿಕ ದಿನಗಳನ್ನು ಸಕಾರಾತ್ಮಕವಾಗಿಯೂ, ಆ ನಂತರ ಹೋರಾಟವನ್ನೇ ಬಿಟ್ಟು ಅಧಿಕಾರವೇರಿದ್ದರಿಂದಾಗಿ ಅದು ನಕಾರಾತ್ಮಕ ವೆಂದೂ ಪರಿಗಣಿಸುವ ಯಾಂತ್ರಿಕ ಸರಳೀಕರಣ ಇದಲ್ಲ, ಸೈದ್ಧಾಂತಿಕವಾಗಿ, ರಾಜಕೀಯವಾಗಿ, ನೈತಿಕವಾಗಿ ಎಲ್ಲ ರೀತಿಯಲ್ಲಿಯೂ 1987ರಾಚೆಗಿನ ಮಂಡೇಲಾ ಕಪ್ಪು ಜನರ ವಿಮೋಚನೆಯ ಆಶೋತ್ತರಗಳಿಗೆ ವಿರುದ್ಧ ದಿಕ್ಕಿನಲ್ಲಿ ನಡೆದರು. ಅದರ ಪರಿಣಾಮವಾಗಿಯೇ ಬಿಳಿಯರ ಆಡಳಿತದ ಕಾಲದಲ್ಲಿ ಇದ್ದುದಕ್ಕಿಂತ ದಾರುಣ ಪರಿಸ್ಥಿತಿಯಲ್ಲಿ ಇಂದು ದಕ್ಷಿಣ ಆಫ್ರಿಕಾದ ಬಹುಸಂಖ್ಯಾತ ಕಪ್ಪು ಜನರು ಬದುಕುತ್ತಿದ್ದಾರೆ.

1990ಕ್ಕೆ ಮುಂಚೆಯೂ ಈ ಪರಿಸ್ಥಿತಿ ದಾರುಣವಾಗಿಯೇ ಇತ್ತು. ಆದರೆ ಆಗ 'ವರ್ಣಬೇಧ'ವನ್ನು ಅನುಸರಿಸುತ್ತಿರುವ ದೇಶವಾಗಿ ಅದು ಪ್ರಪಂಚದ ಜನರ ಕಣ್ಣಿನಲ್ಲಿ ಅಮಾನ್ಯವಾಗಿತ್ತು. ಮಂಡೇಲ ಮತ್ತು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ (ಎಎನ್‌ಸಿ)ನ ಇತರ ನಾಯಕರು, ಆ ವರ್ಣಬೇಧ ನೀತಿಗೆ, ಪ್ರಜಾತಂತ್ರದ ಮುಖವಾಡವಾಗಿ ಬಳಕೆಗೆ ಬಂದರು. ಅದೇನೂ ಒಂದೇ ದಿನ ಇದ್ದಕ್ಕಿದ್ದಂತೆ ದ್ರೋಹ ಬಗೆಯುವ ಸಂಚು ನಡೆದು, ಅದರಲ್ಲಿ ಮಂಡೇಲಾ ಪಾಲುದಾರರಾಗಿದ್ದಲ್ಲ.

ಜೈಲಿನಲ್ಲಿ ಎರಡು ದಶಕಗಳ ಕಾಲ ಹಣ್ಣಾಗಿದ್ದ ಮಂಡೇಲಾರನ್ನು ಮಣಿಸುವ ಸಂಚನ್ನು ವ್ಯವಸ್ಥಿತವಾಗಿಯೇ ಹೆಣೆಯಲಾಯಿತು. ಅದಕ್ಕೆ ಮಂಡೇಲಾ ಬಲಿಯಾದ ರೀತಿಗೆ ಮಂಡೇಲಾರನ್ನೂ ಹೊಣೆ ಮಾಡದಿರಲು ಸಾಧ್ಯವಿಲ್ಲ. ಏಕೆಂದರೆ ಕೇವಲ ಬಿಳಿಯರ ಔದಾರ್ಯದಿಂದ ಆದ ಬಿಡುಗಡೆ ಅದಲ್ಲ. 1983ರಿಂದಲೇ 'ನೆಲ್ಸನ್ ಮಂಡೇಲಾರನ್ನು ಬಿಡುಗಡೆಗೊಳಿಸಿ' ಎಂಬ ಆಂದೋಲನವು ದ. ಆಫ್ರಿಕಾದಿಂದ ಪ್ರಪಂಚದೆಲ್ಲೆಡೆಗೂ ಹಬ್ಬಿತ್ತು. ಕಪ್ಪು ಜನರ ವಿಮೋಚನೆಯ ಹೋರಾಟದ ಭಾಗವೂ ಆಗಿದ್ದ ಈ ಆಂದೋಲನದಲ್ಲಿ, ಅಲ್ಲಿನ ಜನರು ಅಪಾರವಾದ ಕಷ್ಟ ನಷ್ಟಗಳನ್ನು ಅನುಭವಿಸಿದರು. ಆ ಎಂಟು ವರ್ಷಗಳಲ್ಲಿ ಬಿಳಿಯರ ಸರ್ಕಾರವು ನಿರ್ದಯವಾಗಿ ಜನರನ್ನು ಕೊಂದು ಹಾಕುತ್ತಿತ್ತು, ಒಟ್ಟು 13,000 ಕಪ್ಪು ಜನರು ಬಲಿಯಾದರು. ಬಂಧಿತರಾದವರು, ಕಾಣೆಯಾದವರ ಸಂಖ್ಯೆಯನ್ನು ನಿಖರವಾಗಿ ಹೇಳುವುದೂ ಕಷ್ಟ.

ಇದೇ ಅವಧಿಯಲ್ಲಿ ಕೆಲವು ಸಾಮೂಹಿಕ ನರಮೇಧಗಳೂ ನಡೆದವು. ಈ ಕಪ್ಪು ಜನರ ಬಂಡಾಯವನ್ನು ಹತ್ತಿಕ್ಕಿಯೇ ಸಿದ್ಧ ಎಂದು ಹೊರಟ ಕ್ಲಾರ್ಕ್‌ನ ಸರ್ಕಾರವು ನಡೆಸಿದ ದೌರ್ಜನ್ಯಕ್ಕೆ ಪ್ರತಿಯಾಗಿ ಎಎನ್‌ಸಿಯ ಮಿಲಿಟೆಂಟ್ ಯುವಕರು ವಿನ್ನಿ ಮಂಡೇಲಾರ ನೇತೃತ್ವದಲ್ಲಿ ಪ್ರತಿದಾಳಿಗಳನ್ನೂ ಕ್ರೂರವಾಗಿ ನಡೆಸಿದರು. ಒಂದೆಡೆ ಈ ಬಗೆಯ ಹಿಂಸಾತ್ಮಕ ಆಂದೋಲನ, ಇನ್ನೊಂದೆಡೆ ಒತ್ತಡಕ್ಕೆ ಗುರಿಯಾಗಿ ದ.ಆಫ್ರಿಕಾ ಸರ್ಕಾರದ ಮೇಲೂ ಒತ್ತಡ ತಂದ ಅಮೆರಿಕ ಮತ್ತಿತರ ದೇಶಗಳ ಸರ್ಕಾರಗಳ ಬದಲಾದ ನೀತಿ ಇದು ಮಂಡೇಲಾರ ಬಿಡುಗಡೆಗೆ ಬೇಕಾದ ಭೂಮಿಕೆಯನ್ನು ಒದಗಿಸಿದವು.


ಈ ಕಾಲದಲ್ಲಿ ಮಂಡೇಲಾರ ಜೊತೆ ಜೈಲೊಳಗೇ ಹಲವು ಸುತ್ತಿನ ಮಾತುಕತೆ ನಡೆಸಲಾಯಿತು. ಮಂಡೇಲಾರನ್ನು ಕೇವಲ ವಿಮೋಚನಾವಾದಿ ಹೋರಾಟಗಾರನಾಗಿ ಮಾತ್ರವಲ್ಲದೇ, ಮಹಾತ್ಮನ ಪಟ್ಟದಲ್ಲಿ ಕೂರಿಸಿಯೇ ಬಿಡುಗಡೆಗೊಳಿಸಲು ರಂಗಸ್ಥಳ ಸಜ್ಜಾಯಿತು. ಮಂಡೇಲಾ ಬಿಡುಗಡೆಯಾದರು. ಆದರೂ ಕಪ್ಪು ಜನರು ಮತ್ತು ಎಎನ್‌ಸಿಯ ಸಾಮಾನ್ಯ ಕಾರ್ಯಕರ್ತರು ಮಂಡೇಲಾರಲ್ಲಿಟ್ಟಿದ್ದ ವಿಶ್ವಾಸ ಸಂಪೂರ್ಣ ಕರಗಿರಲಿಲ್ಲ. ಏಕೆಂದರೆ ಮಂಡೇಲಾ ಸುಲಭವಾಗಿ ಇದಕ್ಕೆ ಒಪ್ಪಿರಲಿಲ್ಲ. ಜನರ ಪರವಾಗಿ ಕೆಲವು ಷರತ್ತುಗಳನ್ನು ಹಾಕಿದ್ದರು ಮತ್ತು ತಾನೇನು ಮಾಡಬಾರದು ಎಂಬುದರ ಕುರಿತು ಬಿಳಿಯರ ಆಡಳಿತ ಹೇಳಿದ್ದಕ್ಕೆಲ್ಲಾ ತಲೆಯಾಡಿಸಿರಲಿಲ್ಲ. ಕನಿಷ್ಠ ಬಹಿರಂಗವಾಗಿ ಅದನ್ನು ಒಪ್ಪಿರಲಿಲ್ಲ. ಆದರೆ ಮುಂದಿನ 4-5 ವರ್ಷಗಳಲ್ಲಿ ಮಂಡೇಲಾರ ನೀತಿ ಸಂಪೂರ್ಣವಾಗಿ ಬದಲಾದದ್ದನ್ನು ದ.ಆಫ್ರಿಕಾ ನೋಡಿತು.

ಅದನ್ನು ಪ್ರಪಂಚದ ಉಳಿದ ಭಾಗ ಅಷ್ಟಾಗಿ ನೋಡಲಾಗಲಿಲ್ಲ. ಏಕೆಂದರೆ ಈಗ ಮಂಡೇಲಾ ಕೇವಲ ಮಂಡೇಲಾ ಆಗಿರಲಿಲ್ಲ. ಅವರು ಮಹಾತ್ಮಾ ಗಾಂಧಿಯ ಮತ್ತೊಂದು ಅವತಾರವಾದ ಮಹಾತ್ಮಾ ಮಂಡೇಲಾ ಆಗಿ ದ.ಆಫ್ರಿಕಾದಲ್ಲಿನ ಪ್ರಜಾಪ್ರಭುತ್ವದ ಮೊಟ್ಟ ಮೊದಲ ಅಧ್ಯಕ್ಷನಾಗಿ ಪ್ರತಿಷ್ಠಾಪಿಸಲ್ಪಟ್ಟಿದ್ದರು. ಬಹುತೇಕ ಬಿಳಿಯ ಬಂಡವಾಳಶಾಹಿಯೇ ನಿಯಂತ್ರಿಸುತ್ತಿದ್ದ ಸರ್ಕಾರದಲ್ಲಿ ಹೊಸದಾಗಿ ಪ್ರವರ್ಧಮಾನಕ್ಕೆ ಬಂದಿದ್ದ ಕಪ್ಪು ವರ್ಣೀಯ ಬಂಡವಾಳಶಾಹಿಯೂ ಪಾಲು ಪಡೆದುಕೊಂಡಿತ್ತು. ಈ ಜೋಡಿಗೆ ಹೇಳಿ ಮಾಡಿಸಿದ ಹಾಗೆ, 'ತಾಯಿ ಹೃದಯ'ದ ನಡವಳಿಕೆಯನ್ನು ಪ್ರದರ್ಶಿಸಿದರು. 'ಸತ್ಯ ಮತ್ತು ಅನುಸಂಧಾನ' ಸಮಿತಿಯ ಮೂಲಕ ದ.ಆಫ್ರಿಕಾದ ಎರಡೂ ವರ್ಣೀಯರನ್ನು ಬೆಸೆಯುವ 'ವಿಶಿಷ್ಟ' ಮಾದರಿಯನ್ನೂ ಮುಂದಿಟ್ಟರು. ವಿನ್ನಿ ಮಂಡೇಲಾರಂಥವರು ಕುದ್ದು ಹೋದರು. ಮಂಡೇಲಾರನ್ನು ದ್ರೋಹಿ ಎಂದು ಅವರು ಕರೆಯುವ ಹೊತ್ತಿಗೆ, ವಿನ್ನಿ ಪ್ರತಿಹಿಂಸೆಯ ಕ್ರೌರ್ಯದ ಖಳನಾಯಕಿಯಂತೆಯೂ, ಮಂಡೇಲಾ ಜೈಲಿನಲ್ಲಿ ಮಾಗಿದ ಪರಿಪಕ್ವ ಮುತ್ಸದ್ದಿಯಂತೆಯೂ ಕಾಣುತ್ತಿದ್ದರು.

ಜಗತ್ತನ್ನೆಲ್ಲಾ ಆವರಿಸುತ್ತಿದ್ದ ಜಾಗತೀಕರಣ ನೀತಿಗಳ ಪಾದಬುಡದಲ್ಲಿ ನಲುಗಿ ನರಳುವಾಗ, ತಮ್ಮದೇ ವ್ಯಕ್ತಿಯನ್ನು ರಾಷ್ಟ್ರಾಧ್ಯಕ್ಷನ ಸ್ಥಾನದಲ್ಲಿ ನೋಡಿಕೊಂಡು ಪ್ರಜಾಪ್ರಭುತ್ವದ ಸೌಂದರ್ಯವನ್ನು ಸವಿಯುವ ಅವಕಾಶ ಕಪ್ಪು ವರ್ಣೀಯರಿಗೆ ಲಭ್ಯವಾಗಿತ್ತು. ನವ ಉದಾರವಾದಿ ಆರ್ಥಿಕತೆ ದ.ಆಫ್ರಿಕಾದಲ್ಲಿ ವಿಜೃಂಭಿಸಲು ಮಂಡೇಲಾ ತಮ್ಮ ಕೊಡುಗೆಯನ್ನು ಕೊಟ್ಟರು. ಕಪ್ಪು ವರ್ಣೀಯರು ಹಿಂದಿಗಿಂತ ಹೆಚ್ಚು ಸಂಖ್ಯೆಯಲ್ಲಿ ಅಧಿಕಾರದ ಸ್ಥಾನಗಳಲ್ಲೂ, ಸಾರ್ವಜನಿಕ ಜಾಗದಲ್ಲೂ ಕಾಣಲಾರಂಭಿಸಿದರು. ಹಿಂದಿಗಿಂತ ಹೆಚ್ಚು ಪ್ರಮಾಣದಲ್ಲಿ ಕೊಳೆಗೇರಿಗಳಲ್ಲಿ ತುಂಬಿಕೊಂಡರು. ಒಟ್ಟು ಆರ್ಥಿಕತೆ ಪ್ರಧಾನವಾಗಿ 'ಬಿಳಿ'ಯೇ ಆಗಿತ್ತು. ಹೃದಯ ವೈಶಾಲ್ಯತೆ, ತಾಯ್ತನ, ಕ್ಷಮೆಯನ್ನು ಕಪ್ಪು ವರ್ಣೀಯರಿಗೆ ಬೋಧಿಸಲು ರಾಜಕೀಯವಾಗಿ ಮಂಡೇಲಾ ಮತ್ತು ಧಾರ್ಮಿಕವಾಗಿ ಡೆಸ್ಮಂಡ್ ಟುಟು ಮಾಡಿದ ಪ್ರಯತ್ನಕ್ಕೆ ನೊಬೆಲ್‌ಗಳು ಸಂದಿದ್ದವು. ಒಂದೇ ಅವಧಿಗೆ ಅಧಿಕಾರ ಸಾಕೆಂದ ಮೇಲೆ ಮಹಾತ್ಮರು ಹುತಾತ್ಮರೂ ಆಗಲು ಇನ್ನೇನು ಉಳಿದಿತ್ತು?

ಇಡೀ ಜಗತ್ತಿಗೆ ಮಂಡೇಲಾರ ವಿಶಿಷ್ಟತೆಯನ್ನು ಸಾರಲು ಕಾರ್ಪೋರೇಟ್ ಮಾಧ್ಯಮಗಳು ಸಿದ್ಧವಾಗಿದ್ದವು. ಮೊನ್ನಿನ ಸಾವಿನ ಸಂದರ್ಭದಲ್ಲಿ ಮೊದಲೇ ಸಿದ್ಧಪಡಿಸಿಕೊಂಡಿದ್ದ 'ವಿಶೇಷ ಸಂಗತಿ'ಗಳು ಬಿತ್ತರವಾದಂತೆಯೇ, ಮಂಡೇಲಾರಿಗೆ ತೊಡಿಸಬೇಕಿದ್ದ ಅಂಗಿಯನ್ನು ಕೇವಲ ದ.ಆಫ್ರಿಕಾದಲ್ಲಿ ಮಾತ್ರವಲ್ಲದೇ ಅಮೆರಿಕಾ, ಇಂಗ್ಲೆಂಡುಗಳಲ್ಲೂ ಹೊಲಿಯಲಾಗಿತ್ತು. ಆಫ್ರಿಕಾದ ಕಪ್ಪು ವರ್ಣೀಯರ ಹೋರಾಟದಲ್ಲಿ ಬಿಳಿ ಕಾರ್ಪೋರೇಟ್‌ಗಳ ಜೊತೆ ಕೈ ಜೋಡಿಸದ ಉಳಿದ ನಾಯಕರುಗಳನ್ನು ಭಯೋತ್ಪಾದಕರ ಪಟ್ಟಿಯಲ್ಲೇ ಅಮೆರಿಕಾ ಇರಿಸಿದೆ. 1990ರವರೆಗೂ ಮಂಡೇಲಾ ಸಹಾ ಅಮೆರಿಕಾದ ತಯಾರಿಸಿದ್ದ ಭಯೋತ್ಪಾದಕರ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿದ್ದರು. ಅವರನ್ನು 'ಟೆರರಿಸ್ಟ್' ಎಂದು ಕರೆದಿದ್ದವರು, ಕಪ್ಪು ವರ್ಣೀಯರ ವಿಮೋಚನಾ ಹೋರಾಟದ ವಿರುದ್ಧ ಇದ್ದವರೆಲ್ಲರೂ ಇಂದು ಮಂಡೇಲಾ ಅವರನ್ನು ಅತಿಯೆನ್ನುವಷ್ಟು ಹೊಗಳುತ್ತಿದ್ದಾರೆ. ಅವರು ಆರಿಸಿಕೊಂಡಿರುವುದು 1990ರ ನಂತರದ ಮಂಡೇಲಾರನ್ನು. ಅಂತಹ ಒಬ್ಬ ಮಹಾತ್ಮನನ್ನು ಅವರೇ ಸೃಷ್ಟಿಸಿದ್ದರು.

ಆದರೆ ಜಗತ್ತಿನ ಉಳಿದ ಭಾಗಗಳ ದಮನಿತ ಜನತೆಗೂ ಆಫ್ರಿಕಾದ ಕಪ್ಪು ವರ್ಣೀಯರ ಹೋರಾಟ ಮತ್ತು ಮಂಡೇಲಾ ಸ್ಫೂರ್ತಿಯೇ ಎಂಬುದರಲ್ಲಿ ಅನುಮಾನವಿಲ್ಲ. ಮಂಡೇಲಾರ ಜೀವಿತದ ಯಾವ ಭಾಗವನ್ನು ತೆಗೆದುಕೊಳ್ಳುತ್ತೇವೆ ಎಂಬುದು ನಮ್ಮ ದೃಷ್ಟಿಕೋನ ಮತ್ತು ನಿಂತ ಜಾಗವನ್ನು (ಲೋಕೇಷನ್) ಅವಲಂಬಿಸಿದೆ. ಅಷ್ಟೇ.



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಸೀತೆ ಮಣ್ಣಿಗೆ ಮರಳಿದ್ದೇಕೆ?

ಸೀತೆಯರು

ರಾತ್ರಿಯೆಲ್ಲಾ ರಾಮಾಯಣ ಕೇಳಿ ಸೀತೆಗೂ ರಾಮನಿಗೂ ಏನಾಗಬೇಕು ಅಂತ ಕೇಳಿದರಂತೆ. ಕೇಳಬಹುದು! ವಾಲ್ಮೀಕಿ ರಾಮಾಯಣ, ಜೈನ ರಾಮಾಯಣ, ಬೌದ್ಧ ರಾಮಾಯಣ (ದಶರಥ ಜಾತಕ), ಕಾಶ್ಮೀರಿ ರಾಮಾಯಣ, ಆನಂದ ರಾಮಾಯಣ- ಹೀಗೆ ಹಲವು ರಾಮಾಯಣಗಳನ್ನು ಕೇಳಿದರೆ ಹೀಗೊಂದು ಪ್ರಶ್ನೆ ಕೇಳಬಹುದು. ವಾಲ್ಮೀಕಿಯ ರಾಮಾಯಣವೇ ಅತ್ಯಂತ ಪ್ರಚಲಿತವಾಗಿರುವುದು ಹೌದಾದರೂ ಅದರ ಮೂಲದಿಂದಲೇ ಹುಟ್ಟಿರುವ ಅನೇಕ ರಾಮಾಯಣಗಳು ಬೇರೆಬೇರೆಯೇ ಚಿತ್ರಣಗಳನ್ನು ಕಟ್ಟಿಕೊಡುತ್ತವೆ. ಅಂತೆಯೇ ಸೀತೆಯ ಜನನ, ರಾಮನೊಡನೆ ಅವಳ ಸಂಬಂಧ ಇತ್ಯಾದಿಗಳನ್ನೂ ವಿವರಿಸಿರುವುದರಲ್ಲಿ ವೈವಿಧ್ಯತೆಗಳನ್ನು ಹೊಂದಿವೆ.

ಈ ಪುರಾಣದ ಹೂರಣಕ್ಕಾಗಿ ದೇವಿಯರ ಬಗ್ಗೆ ಬರೆಯಲು ಮುಂದಾದಾಗ, ನನ್ನ ಲಕ್ಷ್ಯವೆಲ್ಲಾ ಗೌರಿ, ಪಾರ್ವತಿ ಮತ್ತು ಇತರ ಮಾತೃಪ್ರಧಾನ ದೇವತೆಯರ ಬಗ್ಗೆ, ಆರಾಧನೆಗಳಲ್ಲಿ ಲೈಂಗಿಕ ಸಂಕೇತಗಳ ಬಗ್ಗೆ ಹೊರಳುವುದಿತ್ತು. ಆದರೆ, ಕೃಷಿ ಪ್ರಧಾನವಾಗಿರುವ ಗೌರಿಯನ್ನು ಸಂಧಿಸಲು ಹೋದರೆ, ಸೀತೆಯೇ ಪ್ರಾರಂಭಕ್ಕೆ ಅಡ್ಡ ಬಂದಳು. ಹುಲ್ಲು, ಫಸಲುಗಳ ಕಟ್ಟಿನಿಂದ ಗೌರಿಯನ್ನು ಗುರುತಿಸುವ ಸಂಕೇತವನ್ನು ಗಮನಿಸಲು ಹೋದಾಗ, ನೇಗಿಲಗೆರೆಯ ಅಧಿದೇವತೆಯಾಗಿ ಅಥವಾ ಭೂಮಿಯಲ್ಲಿ ಕೃಷಿಯ ಪ್ರಾರಂಭಿಕ ಕಾರ್ಯದ ದೇವತೆಯಾಗಿ ಸೀತೆ ಮೊದಲು ಬಂದಳು. ಹಾಗಾಗಿ ಸೀತೆಯನ್ನು ಸಂಧಿಸಿ ಗೌರಿಯನ್ನು ಮುಂದೆ ನೋಡುವ ಎಂದು ನಿಂತೆ.

ಸೀತೆ ಎಂದರೆ ಋಗ್ವೇದದ ಕಾಲದಲ್ಲಿ ಸಾಮಾನ್ಯವಾದ ಹೆಸರೇ. ಋಗ್ವೇದದಲ್ಲಿ ಆಗಿನ ಯಾರೋ ಒಬ್ಬ ಇಂದ್ರನ ಹೆಂಡತಿಯ ಹೆಸರು, ತೈತ್ತರೀಯ ಬ್ರಾಹ್ಮಣದಲ್ಲಿ ಚಂದ್ರನ ಹೆಂಡತಿ ಸೀತೆ ಎಂದಿದೆ. ಸೀತಾ ಮತ್ತು ಶ್ರದ್ಧಾ ಎಂಬೆರಡು ಪ್ರಜಾಪತಿಯರ ಪುತ್ರಿಯರು ಎಂದೂ ಬ್ರಾಹ್ಮಣಗಳಲ್ಲಿ ತಿಳಿಸಿದೆ. ರಾಮ ಮತ್ತು ಸೀತೆ ಎಂಬುವ ಹೆಸರುಗಳು ತೀರಾ ಸಾಮಾನ್ಯವಾಗಿ ಬಳಕೆಯಲ್ಲಿದ್ದವು ಎಂದು ಹಲವು ನಿದರ್ಶನಗಳು ಸೂಚಿಸುತ್ತವೆ.

ಹೆಣ್ಣೆಂಬ ಭೋಗದ ವಸ್ತು

ಸಾಂಸ್ಕೃತಿಕವಾಗಿ ಸೀತೆಯ ಮೂಲವನ್ನು ಹುಡುಕಿಕೊಂಡು ಹೋಗುವ ಮುನ್ನ ನಮ್ಮಲ್ಲಿ ಪ್ರಚಲಿತವಾಗಿರುವ ರಾಮನ ಸತಿ ಸೀತೆಯನ್ನೇ ಸಾಮಾಜಿಕವಾಗಿ ಗಮನಿಸೋಣ. ಶ್ರೀಮತಿ ಸೀತಾರಾಂ, ನನಗೆ ಸಾಮಾಜಿಕವಾಗಿಯೂ, ವೈಯಕ್ತಿಕವಾಗಿಯೂ ಮುಕ್ತವಾಗಿದ್ದ ಮಹಿಳೆಯರು ಪುರುಷ ಪ್ರಧಾನ ಸಮಾಜದಿಂದ ಶೋಷಿತರಾದ ಸಾಂಕೇತಿಕ ಕಥೆಯಾಗಿಯೇ ಕಾಣುತ್ತದೆ. ಮಣ್ಣಿಂದ ಬಂದವಳು ಮಣ್ಣಿಗೇ ಮರಳಿದಳು.

ಮಹಾರಾಜನಾದ ಜನಕನು ನೇಗಿಲನ್ನು ಹೂಡಿ ಕೆಲಸ ಮಾಡುತ್ತಿದ್ದನೆಂದರೆ, ನಮ್ಮ ಆಧುನಿಕ ದೃಷ್ಟಿಯಲ್ಲಿ ಕಲ್ಪಿಸಿಕೊಳ್ಳುವಂತಹ ವೈಭವೋಪೇತ ಅರಮನೆಯಲ್ಲಿ ರತ್ನ ಸಿಂಹಾಸನದಲ್ಲಿ ಮಂಡಿಸಿ ದರ್ಪದಿಂದ ರಾಜ್ಯಭಾರ ಮಾಡುತ್ತಿದ್ದ ಮಹಾರಾಜನಲ್ಲ. ತನ್ನ ಸ್ವಾಮ್ಯತೆಯಲ್ಲಿ ಪ್ರದೇಶವೊಂದನ್ನಿರಿಸಿಕೊಂಡಿದ್ದವನು ಎನ್ನುವುದಕ್ಕಿಂತ, ಪಂಡಿತನೂ, ವಿವೇಕಿಯೂ ಆಗಿದ್ದ ಜ್ಞಾನಿಯಾಗಿದ್ದವನು. ಯಜ್ಞಕ್ಕಾಗಿ ಭೂಮಿಯನ್ನು ಉಳುತ್ತಿದ್ದನೆಂದು ಉಲ್ಲೇಖಿಸುವುದನ್ನು ಗಮನಿಸಿದರೆ, ಆತ ತನ್ನ ಕಾರ್ಯವನ್ನು ಯಜ್ಞರೂಪದಲ್ಲಿ ಮಾಡುತ್ತಿದ್ದ ಆಚಾರವಂತ ಆಧ್ಯಾತ್ಮಿಕ ಮನೋಭಾವದವನಿರುತ್ತಾನೆ. ಆತನಿಗೆ ಋಗ್ವೇದದಲ್ಲಿ ತಿಳಿಸಿರುವಂತಹ ನೇಗಿಲರೇಖೆಯ ಅಧಿದೇವತೆಯ ಹೆಸರುಳ್ಳ ಸೀತೆ ಹೇಗೆ ದೊರಕಿದಳೋ ಖಚಿತವಿಲ್ಲ. ಆದರೆ, ಕೃಷಿಯನ್ನು ಬಹುವಾಗಿ ಅಭ್ಯಾಸ ಮಾಡುತ್ತಿದ್ದವರು ಮಹಿಳೆಯರು. ಪಶು ಸಂಗೋಪನೆ ಮಾಡುತ್ತಿದ್ದವರು ಅಥವಾ ಬೇಟೆಯಾಡುತ್ತಿದ್ದವರು ಪುರುಷರು. ಜನಕನು ವಿದೇಹದ ಪತಿಯೆಂದರೆ, ಭೌತಿಕವಾಗಿ (ಭೌಗೋಳಿಕವಾಗಿ) ಇಲ್ಲದ ಪ್ರದೇಶಕ್ಕೆ ಅಥವಾ ಕ್ಷೇತ್ರಕ್ಕೆ ಆತ ಅರಸ. ತಮ್ಮ ಜ್ಞಾನದಲ್ಲಿ ಘನವಾಗಿರುವವರನ್ನು ಮಹಾರಾಜ ಎಂದು ಉತ್ತರದೇಶದಲ್ಲಿ ತೀರಾ ಸಾಮಾನ್ಯವಾಗಿ ಗೌರವದಿಂದ ಸಂಬೋಧಿಸುತ್ತಾರೆ. ಅವನನ್ನು ಬಹು ಜ್ಞಾನಿ ಮತ್ತು ವಿಚಾರಪರನೆಂದೂ, ಬೇರೆ ಬೇರೆ ಕಡೆಗಳಿಂದ ಅವನಲ್ಲಿಗೆ ಜಿಜ್ಞಾಸುಗಳು ಮತ್ತು ಮುನಿಗಳು ಬಂದು ಚಿಂತನಮಂಥನ ಮಾಡುತ್ತಿದ್ದ ಉಲ್ಲೇಖಗಳಿವೆ. ಮುಂದೊಂದು ದಿನ ಮಿಥಿಲೆಯು ಸುಡುವಾಗಲೂ ಶಾಂತವಾಗಿದ್ದನಂತೆ. ಇಂಥಾ ಜನಕ ಮಹಾರಾಜ್ ಸೀತೆಯನ್ನು (ಕೃಷಿಕರ ಹೆಣ್ಣುಮಗಳನ್ನು) ತನ್ನ ಮಗಳನ್ನಾಗಿ ಸ್ವೀಕರಿಸಿ, ನೇಗಿಲ ಗೆರೆಯ ಅಧಿದೇವತೆಯ ಹೆಸರಿಂದಲೇ ಅವಳನ್ನು ಕರೆದ. ಅವಳು ಯಾವುದೇ ಕಾರಣಕ್ಕೆ ಅವನ ಮನೆಯನ್ನು ಪ್ರವೇಶಿಸಿರಲಿ, ರಾಮನನ್ನು ವರಿಸಿದ ಮೇಲೆ ಅವಳ ಬದುಕಿನ ಚಿತ್ರಣ ಬದಲಾಯಿತು. ವೈಚಾರಿಕ ಮತ್ತು ಆಧ್ಯಾತ್ಮಿಕ ನೆಲೆಗಟ್ಟಿನ ಸಮೂಹದಲ್ಲಿ ಸಹಜವಾಗಿ ಬೆಳೆದಿದ್ದ ಸೀತೆಯು ಸದಾ ರಾಜಕೀಯಗಳಿಂದ ಧುಮುಗುಡುತ್ತಿದ್ದ ದಶರಥನ ಅರಮನೆಗೆ ರಾಮನ ಹೆಂಡತಿಯಾಗಿ ಬಂದಳು. ಬಹುಶಃ ಅವಳು ತೀರಾ ವ್ಯತಿರಿಕ್ತವಾದ ಪರಿಸರವನ್ನು ರಾಮನ ಮನೆಯಲ್ಲಿ ನೋಡಿದಳೆನಿಸುತ್ತದೆ.

ರಾಮನ ಜೊತೆಗೆ ವನವಾಸಕ್ಕೂ ಹೋದಳು. ರಾವಣನಿಂದ ಅಪಹರಣಕ್ಕೂ ಒಳಗಾದಳು. ಇದೇ ದೊಡ್ಡ ಪ್ರಾರಬ್ಧ. ಆದರೆ, ರಾಮನಿಗೆ ಸೀತೆಯ ಮೇಲಿದ್ದ ಅನುಮಾನವನ್ನು ನೋಡಿ. ಸೀತೆ ಎಲ್ಲಿ ಹೋದಳೆಂದು ಹುಡುಕುತ್ತಾ ಅಲೆದಾಡುವಾಗ, ಆ ಒಂದು ವಸಂತ ಮಾಸದಲ್ಲಿ "ಸೀತೆ ಇರುವ ಸ್ಥಳದಲ್ಲಿಯೂ ವಸಂತ ತನ್ನ ಪ್ರಭಾವವನ್ನು ಬೀರಿರುತ್ತಾನೆ. ಮನ್ಮಥನ ಬಾಣ ಪ್ರಹಾರಗಳನ್ನು ಕೋಮಲಿ ಸೀತೆ ಹೇಗೆ ನಿಗ್ರಹಿಸುತ್ತಾಳೋ?" (ಕಿಷ್ಕಿಂಧಾಕಾಂಡ: 68) ಅಲ್ಲದೆಯೇ ಇರುವ ರಾವಣನ ಜೊತೆಗೆ ಅವಳು ತನ್ನಲ್ಲಿ ಹುಟ್ಟುವ ಕಾಮನೆಗಳನ್ನು ಹೇಗೆ ನಿಗ್ರಹಿಸಿಕೊಂಡಾಳು ಎಂಬ ಅನುಮಾನ. ಹೆಂಗಸರ ಬಗ್ಗೆ ಅಷ್ಟೇನೂ ಒಳ್ಳೆಯ ಅಭಿಪ್ರಾಯವನ್ನು ಹೊಂದಿದವರಾದ ಸಮಾಜದ ಪುರುಷರು ಅವರಾಗಿರಲಿಲ್ಲ. ಅಥವಾ ಸೀತೆಯು ಬಂದ ಮುಕ್ತ ಸಾಮಾಜಿಕ ಒಗ್ಗೆಲೆಯನ್ನು ಇವರು ಹೊಂದಿರಲಿಲ್ಲ ಎಂದು ಅನ್ನಿಸುತ್ತದೆ. ಅಣ್ಣ ತಮ್ಮಂದಿರೆಲ್ಲಾ ಒಬ್ಬಳನ್ನೇ ವರಿಸುವ, ಅಣ್ಣ ಸತ್ತರೆ ತಮ್ಮನೇ ಅತ್ತಿಗೆಯೆಂದೆನಿಸಿಕೊಳ್ಳುವ ಹೆಣ್ಣನ್ನೇ ವರಿಸುವ, ಅಣ್ಣತಮ್ಮಂದಿರು ಅಕ್ಕತಂಗಿಯರ ಗುಂಪುಗಳಲ್ಲೇ ಪರಸ್ಪರ ಮದುವೆಯಾಗುವ ಅಥವಾ ಮುಕ್ತವಾಗಿ ಕೂಡಿರುವ ಬುಡಕಟ್ಟಿನ ಪ್ರದೇಶದ ಅಥವಾ ಅದೇ ಬಗೆಯ ಸಮುದಾಯದಿಂದ ಬಂದಿರಬಹುದಾದ ಸೀತೆಯು ರಾಮನು ಜಿಂಕೆಯನ್ನು ಬೆನ್ನಟ್ಟಿಕೊಂಡು ಓಡಿದ ಸಮಯದಲ್ಲಿ ತನ್ನ ಬಿಟ್ಟು ರಾಮನಿಗೆ ಸಹಾಯಕ್ಕೆ ಹೋಗದಿರುವ ಲಕ್ಷ್ಮಣನ ಬಗ್ಗೆ ಆಕ್ಷೇಪ ವ್ಯಕ್ತಪಡಿಸುವ ಸೀತೆ, ಅವನಿಗೆ ತನ್ನ ಮೇಲೆ ಇರಬಹುದಾದ ವ್ಯಾಮೋಹವನ್ನು ಆರೋಪಿಸುತ್ತಾಳೆ. ಅದಕ್ಕೆ ಲಕ್ಷ್ಮಣ ಬೇಸರಗೊಂಡು, "ಸ್ತ್ರೀಯರಿಗೆ ವಿನಯ, ವಿಧೇಯತೆ ಇರುವುದಿಲ್ಲ, ಚಪಲಚಿತ್ತರು, ಉಚಿತಾನುಚಿತವಾಗಿ ಗ್ರಹಿಸಲಾರರು. ಅಣ್ಣ ತಮ್ಮಂದಿರ ನಡುವೆ, ಸ್ನೇಹಿತರ ನಡುವೆ ಜಗಳ ಹುಟ್ಟಿಸುತ್ತಾರೆ (ಅ.45; ಶ್ಲೋ.28,29)" ಎಂದು ದೂರುತ್ತಾ ಹೋಗುತ್ತಾನೆ. ಇಲ್ಲಿ ಲಕ್ಷ್ಮಣ ಬಹುಶಃ ತನ್ನ ಶಿಷ್ಟ ಸಮಾಜದ ನೆಲೆಗಟ್ಟಿನಿಂದ ಸೀತೆಯಾಡುವ ಮಾತಿಗೆ ಬೇಸರಿಸಿಕೊಳ್ಳುತ್ತಾನೆ.



"ಈ ವಸಂತ ಮಾಸದಲ್ಲಿ ಸೀತೆಯನ್ನು ಅಗಲಿರುವುದು ಮೀರಿದ ದುಸ್ಸಾಹಸವಾಗಿದೆ. ಅಯ್ಯೋ, ಆ ಹೂವರಳಿದ ಮರಗಳುಳ್ಳ ಈ ವಸಂತದ ಪರಿಮಳ ನನ್ನನ್ನು ಬಾಧಿಸದೇ ಹೋಗಿದ್ದರೆ, ಈ ವಿರಹ, ಈ ಕಾಮವನ್ನು ಸಹಿಸಿಕೊಳ್ಳಬಹುದಿತ್ತು" (ಕಿಷ್ಕಿಂಧಾಕಾಂಡ: ಅ.1:ಶ್ಲೋ.63) ಎಂದು ರಾಮನು ಬಾಧಿತನಾಗಿದ್ದರೆ, "ರಾಮಾ, ನಾನಿಲ್ಲಿ ಕೃಶಿಸಿ, ಕಾಂತಿಹೀನಳಾಗಿ ಬದುಕುತ್ತಿದ್ದೇನೆ. ನೀನಾದರೋ ನಿನ್ನ ತಂದೆಯ ಆಜ್ಞೆಯ ಪ್ರಕಾರ ವನವಾಸ ಮುಗಿಸಿ, ಕೃತಾರ್ಥನಾಗಿ, ಸುಂದರ ಸ್ತ್ರೀಯರ ಜೊತೆ ಅಯೋಧ್ಯೆಯಲ್ಲಿ ಸುಖಿಸುತ್ತಿದ್ದೀಯೇ," (ಸುಂದರಕಾಂಡ ಅ.28. ಶ್ಲೋ.12-15) ಎಂದು ಸೀತೆ ಕರುಬುತ್ತಿರುತ್ತಾಳೆ. ಇದು ಆಕೆ ಬಂದ ಹಿನ್ನೆಲೆಯಂತೆ ಆಡಿದಳೋ ಅಥವಾ ಅಯೋಧ್ಯೆಯ ಜೀವನೋದಹಾರಣೆಗಳನ್ನು ಕಂಡು ಹೇಳುತ್ತಿದ್ದಳೋ ಅಥವಾ ವ್ಯಕ್ತಿಗತವಾದ ಸಾಮಾನ್ಯ ಅಸೂಯೆಯಿಂದ ಹೇಳಿದಳೋ, ಏನಾದರಿರಲಿ, ಹನುಮಂತ ಸಾಗರೋಲ್ಲಂಘನ ಮಾಡಿ ಸೀತೆಯನ್ನು ಹುಡುಕಿಕೊಂಡು ಲಂಕೆಗೆ ಬಂದಾಗ, ಸೀತೆಗಾಗಿ ಅವನು ನೋಡುತ್ತಾ ನಡೆಯುವ ಸ್ಥಳಗಳಾದರೂ ಯಾವುವು? ಅಂತಃಪುರದ ಕೋಣೆಗಳು! ರಾಣಿವಾಸದ ಕೊಠಡಿಗಳಲ್ಲಿ ಮಲಗಿರುವ ರಾವಣ ಸ್ತ್ರೀಯರಲ್ಲಿ ಸೀತೆಯನ್ನು ಹುಡುಕಿಕೊಂಡು ಹೋಗುತ್ತಾನೆ. ಅಂದರೆ, ಸೀತೆಯು ರಾವಣನ ಶಯನವನ್ನು ಹಂಚಿಕೊಂಡಿರುವ ಸಾಧ್ಯತೆಗಳನ್ನು ಅಲ್ಲಗಳೆಯದಷ್ಟು



ಸಹಜವಾಗಿ ಹನುಮಂತನ ಹುಡುಕಾಟವಿರುತ್ತದೆ ಎಂದಾಯ್ತು.

ಹೆಣ್ಣನ್ನು ಭೋಗದ ವಸ್ತುವನ್ನಾಗಿ ಆಗಿನ ಜನ ಕಂಡಿದ್ದರೋ ಇಲ್ಲವೋ ಆದರೆ ವಾಲ್ಮೀಕಿಯ ಪಾತ್ರಗಳು ಅವಳನ್ನು ಹಾಗೆಯೇ ಕಾಣುತ್ತವೆ. "ಆನೆಯ ಸೊಂಡಿಲಿನಂತಹ ತೊಡೆಗಳುಳ್ಳವಳೇ, ನನ್ನನ್ನು ನೋಡಿ ಸ್ತನಗಳನ್ನು ಮತ್ತು ಗರ್ಭವನ್ನು ಮುಚ್ಚಿಕೊಂಡು ಮುದುರಿ ಯಾಕೆ ಕೂರುತ್ತೀಯ? ರಾಮನ ಚಿಂತೆ ಬಿಡು, ನನ್ನನ್ನು ವರಿಸಿ ಸುಖವಾಗಿರು," (ಸುಂದರಕಾಂಡ ಅ.19, ಶ್ಲೋ.2) ಎಂದು ರಾವಣನು ಹೇಳಿದರೆ, ವಾಲ್ಮೀಕಿ ಸೀತೆಯ ದುಃಸ್ಥಿತಿಯನ್ನು ವಿವರಿಸುವಾಗಲೂ, "ಗುಂಡಗೆ, ದೊಡ್ಡದಾಗಿ, ಒಂದನ್ನೊಂದು ತಾಕಲಾಡುತ್ತಿರುವ ಮೊಲೆಗಳನ್ನು ಕಂಪಿಸುತ್ತಾ ಸೀತೆ ಭಯಪಡುತ್ತಿದ್ದಾಳೆ," ಎಂದು ಹೇಳುವುದು ಅವನ ಅಭಿರುಚಿಯೋ ಅಥವಾ ಆಗ ಅಷ್ಟು ಸಹಜವಾಗಿ ಹೆಂಗಸರನ್ನು ಎಲ್ಲಾ ಸಮಯದಲ್ಲೂ ಭೋಗದ ವಸ್ತುವನ್ನಾಗಿಯೇ ನೋಡುತ್ತಿದ್ದರೋ? ಇಲ್ಲಿ ರಾಮಾಯಣದ ಕೃತಿಕಾರ ಗಂಡಸೆಂಬುದು ಸ್ಪಷ್ಟ. ಒಂದು ವೇಳೆ ಸ್ತ್ರೀಯೊಬ್ಬಳು ರಾಮಾಯಣವನ್ನು ಬರೆದಿದ್ದರೆ, ಆ ಸಮಯದಲ್ಲಿ ರಾವಣ ಕಾಮಾತುರವನ್ನು ಚಿತ್ರಿಸುವಾಗ ಅವನ ಅಂಗಾಂಗಗಳನ್ನು ವರ್ಣಿಸುತ್ತಿದ್ದಳೋ ಏನೋ, ಇರಲಿ. ಗೌರೀಶ ಕಾಯ್ಕಿಣಿಯವರು ಇವನ್ನೆಲ್ಲಾ ಪಾತ್ರಗಳ ತಪ್ಪುಗಳೆಂದು ಒಪ್ಪದೇ ಕೃತಿಕಾರನ ತಪ್ಪೆಂದೇ ಗ್ರಹಿಸುತ್ತಾರೆ. ರಾಮನ ಪಾತ್ರವು ಮಾಡಿದ ತಪ್ಪನ್ನೆಲ್ಲಾ 'ವಾಲ್ಮೀಕಿ ತೂಕಡಿಸಿದಾಗ' ಎಂದು ಅವನ ಅಪ್ರಜ್ಞಾಸ್ಥಿತಿಯನ್ನು ದೂರುತ್ತಾರೆ.

ನನಗೆ ರಾಮಾಯಣವೆಂಬ ಮಹಾಕಾವ್ಯವನ್ನು ಬರೆದ ವಾಲ್ಮೀಕಿಯೆಂಬ ಸಂಸ್ಕೃತ ಕವಿಯ ಮೇಲೆಯೇ ಅನುಮಾನ ಬರುತ್ತದೆ. ವಾಲ್ಮೀಕಿಯೆಂಬಾತನು ಸಂಸ್ಕೃತ ಬಲ್ಲ ವಿದ್ವಾಂಸನಂತನೇ ಅಲ್ಲದೇ, ವ್ಯಾಧನಂತೆ ಕಾಡಿನಲ್ಲಿ ಜೀವಿಸುತ್ತಿರುವ ದಕ್ಷಿಣದ ಬುಡಕಟ್ಟಿನವನಾಗಿದ್ದು ಲಾವಣಿಕಾರನೆಂದು ತಿಳಿಯುತ್ತೇನೆ. ಅಶ್ವಮೇಧ ಯಾಗದ ಸಮಯದಲ್ಲಿ ಕುಸಿಲವರು (ಕುಶ-ಲವ) ವಾಲ್ಮೀಕಿಯಿಂದ ಕಲಿತ ಹಾಡನ್ನು ರಾಮನ ಮುಂದೆ ಹೋಗಿ ಹಾಡಿದ್ದರು. ಕುಸಿಲವರೆಂದರೆ ಲಾವಣಿಕಾರರು, ನಟರು ಎಂದು ಹೇಳುತ್ತಾರೆ. ಹೀಗೆ ವಾಲ್ಮೀಕಿಯೆಂಬ ಲಾವಣಿಕಾರರು ತನ್ನದೇ ಭಾಷೆಯಲ್ಲಿ ತಾನು (ಪ್ರಾಯಶಃ) ಸೀತೆಯಿಂದಲೇ ತಿಳಿದ ಕಥೆಯನ್ನು ತನ್ನ ಕಾವ್ಯೋಪಜೀವನವಾದ ಲಾವಣಿಯಲ್ಲಿ ಹಾಡಿದ್ದು, ಅದನ್ನು ಸೀತೆಯ ಮಕ್ಕಳಿಂದಲೇ ಅಭ್ಯಾಸ ಮಾಡಿಸಿದ್ದಿರಬೇಕು. ಮುಂದೆ ಇದರ ರಸಸ್ವಾದನೆ ಮಾಡಿದ ಸಂಸ್ಕೃತ ಸಾಹಿತಿ ಇವನಿಂದ ಗ್ರಹಿಸಿದ ರಾಮಾಯಣವನ್ನು ವಾಲ್ಮೀಕಿ ರಾಮಾಯಣವೆಂದು ಬರೆದಿರಬೇಕು. ಅವನು ಬರೆಯುವಾಗ ತನ್ನ ಅಭಿರುಚಿ ಮತ್ತು ತನ್ನ ಶಿಷ್ಟ ಸಂಸ್ಕಾರಗಳನ್ನೂ ಇದರಲ್ಲಿ ಅಳವಡಿಸಿಕೊಂಡಿದ್ದರೆ ಆಶ್ಚರ್ಯವೇನಿಲ್ಲ. ಇದು ವಾಲ್ಮೀಕಿ ರಾಮಾಯಣವೇ ಹೊರತು ವಾಲ್ಮೀಕಿಯೇ ಬರೆದಿರುವ ರಾಮಾಯಣವಾಗಿದ್ದಿರಲಾರದು ಎಂಬುದು ನನ್ನ ಕಲ್ಪಿತಸತ್ಯ.

ಇದರಿಂದಾಗಿಯೇ ವಾಲ್ಮೀಕಿಯ ರಾಮಾಯಣದಲ್ಲಿ ಸಹಜವಾಗಿ ಉಲ್ಲೇಖಿಸಿರುವಂತಹ ವಿಷಯಗಳೆಲ್ಲಾ ಕಷ್ಟಪಟ್ಟು ಶಿಷ್ಟ ಸಮಾಜದ ರೀತಿನೀತಿಗೆ ಒಪ್ಪುವ ಹಾಗೆ ಅಳವಡಿಸಿ ಬರೆದಿರುವಂತೆ ತೋರುತ್ತದೆ. ಗೌರೀಶ್ ಕಾಯ್ಕಿಣಿಯವರಿಗೆ ತೂಕಡಿಸಿದ ವಾಲ್ಮೀಕಿ ಕಂಡರೆ, ನನಗೆ ಬಾಯ್ಕಟ್ಟಿದ ವಾಲ್ಮೀಕಿ ಕಾಣುತ್ತಾನೆ. ವಾಲ್ಮೀಕಿ ಲಿಪಿಕಾರನಾಗಿ ಕಾಣದೇ ಮೌಖಿಕ ಪರಂಪರೆಯವನಂತೆ ತೋರುತ್ತಾನೆ.

ವಾಲ್ಮೀಕಿಯ ಮೌಖಿಕ ರಾಮಾಯಣದಲ್ಲಿ ಶಬರಿ ಎಂಬ ಬೇಟೆಗಾರರ ಕುಲದ ಹೆಣ್ಣು ತನ್ನ ಬಳಿ ಬಂದ ರಾಜಾರಾಮನಿಗೆ ಆತಿಥ್ಯ ನೀಡಿದ ಮೇಲೆ ಅವಳ ಯಜಮಾನಿಕೆಯನ್ನು ಧಿಕ್ಕರಿಸಿರಬಹುದಾದ ರಾಮನು ಅವಳನ್ನು ಸುಟ್ಟಿದ್ದರೆ, ಲಿಖಿತ ವಾಲ್ಮೀಕಿ ರಾಮಾಯಣದಲ್ಲಿ ರಾಮನಿಗೆ ಭಕ್ತಿಯಿಂದ ಸೇವೆ ಸಲ್ಲಿಸಿ, ತನ್ನ ಜನ್ಮ ಪಾವನವಾಯಿತೆಂದು ಅವಳು ಅಗ್ನಿಗೆ ಬಿದ್ದು ಸಾಯುತ್ತಾಳೆ.


ರಾವಣನ ಬಂಧನದಿಂದ ಮರಳಿ ಬಂದ ಸೀತೆಯನ್ನು ಅಗ್ನಿಪ್ರವೇಶಕ್ಕೆ ಒಳಮಾಡಲು ಲಿಖಿತ ರಾಮಾಯಣದಲ್ಲಿ ಧರ್ಮ ಕಾರಣಗಳನ್ನು ನೀಡುವ ರಾಮ ಮುಂದೊಂದು ದಿನ ಅವಳನ್ನು ಕಾಡಿಗೇ ಅಟ್ಟುವವನು. ನಂತರ ಅಶ್ವಮೇಧ ಯಾಗದ ಸಮಯದಲ್ಲಿ ರಾಮನ ಯಾಗದ ಕುದುರೆಗಳೆಂದು ತಿಳಿದೇ, ತನ್ನ ಕೋಪವನ್ನು (ಸೇಡನ್ನು) ತೀರಿಸಿಕೊಳ್ಳಲು ರಾಮನ ಅಧಿಕಾರಕ್ಕೆ ಎದುರಾಗಿ, ಅಥವಾ ಅದನ್ನು ಭಂಗಿಸಲು ತನ್ನ ಮಕ್ಕಳನ್ನು ನಿಲ್ಲಿಸುವಳು ಸೀತೆ. ಆದರೆ ಮುಂದೆ ಬುಡಕಟ್ಟಿನ ವಾಲ್ಮೀಕಿಯನ್ನು ತಮ್ಮ ರಾಜಾಧಿಕಾರದಿಂದ ಮಣಿಸಿ, ಸೀತೆಯನ್ನು ತಮ್ಮ ವಶಕ್ಕೆ ಪಡೆದುಕೊಳ್ಳಲು ರಾಮನು ಯತ್ನಿಸಿದಾಗ ಭೂಮಿಯ ಕೊರಕಲಿನಲ್ಲಿ ಸೀತೆ ತಾನಾಗಿಯೇ ಬಿದ್ದಳೋ ಅಥವಾ ದೂಡಲ್ಪಟ್ಟಳೋ ತಿಳಿಯದು. ಆದರೆ, ಅವಳು ಹಾಗೆ ಬಿದ್ದು ಮರಣಿಸಿರಬೇಕು. ಅದೇ ಮುಂದಿನ ಲಿಖಿತ ರಾಮಾಯಣದಲ್ಲಿ ಭೂಮಿಯು ಬಾಯ್ಬಿಟ್ಟು ಭೂದೇವಿಯು ಮೇಲೆದ್ದು, ಸೀತೆಯನ್ನು ತನ್ನ ಮಡಿಲಿನಲ್ಲಿ ಕೂರಿಸಿಕೊಂಡು ಹೊರಟು ಹೋದಳು ಎಂದು ಅಲಂಕಾರಿಕವಾಗಿಯೋ, ಸಾಂಕೇತಿಕವಾಗಿಯೋ ಅಥವಾ ತಿರುಚಿಯೋ ಬರೆದಿರಬೇಕು. ಒಟ್ಟಿನಲ್ಲಿ ಕೃಷಿ ಸಮುದಾಯದ ಸೀತೆ ಎಂಬ ಹೆಣ್ಣು ಮಗಳು ಜ್ಞಾನಿ ಜನಕ ಮಹಾರಾಜನ ಮನೆಯಲ್ಲಿ ಬಾಲ್ಯ ಕಳೆದು, ರಾಜಕೀಯಗಳ ಗೊಂದಲದ ಗೂಡಾದ ದಶರಥನ ಮನೆ ಸೇರಿ, ಅಲ್ಲಿಂದ ಬಹಿಷ್ಕೃತರಾಗಿ ಅಡವಿ ಸೇರಿ, ಯಾವುದೋ ಕಾರಣದಿಂದ ಅಪಹರಣಕ್ಕೊಳಗಾಗಿ ಇನ್ನಾರೋ ರಾವಣನ ಸೆರೆಯಲ್ಲಿದ್ದು, ಅಲ್ಲಿಂದ ಬಿಡುಗಡೆಯಾಗಿ ಮತ್ತೆ ವನವಾಸ ಅನುಭವಿಸಿ, ಜನ್ಮವಿಡೀ ಒದ್ದಾಟದ ಬವಣೆ ತಾಳದೇ ಮಣ್ಣಿಗೇ ಮರಳದೇ ಇನ್ನೇನು ಮಾಡಿಯಾಳು?

ರಾವಣನ ಮಗಳು

ಅಸುರನಾದ ರಾವಣನನ್ನು ಬ್ರಾಹ್ಮಣನೆಂದು ಘೋಷಿಸುವ ಪರಂಪರೆಯೊಂದು ಪ್ರಾರಂಭವಾದಾಗ, ಬ್ರಾಹ್ಮಣ ರಾವಣನ ಮರ್ಯಾದೆ ಕಾಪಾಡಲು ಮತ್ತೆ ಹಲವು ಶಿಷ್ಟ ಕಾರಣಗಳನ್ನು ಕೊಟ್ಟು (ಕಾಶ್ಮೀರೀ) ರಾಮಾಯಣದಲ್ಲಿ ರಾವಣನ ಮಗಳಾಗಿ ಸೀತೆಯನ್ನು ಚಿತ್ರಿಸುತ್ತಾರೆ. ರಾವಣನು ದಂಡಯಾತ್ರೆಯೊಂದಕ್ಕೆ ಹೋದಾಗ ಮಂಡೋದರಿಯು ಬೇರಾರನ್ನೋ ಸಮಾಗಮ ಮಾಡಿದರ ಫಲವಾಗಿ ಹುಟ್ಟಿದ ಮಗುವನ್ನು, ಸಮಾಜಕ್ಕೆ ಅಂಜಿ, ಸಂದೂಕದಲ್ಲಿಟ್ಟು ತ್ಯಜಿಸುತ್ತಾಳೆ. ಅದು ಜನಕನಿಗೆ ಸಿಕ್ಕು ಅವನೇ ಅದನ್ನು ಬೆಳೆಸುತ್ತಾನೆ. ರಾವಣನಿಗೆ ಇದು ತಿಳಿಯುತ್ತದೆ. ತನಗೆ ಹುಟ್ಟಿಲ್ಲದ ಮಂಡೋದರಿಯ ಮಗಳಿಗೆ ತಾನು ಪಿತೃತ್ವ ತೋರಿಸುವ ರಾವಣ, ರಾಮನೊಂದಿಗೆ ವಿವಾಹವಾಗಿ ಅದೆಷ್ಟೋ ಕಾಲವಾದರೂ ಮಕ್ಕಳಿಲ್ಲದ ಕಾರಣದಿಂದ ಅವಳಿಗೆ ಚಿಕಿತ್ಸೆಯನ್ನು ಕೊಡುವ ಕಾರಣದಿಂದ ಅವಳನ್ನು ಅಪಹರಿಸಿ ಅಶೋಕವನದಲ್ಲಿ ಇರಿಸುತ್ತಾನೆ. ಚಿಕಿತ್ಸೆ ನೀಡುತ್ತಾನೆ. ಮಂಡೋದರಿಯನ್ನು ಲೋಕಾಪವಾದದಿಂದ ತಪ್ಪಿಸಲು ಈ ವಿಷಯವನ್ನು ಮುಚ್ಚಿಟ್ಟು ತಾನು ಅಪಹರಣಕಾರನಾಗಿ ಖಳನಂತೆ ವರ್ತಿಸುತ್ತಾನೆ. ರಾವಣನನ್ನು ಬ್ರಾಹ್ಮಣನಾಗಿ ಚಿತ್ರಿಸಿದ ಪಂಡಿತರಿಗೆ ಖಳನಾಗಿ ನೋಡಲು ಸಾಧ್ಯವಾಗದ ಕಾರಣ ಈ ನಾಟಕೀಯ ಚಿತ್ರಣ ಕಟ್ಟಿಕೊಡುತ್ತಾರೆ. ರಾಮ, ಸೀತೆ, ಲಕ್ಷ್ಮಣರೆಲ್ಲಾ ಸೋದರ ಸೋದರಿಯರೆಂದು ತಿಳಿಸುವ ರಾಮಾಯಣವೂ ಇದೆ.

ಏನೇ ಆಗಲಿ, ಸೀತೆಗೂ ರಾಮನಿಗೂ ಏನಾಗಬೇಕು ಎಂದು ಕೇಳಿದವನೆ, ಆತನನ್ನು ಮೂರ್ಖನೆಂದು ತಿಳಿಯದೇ ಹಲವು ರಾಮಾಯಣಗಳನ್ನು ಬಲ್ಲ ಪಂಡಿತನೆಂದು ತಿಳಿಯಬಹುದೇನೋ. ಆದರೆ ನಾನು ಕೃಷಿ ಅಥವಾ ನೇಗಿಲಗೆರೆಯ ಅಧಿದೇವತೆ ಸೀತೆಯ ವಿಷಯ ಪ್ರಸ್ತಾಪ ಮಾಡಿದ್ದು ರಾಮನ ಹೆಂಡತಿ ಸೀತೆಯ ಕಥೆ ಹೇಳಲೇನೂ ಅಲ್ಲ, ಆದರೂ ಸೀತೆ ಎಂದರೆ ಅವಳೇ ಮೊದಲು ಬರುವುದು. ಆದರೆ, ಕೃಷಿ ಪ್ರಧಾನವಾದ ಸೀತೆ, ಗೌರಿ ಮತ್ತು ಇತರ ದೇವಿಯರ ವಿಷಯಗಳು ಮತ್ತು ಆ ಸಂಸ್ಕೃತಿಯ ಬಗ್ಗೆ ಮುಂದಿನ ಕಂತುಗಳಲ್ಲಿ ತಿಳಿಯುತ್ತೇವೆ. ■

ನಾ.ಡಿಸೋಜಾ: ಎಡ-ಬಲಗಳ ಮೀರಿ ಹರಿವ ಶರಾವತಿ!



ಶರಾವತಿಗೆ ಜೀವ ಕೊಟ್ಟ ಮಲೆನಾಡು ಭೂಮಂಡಲಕ್ಕೆ ಯಾವ ಸಂಬಂಧವೂ ಇಲ್ಲದ ಸಣ್ಣದೊಂದು ಬಿಂದುವೇನಲ್ಲ. ಅದನ್ನು ಸೇರಿಸಿಕೊಂಡೇ ಹರಿದುಹೋದ ಕಳೆದ ಮುಕ್ಕಾಲು ಶತಮಾನ ಕೂಡಾ ಕಾಲದ ಯಾನದಲ್ಲಿ ಸಣ್ಣದೊಂದು ಅಧ್ಯಾಯ ಮಾತ್ರವಲ್ಲ, ಮಲೆನಾಡು ಮತ್ತು ಮುಕ್ಕಾಲು ಶತಮಾನಗಳು ಕೂಡಿದ ಚರಿತ್ರೆಯ ಪುಟಗಳನ್ನು ಈ ಹೊತ್ತು ತಿರುವಿಹಾಕಿದರೆ ಬೆಳಕಿಗಿಂತ ಬೆಂಕಿಯೇ ರಾಚುತ್ತದೆ. ಜೀವಗಳು ತಲ್ಲಣಿಸಿದ, ಸಂಸ್ಕೃತಿ-ಊರು-ಕೇರಿ-ಮನೆಗಳು ಮುರಿದುಹೋದ, ಮನುಷ್ಯನು ಜತನದಿಂದ ಕಟ್ಟಿಕೊಂಡಿದ್ದ ಬದುಕು ಬುಡಮೇಲಾದ ರುದ್ರ ಚಿತ್ರಗಳು ಒಂದೊಂದಾಗಿಯೇ ಬಿಚ್ಚಿಕೊಳ್ಳುತ್ತವೆ.

ಆ ಮುಕ್ಕಾಲು ಶತಮಾನದಿಂದ ತುಂಬ ಬದುಕಿದ, ತಾನು ಕಂಡ ರುದ್ರ ಚಿತ್ರಗಳಿಗೆಲ್ಲಾ ಕಟ್ಟು ಹಾಕಿಸಿದಂತೆ ಬರೆದ ನಾ. ಡಿಸೋಜಾ ಹೊರನೋಟಕ್ಕೆ ನಾವಂದುಕೊಂಡಂತೆ ವ್ಯಗ್ರರಾಗಿ, ಕುಸಿದ ವ್ಯವಸ್ಥೆಯ ವಿರುದ್ಧ ಕುದಿಯುವ ಹಾಗೇನೂ ಕಾಣುವುದಿಲ್ಲ. ಸುತ್ತಲೂ ಅರಾಜಕತೆಯ ಹಾಹಾಕಾರವೇ ತುಂಬಿರುವ ಈ ಹೊತ್ತಿನಲ್ಲಿ ಸದಾ ಮಂದಹಾಸದ ಅವರು ಒಂದು ಕ್ಷಣಕ್ಕೆ ನಮ್ಮೆಲ್ಲರ ಆಲೋಚನೆ, ಕ್ರಿಯೆಗಳನ್ನು ಅಣಕಿಸುವಂತೆ ಕಾಣುತ್ತಾರೆ. ವ್ಯಗ್ರತೆ, ಪ್ರತಿರೋಧಗಳನ್ನು ಮರೆತರೆ ನಾಶವೇ ಆಗಿ ಬಿಡುತ್ತೇವೇನೋ ಎಂದು ಭಾವಿಸಿದವರಂತೆ ಓಡಾಡುವ ನಮಗೆಲ್ಲಾ ನಾವೇ ಅಸಹಜವಾಗಿ ಕಾಣುವಂತೆ ಡಿಸೋಜಾ ಇದ್ದಾರೆ.

ಮಲೆನಾಡಿನಂತಹ ಜೀವಸೂಕ್ಷ್ಮ ಲೋಕದೊಳಗೆ ಅದನ್ನು ನಾಶ ಮಾಡಲೆಂಬಂತೆ ಹಲವು ವಿದ್ಯಮಾನಗಳು ನಡೆಯುತ್ತವೆ. ಡ್ಯಾಂ ನಿರ್ಮಾಣ, ಆ ಡ್ಯಾಂ ನಿರ್ಮಾಣದಿಂದಾಗಿ ನದಿಯ ಹಿನ್ನೀರಿನಲ್ಲಿ ಮುಳುಗಡೆಯಾಗುವ ನೂರಾರು ಚದರ ಮೈಲಿಗಳಲ್ಲಿ ಹರವಿಕೊಂಡ ಬದುಕು, ಆ ಬದುಕು ಕಟ್ಟಿಕೊಂಡವರು ಹುಟ್ಟು ಹಾಕಿದ ಮುಗ್ಧತೆ, ಮಾನವೀಯತೆ, ನಂಬಿಕೆ, ನಂಟುಗಳು, ಅದೇ ಮಡಿಲಲ್ಲಿ ಉಸಿರಾಡುವ ನಂಜು, ನೀಚತನ, ಕ್ರೌರ್ಯ, ಶೋಷಣೆ, ದ್ರೋಹ, ರೋಗ-ರುಜಿನ, ಅದರ ಮಗ್ಗುಲಲ್ಲಿ ಸಿಡಿದ ಕಾಗೋಡು ಚಳವಳಿ. ಇಂತಹ ಹತ್ತಾರು ತಲ್ಲಣ, ತಳಮಳಗಳನ್ನು ಒಂದೊಂದಾಗೆ ಹೊರಗೆ ತಂದು, ಬರವಣಿಗೆಯ ಕನ್ನಡಿಯಲ್ಲಿಟ್ಟು. ಮನುಷ್ಯನ ವಿಕಾರ ಮತ್ತು ವಿರಾಟ್ ರೂಪವನ್ನು ತೋರಿಸುವ ಡಿಸೋಜಾ ಸೃಜನಶೀಲತೆ ಅವರಷ್ಟೇ ವಿಭಿನ್ನ ಮತ್ತು ವಿಶಿಷ್ಟ ಕೂಡಾ.

ಶರಾವತಿ ಕಣಿವೆಯ ಸೌಂದರ್ಯ ಮತ್ತು ಭೀಕರತೆಗಳನ್ನು ಬಿಡಿಸುವುದೇ ಬರಹವೆಂಬಂತೆ ಬರೆಯುವ ಡಿಸೋಜಾ ಈಗ ಎಂಭತ್ತನೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ನಿಯೋಜಿತರಾಗಿದ್ದಾರೆ. ಮಳೆಗಾಲದಲ್ಲಿ ಅಬ್ಬರಿಸಿ ಆರ್ಭಟಿಸಿ ಹರಿಯುವ ಶರಾವತಿ, ಬೇಸಿಗೆಯಲ್ಲಿ ತಾನು ಇಲ್ಲವೇ ಇಲ್ಲ ಎನ್ನುವಷ್ಟು ಶಾಂತವಾಗಿ ಹರಿದು ಸಮುದ್ರ ಸೇರುತ್ತಾಳೆ. ಅವಳ ಆರ್ಭಟವನ್ನು, ರುದ್ರಸ್ವರೂಪವನ್ನು ತಮ್ಮೆಲ್ಲ ಬರಹದ ತುಂಬಾ ಚಿತ್ರಿಸುವ ಡಿಸೋಜಾರದು ಹೊರನೋಟದಲ್ಲಿ ಶಾಂತ ಸ್ವಭಾವ. ಅವರಿಗೆ ಸಮ್ಮೇಳನಾಧ್ಯಕ್ಷರ ಗೌರವ ಕೂಡಾ ಅಷ್ಟೇ ತಣ್ಣಗೆ, ಯಾವುದೇ ವಿರೋಧ-ವಿವಾದಗಳಿಲ್ಲದೆ ಬಂದಿರುವುದು ನಿಜಕ್ಕೂ ಖುಷಿಯ ಸಂಗತಿ.

ಪರಿಸರದ ಜೀವಜಾಲದೊಳಗೆ ನಡೆಯುವ ಮಹಾಸ್ಫೋಟವನ್ನು, ಸಣ್ಣ ಕದಲಿಕೆಯನ್ನೂ ಸಮನಾಗಿ ಕಿವಿಗೊಟ್ಟು ಕೇಳಿಸಿಕೊಂಡವರಂತೆ ಬರೆಯುವ ಸೂಕ್ಷ್ಮ ಕುಸುರಿಯ ಕಾದಂಬರಿಕಾರ ಡಿಸೋಜಾರ ಬರಹದ ವ್ಯಾಪಕತೆ ಕೂಡಾ ಬಹಳ ವಿಶಾಲವಾದುದು. 'ಮಾನವ', 'ಶಿವನ ಡಂಗುರ', 'ಜೀವಕಳೆ', 'ಬಂಜೆ ಬೆಂಕಿ', 'ವಿಷವರ್ತುಲ', 'ಕಿರಗೋಡಿನ ರೈತಮಕ್ಕಳು', 'ಮಂಜಿನ ಕಾನು', 'ಒಡ್ಡು', 'ಕುಂಜಾಲು ಕಣಿವೆಯ ಕೆಂಪು ಹೂವು', 'ನೆಲೆ', 'ಜಲಪಾತದ ಸುತ್ತ', 'ದುರ್ಗವೆಂಬ ವ್ಯೂಹ', 'ಕೊಳ' ಹೀಗೆ ಗಂಭೀರ ಕಥಾವಸ್ತುಗಳ ಮೂಲಕ ಓದುಗರ ಆಲೋಚನೆಯನ್ನು ಕೆಣಕುವ, ಕಾಡುವ, ವಿಸ್ತರಿಸುವ ಡಿಸೋಜಾರ ಕಾದಂಬರಿಗಳು ಮೂರು ಡಜನ್‌ಗಿಂತಲೂ ಹೆಚ್ಚಿವೆ. ಶರಾವತಿಯ ಪ್ರವಾಹದಂತೆ ಅವರ ಕಾದಂಬರಿಗಳೊಳಗಿನ ಜೀವಗಳು, ಬದುಕುಗಳೂ ಏರಿಳಿಯುತ್ತವೆ.

ಡಿಸೋಜಾರಿಗೆ ಹೆಸರು ತಂದುಕೊಟ್ಟ 'ಮುಳುಗಡೆ' ಕಾದಂಬರಿ ಅವರ ಒಟ್ಟು ಬರಹದ ರೂಪಕದಂತೆ, ಧ್ವನಿಯಂತೆ ಕಾಣುತ್ತದೆ. ಅಷ್ಟೇ ಏಕೆ, ನಮ್ಮೆಲ್ಲರ ಈ ಹೊತ್ತಿನ ವಾಸ್ತವವಾಗಿ ಕೂಡಾ 'ಮುಳುಗಡೆ' ಭಾಸವಾಗುತ್ತದೆ. ಶರಾವತಿಯ ಡ್ಯಾಂ ನಿರ್ಮಾಣದ ನಂತರ ಹಿನ್ನೀರಿನಲ್ಲಿ ಮುಳುಗುವ ಹಳ್ಳಿಗಳಂತೆಯೇ, ಆಧುನಿಕತೆ ಮತ್ತು ಜಾಗತೀಕರಣಗಳ ರಭಸದ ಪ್ರವಾಹದಲ್ಲಿ ಮುಳುಗುತ್ತಿರುವ ಮನುಷ್ಯನ ಬದುಕನ್ನು ಹಿಡಿದು ತೋರುವುದು ಡಿಸೋಜಾರ ಕಲೆಗಾರಿಕೆ. ಹೊಸಜಗತ್ತಿನ ಪಾಲಿಗೆ ನಿಗೂಢವಾಗಿ, ರಮ್ಯ ಮತ್ತು ರೋಚಕವಾಗಿ ಕಂಡುಬರುವ ಮಲೆನಾಡನ್ನು, ಅದರೆಲ್ಲ ಮಗ್ಗುಲುಗಳನ್ನು ಅಂತಃಸ್ಸತ್ವವನ್ನು ಚಿತ್ರಿಸುವ ಈ ಲೇಖಕರ ಕಥನಗಳು ಮತ್ಯಾರೂ ಬರೆಯಲಾಗದಷ್ಟು ಸಂಕೀರ್ಣವಾಗಿಯೂ, ಸುಂದರವಾಗಿಯೂ ಕಾಣುತ್ತವೆ. ಒಟ್ಟರ್ಥದಲ್ಲಿ ಹೇಳುವುದಾದರೆ ಡಿಸೋಜಾ ಒಬ್ಬ ಕಾದಂಬರಿಕಾರನಾಗಿ, ಮಕ್ಕಳ ಸಾಹಿತಿಯಾಗಿ, ನಾಟಕರಾಗಿ, ಇಡೀ ಮಲೆನಾಡಿನ ಸಾಕ್ಷೀಪ್ರಜ್ಞೆಯಂತೆ ಇದ್ದಾರೆ. ಬಹುಶಃ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅವರ ಆಯ್ಕೆ ಈ ಸಾಕ್ಷಿಪ್ರಜ್ಞೆಗೆ ದಕ್ಕಿದ ಗೌರವ ಎಂದು ನನ್ನ ಭಾವನೆ. ಈ ಆಯ್ಕೆಯ ಸುದ್ದಿ ತಿಳಿದಾಗ ಪ್ರತಿಕ್ರಿಯಿಸಿದ ಡಿಸೋಜಾ "ನನಗಿಂತ, ನನ್ನ ಮನೆಯವರಿಗಿಂತ, ನನ್ನೂರಿನ ಜನರೇ ನನಗೆ ಬಂದಿರುವ ಅಧ್ಯಕ್ಷಸ್ಥಾನ ಕಂಡು ಖುಷಿಪಡುತ್ತಿದ್ದಾರೆ. ಅವರ ಪ್ರೀತಿಗೆ ನಾನು ಋಣಿ" ಅಂದರು. ಇದು ಅವರ ಸರಳತೆ ಮತ್ತು ಮುಗ್ಧತೆ, ಉಳಿದ ಲೇಖಕರಿಗೆ ಮಾದರಿ.

ಇವರ ಕಾದಂಬರಿ 'ದ್ವೀಪ' ಚಲನಚಿತ್ರವಾಗಿ ಕೂಡಾ ಸಿನೆಮಾ ನೋಡುಗರನ್ನು ತಲುಪಿದೆ. ದ್ವೀಪದ ಲೋಕ ಮಲೆನಾಡಿನ ಮಧ್ಯದ ಹೊಸಮನೆಹಳ್ಳಿ. ಇದು ಒಂದು ಬದಿಗೆ ಗುಡ್ಡವಿದ್ದರೆ ಮತ್ತೊಂದು ಬದಿಗೆ ತುಂಬಿ ಹರಿಯುವ ನದಿ ಇರುವ ಊರು. ಹಳ್ಳಿ ಎಂದರೆ ಹಲವಾರು ಮನೆಗಳಲ್ಲ, ಐದೇ ಮನೆಗಳು. ಮೂರು ಜಮೀನ್ದಾರರ ಮನೆ, ಮನೆಗೊಂದು ಅಡಿಕೆ ತೋಟ, ಮೂರು ಮನೆ-ತೋಟಗಳಲ್ಲಿ ಜೀವ ಸವೆಸುವ ಎರಡು ಜೀತಗಾರರ ಕುಟುಂಬಗಳು. ಡ್ಯಾಮಿನ ಹಿನ್ನೀರಿನಲ್ಲಿ ಮುಳುಗಡೆಯಾಗುವ ತಮ್ಮ ಬದುಕಿಗೂ, ತೋಟಗಳಿಗೂ ಪರಿಹಾರದ ಬೆಲೆ ಪಡೆದು ಬಚಾವಾಗುವ ಇಬ್ಬರು ಭೂಮಾಲೀಕರು ಒಂದೆಡೆ ಇದ್ದರೆ, ಬದುಕು, ಬೆಲೆ ಎರಡೂ ಇಲ್ಲದೆ ಅತಂತ್ರರಾಗುವ ಜೀತಗಾರರ ಜೊತೆ ಜೊತಗೇ ಮುಳುಗಿಹೋಗುವ ಮೇಲ್ಜಾತಿಯ ಗಣಪಯ್ಯನ ಬಡಕುಟುಂಬವೊಂದರ ದಾರುಣ ಚಿತ್ರ 'ದ್ವೀಪ'.

ಮಲೆನಾಡಿನ ಮಧ್ಯಕ್ಕೆ ಯೋಜನೆಗಳ ಹೆಸರಿನಲ್ಲಿ ಪ್ರವೇಶಿಸುವ ಸರ್ಕಾರ, ಅಧಿಕಾರಸ್ಥರು ಅಲ್ಲಿ ತಾವು ಮಾಡುವ ಘೋರ ಅಭಿವೃದ್ಧಿಯ (ಅತ್ಯಾಚಾರ?) ಮುನ್ನ ಓದಲೇಬೇಕಾದ ಮಾನವೀಯತೆಯ ಸೂತ್ರಗಳಂತೆ ಈ ಕಾದಂಬರಿಗಳು ಕಾಣುತ್ತವೆ. ಡಿಸೋಜಾ ಪಡೆದ ಹತ್ತು ಹಲವು ಪ್ರಶಸ್ತಿಗಳ ನಡುವೆ ಅತ್ಯಂತ ಮಹತ್ವದ್ದೆಂದರೆ, ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲಸಾಹಿತ್ಯ ಪುರಸ್ಕಾರ ಪಡೆದ 'ಮುಳುಗಡೆಯ ಊರಿಗೆ ಬಂದವರು'. ಈ ಕೃತಿಯೊಳಗಿನ ಪಾತ್ರಗಳಾದ ಶ್ರೀಧರ, ರಾಜೀವ, ಸುದರ್ಶನ, ಕೇಶವ, ಲಿಂಗರಾಜು ಎಂಬ ಬೆಂಗಳೂರು ಪೇಟೆಯ ಪುಟ್ಟ ಹುಡುಗರು ಮಲೆನಾಡಿನ ಮಧ್ಯದ ಹಳ್ಳಿಗೆ ಹೊರಟ ಯಾತ್ರೆ, ಅವರು ಅನುಭವಿಸಿದ ರೋಮಾಂಚನ, ಬೆರಗು, ಇರುವ ಈ ಪುಸ್ತಕ ಖಂಡಿತಾ ಈ ಹೊತ್ತಿನ ಮಕ್ಕಳ ಪಾಲಿಗೆ ಅಗತ್ಯ ಪಠ್ಯವಾಗಬೇಕು. ನಮ್ಮ ಶಾಲೆಗಳಿಂದಾಗಲಿ, ಅಪ್ಪ ಅಮ್ಮಂದಿರೊಂದಿಗಾಗಲಿ ಪ್ರವಾಸ ಹೋಗುವ ಮಕ್ಕಳ ಪಾಲಿಗೆ ದೇವಸ್ಥಾನಗಳಂತಹ ನಿರ್ಜೀವ ರಚನೆಗಳ ಸುತ್ತ ಪ್ರದಕ್ಷಿಣೆಯನ್ನು ಹಾಕುವುದು ಬಿಟ್ಟರೆ ಬೇರೇನು ಇಲ್ಲ, ಅಂತಹ ಎಲ್ಲಾ ಮಕ್ಕಳ ಪಾಲಿಗೆ ಈ ಕೃತಿಯ ಐದು ಹುಡುಗರು ಮಾದರಿಯಾಗಬಲ್ಲರು. ಅವರು ನೋಡುವ ಕಾಡಂಚಿನ ನದಿ, ಹೊಳೆ, ಮೀನು, ಮೊಸಳೆ, ಪಕ್ಷಿಗಳ ಕಲರವ, ಅವರೊಂದಿಗೆ ಜೀವಂತ ಗೊಂಬೆಗಳಂತೆ ಮಾತಾಡುವ ಹಳ್ಳಿಯ ಆಳುಗಳಾದ ಕಣ್ಣಪ್ಪ ಸಿದ್ದಪ್ಪ ರಾಜಪ್ಪ ಆ ಹುಡುಗರು ತಿನ್ನುವ ಹಲಸಿನ ಹಣ್ಣು, ಮಾವಿನ ಗೊಜ್ಜಿನ ರುಚಿ, ಬೆಳದಿಂಗಳು ಯಾವ ಮಕ್ಕಳಿಗೆ ಬೇಡ ಹೇಳಿ? ಕೊನೆಗೆ ದುರವಸ್ಥೆಯಲ್ಲಿರುವ ಹಳ್ಳಿಯ ಸರ್ಕಾರಿ ಶಾಲೆಯನ್ನು ಕಂಡು ಪ್ರತಿಭಟಿಸುವ ಇದೇ ಮಕ್ಕಳಿಂದಾಗಿ, ಅಧಿಕಾರಿಗಳು ಶಾಲೆಯನ್ನು ಸುಧಾರಿಸಲು ಮುಂದಾಗುವುದು ಮಕ್ಕಳ ಸಾಮರ್ಥ್ಯದ ಸಾಧ್ಯತೆಗೆ ಸಾಕ್ಷಿ.

ವಿಭಿನ್ನ ಆಶಯದ ಈ ಪುಸ್ತಕದ ಉದ್ದಕ್ಕೂ ಐದು ಮಕ್ಕಳಿಗೆ ಜೊತೆಯಾಗಿರುವ ಕಾಡು, ಹಳ್ಳಿ, ಪಕ್ಷಿ, ಕೀಟ, ಕೆಸರು, ಹೂವು, ಹಣ್ಣು, ಮರ, ಗಿಡ, ನದಿ ತೊರೆಗಳು ಕೊಡುವ ರೋಮಾಂಚನ, ಆನಂದ, ಆಟ ಎಲ್ಲ 'ದೊಡ್ಡವರಿಗೆ' ಪಾಠವಾಗಬಲ್ಲದು.

ಕುವೆಂಪು, ತೇಜಸ್ವಿ, ಕಾರಂತರ ನಂತರ ಬಹುಶಃ ಅಗಾಧವಾದ ನಿಸರ್ಗ, ಅದರೊಂದಿಗೆ ಹೆಣೆದುಕೊಂಡಿರುವ ಮನುಷ್ಯನ ಬದುಕು ಮತ್ತು ವಿನಾಶಗಳನ್ನು ಧ್ಯಾನಿಸಿ ಬರೆದ ಲೇಖಕ ಡಿಸೋಜ. ಶರಾವತಿ ಕಣಿವೆಯೆಂಬ ಬೃಹತ್ ಕ್ಯಾನ್ವಾಸಿನಲ್ಲಿ ತನ್ನೆಲ್ಲಾ ವಿಸ್ಮಯಗಳನ್ನು ಚಿತ್ರವಾಗಿಸಿದ ಚಿತ್ರಕಾರ ಡಿಸೋಜಾರ ಪಾಲಿಗೆ ಪರಿಸರ ಅಪಾರ ಸಾಧ್ಯತೆಗಳನ್ನೂ, ಸಂಕಟಗಳನ್ನೂ ಒಳಗೊಂಡ ಜೀವಜಾಲ. ಆ ಪರಿಸರದ ಮೇಲೆ ನಡೆಯುವ ಸಣ್ಣದೊಂದು ಆಘಾತ ಕೂಡ ಮನುಷ್ಯನನ್ನು ಮಹಾಸಂಕಟಕ್ಕೆ ಈಡು ಮಾಡಬಲ್ಲದು ಎನ್ನುವ ಎಚ್ಚರ ಇವರ ಹಲವು ಕೃತಿಗಳ ದನಿ. ಹಾಗಾಗಿಯೆ ಡಿಸೋಜಾ ಮಲೆನಾಡಿನ ಮೂಲೆಯಿಂದ ಎದ್ದು ಬಂದ ನಿಜವಾದ ಅರ್ಥದ ಅಕ್ಷರದ ಬೆಳೆಗಾರ ಅನ್ನಿಸೋದು.

ಆಧುನಿಕತೆಯ ಸೋಂಕು ತಾಗದೇ ಇದ್ದ ಮಲೆನಾಡಿನ ಸಾಂಸ್ಕೃತಿಕತೆಯೊಳಗೆ ಘಟಿಸುವ ವಿಪ್ಲವಗಳು, ನಿಸರ್ಗದ ಮೇಲಿನ ಆಕ್ರಮಣಗಳು, ಬೃಹತ್ ಪ್ರಮಾಣದ ಸಾಮಾಜಿಕ ತಲ್ಲಣಗಳು, ಸದ್ದೇ ಇಲ್ಲದೇ ನಡೆಯುವ ತಳಮಳಗಳು, ಧಾರ್ಮಿಕ ಡಾಂಭಿಕತೆ, ಹುಸಿಭ್ರಮೆಗಳ ಭಿತ್ತಿ ಲಾಭದ ಬೆಳೆ ಬೆಳೆಯುವ ಆಧುನಿಕ ಧರ್ಮಕೋರರು ಇವರೆಲ್ಲದರ ನುಡಿಚಿತ್ರಗಳೇ ಡಿಸೋಜಾರ ಕಾದಂಬರಿಗಳಾಗಿ, ಕಥೆಗಳಾಗಿ, ನಾಟಕಗಳಾಗಿ ಮಕ್ಕಳ ಪುಸ್ತಕಗಳಾಗಿ ಮೈದಾಳಿವೆ.

ಅಧಿಕಾರವನ್ನು ಅನುಭವಿಸಿದ ಮೇಲೆಯೇ ಖಚಿತವಾಗಿ ಅದರ ಅಹಂಕಾರ ಮತ್ತು ನಿರರ್ಥಕತೆಗಳು ಗೊತ್ತಾಗುತ್ತದೆ ಎಲ್ಲರ ವಿವೇಕ. ಆದರೆ ಅಧಿಕಾರದ ಗದ್ದುಗೆಗಳ ಬಳಿ ಸುಳಿಯದೆಯೂ ಸಹ ಅದರ ಅಹಂಕಾರ ಮತ್ತು ನಿರರ್ಥಕತೆಯನ್ನು ಕಂಡುಕೊಂಡು ಅದನ್ನು ಈ ಹೊತ್ತಿನ ಎಚ್ಚರವಾಗಿ ರೂಪಿಸಿದವರು ಲಂಕೇಶ್, ತೇಜಸ್ವಿ, ದೇವನೂರ ಮಹಾದೇವ, ರಾಮದಾಸ್ ಮುಂತಾದ ಕೆಲವೇ ಕೆಲವರು. ಅವರ ಈ ಅರಿವನ್ನು ತಾನೂ ಅರ್ಥಮಾಡಿಕೊಂಡಂತೆ ಅಧಿಕಾರದ ಲಾಭ, ಲಾಭಗಳಿಂದ ಸದಾ ದೂರವೇ ಇರುವ ಡಿಸೋಜಾರದು ನಿಜದ ಸಾತ್ವಿಕ ನಡಿಗೆ.

ವರ್ತಮಾನದಲ್ಲಿ ಕಾಡುತ್ತಿರುವ, ದಿಕ್ಕು ತಪ್ಪಿಸುತ್ತಿರುವ ರಾಜಕಾರಣ, ಸಾಂಸ್ಕೃತಿಕತೆಯ ಮುಸುಕಿನಲ್ಲಿ ಅಡಗಿರುವ ಜೀವ ವಿರೋಧಿ ಚಿಂತನೆಗಳು, ಬಿಡಿಸಲಾಗದಷ್ಟು ಕಗ್ಗಂಟಾಗಿರುವ ಸಾಮಾಜಿಕ ಸಮಸ್ಯೆಗಳು-ಇವೆಲ್ಲವನ್ನು ಸ್ಪಷ್ಟವಾಗಿ ವಿಶ್ಲೇಷಿಸಿ, ಸಾಹಿತ್ಯಿಕ ಜವಾಬ್ದಾರಿಯಿಂದ ಸಕಲ ಸಮುದಾಯಗಳನ್ನು ಎಚ್ಚರಿಸಲು ಹೆಣಗುತ್ತಿರುವ ಕನ್ನಡ ಬರಹಗಾರರಲ್ಲಿ ಡಿಸೋಜಾ ಕೂಡಾ ಒಬ್ಬರು.

ಬರಿದಾಗುತ್ತಿರುವ ಅಂತರ್ಜಲದ ಸಮಸ್ಯೆಗೆ ನದಿಗಳ ಹರಿವಿನ ದಿಕ್ಕನ್ನೇ ತಿರುಗಿಸುವ ಆತ್ಮಹತ್ಯಾತ್ಮಕ ಆಲೋಚನೆಗಳನ್ನು ಹೊಣೆಗೇಡಿ ರಾಜಕಾರಣ ರೂಪಿಸುತ್ತಿದೆ. ಅಂತ ದೊಂದು ಚರ್ಚೆಗೆ ಪ್ರತಿಕ್ರಿಯೆ ಎಂಬಂತೆ ಬರೆದ ಅಂಕಣವೊಂದರಲ್ಲಿ ಡಿಸೋಜಾ ಹೀಗೆ ಹೇಳುತ್ತಾರೆ: "ಒಂದು ನದಿಯ ನೀರು ವ್ಯರ್ಥವಾಗಿ ಸಮುದ್ರ ಸೇರುತ್ತದೆ ಅನ್ನುವುದೇ ಅಸಹಜವಾದ ನಂಬಿಕೆ. ನಿಸರ್ಗದಲ್ಲಿ ಇರುವುದೆಲ್ಲ ತನ್ನ ಭೋಗಕ್ಕಾಗಿ ಎಂದು ಯಾರು ತಿಳಿಯುತ್ತಾರೋ ಅದು ಅವರ ಭ್ರಮೆ. ಲಕ್ಷಾಂತರ ವರ್ಷಗಳಿಂದ ನೆಲದ ಮೇಲೆ ಹರಿಯುವ, ಸಮುದ್ರಕ್ಕೆ ನೀರನ್ನು ಕೊಂಡೊಯ್ಯುವ ನದಿಗಳು ತಮ್ಮ ಪಾತ್ರದ ಉದ್ದಕ್ಕೂ ಮಾಡುವ ಸೇವೆ, ಹರಿಯುವಲ್ಲೆಲ್ಲ ದಂಡೆಯ ಜನತೆಗೆ ನೀರುಣಿಸುವ ಪರಿ, ಸಮುದ್ರಕ್ಕೆ ಮಣ್ಣನ್ನು, ಮರದ ಬೊಡ್ಡೆಗಳನ್ನು, ಕಸಕಡ್ಡಿ ಎಲೆಗಳನ್ನು ಹೊತ್ತು ಒಯ್ದು ಅಲ್ಲಿಯ ಮೀನುಗಳಿಗೆ ಆಹಾರವನ್ನು ಒದಗಿಸುವ ರೀತಿ ನೋಡಿದಾಗ ಈ ವ್ಯರ್ಥ ಅನ್ನುವ ಶಬ್ದ ಎಷ್ಟೊಂದು ಬೇಜವಾಬ್ದಾರಿಯಿಂದ ಕೂಡಿದೆ ಅನಿಸದಿರದು." ಈ ಒಳನೋಟವಿರುವ ಯಾವ ವ್ಯಕ್ತಿ ಕೂಡಾ ನೀರಿನ ಸಮಸ್ಯೆಗೆ ನದಿಗಳನ್ನೇ ತಿರುಗಿಸುವ ಆಲೋಚನೆ ಮಾಡಲಾರ.

ಅಪಾರ ಮನುಷ್ಯ ಪ್ರೀತಿಯ, ಮಾನವೀಯತೆಯ ಕಾಳಜಿ ಇರುವ ಡಿಸೋಜಾ ಸದಾ ಹೋರಾಟಗಳ, ಚಳವಳಿಗಳ ಗೆಳೆಯ. ಹೋರಾಟಗಾರರ ಬೆನ್ನು ತಟ್ಟಿ ಹುರಿದುಂಬಿಸುವ ಡಿಸೋಜಾ, ಒಮ್ಮೊಮ್ಮೆ ಸ್ನೇಹಿತರ ಒತ್ತಾಯಕ್ಕೆ ಕಟ್ಟುಬಿದ್ದವರಂತೆ ಬಲಪಂಥೀಯ ವೇದಿಕೆಗಳಲ್ಲಿ ಕಾಣಿಸಿಕೊಂಡು ನಮ್ಮನ್ನೆಲ್ಲ ಗಲಿಬಿಲಿಗೊಳಿಸುವ ಮುಗ್ಧ. ಇರಲಿ ಸದಾ ಹರಿಯುವ ಶರಾವತಿಗೆ ಎಡದಂಡೆ- ಬಲದಂಡೆಗಳನ್ನು ಮೀರಿ ಸಮುದ್ರ ಸೇರುವ ತವಕ, ಓಟ ಮಾತ್ರ ಗೊತ್ತು.

ಡಿಸೋಜಾ ಮಲೆನಾಡಿನ ಮೂಲೆಯೊಂದರಲ್ಲಿ ಕೂತು ಅಲ್ಲಿಯ ಗಿಡ-ಮರ, ಮನುಷ್ಯರಂತೆ ನೆಲದಾಳಕ್ಕೆ ಬೇರು ಬಿಟ್ಟು ಬದುಕುತ್ತಿದ್ದಾರೆ, ಬರೆಯುವ ಧ್ಯಾನದಲ್ಲಿ ಮಗ್ನರಾಗಿ ಅನಂತವಾದ ವಿಶ್ವದ ಜೊತೆ ಸಂವಾದಿಸುತ್ತಾರೆ. ಅದರ ಮೂಲಕ ಪಡೆದ ನೆಲಮೂಲದ ಅನುಭವವನ್ನು, ಸಂವೇದನೆಯನ್ನು ಇಡೀ ಸಮಕಾಲೀನ ಜಗತ್ತಿಗೆ ಹಂಚುತ್ತಿದ್ದಾರೆ. ಕನ್ನಡದ ಅನನ್ಯ ಸಂಸ್ಕೃತಿ ಚಿಂತಕ ರಾಜೇಂದ್ರ ಚೆನ್ನಿಯವರ ಮಾತನ್ನು ಮುಂದುವರೆಸಿ ಹೇಳುವುದಾದರೆ ಕುವೆಂಪುರಂತೆ ನಾರ್ಬರ್ಟ್ ಡಿಸೋಜಾ ಕೂಡಾ ಒಬ್ಬ rooted cosmopolitan ಬರಹಗಾರ.

■ ಬಿ.ಎಲ್.ರಾಜು

ಹೊಗಳಿಕೆ ತೆಗಳಿಕೆ

ಮೌಢ್ಯ ಮತ್ತು 'ಅಜ್ಞಾನವೇ ವರ' ಎನಿಸಿಕೊಳ್ಳುವ ಪರಿ

ಮನುಷ್ಯನಿಗೆ ಫ್ಯಾಂಟಸಿ ಜಗತ್ತು ಮತ್ತು ಅತಿಮಾನುಷ ಶಕ್ತಿ ಇಂಥವುಗಳ ಮೇಲೆ ಅದೇನೋ ಒಲವು. ವಿಶ್ವೇಶ್ವರಯ್ಯನವರ ಇನ್ನಿತರ ಸಾಧನೆಗಳಿಗಿಂತ ಅವರೇನೋ ಲಂಡನ್‌ನಲ್ಲಿ ಥೇಮ್ಸ್ ನದಿ ಸೇತುವೆ ಬಿರುಕು ಬಿಟ್ಟದ್ದನ್ನ ದಾಟುವ ಮೊದಲೇ ಊಹಿಸಿದ ಕಥೆಯಲ್ಲೇ ನಮಗೆ ಆಸಕ್ತಿ ಹೆಚ್ಚು, ವಿಜಯನಗರದ ಆದಿ ಪುರುಷರಾದ ಹಕ್ಕ ಬುಕ್ಕ ವಿದ್ಯಾರಣ್ಯರೆದುರು ಅಟ್ಟಿಸಿಕೊಂಡು ಬರುತ್ತಿದ್ದ ನಾಯಿಗಳ ವಿರುದ್ಧವೇ ಒಂದು ಜಾಗದಲ್ಲಿ ಮೊಲವೊಂದು ತಿರುಗಿ ನಿಂತ ಕಥೆ, ಕುಂತಿ ಕೈಯಿಂದ ಅವಳ ಐದು ಜನ ಮಕ್ಕಳಲ್ಲಿ ಬೇರೆ ಯಾರೂ ಬೀಳದೇ ಕೇವಲ ಭೀಮನಷ್ಟೆ ಮಗುವಿದ್ದಾಗ ಬಂಡೆಮೇಲೆ ಬಿದ್ದು ಬಂಡೆ ಚೂರಾದದ್ದು ಇಂತಹ ಅತಿಮಾನುಷ ಶಕ್ತಿಯ ಕುರಿತಾದ ಕಥಾ ಸಂಗತಿಗಳ ಕುರಿತಾದ ಆಕರ್ಷಣೆ ಮಾನವನಲ್ಲಿ ಇದ್ದದ್ದೇ, ನಮ್ಮನ್ನು ಕಾಯುವ ಸರ್ವಶಕ್ತ ಮಹಾಮಹಿಮೆಯ ದೇವರಿದ್ದಾನೆನ್ನುವ ನಂಬಿಕೆಯೂ ಇದೇ ಸಾಲಿಗೆ ಸೇರುವಂತಾದ್ದು. ಅದು ಮಿತಿಯೊಳಗಿರುವ ಮನೋ ಸಹಜ ನಿರುಪದ್ರವಿ ನಂಬಿಕೆಯಾದರೆ ಅದರಲ್ಲಿ ತಪ್ಪಾಗಲೀ ತೊಂದರೆಯಾಗಲೀ ಖಂಡಿತಾ ಇಲ್ಲ, ಆದರೆ ಮಾನವನ ಈ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಳ್ಳುವ ಸಲುವಾಗಿ ಇಂತಹ ನಂಬಿಕೆಗಳು ಪ್ರತ್ಯಕ್ಷ ಯಾ ಪರೋಕ್ಷ ರೂಪದಲ್ಲಿ 'ಹೇರಿಕೆ'ಯಾಗ ತೊಡಗಿದಾಗ ಸಮಸ್ಯೆಗಳು ಒಂದೊಂದಾಗೇ ಕಾಣಿಸಿಕೊಳ್ಳುತ್ತವೆ.


25-30 ವರ್ಷಗಳ ಹಿಂದೆ ಸುಧಾ ಚಂದ್ರನ್ ಎಂಬ ಮಹಿಳೆಯ ಜೀವನವನ್ನಾಧರಿಸಿ 'ಮಯೂರಿ', 'ನಾಚೆಮಯೂರಿ' ಎಂಬ ಚಲನಚಿತ್ರಗಳು ಹಲವು ಭಾಷೆಗಳಲ್ಲಿ ಬಂದು ಹೆಸರು ಮಾಡಿತ್ತಲ್ಲದೇ ಅದು ಎಷ್ಟೋ ದುರಂತಕ್ಕೀಡಾದವರಿಗೆ - ಅದರಲ್ಲೂ ಮುಖ್ಯವಾಗಿ ಮಹಿಳೆಯರಿಗೆ - ಜೀವನೋತ್ಸಾಹದ ಸ್ಫೂರ್ತಿಯನ್ನು ನೀಡಿತ್ತು. ಅಪಘಾತವೊಂದರಲ್ಲಿ ಕಾಲನ್ನು ಕಳಕೊಂಡಿದ್ದರೂ ತನ್ನ ಆ ದುರ್ವಿಧಿಯನ್ನು ಮೆಟ್ಟಿನಿಂತು ಕಾಲೇ ಪ್ರಾಮುಖ್ಯವೆನಿಸಿದ ನೃತ್ಯ ಕ್ಷೇತ್ರದಲ್ಲೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದಂತಹ ಛಲಗಾತಿಯ ಕಥೆಯದು. ಆದರದು ಹಳೆಯ ಕಥೆ. ಈ ಹಿಂದೆ ತನ್ನ ಬದುಕಿನಲ್ಲಿ ಆಕೆ ಮಾಡಿದ್ದು ಸಾಧನೆಯೇ. ಆದರೆ ತನ್ನತನವನ್ನೇ ಮಾರಿಕೊಂಡಿರುವ ಆಕೆ ಛಲಕ್ಕೆ ಮಾದರಿಯಾಗಿ ಈಗ ಉಳಿದಿಲ್ಲ, ಸ್ಫೂರ್ತಿಯೆನಿಸಬೇಕಿದ್ದ ಆಕೆ ಪ್ರತಿದಿನ ಜನರ ಸಹಜ ಜೀವನೋತ್ಸಾಹಕ್ಕೆ ಪೆಟ್ಟುಕೊಟ್ಟು ಕನ್ನಡಿಗಂಟಿನ ಭ್ರಮ ಜಗತ್ತಿನ ಚಟಕ್ಕೆ ಬೀಳಿಸುವಂತಹ ಧನಲಕ್ಷ್ಮಿ ಯಂತ್ರದಂತಹ ಹಿಂದಿ ಛಾನೆಲ್‌ಗಳ ಢೋಂಗಿ ಜಾಹೀರಾತಿನ ಪ್ರಚಾರಕಿಯಾಗಿ ಇದೀಗ ಕುಪ್ರಸಿದ್ಧ ಎಷ್ಟೋ ಕುಟುಂಬಗಳು ಈಕೆಯ ಮಾತಿನಿಂದ ಪ್ರೇರಿತರಾಗಿ ಹಣ ಹಾಗು ನೆಮ್ಮದಿಯನ್ನೂ ಕಳಕೊಂಡದ್ದಿದೆ. ಎಲ್ಲಿಯ ಅಂದಿನ ಜೀವನೋತ್ಸಾಹಿ ನಾಚೆ ಮಯೂರಿ? ಎಲ್ಲಿಯ ಈಗಿನ ನಾಚಿಕೆ ಬಿಟ್ಟ ವಯ್ಯಾರಿ?

ದಾರಿಬದಿಯ ಪುಸ್ತಕ ಮಾರಾಟಗಾರರಿರಬಹುದು ಪುಸ್ತಕ ಮಳಿಗೆಯಿರಬಹುದು ಅಲ್ಲೆಲ್ಲ ಸುಮ್ಮನೆ ಕಣ್ ಹಾಯಿಸಿ ನೋಡಿ. ಅಲ್ಲಿ ಸಾಕಷ್ಟು ಅಧ್ಯಾತ್ಮ, ಜ್ಯೋತಿಷ ದೇವಿ ಮಹಾತ್ಮೆ, ವಾಸ್ತು ಇಂತಹ ಪುಸ್ತಕಗಳು ರಾಶಿ ರಾಶಿ ಇರುತ್ತವೆ. ಅಂದರೆ ಅವೆಲ್ಲ ಇವತ್ತಿಗೂ ಒಳ್ಳೆ ಮಾರುಕಟ್ಟೆ ಸರಕಾಗಿಯೇ ಇದೆಯೆಂಬುದು ಸತ್ಯ. ಅಂದರೆ ಜನರಲ್ಲಿ ಭಕ್ತಿ ಭಾವ ಜಾಸ್ತಿಯಾಗಿದೆ ಎಂದು ಖಂಡಿತ



'ನನ್ನನ್ನು ಚಿತ್ರರಂಗಕ್ಕೆ ಪರಿಚಯಿಸಿದ್ದು ಬಿ.ಸಿ.ಗೌರಿಶಂಕರ್'

'ನನ್ನ ಪ್ರೀತಿಯ ಹುಡುಗಿ' ಚಿತ್ರದ 'ಮೂಡಲ್ ಕುಣಿಗಲ್ ಕೆರೆ', 'ಅಮೃತಧಾರೆ' ಚಿತ್ರದ 'ಮಾಡ್ರನ್ ಸುಪ್ರಭಾತ', 'ಜೋಕ್ ಫಾಲ್ಸ್' ಚಿತ್ರದ 'ಪದಗಳ ಸೃಷ್ಟಿ', 'ಪ್ರೀತಿ ಪ್ರೇಮ ಪ್ರಣಯ' ಚಿತ್ರದ 'ಕಬ್ಬಿನ ಜಲ್ಲೆ', 'ಮಿಸ್ ಕ್ಯಾಲಿಫೋರ್ನಿಯಾ' ಚಿತ್ರದ 'ಜಾನು ಓ ಜಾನು' ಮತ್ತು 'ಫಸ್ಟ್ ಟೈಮ್ ಹೀಗಾಯ್ತು ನಂಗೆ' ಹಾಡುಗಳ ಮೂಲಕ ತಮ್ಮ ಗಾಯನ ಪ್ರತಿಭೆಯನ್ನು ತೋರಿಸಿ, ಈಗ ಅಮೆರಿಕಾದಲ್ಲಿ ಸಾಫ್ಟ್‌ವೇರ್ ಉದ್ಯೋಗಿಯಾಗಿ ನೆಲೆಸಿರುವ ಗಾಯಕ ರಾಮ್‌ಪ್ರಸಾದ್ ಇಲ್ಲಿ ಮಾತಾಡಿದ್ದಾರೆ.



ನಿಮ್ಮ ಕುಟುಂಬ, ಊರು, ಶಿಕ್ಷಣದ ಬಗ್ಗೆ ಹೇಳುವಿರಾ?

ನಮ್ಮ ತಂದೆಯ ಹೆಸರು ಡಾ.ಎಚ್.ಆರ್. ವಿಶ್ವನಾಥ್ ಹಾಗು ತಾಯಿ ಸರಸ್ವತಮ್ಮ. ಹುಟ್ಟಿ ಬೆಳೆದದ್ದು ಬೆಂಗಳೂರಿನಲ್ಲಿ. ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್‌ನಿಂದ ಬಿ.ಇ ಪದವಿ ಪಡೆದು ಅಮೆರಿಕಾಗೆ ಎಮ್.ಎಸ್ ಮಾಡಲು ಬಂದವನು ಓದು ಮುಗಿಸಿ ಇಲ್ಲೇ ಕೆಲಸ ಹುಡುಕಿಕೊಂಡು ಕ್ಯಾಲಿಫೋರ್ನಿಯಾದಲ್ಲಿ ಸೆಟ್ಲಾದೆ.

ನಿಮ್ಮ ಆರಂಭಿಕ ಸಂಗೀತ ಕಲಿಕೆ ಯಾವ ವಯಸ್ಸಿನಲ್ಲಿ ಶುರುವಾಯ್ತು? ಯಾರ ಬಳಿ?

ನಮ್ಮ ದೊಡ್ಡಮ್ಮ ದಿವಂಗತ ನಾಗರತ್ನಮ್ಮ ಮೊದಲ ಗುರು. ಆಮೇಲೆ ಅಯ್ಯನರ್ ಮ್ಯೂಸಿಕ್ ಕಾಲೇಜ್, ವಿದ್ವಾನ್ ಎಮ್.ಎ.ನರಸಿಂಹಚಾರ್ ಹಾಗು ವಿದ್ವಾನ್ ಎಸ್.ಶಂಕರ್ ಅವರ ಬಳಿ ಹಲವಾರು ವರ್ಷ ಸಂಗೀತಾಭ್ಯಾಸ ಮಾಡಿದೆ. ಅಮೆರಿಕಾಗೆ ಬಂದಮೇಲೂ ಇಲ್ಲೇ ನೆಲೆಸಿರುವ ವಿದುಷಿ ಲಲಿತ ವೆಂಕಟರಾಮ್ (ಮೈಸೂರು ಯೂನಿವರ್ಸಿಟಿ ನಿವೃತ್ತ ವೀಣಾ ಪ್ರೊಫೆಸರ್) ಬಳಿ ಸಂಗೀತ ಮುಂದುವರೆಸಿದೆ.

ಯಾವುದಾದರು ಆಲ್ಬಮ್ ಹೊರತಂದಿದ್ದೀರಾ? ತಂದಿದ್ದರೆ ಯಾವುವು?

ಓದುವಾಗ ಯಾವುದೇ ಆಲ್ಬಮ್ ಹೊರತಂದಿರಲಿಲ್ಲ. ಆದರೆ ಆಮೇಲೆ ಡಾ. ಛಾಯಾ ಸ್ವಾಮಿಯವರ 'ಅಪೂರ್ವ ಭಕ್ತಿ ಸಂಗಮ', ಆಕಾಶ್ ಆಡಿಯೋದವರ 'ಸ್ಮರಣೆ ಒಂದೇ ಸಾಲದೆ', ಲಹರಿಯವರ 'ಡಾ.ಎನ್.ಎಸ್.ಲಕ್ಷ್ಮಿನಾರಾಯಣ ಭಟ್ಟ ಅವರ ಭಾವಗೀತೆಗಳು' ಮುಂತಾದ ಆಲ್ಬಮ್‌ಗಳು ಹೊರಬಂದವು. ಆದರೆ ಇವೆಲ್ಲ ಸಂಭವಿಸಿದ್ದು ಓದು ಮುಗಿಸಿ ಬಹಳ ವರುಷಗಳ ನಂತರ.

ಸಿನಿಮಾಗೆ ಹಾಡಬೇಕೆಂದು ಯಾವಾಗ ಅನ್ನಿಸಿತು? ಮೊದಲ ಹಾಡು ಯಾವುದು?

ಓದುವಾಗ ಅಲ್ಲಿ ಇಲ್ಲಿ ಸ್ಪರ್ಧೆಗಳಲ್ಲಿ ಹಾಡುತ್ತಿದ್ದೆ. ಈಗಿನಂತೆ ಆಗ ಟಿ.ವಿ. ರಿಯಾಲಿಟಿ ಶೋಗಳು ಇರುತ್ತಿರಲಿಲ್ಲ. ಹೀಗಾಗಿ ಇಂತಹ ಸ್ಪರ್ಧೆಗಳೇ ನಮಗೆ ಒಂದು ವೇದಿಕೆ. ಅಲ್ಲಿ ಪ್ರೈಜ್ ಬಂದು ಜನ ಮೆಚ್ಚಿದ್ದಾಗ ನನಗೂ ಸಿನಿಮಾದಲ್ಲಿ ಹಾಡುವಾಸೆ ಬಂದಿತ್ತು. ಆ ಸಮಯದಲ್ಲಿ ಬಿ.ಆರ್.ಛಾಯಾ ಅಯ್ಯನಾರ್ ಶಾಲೆಯಲ್ಲಿ ನನ್ನ ಜೊತೆ ಸಂಗೀತ ಕಲಿಯುತ್ತಿದ್ದರು. ಅವರ ದೆಸೆಯಿಂದ ಮಾರುತಿ ಶಿವರಾಂ ಎನ್ನುವವರು ಹೊಸ ಚಿತ್ರವೊಂದನ್ನು ಮಾಡುತ್ತಿರುವ ವಿಚಾರ ತಿಳಿದು ಅಲ್ಲಿಗೆ ಹೋಗಿ ಅವರಿಗೆ ನಾನು ಸುಮ್ಮನೆ ಹಾಡಿಕೊಂಡಿದ್ದ 'ಈ ಬಂಧನ ಜನುಮ ಜನುಮದ ಅನುಬಂಧನ' ಗೀತೆ ಕೇಳಿಸಿದೆ. ಅದನ್ನು ಮೆಚ್ಚಿ ಅವರು ತಮ್ಮ ಚಿತ್ರದ ಸಂಗೀತ ನಿರ್ದೇಶಕ ಜಿ.ಕೆ.ವೆಂಕಟೇಶ್ ಅವರ ಬಳಿ ಧ್ವನಿಪರೀಕ್ಷೆಗೆ ಕರೆದುಕೊಂಡು ಹೋದರು. ಅಲ್ಲಿ ಪಾಸಾಗಿ ಅವರ 'ಬಂಧಿ' ಎಂಬ ಚಿತ್ರದಲ್ಲಿ ಒಂದು ಹಾಡನ್ನು ಹಾಡಿಸಿದರು.

ಇಲ್ಲಿವರೆಗೆ ಯಾವ್ಯಾವ ಸಿನಿಮಾಗಳಿಗೆ ಹಾಡಿದ್ದೀರಿ?

ಇಲ್ಲಿ ಹೆಸರಾಂತ ಕ್ಯಾಮರಾಮ್ಯಾನ್ ದಿವಂಗತ ಬಿ.ಸಿ.ಗೌರಿಶಂಕರ್ ಅವರನ್ನು ನೆನೆಯಲೇ ಬೇಕು. ಕನ್ನಡಿಗರಲ್ಲಿ ಕಲೆಯನ್ನು ಕಂಡರೆ ತಕ್ಷಣ ಗುರುತಿಸಿ ತಾವೇ ಮುಂದೆ ಬಂದು ಪ್ರೋತ್ಸಾಹಿಸುತ್ತಿದ್ದ ಅಪರೂಪದ ವ್ಯಕ್ತಿ ಅವರು. ಯಾವುದೋ ಕೆಲಸದ ಮೇಲೆ ಸ್ಟುಡಿಯೋಗೆ ಬಂದಿದ್ದ ಅವರು ಅಲ್ಲಿ ಹಾಕಿದ್ದ ನನ್ನ ಹಾಡನ್ನು ಕೇಳಿ, ಅವರಿಂದ ನನ್ನ ಫೋನ್ ನಂಬರ್ ಪಡೆದು ಕಾಲ್ ಮಾಡಿ, ಕರೆಸಿ ತಾವು ಮೊಟ್ಟಮೊದಲು ನಿರ್ದೇಶಿಸಿದ್ದ 'ಕೆಂಡದ ಮಳೆ' ಎಂಬ ಚಿತ್ರದಲ್ಲಿ ರತ್ನಮಾಲ ಪ್ರಕಾಶ್ ಅವರ ಜೊತೆ ಹಾಡಲು ಅವಕಾಶ ಮಾಡಿಕೊಟ್ಟಿದ್ದರು. ಅದಾದ ಮೇಲೆ ಎಮ್.ರಂಗರಾವ್, ಎಲ್.ವೈದ್ಯನಾಥನ್ ಮುಂತಾದವರ ಬಳಿ ಹಾಡುವ ಅವಕಾಶ ಸಿಕ್ಕಿತ್ತು. ಆಮೇಲೆ, ಅಮೆರಿಕಾಗೆ ಬಂದುಬಿಟ್ಟೆ. ಕೆಲಕಾಲದನಂತರ, ಭಾರತಕ್ಕೆ ವೆಕೇಶನ್ ಅಂತ ಬಂದಾಗ ಕೆಲವು ಚಿತ್ರಗಳಿಗೆ ಹಾಡುವ ಅವಕಾಶ ಸಿಕ್ಕಿತು. 'ನನ್ನ ಪ್ರೀತಿಯ ಹುಡುಗಿ', 'ಅಮೃತ ಧಾರೆ', 'ಜೋಕ್‌ಫಾಲ್ಸ್', 'ತಮಾಷೆಗಾಗಿ' ಸೇರಿದಂತೆ ಹಲವು ಚಿತ್ರಗಳಿಗೆ ಹಾಡಿದೆ. ಅದರಲ್ಲಿ 'ನನ್ನ ಪ್ರೀತಿಯ ಹುಡುಗಿ' ಚಿತ್ರದ 'ಮೂಡಲ್ ಕುಣಿಗಲ್ ಕೆರೆ' ಹಾಗು 'ಅಮೃತಧಾರೆ'ಯ 'ಮಾಡ್ರನ್ ಸುಪ್ರಭಾತ' ಹಾಡುಗಳು ಸಾಕಷ್ಟು ಪ್ರಸಿದ್ಧಿಯಾಗುವ ಮೂಲಕ ನನ್ನೊಳಗೆ ಆತ್ಮವಿಶ್ವಾಸ ತುಂಬಿದವು. ಸಂಗೀತ ನಿರ್ದೇಶಕ ಮನೋಮೂರ್ತಿ ಹಾಗು ಇತರ ಸ್ನೇಹಿತರೊಡನೆ ಸೇರಿ 'ಪ್ರೀತಿ ಪ್ರೇಮ ಪ್ರಣಯ' ಚಿತ್ರದ ನಿರ್ಮಾಣದಲ್ಲಿ ಕೂಡ ತೊಡಗಿಸಿಕೊಂಡಿದ್ದರಿಂದ ಆ ಚಿತ್ರದಲ್ಲೂ ಕೆಲವು ಹಾಡುಗಳನ್ನು ಹಾಡಿದೆ. ಅದರಲ್ಲಿ ಹಳೆಯ ಚಿತ್ರದ ಮಿಡ್ಲಿ ಹಾಗು ಬಿ.ಜಯಶ್ರೀ ಅವರೊಡನೆ ಹಾಡಿದ 'ಕಬ್ಬಿನ ಜಲ್ಲೆ' ಎಂಬ ಗೀತೆ ಸಾಕಷ್ಟು ಫೇಮಸ್ ಆದವು. ಆಮೇಲೆ ಎಕ್ಸಿಕ್ಯುಟಿವ್ ಪ್ರೊಡ್ಯೂಸರ್ ಆಗಿ ಕೆಲಸ ಮಾಡಿದ 'ಮಿಸ್. ಕ್ಯಾಲಿಫೋರ್ನಿಯಾ' ಚಿತ್ರದಲ್ಲಿ ಕೂಡ ಹಾಡುಗಳನ್ನು ಹಾಡಿದೆ.

ಇಲ್ಲಿ ಸರಿಯಾಗಿ ಅವಕಾಶಗಳು ಸಿಗಲಿಲ್ಲ ಅಂತ ವಾಪಾಸ್ ಅಮೆರಿಕಾಗೆ ಹೋದ್ರಿ ಅಂತ ಕೇಳಿದ್ದೀವಿ. ಹೌದಾ?

ಹೌದು ನಿಜ. ಇದಕ್ಕೆ ಯಾರನ್ನೂ ದೂಷಿಸುವುದು

ಸಂದರ್ಶನ

ಸರಿಯಲ್ಲ. ಇದಕ್ಕೆ ಮುಖ್ಯ ಕಾರಣ ನಾನು ಹಲವಾರು ವರುಷ ಭಾರತದಿಂದ ದೂರ ಇದ್ದುದರಿಂದ ಹಳೆಯ ಗೀತೆಗಳ ನಂಟು ಜಾಸ್ತಿಯಾಗಿ ಆ ಶೈಲಿಯ ಹಾಡುಗಳಲ್ಲಿ ಮಾತ್ರ ನಾನು ಸೀಮಿತವಾಗಿ ಬಿಟ್ಟೆ. ಇಲ್ಲಿ ಬಹಳ ಉನ್ನತ ಮಟ್ಟದ ಹಾಡುಗಾರರು ಅಷ್ಟರಲ್ಲಿ ಗಟ್ಟಿಯಾಗಿ ನಿಲ್ಲಲಾರಂಭಿಸಿದರು. ನಾನು ಹಾಡಲು ಹೋದರೆ ಹಳೆಯ ಶೈಲಿಯಲ್ಲೇ ಹಾಡುತ್ತಿದ್ದುದರಿಂದ ಕೇಳಿದ ಹಲವರಿಗೆ ಸಮಾಧಾನ ಆಗುತ್ತಿರಲಿಲ್ಲ. ಕೆಲವರು 'ಏನ್ ಸಾರ್ ಹಳೆಯ ಪಿ.ಬಿ.ಶ್ರೀನಿವಾಸ್ ಸ್ಟೈಲ್‌ನಲ್ಲಿ ಹಾಡ್ತಿದ್ದೀರಾ... ಮಾಡ್ರನ್ ಆಗಿ ಹಾಡಿ' ಎನ್ನುತ್ತಿದ್ದರು. ಜೊತೆಗೆ ಹದಿನೈದು ವರುಷಗಳಿಗೂ ಮೀರಿ ಅಮೆರಿಕಾದಲ್ಲಿ ಇದ್ದುದರಿಂದ ಇಲ್ಲಿಯ ಜೀವನಕ್ಕೆ ಹೊಂದಿಕೊಂಡುಬಿಟ್ಟಿದ್ದೆ. ಹೀಗಾಗಿ ಅಮೆರಿಕಾಗೆ ವಾಪಾಸ್ಸಾಗಬೇಕಾಯಿತು ಅಷ್ಟೇ. ಆದರೂ ನನ್ನೊಳಗಿನ ಹಾಡುಗಾರ ಸದಾ ಆಕ್ಟೀವಾಗಿರ್ತಿದ್ದ ಅನ್ನೋದನ್ನ ಇಲ್ಲಿ ಹೇಳಬಯಸುತ್ತೇನೆ.

ಅಮೆರಿಕಾದಲ್ಲಿದ್ದರೂ ಅಲ್ಲಿಯೂ ಕೂಡ ನಿಮ್ಮ ಸಂಗೀತದೆಡೆಗಿನ ಒಲವು ಹಾಗೇ ಉಳಿಸಿಕೊಂಡಿದ್ದೀರಿ ಕೂಡ. ಆ ಬಗ್ಗೆ ಸ್ವಲ್ಪ ಹೇಳ್ತೀರಾ?

ಇಲ್ಲಿ ಅಮೆರಿಕಾದ ಅತಿದೊಡ್ಡ ಕನ್ನಡ ಸಂಘವಾದ 'ಉತ್ತರ ಕ್ಯಾಲಿಫೋರ್ನಿಯಾ ಕನ್ನಡ ಕೂಟ'ಕ್ಕೆ ಎರಡು ಸಲ ಪ್ರೆಸಿಡೆಂಟ್ ಆಗಿದ್ದೆ. 'ಅಕ್ಕ' ಸಂಸ್ಥೆಯ 'ಎಂಟರ್‌ಟೈನ್‌ಮೆಂಟ್ ಸೆಕ್ರೆಟರಿ' ಆಗಿ ಕೂಡ ಕೆಲಸ ಮಾಡಿದ್ದೇನೆ. ಇಲ್ಲಿ ಆಗಾಗ ಬೇರೆ ಬೇರೆ ಕನ್ನಡ ಕೂಟದವರು ಕರೆಸುತ್ತಿರುತ್ತಾರೆ. ಅಲ್ಲಿ ಹೋಗಿ ಕನ್ನಡ ಚಿತ್ರಗೀತೆ, ಭಕ್ತಿಗೀತೆ ಹಾಗು ಭಾವಗೀತೆಗಳನ್ನು ಹಾಡುವ ಮೂಲಕ ಕಾರ್ಯಕ್ರಮ ಕೊಡುತ್ತಿರುತ್ತೇನೆ. ಇಲ್ಲೇ ನೆಲೆಸಿರುವ ಕೆಲವು ಭಾರತೀಯರಿಗೆ ಬಿಡುವು ಸಿಕ್ಕಾಗಲೆಲ್ಲಾ ಶಾಸ್ತ್ರೀಯ ಸಂಗೀತ ಹೇಳಿಕೊಡುತ್ತಿದ್ದೇನೆ.

ಅಲ್ಲಿದ್ದುಕೊಂಡೇ ಇತ್ತೀಚೆಗೆ ಯಾವುದಾದರು ಕನ್ನಡ ಸಿನಿಮಾಗಳಿಗೆ ಹಾಡಿದ್ರಾ?

ಇಲ್ಲ. ಇತ್ತೀಚೆಗೆ ಯಾವುದೇ ಚಿತ್ರಕ್ಕೂ ಹಾಡಿಲ್ಲ. ಆದರೂ ಪ್ರತಿನಿತ್ಯ ತಪ್ಪದೇ ಪ್ರಾಕ್ಟೀಸ್ ಮಾಡುತ್ತೇನೆ. ಹಾಗೊಂದು ವೇಳೆ ಅವಕಾಶ ಒದಗಿಬಂದರೆ ಒಂದು ಉಪಾಯವಿದೆ. ಏನೆಂದರೆ, ಇತ್ತೀಚೆಗೆ ತೆಲುಗು ಹಾಗು ತಮಿಳಿನಲ್ಲಿ ಕೆಲವರು ಟ್ರ್ಯಾಕ್ ಮಾಡಿ, ಅಮೆರಿಕಾದಲ್ಲಿ ನೆಲೆಸಿರುವ ಹಾಡುಗಾರರ ಕೈಲಿ ಹಾಡಿಸಿದ ಬಗ್ಗೆ ಎಲ್ಲೋ ಓದಿದ್ದೆ. ಇದನ್ನು, ನನಗೆ ತಿಳಿದಂತೆ ಕನ್ನಡದಲ್ಲಿ ಯಾರು ಮಾಡಿದ ಬಗ್ಗೆ ಕೇಳಿಲ್ಲ.

ಒಂದು ವೇಳೆ, ಚಿತ್ರ ನಿರ್ದೇಶಕರು, ಸಂಗೀತ ನಿರ್ದೇಶಕರು ಹಾಗು ನಿರ್ಮಾಪಕರು ಒಪ್ಪುವುದಾದರೆ, ಒಪ್ಪಿ ಟ್ರ್ಯಾಕ್ ಹಾಗು ಟ್ರ್ಯಾಕ್ ಸಿಂಗರ್‌ನಿಂದ ಹಾಡಿಸಿ ಕಳುಹಿಸುವುದಾದರೆ, ಇಲ್ಲೇ ವಾಯ್ಸ್ ಮಿಕ್ಸ್ ಮಾಡಿ ಕಳುಹಿಸಬಹುದು. ನಾಲ್ಕಾರು ಟೇಕ್ ಮಾಡಿ ಕಳುಹಿಸಿದರೆ, ಅದರಲ್ಲಿ ಉತ್ತಮವಾದುದನ್ನು ಬಳಸಿಕೊಳ್ಳಬಹುದು ಎಂದು ಕೇಳಿದ್ದೇನೆ. ಇದು ಕಷ್ಟದ ಕೆಲಸ ಹಾಗು ಇದನ್ನು ಒಪ್ಪುವ ಜನ ಕಮ್ಮಿ ಇರಬಹುದು. ಆದರೂ ಪ್ರಯತ್ನ ಪಡುವುದರಲ್ಲಿ ತಪ್ಪೇನು ಇಲ್ಲ ಅಲ್ವಾ? ಈ ಪ್ರಯತ್ನ ಮಾಡಿದರೆ ದೂರದಲ್ಲಿದ್ದುಕೊಂಡೆ ಹಾಡಬಹುದು. ಇದು ಒಂದು ಅಭಿಪ್ರಾಯವಷ್ಟೇ. ಅಂತಿಮವಾಗಿ, ಸ್ಟುಡಿಯೋದಲ್ಲಿದ್ದುಕೊಂಡು ಸಂಗೀತ ನಿರ್ದೇಶಕರ ಮಾರ್ಗದರ್ಶನದಲ್ಲಿ ಹಾಡುವ ಮಜವೇ ಬೇರೆ.

ಮುಂದೆ ಹೆಚ್ಚು ಹೆಚ್ಚು ಅವಕಾಶಗಳು ಕನ್ನಡದಲ್ಲಿ ಒದಗಿಬಂದರೆ ಬೆಂಗಳೂರಿಗೇ ವಾಪಸ್ ಬರುತ್ತೀರಾ?

ಖಂಡಿತ ಬರುತ್ತೇನೆ. ಅಂತಹ ದಿನಗಳ ನಿರೀಕ್ಷೆಯಲ್ಲಿದ್ದೇನೆ. ಚಿತ್ರರಂಗದಲ್ಲಿ ಸಾಕಷ್ಟು ಅವಕಾಶ ಸಿಕ್ಕದಿದ್ದರೂ ಅದರಿಂದ ತೊಂದರೆಯೇನೂ ಇಲ್ಲ. ಅದನ್ನೇ ಜೀವನೋಪಾಯಕ್ಕೆ ನೆಚ್ಚಿಕೊಂಡಿದ್ದರೆ ತುಂಬಾ ಕಷ್ಟ ಆಗಿರುತ್ತಿತ್ತು. ಜೊತೆಗೆ, ನನ್ನ ವಾಣಿ ಜಯರಾಂ, ಚಿತ್ರ, ಶ್ರೇಯ ಘೋಶಾಲ್, ಕವಿತಾ ಕೃಷ್ಣಮೂರ್ತಿ ಮುಂತಾದವಾರ ಜೊತೆ ಹಾಡುವ ಕನಸು ಕೂಡ ನನಸಾಗಿದೆ. ಚಾನ್ಸ್ ಸಿಕ್ಕರೆ ಹಾಡುತ್ತೇನೆ ಇಲ್ಲವಾದರೆ ಜೀವನ ಸಾಗಿಸಲು ಸಾಫ್ಟ್‌ವೇರ್ ಕೆಲಸ ಇದ್ದೇ ಇದೆ.

ಹೊಸದಾಗಿ ಬರುವ ಗಾಯಕರಿಗೆ ಏನು ಹೇಳಲು ಬಯಸುತ್ತೀರಿ?

ಟಿ.ವಿ. ರಿಯಾಲಿಟಿ ಶೋಗಳು ಹಾಗೂ ಬೇರೆ ಬೇರೆ ವೇದಿಕೆಗಳಲ್ಲಿ ಈಗಿನ ಯುವಜನತೆಗೆ ಸಿಗುತ್ತಿರುವ ಪ್ರೋತ್ಸಾಹದಿಂದ ಹಲವಾರು ಉತ್ತಮ ಗಾಯಕರು ಮುಂದೆ ಬರುತ್ತಿದ್ದಾರೆ. ಹೀಗಾಗಿ ಕಾಂಪಿಟೇಶನ್ ಜಾಸ್ತಿ. ಅದ್ದರಿಂದ ಯುವಗಾಯಕರು ಬರೀ ಇದನ್ನೇ ನೆಚ್ಚಿಕೊಂಡು ಬರುವುದು ಅಷ್ಟು ಸರಿಯಲ್ಲ ಎನಿಸುತ್ತದೆ. ಮೊದಲು ಓದಿ ಒಂದು ಡಿಗ್ರಿ ಪಡೆದು (ಸಾಧ್ಯವಾದರೆ ಕೆಲಸ ಕೂಡ ಸಂಪಾದಿಸಿ) ಆಮೇಲೆ ಇದರಲ್ಲೂ ಆಸಕ್ತಿ ತೋರಿಸಿದರೆ ಉತ್ತಮ ಎನಿಸುತ್ತದೆ. ಇದಕ್ಕೆ ನಾನೇ ಸೂಕ್ತ ಉದಾಹರಣೆ.



ಸಂದರ್ಶಕ
ಹೃದಯಶಿವ

ಇದರರ್ಥವಲ್ಲ. ವಾಸ್ತವವಾಗಿ ಜನರಿಗೆ ಈ ವಿಚಾರದಲ್ಲಿ ಭಕ್ತಿಗಿಂತ ಭಯವೇ ಹೆಚ್ಚು.ಮಾನವನ ಇಂತಹ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಳ್ಳುವ ಮಂದಿಗಂತೂ ಯಾವ ಧರ್ಮದಲ್ಲೂ ಬರವಿಲ್ಲ. ಚಾಣಾಕ್ಷತನದ ಮಾತು ಹಾಗು ತಂತ್ರಗಾರಿಕೆಯೇ ಇದರ ಮೂಲ ಬಂಡವಾಳ. ನ್ಯಾಯಾಲಯದಲ್ಲಿ ಸಾಕ್ಷಿಗಳು ತಿರುಗಿ ಬಿದ್ದು ಈಗ ಖುಲಾಸೆಯಾಗಿರುವ ಕಂಚಿ, ನಿತ್ಯಾನಂದ, ಆಸಾರಾಮ್ ಇಂತವರನ್ನೆಲ್ಲ ನೋಡಿದಾಗ ಇವರು ಹೇಳುವುದಕ್ಕೂ ಮಾಡುವುದಕ್ಕೂ ಸಂಬಂಧವೇ ಇಲ್ಲ ಎನ್ನುವುದು ಎಂತವರಿಗೂ ತಿಳಿಯುತ್ತದೆ. ನವಗ್ರಹಗಳ ಕಲ್ಪನೆ ತಪ್ಪು (ಸೂರ್ಯ ಗ್ರಹವಲ್ಲ), ಗ್ರಹಣ ಎಂಬುದು ಪ್ರಾಕೃತಿಕ ವಿದ್ಯಮಾನವೇ ಹೊರತು ಭಯ ಪಡುವಂತಹದ್ದೇನಿಲ್ಲ ಎಂದು ತಿಳಿದಿದ್ದರೂ ಇಂದಿಗೂ ಈ ಕುರಿತಾದ ಹಳೆಯ ಆಚರಣೆಗಳನ್ನು ಆಚರಿಸಲಾಗುತ್ತಿದೆಯಲ್ಲವೇ?

ಪ್ರತಿದಿನ ಟಿವಿಗಳಲ್ಲಿ ಮಹಾ ಮಹಾ ಜ್ಯೋತಿಷಿಗಳು ಬೊಂಬಡಾ ಹೊಡಕೊಳ್ಳುತ್ತಲೇ ಇದ್ದಾರೆ. ಆಪತ್ತು ಪ್ರಳಯ ಆಗೇ ಆಗುತ್ತದೆ ಎಂದು ಸಾರಿದವರು ಇಂದಿಗೂ ಇದ್ದಾರೆ. ಇಂತಹ ದಿವ್ಯ ಜ್ಞಾನಿಗಳಿಗೆ ಕೇದಾರನಾಥದಲ್ಲಿ ಅನಾಹುತ ನಡೆದು ಲಕ್ಷಾಂತರ ಜನರು (ಅದರಲ್ಲಿ ಎಲ್ಲರೂ ಆಸ್ತಿಕರೇ) ಸಾಯುವ ಸಂಗತಿ ಹೊಳೆಯಲೇ ಇಲ್ಲ ಎನ್ನುವುದು ಸೋಜಿಗ. ಬದಲಿಗೆ ವಿಜ್ಞಾನ ಒಡಿಸ್ಸಾದ ಚಂಡಮಾರುತವನ್ನು ಗ್ರಹಿಸಿ ಮುನ್ನೆಚರಿಕೆ ನೀಡಿದ ಫಲವಾಗಿ ಲಕ್ಷಾಂತರ ಜನರ ಪ್ರಾಣಹಾನಿ ತಪ್ಪಿದಂತಾಗಿತ್ತು.

ಮೊನ್ನೆ ಮೊನ್ನೆ ಟಿವಿಯಲ್ಲಿ ಒಂದು ಸುದ್ದಿ ಬಂದಿತ್ತು. ಮೂಲಾ ನಕ್ಷತ್ರದ ಶನಿ ಎಂಬ ನಿಂದನೆ ಕೇಳೀ ಕೇಳಿ ಸಾಕಾದ ಮಗ ಪತ್ರ ಬರೆದಿಟ್ಟು ಮನೆ ಬಿಟ್ಟ ಕಥೆ ಅದು. ಮಗಳಾಗಿದ್ದರೆ ಓಡಿಹೋಗಲು ಧೈರ್ಯ ಸಾಲದೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಳು. ಇಂತಹ ಮನೆಹಾಳ ಮೌಢ್ಯಗಳಿಗೆ ಕಡಿವಾಣ ಬೀಳುವುದು ಬೇಡವೇ? ಈ ನಿಟ್ಟಿನಲ್ಲಿ ಸಿದ್ದರಾಮಯ್ಯನವರ ಸರ್ಕಾರ ಮೂಢನಂಬಿಕೆ ತಡೆಯುವ ವಿಧೇಯಕವನ್ನು ಜಾರಿಗೆ ತರಲು ಯತ್ನಿಸಿತು. ಆದರೆ ಕೂಡಲೇ ಮೌಢ್ಯದ ಫಲಾನುಭವಿಗಳೆನಿಸಿದ ಜೆಗುಟು ಧಂಭಾಚಾರಿಗಳು 'ಇದು ಹಿಂದೂ ಧರ್ಮದ ಮೇಲಿನ ದಾಳಿ' ಎಂದೆಲ್ಲ ಸುಳ್ಳು ಅಬ್ಬರಿಸಿ ಜನರನ್ನು ಅದರ ವಿರುದ್ಧ ಎತ್ತಿ ಕಟ್ಟಿಬಿಟ್ಟರು. ಇಂತವರಿಂದಾಗಿಯೇ ನಮ್ಮ ಮೌಲ್ಯಗಳಿಲ್ಲ ಸಿಂತ ನಿರಂತರವಾಗಿ ಜಾತೀಯತೆ, ಲಿಂಗ ತಾರತಮ್ಯ ಮೊದಲಾದ ಹುಳುಗಳು ನಮ್ಮ ಸಮಾಜವನ್ನು ತುಂಬಿಕೊಳಿತು ನಾರುತ್ತಿವೆ.

ಮೌಢ್ಯಗಳ ವಿರುದ್ಧ ಹೋರಾಡಿ ಪ್ರಾಣ ತೆತ್ತ ನರೇಂದ್ರ ಧಾಬೋಲ್ಕರರಿಗೆ ಜೀವವೇನೂ ಹೆಚ್ಚಾಗಿರಲಿಲ್ಲ. ಅದೇ ರೀತಿ ಯಾರ ಮೇಲೂ ದ್ವೇಷ ಸಾಧನೆಯೂ ಇರಲಿಲ್ಲ. ಜನರನ್ನು ಮೌಢ್ಯ ವಿಮುಕ್ತಗೊಳಿಸುವ ಪ್ರಾಮಾಣಿಕ ಕಳಕಳಿಯೊಂದೇ ಅವರ ಹಿಂದಿದ್ದದ್ದು.

ದೇವೇಗೌಡರು ಪ್ರಧಾನಿಯಾಗಿದ್ದಾಗ ಬೆಳ್ತಂಗಡಿಯಲ್ಲಿ ನಡೆದ ಆಯುತ ಚಂಡಿಕಾಯಾಗಕ್ಕೆ ಹೋಗಿದ್ದೆ. ಮಧ್ಯ ರಾತ್ರಿಯ ಪೂರ್ಣಾಹುತಿ ಸಮಯದಲ್ಲೂ ಇದ್ದೆ. ಆಯುತ ಚಂಡಿಕಾ ಯಾಗದಲ್ಲಿ ಅವರೇನು ಸಾಧಿಸದಿದ್ದರೂ ಕೊನೆಯಲ್ಲಿ ತಮಗೆ ಹಣ ಸಂದಾಯವಾಗಿಲ್ಲ ಎಂದು ಬ್ರಾಹ್ಮಣರು ಗಲಾಟೆ ಮಾಡಿದ್ದು ಇನ್ನೂ ನೆನಪಿದೆ.

ಇದೀಗ ಜಾತಕ ನೋಡದೇ ಮದುವೆಯೇ ಇಲ್ಲ. ಆದರೆ ಮೂಲತಹ ಹಿಂದೂ ಸಂಸ್ಕೃತಿಯಲ್ಲಿ ಮದುವೆ ಜಾತಕ ಎನ್ನುವುದೇ ಇಲ್ಲ. ಸೀತಾ ಸ್ವಯಂವರಕ್ಕಾಗಲೀ ದ್ರೌಪದಿ ಸ್ವಯಂವರಕ್ಕಾಗಲೀ ಜಾತಕ ನೋಡಿ ಯಾರೂ ಬಂದಿರಲಿಲ್ಲ. ಗೆದ್ದಾತ ಮದುವೆಯಾಗಿ ಹೋದ ಅಷ್ಟೆ. ಇಂತಹ ಮುಖ್ಯ ಮದುವೆಗಳಲ್ಲೇ ಕಾಣದ ಜಾತಕ ಇದೀಗ ರೋಗದಂತೆ ಹರಡಿದ್ದಾದರೂ ಹೇಗೆ? ಇದಕ್ಕೆ ಕಾರಣಪುರುಷರಾದರೂ ಯಾರು? ಇಂತಹ ಮೌಢ್ಯಗಳು ಇಂದು ಟಿವಿ ಜೋತಿಷಿಗಳ ಮೂಲಕ ವ್ಯಾಪಕವಾಗಿ ಹಬ್ಬುತ್ತಿದೆ.

ಕೊನೆ ಪಕ್ಷ ನರೇಂದ್ರ ನಾಯಕ್, ಧಾಬೋಲ್ಕರರಂತವರ ಕಾರ್ಯದ ಬೆಂಬಲಕ್ಕಾದರೂ ಮೌಢ್ಯ ನಿರ್ಬಂಧಕ ಮಸೂದೆ ಕಾನೂನಿನಲ್ಲಿ ಇರಲೇಬೇಕಾದುದು ಅನಿವಾರ್ಯ. ಆದಷ್ಟು ಬೇಗ ಈ ಜನಪರ ಮಸೂದೆ ಕಾರ್ಯ ರೂಪಕ್ಕೆ ಬರುವಂತಾಗಲಿ ಎಂದು ಆಶಿಸೋಣ.

– ಶಶಿ ಪುತ್ತೂರು, ದಕ

ಮಾನಗೇಡಿ ಮಾಳವಿಕಾ ಲಜ್ಜೆಗೇಡಿಯೂ ಹೌದು. ಆಕೆ ನಡೆಸಿಕೊಡುವ 'ಬದುಕು ಜಟಕಾ ಬಂಡಿ' ಕಾರ್ಯಕ್ರಮದಲ್ಲಿ ಬರುವ ಶೇ. 90ರಷ್ಟು ಜನ ಶೋಷಿತ ವರ್ಗದವರು. ಅವರ ಖಾಸಗಿ ಬದುಕನ್ನು ಬಯಲು ಮಾಡಿ ಮತ್ತೊಮ್ಮೆ ಅವರನ್ನು ಶೋಷಿಸುವ ಮೂಲಕ ಹಣ ಗಳಿಸುತ್ತಿದ್ದೇನೆಂದು ಮಾಳವಿಕ ಅರಿತಿದ್ದಾಳೆ. ಇದನ್ನು ಮಾಡುವ ಬದಲು ಆಕೆ ತನ್ನ ಕಾನೂನಿನ ಜ್ಞಾನವನ್ನು ಶೋಷಿತರ, ಬಡವರ ಹಿತಕ್ಕೆ ಬಳಸಿಕೊಂಡರೆ ಆಕೆಗೆ ಉತ್ತಮ.

– ಟಿ. ರಾಮಚಂದ್ರಪ್ಪ, ದಾವಣಗೆರೆ

ಡಾ. ವಾಸು ಅವರ ಅಂಕಣ 'ಅಂಚಿನಿಂದ' ತುಂಬಾ ಚೆನ್ನಾಗಿ ಬರುತ್ತಿದೆ. ಡಿಸೆಂಬರ್ 18, 2013ರ ಸಂಚಿಕೆಯಲ್ಲಿ ಪ್ರಕಟಗೊಂಡ ಅವರ 'ರೈತರೊಬ್ಬರ ಆತ್ಮಹತ್ಯೆ ಸಂದರ್ಭದಲ್ಲಿ ಒಂದು ಅರ್ಥ ಮಾತು' ಎಂಬುದು ಅರ್ಥಪೂರ್ಣವಾಗಿತ್ತು. ಓಟು ಹಾಕಿ ಸಕ್ಕರೆ ಕಾರ್ಖಾನೆಯ ಮಾಲೀಕನನ್ನು ಗೆಲ್ಲಿಸಿ, ಶಾಸಕನನ್ನಾಗಿಸಿದರೂ ರೈತನಿಗೆ ಕೊನೆಗೆ ಆತ್ಮಹತ್ಯೆಯೇ ಅನಿವಾರ್ಯವಾಗಿರುವುದು ದುರಂತ. ಸರ್ಕಾರದೊಂದಿಗೆ ಲಾಬಿ ಮಾಡುವ ಸಕ್ಕರೆ ಕಾರ್ಖಾನೆಗಳ ಮಾಲೀಕರಿಗೆ ಮೊದಲು ರೈತರ ಬವಣೆಗಳ ಬಗ್ಗೆ ಬುದ್ಧಿ ಕಲಿಸಬೇಕಿದೆ.

– ವಿ. ಆರ್. ಮೌರ್ಯ, ಬೆಂಗಳೂರು

ಕೊಳಕು ಮಡೆಸ್ನಾನ ಮತ್ತೆ ಕುಕ್ಕೆ ಸುಬ್ರಹ್ಮಣ್ಯದಲ್ಲಿ ನಡ್ಡಿದೆ. ಸನಾತನಿಗಳು ಮತ್ತೆ ಸಂಭ್ರಮಿಸಿದ್ದಾರೆ. ಯಹೂದಿ ಮಕ್ಕಳು ಒಲೆಯಲ್ಲಿ ಬೇಯುವಾಗ ಹಿಟ್ಲರ್ ಸಂಭ್ರಮಿಸಿದಂತೆ... ನನಗೆ ಅನ್ನಿಸುತ್ತೆ ಬ್ರಾಹ್ಮಣರ ಅಮೇಧ್ಯದ ಮೇಲೆ ಉರುಳಿದರೆ ಮೋಕ್ಷ ಪ್ರಾಪ್ತಿ ಅಂತ ಟಿವಿ ಚಾನೆಲ್‌ಗಳಲ್ಲಿ ಒಬ್ಬ ಸನಾತನಿ ಹೇಳಿದರೆ ಅದೂ ನಡೆಯಬಹುದು. ಮೌಢ್ಯತೆಗೆ ಅನಂತ ಮುಖಗಳಿವೆ. ಹಾಗೆಯೇ ಕ್ರೌರ್ಯಕ್ಕೂ.

– ರವಿಕುಮಾರ್, ಹಾಸನ

ಡಿಸೆಂಬರ್ 11ರ ಸಂಚಿಕೆಯ 'ಕಂಡ ಹಾಗೆ' ಬರಹ ತುಂಬಾ ಚೆನ್ನಾಗಿ ಅರ್ಥವತ್ತಾಗಿ ಮೂಡಿಬಂದಿದೆ. ಪತ್ರಿಕೋದ್ಯಮಕ್ಕೆ ಹೊಸ ಭಾಷೆ ಬರೆಯುತ್ತಿದ್ದಾರೆ ತೆಹೆಲ್ಕಾ ಸಂಪಾದಕ ತರುಣ್ ತೇಜ್‌ಪಾಲ್ ಅಂದುಕೊಂಡಿದ್ದೆವು. ಆದರೆ ಅವರು ಪತ್ರಿಕಾ ಧರ್ಮವನ್ನು ಗಾಳಿಗೆ ತೂರಿ ವೃದ್ಧ ವಿಲಾಸ ಅನುಭವಿಸುವ ನೀಚ ಪ್ರವೃತ್ತಿ ತೋರಬಾರದಿತ್ತು. ತಮ್ಮದೆ ಮಗಳ ವಯಸ್ಸಿನ ತರುಣಿಯ ಮೇಲೆ ಲೈಂಗಿಕ ಅತ್ಯಾಚಾರವೆಸಗುವಷ್ಟು ಹೇಯ ಮನಸ್ಥಿತಿ ಯಾಕೆ ಬಂತು? ಎಂಬುದರ ಬಗ್ಗೆ ಗೌರಿ ಅವರು ಕೂಲಂಕಷವಾಗಿ ತಮ್ಮ ಬರಹದಲ್ಲಿ ನಿರ್ಭಿಡೆಯಿಂದ ಅಭಿವ್ಯಕ್ತಿಸಿದ್ದಾರೆ. ಒಬ್ಬ ಮಿತ್ರ ಎಷ್ಟೇ ಸ್ನೇಹದಿಂದ ಇದ್ದರೂ ಸಾಮಾಜಿಕವಾಗಿ ಅನಾಚಾರ ಹೊಂದಿದ್ದರೆ ಅವನ ಹೀನಚಾರಿತ್ರ್ಯ ಜನತೆಗೆ ತೋರಿಸುವ ಪತ್ರಿಕಾ ಧರ್ಮವನ್ನು ನಾವು ಗೌರಿ ಲಂಕೇಶ್ ಮೂಲಕ ಕಲಿಯಬೇಕಿದೆ.

– ರಮಜಾನ ಕೆ. ಕೊತ್ತಿ, ಬಾದಾಮಿ

ಸ್ಪಷ್ಟೀಕರಣ

ಪತ್ರಿಕೆಯ 2010, ಆಗಸ್ಟ್ 18ರ ಸಂಚಿಕೆಯಲ್ಲಿ 'ಮೂಡಿಗೆರ ಶಿಕ್ಷಣ ಇಲಾಖೆಯ ಹಗರಣ, ಶನಿ ಶರತ್ಚಂದ್ರ' ಶೀರ್ಷಿಕೆಯಲ್ಲಿ ವರದಿಯೊಂದು ಪ್ರಕಟಗೊಂಡಿತ್ತು. ಸದರಿ ಶೀರ್ಷಿಕೆಯಲ್ಲಿ ಪ್ರಯೋಗಿಸಿದ ಪದಗಳು ಹಾಗೂ ವರದಿಯಲ್ಲಿ ಪ್ರಕಟಗೊಂಡ ವಿಷಯಗಳು ಆಧಾರರಹಿತವಾಗಿರುವುದು ಕಂಡುಬಂದಿರುತ್ತದೆ. ಈ ವರದಿಯಿಂದ ಬಿ.ಎಲ್. ಶರತ್ಚಂದ್ರ ಇವರ ಮನಸ್ಸಿಗೆ ನೋವಾಗಿದ್ದು ಇದಕ್ಕಾಗಿ ನಾವು ವಿಷಾದಿಸುತ್ತೇವೆ. - ಸಂ

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly



ಆಲ್ ಲೈಟ್ಸ್ ಆಫ್

ಕನ್ನಡ ಚಿತ್ರರಂಗ ಕಂಡ ಪ್ರಮುಖ ಛಾಯಾಗ್ರಾಹಕರಲ್ಲಿ ಒಬ್ಬರಾಗಿದ್ದ ಸುಂದರನಾಥ್ ಸುವರ್ಣ [illegible]. ಬಾಲ್ಯದಿಂದಲೇ ಫೋಟೋಗ್ರಫಿ, ಸಿನಿಮಾಟೋಗ್ರಫಿ ಬಗ್ಗೆ ಅಪಾರವಾದ ಆಸಕ್ತಿ ಹೊಂದಿದ್ದ ಇವರು ಕಾಶಿನಾಥರ 'ಅಪರೂಪದ ಅತಿಥಿಗಳು' ಚಿತ್ರದ ಮೂಲಕ ಸ್ವತಂತ್ರ ಕ್ಯಾಮರಾಮನ್ ಆಗಿ ವೃತ್ತಿ ಬದುಕು ಆರಂಭಿಸಿದ್ದರು. 'ಅನುಭವ', 'ನಮ್ಮೂರ ಮಂದಾರ ಹೂವೆ', '[illegible]', 'ಗೋಲಿಬಾರ್', '[illegible] ಗಂಗು', '[illegible]', '[illegible]', 'ಸಿದ್ಧಾರ್ಥ', '[illegible]', '[illegible]', '[illegible] ಅಂತ', 'ಅನುರಾಗ ಸಂಗಮ', '[illegible]', 'ಗಂಡುಗಲಿ ಕುಮಾರರಾಮ', 'ಲಂಕೇಶ್ ಪತ್ರಿಕೆ', 'ದಾಸ', 'ಧರ್ಮ', '[illegible]', '[illegible]' ಸೇರಿದಂತೆ ನೂರಕ್ಕೂ ಹೆಚ್ಚು ಸಿನಿಮಾಗಳಿಗೆ ಕ್ಯಾಮರಾ ಹಿಡಿದಿದ್ದ ಇವರು, '[illegible]' ಹಾಗೂ 'ಆರಂಭ' ಚಿತ್ರಗಳನ್ನು ನಿರ್ದೇಶಿಸಿದ್ದರು. ಹಾಗೇನೇ, ಕುಮಾರ್ ಗೋವಿಂದ್ ಮುಖ್ಯಪಾತ್ರದಲ್ಲಿದ್ದ '[illegible]' ಎನ್ನುವ ಚಿತ್ರದ ಮೂಲಕ ನಿರ್ಮಾಪಕರೂ ಆಗಿದ್ದರು. ಎಂಭತ್ತು ತೊಂಭತ್ತರ ದಶಕದ ಮೋಸ್ಟ್ ಬ್ಯುಸಿಯೆಸ್ಟ್ ಕ್ಯಾಮರಾಮನ್ ಅನ್ನಿಸಿಕೊಂಡಿದ್ದ ಸುವರ್ಣರ ನಿಧನ ಕನ್ನಡ ಚಿತ್ರರಂಗಕ್ಕೆ ನಿಜಕ್ಕೂ ಆಘಾತ ನೀಡಿದೆ. ಇವರು ಕೊನೆಕೊನೆಯ ದಿನಗಳಲ್ಲಿ ತೀರಾ ಅನಾರೋಗ್ಯದಿಂದ ಬಳಲುತ್ತಿದ್ದರೆನ್ನಲಾಗಿದೆ.

ದರ್ಶನ ಕೊಡ್ತೋ 'ಡ್ಯಾವ್ರೇ'

ಭಾರತದ ಪ್ರಮುಖ ನಟರ ಪೈಕಿ ಒಬ್ಬರಾದ ನಾಸಿರುದ್ದೀನ್ ಷಾ 'ಡ್ಯಾವ್ರೇ' ಸಿನಿಮಾ ನೋಡಲು ಇಚ್ಛೆಪಟ್ಟಿದ್ದಾರೆ. ಈ ಕುರಿತು ಈಗಾಗಲೇ ನಿರ್ದೇಶಕ ಗಡ್ಡ ವಿಜಿಯವರಿಂದ 'ಡ್ಯಾವ್ರೇ' ಚಿತ್ರದ ಸಿನಾಪ್ಸಿಸ್ ಅನ್ನು ಈ-ಮೇಲ್ ಮೂಲಕ ಪಡೆದುಕೊಂಡಿದ್ದಾರೆ. ಸದ್ಯದಲ್ಲೇ ಮುಂಬೈಯಲ್ಲಿ 'ಡ್ಯಾವ್ರೇ'ಗೊಂದು ಪ್ರದರ್ಶನ ಏರ್ಪಾಟಾಗಲಿದೆ. ಈ ನಿಟ್ಟಿನಲ್ಲಿ ಚಿತ್ರಕ್ಕೆ ಇಂಗ್ಲಿಷ್ ಸಬ್ ಟೈಟಲ್ ಅಳವಡಿಸುವಲ್ಲಿ ವಿಜಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆನಂತರವಷ್ಟೇ ನಾಸಿರುದ್ದೀನ್ ಷಾ 'ಡ್ಯಾವ್ರೇ' ನೋಡಲು ಸಾಧ್ಯವಾಗುವುದು.



ಷಾ

ಅಂದಹಾಗೆ, ಯೋಗರಾಜ್ ಭಟ್ ಮೊದಲ ಬಾರಿಗೆ ಬಣ್ಣ ಹಚ್ಚಿದ 'ಡ್ಯಾವ್ರೇ' ಸಿನಿಮಾಗೆ ಪ್ರೇಕ್ಷಕರಿಂದ ಮಿಶ್ರ ಪ್ರತಿಕ್ರಿಯೆ ಬಂದಿದೆ. ಭಾವಜೀವಿ ಜೈಲರ್ ಪಾತ್ರದಲ್ಲಿ ಕಾಣಿಸಿಕೊಂಡಿರುವ ಯೋಗರಾಜ್ ಭಟ್ಟರ ಪಾತ್ರ ವಾಯ್ಸ್ ಓವರ್ ಮೂಲಕ ಕಥೆ ಹೇಳುತ್ತಾ ಸಾಗುತ್ತದೆ. ಆ ಜೈಲಿನಲ್ಲಿರುವ ಕೈದಿಗಳ ಹಿನ್ನೆಲೆಯನ್ನು ಬಿಚ್ಚಿಡುವ ಪ್ರಯತ್ನ ಮೆಚ್ಚುವಂಥದ್ದೇ ಆದರೂ ಆ ಪ್ರಯತ್ನ ಪರಿಣಾಮಕಾರಿಯಾಗಿ ಪರದೆಯ ಮೇಲೆ ಮೂಡಿ ಬಂದಿಲ್ಲವೆಂದೇ ಹೇಳಬೇಕಾಗುತ್ತದೆ. ಒಬ್ಬೊಬ್ಬ ಕೈದಿಯ ಬದುಕಿನ ಹಿನ್ನೆಲೆಯನ್ನು ಹೇಳುವಾಗ ನಿರ್ದೇಶಕರು ಒಂದಿಷ್ಟು ರೀಸರ್ಚ್ ಮಾಡಬೇಕಿತ್ತು ಅನ್ನಿಸದೇ ಇರದು. ಕೆಲವೊಂದು ಕಡೆಯಂತೂ ತೀರಾ ನಾಟಕೀಯವೆನಿಸುವಷ್ಟರಮಟ್ಟಿಗೆ ದೃಶ್ಯಗಳು ಜಾಳುಜಾಳೆನಿಸಿವೆ ಎನ್ನುವ ಅಂಶಗಳು ಚಿತ್ರ ನೋಡಿದವರ ಗಮನಕ್ಕೆ ಬರುವುದರಲ್ಲಿ ಸಂದೇಹವಿಲ್ಲ. ಉದಾ: ಬಾಳೆಕಾಯಿ ಮಂಡಿಯಲ್ಲಿ ಹೆಕ್ಕೊಳ್ಳುವ ನೇಣಿಗೆ ಶರಣಾಗುವುದಿರಬಹುದು, ಜೈಲಿಗೆ ಹೋಗುವ ಸಲುವಾಗಿ ಪೊಲೀಸನೊಬ್ಬನ ಹಣೆಗೆ ಡಿಚ್ಚಿ ಹೊಡೆಯುವುದಿರಬಹುದು. ಒಂದಂತೂ ನಿಜ ನಿಧಾನಗತಿಯಲ್ಲಿ ಚಲಿಸುವ ಚಿತ್ರದ ಅನೇಕ ಕೊರತೆಗಳನ್ನು ಹಿನ್ನೆಲೆಯಲ್ಲಿ ಕೇಳಿಬರುವ ಯೋಗರಾಜ್ ಭಟ್ಟರ ಧ್ವನಿ ಸ್ವಲ್ಪಮಟ್ಟಿಗೆ ಮುಚ್ಚಿಹಾಕಬಲ್ಲದು. ಭಟ್ಟರ ಡೈಲಾಗ್ಸ್ ಅಲ್ಲಲ್ಲಿ ಇಷ್ಟವಾದರೆ, ಕೆಲವೆಡೆ ಅಸಗತ್ಯವೆನಿಸಿವೆ. ಅವರ ಅಭಿನಯ ಇನ್ನಷ್ಟು ಪಕ್ವವಾದರೆ ಒಬ್ಬ ವಿಶಿಷ್ಟ ಪೋಷಕನಟ ಕನ್ನಡಕ್ಕೆ ಸಿಗಬಲ್ಲ. ಉಳಿದಂತೆ ಅರಸ್, ಪೆಟ್ರೋಲ್ ಪ್ರಸನ್ನ, ಸತೀಶ್ ತಮ್ಮ ಕೆಲಸವನ್ನು ತಾವು ಚೆನ್ನಾಗಿ ಮಾಡಿದ್ದಾರೆ. ಛಾಯಾಗ್ರಹಣ, ಹಿನ್ನೆಲೆ ಸಂಗೀತ ಗಮನ ಸೆಳೆಯುತ್ತವೆ. ವಿಶೇಷವಾಗಿ ಬಿಟ್ ಸಾಂಗ್! ನಿರ್ದೇಶಕನಾಗಿ ಮೊದಲ ಚಿತ್ರದಲ್ಲೇ ವೃತ್ತಿಪರತೆಯನ್ನು ಬಿಂಬಿಸುವಲ್ಲಿ ಗಡ್ಡ ವಿಜಿ ಒಳ್ಳೆಯ ಪ್ರಯತ್ನ ಮಾಡಿದ್ದಾರೆ. ಗಟ್ಟಿ ಚಿತ್ರಕಥೆಯನ್ನು ರೂಪಿಸುವತ್ತ ಅವರು ಮತ್ತಷ್ಟು ಗಂಭೀರವಾಗಿ ಗಮನಹರಿಸಿದರೆ ಅವರಿಂದ ಮುಂಬರುವ ದಿನಗಳಲ್ಲಿ ಇನ್ನಷ್ಟು ಒಳ್ಳೆಯ ಚಿತ್ರಗಳನ್ನು ನಿರೀಕ್ಷಿಸಬಹುದು.

ಇಂತಹ ಮಿಶ್ರ ಸಂಗತಿಗಳನ್ನುಳ್ಳ 'ಡ್ಯಾವ್ರೇ' ಚಿತ್ರವನ್ನು ಸ್ವತಃ ನಾಸಿರುದ್ದೀನ್ ಷಾ ಅವರೇ ನೋಡುವ ಹಂಬಲ ತೋರಿರುವುದು ಕನ್ನಡದ ಮಟ್ಟಿಗೆ ಹೆಮ್ಮೆ. ಇಂತಹ ಬೆಳವಣಿಗೆಗಳು ಕನ್ನಡ ಚಿತ್ರರಂಗಕ್ಕೆ ಚೈತನ್ಯ ತುಂಬಬಲ್ಲವು ಅಲ್ಲವೇ? ಆಲ್ ದಿ ಬೆಸ್ಟ್ ವಿಜಿ.



ಆಯೇಷಾ ಟಾಕಿಯಾ

ಟಿವಿ-9 ಚಾನಲ್ಲಿನಲ್ಲಿ ಪ್ರಸಾರವಾಗುವ 'ನೀವು ಹೇಳಿದ್ದು ನಾವು ಕೇಳಿದ್ದು' ಕಾರ್ಯಕ್ರಮವನ್ನು ನೀವೆಲ್ಲಾ ನೋಡಿರಬಹುದು. ವರ್ತಮಾನ ವಿದ್ಯಮಾನಗಳನ್ನು ವ್ಯಂಗ್ಯವಾಗಿ ಪ್ರೆಸೆಂಟ್ ಮಾಡುವ ಆ ಕಾರ್ಯಕ್ರಮದ ಯಶಸ್ಸಿನ ಸಿಂಹಪಾಲು ಅದರ ಸ್ಕ್ರಿಪ್ಟ್ ಹಾಗೂ ಆ ಹಿನ್ನೆಲೆ ಧ್ವನಿಗೆ ಸಲ್ಲಬೇಕಾಗುತ್ತದೆ. ಶರತ್ ಚಕ್ರವರ್ತಿ ಎನ್ನುವ ಯುವಕ ಅದರ ಸ್ಕ್ರಿಪ್ಟ್ ಬರೆದರೆ, ಹಿನ್ನೆಲೆ ಧ್ವನಿ ಶಿವರಾಜ್ ಕೆ ಆರ್ ಪೇಟೆ ಎನ್ನುವ ಮತ್ತೊಬ್ಬ ಯುವಕನದ್ದು. ಕೇವಲ 31 ವರ್ಷದ ಶಿವರಾಜ್ ಮೂಲತಃ ಕೆ.ಆರ್.ಪೇಟೆಯವರು. ತಂದೆ ರಾಮೇಗೌಡ ಡ್ರಾಮಾ ಮೇಷ್ಟ್ರು. ಚಿಕ್ಕಂದಿನಲ್ಲೇ ಮಿಮಿಕ್ರಿ, ನಾಟಕಗಳತ್ತ ಆಸಕ್ತಿ ಹೊಂದಿದ್ದ ಇವರು, ಸ್ನೇಹಿತರನ್ನು ರಂಜಿಸುವ ಸಲುವಾಗಿಯೇ ಜೋಕ್ಸ್ ಹೇಳುತ್ತಿದ್ದರಂತೆ. ಪದವಿ ಮುಗಿದನಂತರ ಕೆಲಕಾಲ ಮುಂಬೈಗೆ ಹೋಗಿ ಬಾರಿನಲ್ಲಿ ಸಪ್ಲೈಯರ್ ಕೆಲಸ ಮಾಡಿ, ನಂತರ ಬೆಂಗಳೂರಿಗೆ ಬಂದು 'ಬಿ.ಎಫ್.ಐ.ಟಿ' ಎಂಬ ಸಂಸ್ಥೆಯಲ್ಲಿ ಆಕ್ಟಿಂಗ್ ಕೋರ್ಸ್ ಮುಗಿಸಿ, ಆನಂತರ ಎಲ್ಲೂ ಸಿನಿಮಾ ಸಂಬಂಧಿ ಕೆಲಸಗಳು ಸಿಗದ ಕಾರಣ ಡಾಬಾವೊಂದರಲ್ಲಿ ಕ್ಯಾಷಿಯರ್ ಆಗಿದ್ದರಂತೆ. ಆನಂತರ 'ವೈಖರಿ' ನಾಟಕ ತಂಡದ ಸಂಪರ್ಕದಿಂದ ಒಂದಿಷ್ಟು ನಾಟಕಗಳಲ್ಲಿ ಅಭಿನಯಿಸುವ ಅವಕಾಶ ಸಿಕ್ಕಿ, ಆ ಮೂಲಕ ಸಿನಿಮಾ ನಂಟೂ ಎಡತಾಕಿ ಜೇಕಬ್ ವರ್ಗೀಸ್ ನಿರ್ದೇಶನದ 'ಪೃಥ್ವಿ' ಸಿನಿಮಾದಲ್ಲಿ ಸಹಾಯಕ ನಿರ್ದೇಶಕರಾದರು. ಜೊತೆಗೆ 'ಕ್ರಾಂತಿ', 'ಕಾಲ್ಗೆಜ್ಜೆ' ಚಿತ್ರಗಳಲ್ಲಿ ನಟಿಸುವ ಚಾನ್ಸ್ ಕೂಡ ಒದಗಿಬಂತಂತೆ. ಆನಂತರ, ಎಲ್.ಸಿ.ರಘುನಂದನ್ ಅವರ ಮೂಲಕ 'ನೀವು ಹೇಳಿದ್ದು ನಾವು ಕೇಳಿದ್ದು' ಕಾರ್ಯಕ್ರಮಕ್ಕೆ ಹಿನ್ನೆಲೆ ಧ್ವನಿ ನೀಡಲು ಮತ್ತು 'ಹಳ್ಳಿಕಟ್ಟೆ' ಕಾರ್ಯಕ್ರಮದಲ್ಲಿ ನಟಿಸಲು ಅವಕಾಶ ಸಿಕ್ಕಿದ್ದಾಗಿ ಹೇಳುತ್ತಾರೆ. ಬಹುಮುಖ ಪ್ರತಿಭೆಯಾಗಿರುವ ಶಿವರಾಜ್ ಕೆ.ಆರ್. ಪೇಟೆಯವರಿಗೆ ಡಾ.ರಾಜಕುಮಾರ್, ನರಸಿಂಹರಾಜು ಹಾಗೂ ಚಾಪ್ಲಿನ್ ಇಷ್ಟ.



ವಂದನಾ ಗುಪ್ತಾ



ಡಬಲ್ ಎಂ ಸಿಂಗಲ್ ಪ್ರೇಮ್

ಜೊತೆಜೊತೆಯಲಿ, ನೆನಪಿರಲಿ ಚಿತ್ರಗಳ ನಂತರ ಒಂದೇ ಒಂದು ಹಿಟ್ ಕೊಡಲಾರದ ಪ್ರೇಮ್ ಇದೀಗ ಆ ಪ್ರಯತ್ನದಲ್ಲಿ 'ಎಂ ಎಂ' ಎನ್ನುವ ಸಿನಿಮಾದಲ್ಲಿ ನಟಿಸಲು ಮುಂದಾಗಿದ್ದಾರೆ. ಕಳೆದ 20 ವರ್ಷಗಳಿಂದ ಅನೇಕ ನಿರ್ದೇಶಕರಡಿ ಅಸಿಸ್ಟೆಂಟ್, ಅಸೋಸಿಯೇಟ್ ಡೈರೆಕ್ಟರಾಗಿ ಕೆಲಸ ಮಾಡಿ ಅನುಭವ ಪಡೆದುಕೊಂಡಿರುವ ಮೋಹನ್ ಮಾಳಗಿ ಈ ಚಿತ್ರದ ನಿರ್ದೇಶಕರು. ಈ ಚಿತ್ರದಲ್ಲಿ ಪ್ರೇಮ್ ಒಂದು ಸಾಫ್ಟ್‌ವೇರ್ ಕಂಪನಿಯ ಸಿ.ಇ.ಓ ಪಾತ್ರ ನಿರ್ವಹಿಸುತ್ತಿದ್ದರೆ, ಸಂಪ್ರದಾಯಸ್ಥ ಹೆಣ್ಣುಮಗಳ ಪಾತ್ರದಲ್ಲಿ ದೆಹಲಿ ಮೂಲದ ವಂದನಾಗುಪ್ತ ಅಭಿನಯಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅಕ್ಷರಶಃ ಮರೆತೇ ಹೋಗಿರುವ ಮನೋಮೂರ್ತಿ ಸಂಗೀತ ನೀಡುತ್ತಿದ್ದಾರೆ. ಶೇಖರ್ ಮತ್ತು ಕುಟುಂಬ ವರ್ಗದವರು ಈ ಚಿತ್ರದ ನಿರ್ಮಾಪಕರು.

ಆಯೇಷಾ ಅಮ್ಮ ಆದ ಕಥೆ

'ಟಾರ್ಜನ್' ಸಿನಿಮಾ ಮೂ[...] ಬಾಲಿವುಡ್ ಪ್ರವೇಶಿಸಿದ ಆಯೇಷಾ ಟಾಕಿ[...] ಈಗ ಒಂದು ಗಂಡು ಮಗುವಿನ ತಾ[...] ಈಕೆ ಈ ಮೊದಲು 'ದಿಲ್ ಮಾಂಗೆ ಮೋ[...] 'ಸೋಚಾ ನಾ ಥಾ', 'ಶಾದಿ ನಂ.1', 'ಸೂ[...] 'ಹೋಂ ಡೆಲಿವರಿ', 'ಶಾದಿ ಸೆ ಪೆ[...] 'ಸಲಾಂ-ಇ-ಇಶ್ಕ್', 'ಕ್ಯಾಶ್', 'ನೋ ಸ್ಮೋಕಿ[...] 'ವಾಂಟೆಡ್', 'ಪಾಠಶಾಲಾ' ಸೇರಿದಂತೆ ಅ[...] ಚಿತ್ರಗಳಲ್ಲಿ ನಟಿಸಿದ್ದರು. ಇಂತಹ ಆಯೆ[...] ನಾಲ್ಕು ವರ್ಷಗಳ ಹಿಂದೆ ಮುಂಬೈ[...] ಹೋಟೆಲ್ ಉದ್ಯಮಿ ಫರಾನ್ ಅಜ್ಮಿಯ[...] ಹಿಡಿದಿದ್ದರು. ಈ ಫರಾನ್ ಅಜ್ಮಿ ಸಮಾಜ[...] ಪಾರ್ಟಿಯ ಅಬು ಆಸಿಮ್ ಅಜ್ಮಿಯ [...] ಮದುವೆಯ ನಂತರವೂ ಸಿನಿಮಾ[...] ನಟಿಸುತ್ತಿದ್ದ ಆಯೇಷಾ ಅಮ್ಮ ಆದ ನ[...] ಏನು ಮಾಡುತ್ತಾರೋ ನೋಡಬೇಕಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com